Das Kanaresische Gemeindeblatt

ಕ್ರೈಸ್ತ ಸಭಾಪತ್ರವು.

(ಮಾಸ ಮಾಸಕ್ಕೆ ಪ್ರಕಟವಾಗುವಂಥಾದ್ದು.)

VIII. Jahrgang

೮ನೇ ಪುಸ್ತಕ.

MANGALORE
BASEL MISSION BOOK & TRACT DEPOSITORY
1876

ಕ್ರೈಸ್ತಸಭಾಪತ್ರದ ೧ನೇ ಪುಸ್ತಕದ

ಅಡಕವು.

೧. ಅಂಕೆಯದು:

ಬೈಬಲನ್ನು ಯಾಕೆ ಓದ ಬೇಕು?— ಬೈಬಲನ್ನು ಹ್ಯಾಗೆ ಓದ ಬೇಕು?— ಯಾರು?— ನನ್ನವ ನಲ್ಲಾ— ಪ್ರಾರ್ಥನೆ— ವಿಶ್ವಾಸವು— ಅಪವಿಶ್ವಾಸವು— ಲೇಖನ— ವಿವಿಧ ವರ್ತಮಾನಗಳು.

೨. ಅಂಕೆಯದು:

ಹಿಂದೆ ಹೋಗ ಬೇಡಾ!— ಚಿನ್ನದ ಹರಳುಗಳು— "ಹೊರಗೊಂದು ಒಳಗೊಂದು"— ಗಣಿತ ವಿದ್ಯೆಯಲ್ಲಿ ಘಟ್ಟಿಗರಾಗಿರಿ— ದಂತವೈದ್ಯನು— ಲೇಖನ— ವಿವಿಧ ವರ್ತಮಾನಗಳು.

೩. ಅಂಕೆಯದು:

ಗೋಳಾಡ ಬೇಡಾ: ಕೊಂಡಾಡು!— ಪ್ರಾರ್ಥನಾಬೋಧಕಶಾಸ್ತ್ರಸಾರವು— ನನ್ನ ಬಿನ್ನಹವ ನ್ನು ಹೊಂದುತ್ತೇನೆ ಎಂಬ ಪೂರ್ಣ ನಂಬಿಕೆಯಿಂದ ಪ್ರಾರ್ಥಿಸ ಬೇಕು— ಪಾಪಪ್ರಳಾಪ— ಮನೇ ಸಾಮಾನಿನ ವಿಷಯ— ಲೇಖನ— ಅವಿಧೇಯತ್ವವು— ವಿವಿಧ ವರ್ತಮಾನಗಳು.

೪. ಅಂಕೆಯದು:

ಯೆಹೋವಾ! ಯೆಹೋವಾ! ಇತ್ಯಾದಿ— ಚಿನ್ನದ ಹರಳುಗಳು— ಒಬ್ಬ ರಾಜಕುಮಾರ— ಕಿವಡ ಮೂಕ ಫ್ರೆಂಚ ಹುಡುಗನೊಬ್ಬನು— ಕ್ರಿಸ್ತನಲ್ಲಾನಂದವು— "ತ್ವರೆ ಪಡುವೆ"— ಲೇಖನ— ವಿವಿಧ ವರ್ತಮಾನಗಳು.

೫. ಅಂಕೆಯದು:

ರಕ್ಷಣಾಹ್ವಾನವು— ಚಿನ್ನದ ಹರಳುಗಳು— ಯೇಸು ಪ್ರಾರ್ಥನೆ ಕೇಳಿ ರೋಗ ವಾಶಿ ಮಾಡು ವಾತನು— ಮೂರು ಆಶಾರ್ಥಗಳು— ಲೇಖನ— ವಿವಿಧ ವರ್ತಮಾನಗಳು.

೬. ಅಂಕೆಯದು:

ಕ್ರಿಸ್ತನ ಆಗಮ ಹಬ್ಬಕ್ಕೆ— ದೇವರ ದಯವಿದ್ದರೆ, ತಾಯಿ ಇಲ್ಲದವನಿಗೆ ಕರಡಿಯಾದರೂ ತಾಯಿಯ ಹಾಗಾಗ ಬೇಕು— ಒಂದು ಸಂಭಾಷಣೆ— ಅತ್ಯಾಶೆ ವಿನಾಶಕ್ಕೆ ಕಾರಣ— ಲೇಖನಗ ಳು— ವಿವಿಧ ವರ್ತಮಾನಗಳು.

೭. ಅಂಕೆಯದು:

ಕ್ರಿಸ್ತನ ಜನ್ಮೋತ್ಸವಕ್ಕೆ— ಸಾರಾಯವು ವೇಷ ಧರಿಸಿ ಕೊಂಡ ವಿಷವೇ— ಕಂಡವರನ್ನೆಲ್ಲಾ ಮದುವೆಗೆ ಕರೆಯಿರಿ— ತಾಯಿಯ ಪ್ರಾರ್ಥನೆ— ಒಂದು ಜವಾಬು— ವಿವಿಧ ವರ್ತಮಾನಗಳು.

೮. ಅಂಕೆಯದು:

ಪಾಪಿಷ್ಠಳೂ ಪಾಪಿಗಳ ರಕ್ಷಕನೂ— ಒಳ್ಳೇ ವೈದ್ಯಚೀಟು— ಹತ್ತು ಮಂದಿ ಸ್ನೇಹಿತರು— ಜವಾಬು— ಒಂದು ಲೇಖನ— ತಪ್ಪಾಗಿ ಏರಿಸಿದ ಗುರ್ತಿನಿಂದ ಒಬ್ಬನಿಗೆ ರಕ್ಷಣೆಯಾದದ್ದು— ಅಪಕಾರಿಗಳಿಗಾದರೂ ಉಪಕಾರ ಮಾಡ ಬೇಕು— ವಿವಿಧ ವರ್ತಮಾನಗಳು.

೯. ಅಂಕೆಯದು:

ಕರ್ತನಲ್ಲಿ ಯಾವಾಗಲೂ ಸಂತೋಷಿಸಿರಿ— ಭೂಮಿಯ ಮೇಲೆ ಸಮಾಧಾನವು— ಶಾಪಿಙ್ಗ್ ಯಲ್ಲಿ ಒಡದು ಹೋದ ಶೀಸೆ— ನಿನ್ನ ಮಾರ್ಗವನ್ನು ಕರ್ತನ ಮೇಲೆ ಹೊರಳಿಸು, ಆತನಲ್ಲಿ ಭರವಸ ವಿಡು; ಆಗಲಾತನು ನಡಿಸುವನು— ಚಿನ್ನದ ಹರಳುಗಳು— ವಿವಿಧ ವರ್ತಮಾನಗಳು.

೧೦. ಅಂಕೆಯದು:

ಚಿನ್ನದ ಹರಳುಗಳು— ಈಗಿನದನ್ನೂ ದೇವರಿಗೆ ಒಪ್ಪಿಸಿ ಬಿಟ್ಟರ್ರಿ— ಒಳ್ಳೇ ಶಿಫಾರಸ್ಸು— ನಿರ್ಜೀವವಾಗಿ ಹುಟ್ಟಿದ ಶಿಶುಗಳ ವಿಷಯ— ಕ್ರೈಸ್ತ ಒಕ್ಕಟ್ಟೂ ಸ್ನೇಹವೂ— ಪ್ರಾರ್ಥನೆಯ ಬಲವು— ಇದ್ದಪ್ಪಂದ ಬಂದಿದ್ದೇನೆ— ಸಾಧುತನದ ಪ್ರಯೋಜನವು— ವಿವಿಧ ವರ್ತಮಾನಗಳು.

೧೧. ಅಂಕೆಯದು:

ಪ್ರಾರ್ಥನಾಬೋಧಕಶಾಸ್ತ್ರಸಾರವು— ಕುರುಡಿಯೊಬ್ಬಳ ಕಾಣಿಕೆ— ಮೂರು ಸವಾಲಿಗೆ ಒಂದೇ ಜವಾಬು— ಸಾಧುತನದ ಪ್ರಯೋಜನವು— ಮೂರು ಕಥೆಗಳಾಗಿರುವ ಒಂದು ಕಥಾಪ್ರಸಂಗವು— ಚಿನ್ನದ ಹರಳುಗಳು— ವಿವಿಧ ವರ್ತಮಾನಗಳು.

೧೨. ಅಂಕೆಯದು:

ಪ್ರಾರ್ಥನಾಬೋಧಕಶಾಸ್ತ್ರಸಾರವು— "ನೀನೂ ಹೋಗಿ, ಹಾಗೆಯೇ ಮಾಡು"— ಹುಗೆನೊತರ ಪಲಾಯನವು— ಚಂದಾದಾರರಿಗೆ— ವಿವಿಧ ವರ್ತಮಾನಗಳು.

ಕ್ರೈಸ್ತಸಭಾಪತ್ರಿಕೆ

ಪುಸ್ತಕ ೮. **JULY 1875.** ಅಂಕೆ ೧.

ಅಡಕವು: ಬೈಬಲನ್ನು ಯಾಕೆ ಓದ ಬೇಕು?— ಬೈಬಲನ್ನು ಹ್ಯಾಗೆ ಓದ ಬೇಕು?— ಯಾರು?— ನನ್ನವನಲ್ಲಾ— ಪ್ರಾರ್ಥನೆ— ವಿಶ್ವಾಸವು— ಅಪವಿಶ್ವಾಸವು— ಲೇಖನ— ವಿವಿಧ ವರ್ತಮಾನಗಳು.

ಬೈಬಲನ್ನು ಯಾಕೆ ಓದ ಬೇಕು?

ಬೈಬಲು ದೇವರ ವಾಕ್ಯವಾಗಿರುವದರಿಂದಲೂ, ತನ್ನ ವಾಕ್ಯವನ್ನು ಓದ ಬೇಕೆಂತ ದೇವರು ಆಜ್ಞಾಪಿಸಿರುವದರಿಂದಲೂ.—"ಬರಹವೆಲ್ಲಾ (ಬೈಬಲು) ದೈವಪ್ರೇರಿತವಾದ್ದು" ೨ತಿಮೋ. ೩, ೧೬. "ಪ್ರವಾದನೆಯು ಎಂದೂ ಮನುಷ್ಯನ ಇಚ್ಛೆಯಿಂದ ಆಗಲಿಲ್ಲಾ; ಆದರೆ ದೇವರ ಪರಿಶುದ್ಧ ಮನುಷ್ಯರು ಪರಿಶುದ್ಧಾತ್ಮದಿಂದ ಪ್ರೇರೇಪಿಸಲ್ಪಟ್ಟು, ಮಾತಾಡಿದರು." ೨ ಪೇತ್ರ. ೧, ೨೦. "ನನ್ನ ಮಾತುಗಳನ್ನು ನಿಮ್ಮ ಹೃದಯಗಳಲ್ಲಿಯೂ ಪ್ರಾಣಸ್ಥಾನದಲ್ಲಿಯೂ ಇಟ್ಟು ಕೊಳ್ಳಿರಿ." ೫ಮೋಶೆ. ೧೧, ೧೮. "ಬರಹಗಳನ್ನು (ಬೈಬಲನ್ನು) ಶೋಧಿಸಿರಿ, ಯಾಕಂದರೆ ಅವುಗಳಲ್ಲಿ ನಿತ್ಯಜೀವ ನಿಮಗುಂಟು (ಎಂದು ನೆನಸುತ್ತೀರಿ), ಮತ್ತು ಅವೇ ನನ್ನನ್ನು ಕುರಿತು ಸಾಕ್ಷಿ ಕೊಡುತ್ತವೆ." ಯೋಹಾ. ೫, ೩೯.

೨. **ಬೈಬಲಿನಲ್ಲಿ ಅದ್ಭುತವಾದ ಬಲವೂ ಸಂಪೂರ್ಣ ಸಿದ್ಧಿ ಹೊಂದಿಸುವ ಶಕ್ತಿಯೂ ಇರುವದರಿಂದಲೂ.**—"ನಿನ್ನ ಸಾಕ್ಷಿಗಳು ಅದ್ಭುತವಾದವುಗಳೇ, ಆದ್ದರಿಂದ ನನ್ನ ಪ್ರಾಣವು ಅವುಗಳನ್ನು ಕೈಕೊಳ್ಳುತ್ತದೆ." ಕೀರ್ತ. ೧೧೯, ೧೨೯. "ಯಾಕಂದರೆ ದೇವರ ವಾಕ್ಯವು ಜೀವವುಳ್ಳದ್ದೂ, ಚುರುಕಾದ್ದೂ, ಯಾವ ಇಬ್ಬಾಯಿ ಕತ್ತಿಗಿಂತಲಾದರೂ ಹದವಾದ್ದೂ ಆಗಿ, ಪ್ರಾಣ, ಆತ್ಮ, ಕೀಲು, ಮೆದುಳುಗಳನ್ನು ವಿಭೇದಿಸುವ ಮಟ್ಟಿಗೂ ಶೇರಿ, ಹೃದಯದ ಇಚ್ಛೆಗಳನ್ನೂ ಆಲೋಚನೆಗಳನ್ನೂ ಶೋಧಿಸುವಂಥಾದ್ದು." ಇಬ್ರಿ. ೪, ೧೨. "ಕರ್ತನ ವಾಕ್ಯವು ಎಂದೆಂದಿಗೂ ಇರುತ್ತದೆ." ೧ ಪೇತ್ರ. ೧, ೨೫.

೩. **ಬೈಬಲು ಹೇಳುವಂಥಾದ್ದು ಇಹಪರಗಳಿಗೆ ಉತ್ತಮ ಪ್ರಯೋಜನವುಳ್ಳದ್ದಾಗಿರುವದರಿಂದಲೂ.**—"ಯೆಹೋವನ ಕಟ್ಟಳೆಗಳು ನೆಟ್ಟನೆಯವುಗಳಾಗಿದ್ದು, ಹೃದಯಕ್ಕೆ ಸಂತೋಷಕರವಾಗಿವೆ. ಯೆಹೋವನ ಆಜ್ಞೆಯು ಶುದ್ಧವಾಗಿದ್ದು, ಕಣ್ಣುಗಳಿಗೆ ಪ್ರಕಾಶಕರವಾಗಿದೆ. ಯೆಹೋವನ ಭಯವು ಪವಿತ್ರವಾಗಿದ್ದು, ಎಂದೆಂದಿಗೂ ನೆಲೆಯಾಗಿದೆ. ಯೆಹೋವನ ನ್ಯಾಯಗಳು ಸತ್ಯವಾಗಿದ್ದು, ಒಟ್ಟಾಗಿ ನೀತಿಯುಳ್ಳವುಗಳಾಗಿವೆ. ಅವು ಭಂಗಾರಕ್ಕಿಂತಲೂ ಬಹಳ ಅಪರಂಜಿಗಿಂತಲೂ ಇಷ್ಟವಾಗಿವೆ. ಜೇನಿಗಿಂತಲೂ ಜೇನುತೊಟ್ಟಿಯ ತುಪ್ಪಕ್ಕಿಂತಲೂ ಶೀಯಾಗಿವೆ. ನಿನ್ನ ಸೇವ

ಕನು ಅವುಗಳಿಂದ ಎಚ್ಚರಿಸಲ್ಪಡುತ್ತಾನೆ, ಅವುಗಳನ್ನು ಕೈಕೊಳ್ಳುವದರಲ್ಲಿ ಬಹಳ ಫಲ ಉಂಟು." ಕೀರ್ತ. ೧೯, ೮—೧೨. "ಯಾಕಂದರೆ ತಾಳ್ಮೆಯಿಂದಲೂ ಬರಹಗಳ ಆದರಣೆಯಿಂದಲೂ ನಮಗೆ ನಿರೀಕ್ಷೆಯುಂಟಾಗುವ ಹಾಗೆ (ಬೈಬಲಿನಲ್ಲಿ) ಬರದಿರುವಷ್ಟು ನಮ್ಮ ಬೋಧನೆಗೋಸ್ಕರ ಬರೆದದೆ." ರೋಮಾ. ೧೫, ೪. "ಕ್ರಿಸ್ತ ಯೇಸುವಿನಲ್ಲಿಟ್ಟ ವಿಶ್ವಾಸದಿಂದ ರಕ್ಷಣೆಗಾಗಿ ಜ್ಞಾನ ಕೊಡ (ಬೈಬಲು) ಶಕ್ತವಾಗಿದೆ." ೨ ತಿಮೋ. ೩, ೧೫.

೪. **ಆತ್ಮಕ್ಕೆ ಅಗತ್ಯವಾದ ಆಹಾರವೂ ಪಾನವೂ ಆಯುಧವೂ ಬೈಬಲಿನಲ್ಲಿ ಶಿಕ್ಕುವದರಿಂದಲೂ.**—"ರೊಟ್ಟಿಯಿಂದ ಮಾತ್ರವಲ್ಲ, ದೇವರ ಬಾಯಿಯಿಂದ ಹೊರಡುವ ಪ್ರತಿ ವಾಕ್ಯದಿಂದ ಮನುಷ್ಯನು ಬದುಕುವನು." ಮತ್ತಾ. ೪, ೪. "ದೇವರ ವಾಕ್ಯವಾಗಿರುವ ಆತ್ಮದ ಕತ್ತಿಯನ್ನು ತೆಗೆದು ಕೊಳ್ಳಿರಿ." ಎಫೆ. ೬, ೧೭.

೫. **ಬೈಬಲು ಆತ್ಮಕ್ಕೆ ತಕ್ಕ ಜ್ಞಾನಪ್ರಕಾಶವನ್ನು ಕೊಡುವಂಥಾದ್ದಾದ್ದರಿಂದಲೂ.**—ಯೆಹೋವನ ನ್ಯಾಯಪ್ರಮಾಣವು ಸಂಪೂರ್ಣವಾಗಿದ್ದು, ಪ್ರಾಣಕ್ಕೆ ಜೀವಕರವಾಗಿದೆ. ಯೆಹೋವನ ಸಾಕ್ಷಿ ನಂಬಿಕೆಯಾಗಿದ್ದು, ಯುಕ್ತಿಹೀನನಿಗೆ ಜ್ಞಾನಕರವಾಗಿದೆ." ಕೀರ್ತ. ೧೯, ೭. "ನಿನ್ನ ವಾಕ್ಯಗಳ ವಿವರಣೆ ಬೆಳಕನ್ನು ಕೊಟ್ಟು, ಯುಕ್ತಿಹೀನರಿಗೆ ಗ್ರಹಿಕೆಯನ್ನು ಉಂಟು ಮಾಡುತ್ತದೆ." ಕೀರ್ತ. ೧೧೯, ೧೩೦. "ಯಾಕಂದರೆ ಆಜ್ಞೆಯೇ ದೀಪವು; ನ್ಯಾಯಪ್ರಮಾಣವೇ ಬೆಳಕು." ಸಾಮು. ೬, ೨೩.

೬. **ದೇವರ ವಾಕ್ಯವು ಪಾಪದಲ್ಲಿ ಬೀಳದ ಹಾಗೆ ಎಚ್ಚರಿಸಿ ಕಾಪಾಡುವಂಥಾದ್ದಾಗಿರುವದರಿಂದಲೂ.**—"ಯೌವನಸ್ಥನು ಯಾವದರಿಂದ ತನ್ನ ದಾರಿಯಲ್ಲಿ ತಪ್ಪದವನಾಗಿ ನಡಕೊಳ್ಳುವನು? ನಿನ್ನ ವಾಕ್ಯವನ್ನು ಕೈಕೊಳ್ಳುವದರಿಂದಲೇ. ನಿನ್ನ ಆಜ್ಞೆಗಳಿಂದ ನನ್ನನ್ನು ತಪ್ಪಿ ಹೋಗಲೀಸ ಬೇಡ. ನಿನಗೆ ಪಾಪ ಮಾಡದ ಹಾಗೆ ನನ್ನ ಹೃದಯದಲ್ಲಿ ನಿನ್ನ ವಾಕ್ಯವನ್ನು ಬಚ್ಚಿಟ್ಟದ್ಧೇನೆ." ಕೀರ್ತ. ೧೧೯, ೯. ೧೧. "ನಿನ್ನ ಸತ್ಯದಿಂದ ಅವರನ್ನು ಪರಿಶುದ್ಧ ಮಾಡು. ನಿನ್ನ ವಾಕ್ಯವು ಸತ್ಯವೇ." ಯೋಹಾ. ೧೭, ೧೭.

೭. **ದೇವರ ವಾಕ್ಯವು ಶೋಕ ಸಂಕಟಗಳಲ್ಲಿಯೂ ಮರಣದಲ್ಲಿಯೂ ಆದರಿಸುವಂಥಾದ್ದಾಗಿರುವದರಿಂದಲೂ.**—"ನನ್ನ ಚಿಂತೆಗಳು ನನ್ನ ಅಂತರಂಗದಲ್ಲಿ ಹೆಚ್ಚುವಾಗ, ನಿನ್ನ ಆದರಣೆಗಳು ನನ್ನ ಪ್ರಾಣವನ್ನು ಆನಂದ ಪಡಿಸುತ್ತವೆ." ಕೀರ್ತ. ೯೪, ೧೯. "ನನ್ನ ಪರವಾಸದ ಬಿಡಾರದಲ್ಲಿ ನಿನ್ನ ನೇಮಕಗಳು ನನಗೆ ಕೀರ್ತನೆಗಳಾಗಿವೆ. ನಿನ್ನ ನ್ಯಾಯಪ್ರಮಾಣವು ನನಗೆ ಆನಂದವಾಗಿರದಿದ್ದರೆ, ನಾನು ನನ್ನ ಆರ್ತಿಯಲ್ಲಿ ಅಳಿದು ಹೋಗುತ್ತಿದ್ದೆ." ಕೀರ್ತ. ೧೧೯, ೫೪. ೯೨. ನಾನು ಮರಣದ ನೆರಳಿನ ತಗ್ಗಿನಲ್ಲಿ ನಡದರೂ, ಕೇಡಿಗೆ ಭಯ ಪಡೆನು; ಯಾಕಂದರೆ ನೀನು ನನ್ನ ಸಂಗಡ ಇದ್ಧೀ; ನಿನ್ನ ಬೆತ್ತವೂ ನಿನ್ನ ಊರುಕೋಲೂ ನನ್ನನ್ನು ಆದರಿಸುತ್ತವೆ." ಕೀರ್ತ. ೨೩, ೪.

೮. **ಬೈಬಲ್ ನಮ್ಮ ರಕ್ಷಣೆಗೆ ಸಹಾಯಕವಾಗಿರುವದರಿಂದಲೂ.**—"ಕರ್ತನೇ! ನಾವು ಯಾರ ಬಳಿಗೆ ಹೋಗೋಣ? ನಿನಗೆ ನಿತ್ಯಜೀವದ ವಾಕ್ಯಗಳುಂಟು." ಯೋಹಾ. ೬, ೬೮. "ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ಮರಣವನ್ನು ಹೀನ ಮಾಡಿ, ತನ್ನ ಸುವಾರ್ತೆಯಿಂದ ಜೀವವನ್ನೂ ನಿರ್ಲಯವನ್ನೂ ತಂದು ಕೊಟ್ಟದ್ಧಾನೆ." ೨ ತಿಮೋ. ೧, ೧೦.

೯. **ಬೈಬಲನ್ನು ಉದಾಸೀನ ಮಾಡುವವನು ದೇವರ ದಂಡಕ್ಕೂ ಆಜ್ಞೆನಿರ್ಣಯಕ್ಕೂ ಗುರಿಯಾಗುವದರಿಂದಲೂ.**—ಮಾತಾಡುವವನನ್ನು ಅಸಡ್ಡೆ ಮಾಡದ ಹಾಗೆ ನೋಡಿಕೊಳ್ಳಿರಿ. ಯಾಕಂದರೆ ಭೂಮಿಯ ಮೇಲೆ ದೈವಚಿತ್ತ ತಿಳಿಸಿದವನನ್ನು ಅಸಡ್ಡೆ ಮಾಡಿದವರು (ದಂಡಕ್ಕೆ)

ತಪ್ಪಿಸಿ ಕೊಳ್ಳದಿದ್ದರೆ, ನಾವು ಪರಲೋಕದಿಂದ ಬಂದವನನ್ನು ಬಿಟ್ಟು ತಿರುಗಿದರೆ, ಎಷ್ಟೋ ಹೆಚ್ಚಿನ ದಂಡಕ್ಕೆ ಗುರಿಯಾದೇವಲ್ಲಾ!" ಇಬ್ರಿ. ೧೨, ೨೫. "ನನಗೂ ನನ್ನ ವಾಕ್ಯಗಳಿಗೂ ನಾಚಿಕೆ ಪಡುವವನ್ಯಾವನೋ, ಅವನಿಗೆ ಮನುಷ್ಯನ ಮಗನು, ತನಗೂ ತಂದೆಗೂ ಪರಿಶುದ್ಧ ದೂತರಿಗೂ ಇರುವ ಮಹಿಮೆಯಲ್ಲಿ ಬರುವಾಗ, ನಾಚಿಕೆ ಪಡುವನು." ಲೂಕ. ೯, ೨೬.

ಬೈಬಲನ್ನು ಹ್ಯಾಗೆ ಓದ ಬೇಕು?

೧. **ಭಯಭಕ್ತಿಯೊಂದಿಗೆ.**—"ಯೆಹೋವನ ಭಯವು ಜ್ಞಾನದ ಮೂಲವೇ." ಕೀರ್ತ. ೧೧೧, ೧೦. "ಯೆಹೋವನ ಭಯವು ತಿಳುವಿಕೆಯ ಮೂಲವಾಗಿದೆ." ಸಾಮ. ೧, ೭.

೨. **ಪ್ರಾರ್ಥನೆಯೊಂದಿಗೆಯೂ.**—"ನನ್ನ ಕಣ್ಣುಗಳನ್ನು ತೆರೆ; ಆಗ ನಿನ್ನ ನ್ಯಾಯಪ್ರಮಾಣದೊಳಗಣ ಅದ್ಭುತಗಳನ್ನು ನೋಡುವೆನು. ನನಗೆ ಗ್ರಹಿಕೆಯನ್ನು ಕೊಡು; ಆಗ ನಿನ್ನ ನ್ಯಾಯಪ್ರಮಾಣವನ್ನು ಕೈಕೊಂಡು, ಪೂರ್ಣ ಹೃದಯದಿಂದ ಅದನ್ನು ಕೈಕೊಳ್ಳುವೆನು." ಕೀರ್ತ. ೧೧೯, ೧೮. ೩೪.

೩. **ಯಾವಾಗಲೂ.**—"ಈ ಪುಸ್ತಕದಲ್ಲಿ ಬರದಿರುವ ನ್ಯಾಯಪ್ರಮಾಣವು ನಿನ್ನ ಬಾಯಿ ಬಿಟ್ಟು ಹೋಗ ಬಾರದು; ಅದರಲ್ಲಿ ಬರದಿರುವ ಪ್ರಕಾರವೇ ಮಾಡಿ ಕೈಕೊಳ್ಳುವ ಹಾಗೆ, ರಾತ್ರಿ ಹಗಲು ಅದನ್ನು ಧ್ಯಾನಿಸ ಬೇಕು. ಆಗ ನಿನ್ನ ಮಾರ್ಗವನ್ನು ಸಫಲ ಮಾಡಿ, ಬುದ್ಧಿವಂತನಾಗಿ ನಡದು ಕೊಳ್ಳುವಿ." ಯೆಹೋಶು. ೧, ೮.

೪. **ಮನೋದೀನತ್ವದಿಂದಲೂ ಶಾಂತಿಯಿಂದಲೂ.**—"ಎಳೇ ಕೂಸುಗಳಂತೆ ವಾಕ್ಯವೆಂಬ ಹಾಲನ್ನು, ಅದರಿಂದ ಬೆಳೆಯುವ ಹಾಗೆ, ಅಪೇಕ್ಷಿಸಿರಿ." ೧ ಪೇತ್ರ. ೨, ೨. "ನಿಮ್ಮನ್ನು ರಕ್ಷಿಸ ಸಾಮರ್ಥ್ಯವುಳ್ಳ ವಾಕ್ಯವನ್ನು ಶಾಂತಿಯಿಂದ ಅಂಗೀಕರಿಸಿರಿ." ಯಾಕೋ. ೧, ೨೧.

೫. **ಹೃದಯದಲ್ಲಿಟ್ಟುಕೊಳ್ಳುವವರಾಗಿಯೂ.**—"ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಈ ಮಾತುಗಳು ನಿನ್ನ ಹೃದಯದಲ್ಲಿ ಇರ ಬೇಕು." ೫ ಮೋಶೆ. ೬, ೬. "ಆತನ ಬಾಯಿಯಿಂದ ಬೋಧನೆಯನ್ನು ತಕ್ಕೋ; ಆತನ ಮಾತುಗಳನ್ನು ನಿನ್ನ ಹೃದಯದಲ್ಲಿ ಇಟ್ಟುಕೋ." ಯೋಬ. ೨೨, ೨೨. "ಕ್ರಿಸ್ತನ ವಾಕ್ಯವು ಸಕಲ ಜ್ಞಾನದಿಂದ ಐಶ್ವರ್ಯವಾಗಿ ನಿಮ್ಮಲ್ಲಿ ವಾಸಮಾಡಲಿ." ಕೊಲೊ. ೩, ೧೬.

೬. **ಅದನ್ನು ನಮಗೆ ತಾಗಿಸಿ ಮಾಡುವವರಾಗಿಯೂ.**—"ನಿಮ್ಮನ್ನು ನೀವೇ ಮೋಸಗೊಳಿಸಿ ವಾಕ್ಯವನ್ನು ಕೇಳುವವರು ಮಾತ್ರವಲ್ಲಾ, ಅದನ್ನು ಮಾಡುವವರೂ ಆಗಿರ್ರಿ. ಮರೆತು ಬಿಡುವಂಥ ಕೇಳುವವನಾಗಿರದೆ, ಕ್ರಿಯೆ ಮಾಡುವವನು ಭಾಗ್ಯವಂತನೇ." ಯಾಕೋ. ೧, ೨೨. ೨೫.*

---

* ಚನ್ನಪಟ್ಟಣದಲ್ಲಿಯ ದೇವವಾಗ್ಗ್ರಂಥವಿಸ್ತಾರಕ ಸಂಘದವರು ತಾವು ನಡಿಸುವ ಕಾರ್ಯಕ್ಕೆ ಕ್ರೈಸ್ತರೆಲ್ಲರು ಈ ವರುಷದಲ್ಲಿಯೂ ಹಣ ಕೊಟ್ಟು ಸಹಾಯ ಮಾಡ ಬೇಕೆಂದು ಬೇಡಿಕೊಂಡಿದ್ದಾರೆ. ಗಂಡ ಹೆಂಡರು ಒಬ್ಬರಿಗೊಬ್ಬರು ಹ್ಯಾಗೋ ಹಾಗೆಯೇ ಮಿಶ್ಯನ್ ಕಾರ್ಯವೂ ದೇವವಾಗ್ಗ್ರಂಥವಿಸ್ತಾರಾರ್ಥಕ ಕಾರ್ಯವೂ ಒಂದಕ್ಕೊಂದು ಸಹಾಯಕವೂ ಸಂಬಂಧದ್ದೂ ಆಗಿರುವದರಿಂದ ಕ್ರೈಸ್ತರೆಲ್ಲರು ಅದಕ್ಕೆ ಹ್ಯಾಗೋ ಹಾಗೆಯೇ ಇದಕ್ಕೂ ಸಹಾಯ ಮಾಡ ತಕ್ಕದ್ದೇ. ಬೇರೆ ಬೇರೆ ಊರು, ಗ್ರಾಮ, ಹಳ್ಳಿಗಳಲ್ಲಿರುವ ಕ್ರೈಸ್ತಸಭಾಪತ್ರಪಾಠಕರು ಅದಕ್ಕೆ ಏನಾದರೂ ಹಣ ಕಳುಹಿಸಿ ಕೊಟ್ಟು ಸಹಾಯ ಮಾಡ ಮನಸ್ಸಾದರೆ, ತಮ್ಮ ದಾನವನ್ನು ಕ್ರೈಸ್ತಸಭಾಪತ್ರಕರ್ತರ ಮುಖಾಂತರವಾಗಿ ರವಾನೆ ಮಾಡಿಸಿ ಮುಟ್ಟಿಸ ಬಹುದು.

ಯಾರು?

ಬಾಡಿಗೇ ಮನೆಯಲ್ಲಿ ಬಿಡಾರ ಮಾಡಿಕೊಂಡಿದ್ದ ಬಡ ಮುದುಕಿಯೊಬ್ಬಳು ಬಾಡಿಗೆ ಕೊಡುವ ವಾಯಿದೆ ತೀರಿದ್ದ ಒಂದಾನೊಂದು ದಿನದಲ್ಲಿ ಯಾರೋ ಬಾಗಲನ್ನು ತಟ್ಟುವದನ್ನು ಕೇಳಿ, ತಟ್ಟುವವನು ಬಾಡಿಗೆ ಕೇಳಲಿಕ್ಕೆ ಬಂದ ಧನಿಯೇ ಸೈ, ನನ್ನ ಕೈಯಲ್ಲಿ ಹಣವೇನೂ ಇಲ್ಲಾದ್ದರಿಂದ ನಾನು ಹ್ಯಾಗೆ ಮಾಡಿ ಬಾಡಿಗೆ ಕೊಡಲಿ! ಎಂತ ಚಿಂತಿಸಿ, ನಾನು ಬಾಗಲನ್ನು ತೆರೆಯದೆ ಮೌನವಾಗಿ ಕೂತರೆ, ಮುದುಕಿ ಮನೆಯಲ್ಲಿ ಇಲ್ಲಾ, ಎಲ್ಲಿಗೋ ಹೋಗಿರ ಬೇಕು ಎಂದು ಧನಿ ನಂಬಿ, ತಿರಿಗಿ ಬಂದ ದಾರಿ ಹಿಡಿದು ಹೋದಾನು ಎಂತಾ ನೆನಸಿ ಕೊಂಡು, ಬಾಗಲನ್ನು ತೆಗೆಯಲಿಕ್ಕೇಳದೆ, ಯಾರು? ಎಂದನ್ನದೆ, ನಿಶ್ಶಬ್ದವಾಗಿ ಕೂತಳು.

ಬಂದ ಗೃಹಸ್ಥನು ಎರಡು ಮೂರು ಸಾರಿ ಸುಮ್ಮನೆ ತಟ್ಟಿದ ಮೇಲೆ, ಮುದುಕಿ ಇಲ್ಲಾ ಎಂತ ನೆನಸಿ, ತಿರಿಗಿ ಹೋದನು. ಅವನು ತಿರಿಗಿ ಹೋದ್ದಕ್ಕೆ ಆ ಬಡವೆ—ನನ್ನ ಯುಕ್ತಿ ಕೈ ಕೂಡಿತು, ನಾನು ಧನಿಯ ತಗಾದೆಗೆ ಇನ್ನೊಮ್ಮೆ ತಪ್ಪಿಸಿಕೊಂಡು ಉಸುರಾಡ ಬಹುದು ಎಂತ ಸಂತೋಷ ಪಟ್ಟಳು.

ಮಾರಣೆ ದಿವಸದಲ್ಲಿ ಅವಳು ಮನೆಯಿಂದ ಹೊರಟು ಹೋಗುವಾಗ, ನೆರೆಹೊರೆಯವನಾದ ಒಬ್ಬ ಗೃಹಸ್ಥನು ಆಕೆಯನ್ನು ಕಂಡು—ಎಲೇ, ಅಕ್ಕಾ! ನಿನ್ನೆ ಎಲ್ಲಿ ಹೋಗಿ ಬಂದಿ? ನಿನ್ನ ಮನೇ ಬಾಡಿಗೆಯ ಸಂಗತಿಯನ್ನು ತೀರಿಸುವ ಹಾಗೆ ನಿನಗೆ ಹಣ ತಂದು ಕೊಡ ಬೇಕೆಂತಾ ನಾನು ನಿನ್ನ ಬಾಗಲಿಗೆ ಬಂದು, ಮೂರು ಸಾರಿ ತಟ್ಟಿದೆ. ಆದರೆ ಒಂದು ಶಬ್ದವಾದರೂ ನನಗೆ ಕೇಳದೆ ಹೋದದರಿಂದ, ನೀನು ಇಲ್ಲವೆಂತಾ ಹಾಗೆಯೇ ವಾಪಸು ಮನೆಗೆ ಬಂದೆ ಎಂತ ಕರದು ಹೇಳಿದನು. ಈ ಮಾತಿಗೆ ಅವಳು ಬೆರಗಾಗಿ—ನನ್ನ ಬಾಗಲಿಗೆ ಬಂದು ತಟ್ಟಿದ್ದು ನೀವೋ? ತಪ್ಪಾಯಿತು, ಕ್ಷಮಿಸ ಬೇಕು. ನನ್ನ ಧನಿ ಎಂತ ನಾನು ನೆನಸಿ ಕೊಂಡಿದ್ದೆ ಎಂದು ಹೇಳಿದಳು.

ಎಷ್ಟೋ ಜನರು ಯೇಸು ತಮ್ಮ ಹೃದಯದ ಬಾಗಲಿಗೆ ಬಂದು ತಟ್ಟುವಾಗ, ಆತನು ಕೊಡುವದಕ್ಕಾಗಿಯೇ ಬಂದವನು ಎಂತ ತಿಳಿಯದೆ, ನಂಬದೆ, ಆತನ ಆಶೀರ್ವಾದ ಕೃಪಾವರಗಳಿಗೆ ತಪ್ಪಿ ಹೋಗುತ್ತಾರೆ. ಓದುವವನೇ! ಓದುವವಳೇ! ನಿನ್ನ ಕೈಯಿಂದ ಏನಾದರೂ ಕೇಳಲಿಕ್ಕೂ ತೆಗೆದು ಕೊಳ್ಳಲಿಕ್ಕೂ ಆತನು ಬಂದವನೆಂತ ತಪ್ಪಾಗಿ ನೆನಸಿ ಕೊಳ್ಳದೆ, ನಿನಗೆ ಬೇಕಾದ್ದನ್ನು ಆತನು ತಂದು ಕೊಡುವವನೇ, ತನ್ನದೆಲ್ಲವನ್ನು ನಿನಗೆ ತಂದು ಕೊಡಲಿಕ್ಕೆ ಬಂದವನೇ ಎಂತ ನಂಬಿ, ಬಾಗಲನ್ನು ತಡ ಮಾಡದೆ ತೆಗೆ. ಆತನನ್ನು ಶೇರಿಸಿ ಕೊಂಡು, ಆತನು ಕೊಡುವಂಥಾದ್ದನ್ನು ತೆಗೆದು ಗೊಂಡು, ನೀನು ನಿನ್ನ ಋಣಗಳನ್ನು ತೀರಿಸ ಬಹುದು. ಆತನು ತಿರಿಗಿ ನಿನ್ನ ಬಾಗಲಿಗೆ ಬಂದು ತಟ್ಟುತ್ತಲೇ ಬಾಗಲನ್ನು ತೆರೆದು, ಆತನನ್ನು ಒಳ ಶೇರಗೊಡಿಸು, ಶೇರಿಸಿಕೋ!

ನನ್ನವನಲ್ಲಾ.

ಅಮೇರಿಕದಲ್ಲಿ ಗುಲಾಮನಾಗಿದ್ದ ಒಬ್ಬ ಆಫ್ರಿಕದವನು ನಾಲ್ಕು ಮಂದಿ ಹುಡುಗರನ್ನು ಓಡ್ಯಾಡಿಸಿ, ನಾನಾ ಪ್ರಕಾರವಾಗಿ ಆಡಿಸಿ, ಗರಡೀ ಸಾಧಕ ಮಾಡಿಸುತ್ತಿರುವಲ್ಲಿ, ತಾನು ಒಂದು ದೊಡ್ಡ ಬಂಡೆಯ ಅಡಿಯಲ್ಲಿ ನಿಂತು ಕೊಂಡು, ಆ ಹುಡುಗರನ್ನು ಅದರ ತಲೇ ಮೇಲಿನಿಂದ ಕೆಳಗೆ ತನ್ನ ಕೈಯಲ್ಲಿ ಹಾರಿ ಧುಮ್ಮಿಕ್ಕಿಸಲು, ಮೂವರು ಬಹಳ ಧೈರ್ಯದಿಂದ ಕೆಳಗೆ ಧುಮ್ಮಿಕ್ಕಿ, ಅವನ ಕೈಯಲ್ಲಿ ಹಾರಿ ಬಿದ್ದು ಕೊಂಡರು. ನಾಲ್ಕನೆಯವನು ಹಾಗೆಯೇ ಹಾರಿ ಕೆಳಗೆ ಧುಮ್ಮಿಕ್ಕಲಿಕ್ಕೆ ಮನಸ್ಸು ತೋರಿಸಿದರೂ, ಧೈರ್ಯ ಅವನಿಗೆ ಸಾಲದೆ ಇದ್ದದರಿಂದ ಅದು ಕೂಡದೆ ಹೋಯಿತು. ಈ ಹಾ

ರ್ಯಾಟವನ್ನು ಒಬ್ಬ ಧೊರೆ ಕಂಡು, ಆ ನೀಗ್ರೋ ಪ್ರಾಯಸ್ಥನನ್ನು ಮಾತಾಡಿಸಿ, ಮೂವರು ಬಹಳ ಧೈರ್ಯದಿಂದ ಹಾರಿ ನಿನ್ನ ಕೈಯಲ್ಲಿ ಧುಮ್ಮಿಕ್ಕಿದ ಮೇಲೆ ನಾಲ್ಕನೆಯವನು ಯಾಕೆ ಎದೆಬಡಕನಾಗಿ ಹಾರುವದಿಲ್ಲವೆಂತ ಕೇಳಿದನು. ಅದಕ್ಕೆ ಆ ನೀಗ್ರೊ ಅಂದದ್ದೇನಂದರೆ: ಈ ಮೂವರು ನನ್ನ ಸ್ವಂತ ಮಗಂದ್ಯರೇ. ಆದ್ದರಿಂದವರು—ನಮ್ಮಪ್ಪ ಕೆಳಗೆ ನಿಂತು, ನಮಗೆ ಜಕಮಾಗಗೊಡಿಸದೆ, ಹಿಡಿಯುತ್ತಾನೆ ಎಂಬ ಪೂರ್ಣ ಭರವಸವಿದ್ದವರಾಗಿ ಹಾರಿದರು. ಆ ನಾಲ್ಕನೆಯವನು ನನ್ನವನಲ್ಲಾ, ನನ್ನ ನೆರೆಯುವನ ಮಗನಾಗಿರುವದರಿಂದ, ನನ್ನಲ್ಲಿ ಅಷ್ಟು ನಂಬಿಕಿಲ್ಲದೆ ಹಾರಲೋ ಇಲ್ಲೋ? ಎಂತ ಶಂಕೆ ಪಡುತ್ತಾನೆ.

ಹಾಗೆಯೇ ದೇವರ ಮಕ್ಕಳೂ, ಪುತ್ರಭಾವದ ದಿವ್ಯಾತ್ಮವನ್ನು ಹೊಂದಿದವರೂ ಆದಂಥವರು ದೇವರಲ್ಲಿ ಪೂರ್ಣ ಭರವಸವಿಟ್ಟವರಾಗಿ, ಯಾವಾಗಾದರೂ ಎಲ್ಲಿಯಾದರೂ ಆತನ ಕೈಯಲ್ಲಿ ಹಾರಿ ಬಿದ್ದು ಕೊಳ್ಳಲಿಕ್ಕೇನೂ ಶಂಕೆ ಪಡದವರಾಗಿರಲಾಗಿ, ಹಾಗಲ್ಲದವರು ಆತನಲ್ಲಿ ಅಂಥಾ ಭರವಸವಿಡಲಾರದೆ, ಶಂಕೆ ಪಟ್ಟು ಕೆಲಸಕ್ಕೆ ಬಾರದವರಾಗಿ ಹೋಗುತ್ತಾರೆ.

ಪ್ರಾರ್ಥನೆ.

ರಾಗ ಭೈರವಿ.] [ಅಟತಾಳ ಚಾಪು.

ಪಲ್ಲವಿ.

ತಂದೆಯೆನ್ನ ಪಾಲಿಸೆಂದು ಇಂದು ಸಾರಿದೆ,
ಇಂದು ಬಂದು ಸೇರಿದೆ.

ಚರಣಗಳು.

೧. ಪ್ರತ್ಯವಾಯ ದೋಷನಿಕರ ಹತ್ಯ ಮಾಡಿಸು,
ನಿತ್ಯ ಕೃಪೆಯ ತೋರಿಸು! ತಂದೆ—

೨. ಮಾಯಪಾಶಬದ್ಧನಾಗಿ ಹೀನಶಾಂತಿಯೂ,
ಕಾಯ ಹೇಯಭ್ರಾಂತಿಯೂ. ತಂದೆ—

೩. ಮರುಳು ಮತಿಯು ಹರಸಿ ನಿನ್ನ ಕರುಣ ತೋರಿಸು,
ವರದೊಲಿಮೆ ತೋರಿಸು! ತಂದೆ—

೪. ಜ್ಞಾನಜ್ಯೋತಿ ಉದಯಿಸೆಂದು ನಿನ್ನ ಬೇಡಿದೆ,
ದೀನದಿಂದ ಬೇಡಿದೆ. ತಂದೆ—

೫. ಸತ್ಯ ಮಾರ್ಗ ತಿಳಿಸಿ ನಿನ್ನ ಪಾದಸೇವೆಯು
ಭೃತ್ಯನಾಗಿ ಮಾಡಿಸು! ತಂದೆ—

ವಿಶ್ವಾಸವು.

ಮಹಾ ಕೃಪೆಯೂ ಮಹಿಮೆಯೂ ಉಳ್ಳ ಹೇರಳ ದಾನಗಳನ್ನು ನಾವು ಕರ್ತನ ಕೈಯಿಂದ ಹೊಂದ ಬಹುದು. ಸುವಾರ್ತೆಯಲ್ಲಿ ಆತನು ಅವುಗಳನ್ನು ತೋರಿಸಿ ಕೊಟ್ಟು, ತಕ್ಕೋ! ತಕ್ಕೋ! ಎಂತ ಹೇಳುತ್ತಾನೆ. ಆದರೆ ಕರ್ತನಿಗೆ ಎಷ್ಟೋ ಕೊಡಲಿಕ್ಕೆ ಮನಸ್ಸಿದ್ದರೂ, ವಿಶ್ವಾಸವಿಲ್ಲದವರಿಗೆ

ಕೊಡನು: ವಿಶ್ವಾಸವಿರುವ ಪಕ್ಷಾರ್ಥದಲ್ಲಿ ಮಾತ್ರವೇ ಕೊಡುತ್ತಾನೆ. "ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡು, ಆಗ ನೀನೂ ನಿನ್ನ ಮನೆಯವರೂ ರಕ್ಷಿಸಲ್ಪಡುವಿರಿ." ಅಪೊ. ಕ್ರಿ. ೧೬, ೩೧. "ಮಗನಲ್ಲಿ ವಿಶ್ವಾಸವಿಡುವವನಿಗೆ ನಿತ್ಯಜೀವವುಂಟು." ಯೋಹಾ. ೩, ೩೬. "ವಿಶ್ವಾಸದಿಂದ ಅವರ ಹೃದಯಗಳನ್ನು ಶುದ್ಧ ಮಾಡಿದನು." ಅಪೊ. ಕ್ರಿ. ೧೫, ೯. "ಕ್ರಿಸ್ತನು ನಿಮ್ಮ ಹೃದಯಗಳಲ್ಲಿ ವಿಶ್ವಾಸದಿಂದ ನಿವಾಸಿಸುವ ಹಾಗೆ ಬೇಡಿ ಕೊಳ್ಳುತ್ತೇನೆ." ಎಫೆ. ೩, ೧೫. ಇತ್ಯಾದಿ ಮಾತುಗಳಲ್ಲೆಲ್ಲಾ ವಿಶ್ವಾಸದ ಮಹಿಮೆ ಕಾಣುತ್ತದೆ.

ವಿಶ್ವಾಸದ ಸಂಗತಿ ಬಹಳ ಸುಲಭವೇ. ದೇವರು ಹೇಳುವಂಥಾದ್ದಕ್ಕೆ ಒಡಂಬಡುವದೂ, ದೇವರು ತಕ್ಕೊಳ್ಳೋ ಎಂತ ಹೇಳುವಂಥಾದ್ದನ್ನು ತಕ್ಕೊಳ್ಳುವದೂ ವಿಶ್ವಾಸವಾಗಿದೆ. ಆದರೆ ವಿಶ್ವಾಸವು ತಾನೇ ಮುಖ್ಯವಾದ್ದಲ್ಲಾ, ಅಂದರೆ ವಿಶ್ವಾಸವಿಡುವದೇ ಮುಖ್ಯವಾದ್ದಲ್ಲಾ: ಏನು ನಂಬುವದು? ಯಾರಲ್ಲಿ ವಿಶ್ವಾಸವಿಟ್ಟಿರುವದು? ಎಂಬ ವಿಚಾರವು ಮುಖ್ಯವೇ. ಸತ್ಯವನ್ನು ನಂಬಿದರೆ, ನಿನಗೆ ಮೇಲಾಗುವದು. ಸುಳ್ಳನ್ನು ನಂಬಿದರೆ, ಮೋಸ ಹೋಗಿ ನಾಶನವಾಗುವಿ. ವಿಶ್ವಾಸಕ್ಕೆ ವಿಷಯವೂ ಆಧಾರವೂ ಆದಂಥಾದ್ದು ಅಲ್ಲಾ, ಬರೀ ನಂಬೋಣವೇ ಮುಖ್ಯವಾದ್ದಾದರೆ, ಏನೇನು ನಂಬಿದರೂ, ಫಲ ಒಂದೇ ಆಗುತ್ತಿತ್ತು: ಸತ್ಯವನ್ನು ನಂಬುವದರಿಂದಲೂ ಸುಳ್ಳನ್ನು ನಂಬುವದರಿಂದಲೂ ಒಂದೇ ಪ್ರಯೋಜನವಾಗುತ್ತಿತ್ತು. ಆದರೆ ವಿಶ್ವಾಸವಿಡುವ ಕಾರಣದಿಂದಲ್ಲಾ, **ರಕ್ಷಕನಾದ ಯೇಸುವಿನಲ್ಲಿಯೇ** ವಿಶ್ವಾಸವಿಡುವ ಕಾರಣ ಮಾತ್ರದಿಂದ ರಕ್ಷಣೆ ಪಡಕೊಳ್ಳುತ್ತೇವೆ.

ಯೇಸುವಿನಲ್ಲಿ ವಿಶ್ವಾಸವಿಟ್ಟಿರುವದು ಆತನನ್ನು ಹಿಡಿದಿರುವದೇ, ಆತನಿಗೆ ಹೊಂದಿರುವದೇ ಆಗಿದೆ. ವಿಶ್ವಾಸವು ತಾನೇ ಅಲ್ಲಾ, ನಾವು ವಿಶ್ವಾಸವಿಟ್ಟಿರುವ, ಅಂದರೆ ಹಿಡಿದಿರುವ ಯೇಸುವೇ ನಮ್ಮ ರಕ್ಷಣೆಗೆ ಕಾರಣ. ವಿಶ್ವಾಸವಲ್ಲಾ, **ಯೇಸುವೇ** ನಮ್ಮ ನೀತಿಯೂ ಗತಿಯೂ ಆಗಿದ್ದಾನೆ. ವಿಶ್ವಾಸವು ನಮ್ಮನ್ನು ಆತನಿಗೆ ಹೊಂದಿಸಿರುವಂಥಾದ್ದು, ನಮ್ಮನ್ನು ಆತನಿಗೆ ಕಟ್ಟಿ ಹಾಕಿರುವ ಸಂಕೋಲೆ ಎಂಬ ಹಾಗೆ ಆದಂಥಾದ್ದು ಆಗಿರುವದರಿಂದ, ನಾವು ಆತನಲ್ಲಿ ವಿಶ್ವಾಸವಿಟ್ಟವರಾಗಿ ರಕ್ಷಿತರಾಗಿದ್ದೇವೆ. ಯೇಸು ನಮ್ಮ ನೀತಿಯೂ ಶುದ್ಧೀಕರಣವೂ ಆಗಿದ್ದಾನೆ. ಆತನಲ್ಲಿ ವಿಶ್ವಾಸವಿಟ್ಟು ನಾವು ನೀತಿಯಲ್ಲಿಯೂ ಶುದ್ಧೀಕರಣದಲ್ಲಿಯೂ ಶೇರಿ ನೆಲೆಯಾಗಿದ್ದೇವೆ. ನಮ್ಮಷ್ಟಕ್ಕೆ ಇಲ್ಲವೆ ನಮ್ಮ ಬರೇ ವಿಶ್ವಾಸದಿಂದ ನಾವು ಶುದ್ಧರೂ ನೀತಿವಂತರೂ ಅಲ್ಲವೇ ಅಲ್ಲಾ: ಯೇಸುವನ್ನು ಹೊಂದಿರುವಷ್ಟಕ್ಕೆ, ಆತನನ್ನು ಹಿಡಿದಿರುವಷ್ಟಕ್ಕೆ ಮಾತ್ರವೇ ನೀತಿವಂತರೂ ಶುದ್ಧರೂ ಆಗಿದ್ದೇವೆ. ಹೊಗೆಗಾಡಿಗೆ ಕಟ್ಟಿರದ ಲೋಹಮಾರ್ಗದ ಗಾಡಿಯಿಂದ ಪ್ರಯೋಜನ ಬಾರದು. ಹೊಗೆಗಾಡಿಯಲ್ಲಿ ಬೆಂಕಿ ಎಷ್ಟೋ ಬಲವಾಗಿದ್ದರೂ, ಲೋಹಮಾರ್ಗದಲ್ಲಿ ಹೊಗೆಗಾಡಿ ಎಷ್ಟೋ ಶೀಘ್ರವಾಗಿ ಓಡಿ ಓಡಿ ನಡೆದರೂ, ನಾನು ಏರಿ ಕೊಂಡ ಗಾಡಿ ಅದಕ್ಕೆ ಸಂಕೋಲೆಯಿಂದ ಕಟ್ಟಿ ಹಾಕಿರದಿದ್ದರೆ, ಸಂಗಡ ಓಡದೆ ನಿಂತಲ್ಲಿಯೇ ನಿಂತಿರುವದು. ಆದರೆ ಈ ಗಾಡಿಯನ್ನು ಸಂಕೋಲೆಯಿಂದ ಹೊಗೆಗಾಡಿಗೆ ಜೋಡಿಸಿದರೆ, ಅದು ಇದರಷ್ಟು ತೀವ್ರವಾಗಿಯೇ ಓಡಿ ಓಡಿ ಮುಟ್ಟುವದು. ಇದನ್ನು ನೋಡಿ, ನಾನು ಮುಟ್ಟಿದ್ದು ಸಂಕೋಲೆಯ ಉಪಕಾರವೇ ಎಂತ ಹೇಳಿ, ಸಂಕೋಲೆಯನ್ನು ಹೊಗಳ ಬಹುದೋ? ಕೂಡದು. ಸಂಕೋಲೆ ಅಲ್ಲಾ, ಹೊಗೆಗಾಡಿಯೇ ನಾನು ಹತ್ತಿದ್ದ ಗಾಡಿಯನ್ನು ಎಳಕೊಂಡು ಹೋಯಿತು. ಹಬೆಯ ಶಕ್ತಿಯಿಂದ ನನ್ನ ಗಾಡಿ ಹೊಗೆಗಾಡಿಯ ಜೊತೆಯಲ್ಲಿ ಓಡಿ ಮುಟ್ಟಲಿಕ್ಕೆ ಆ ಸಂಕೋಲೆ ಒಂದು ಸಾಹಿತ್ಯ ಮಾತ್ರ, ಕಾರಣವಲ್ಲಾ, ಆಯಿತಷ್ಟೇ.

ಇದರಂತೆಯೇ ವಿಶ್ವಾಸದ ಸಂಗತಿ. ಯೇಸುವೇ ನಮ್ಮನ್ನು ದೇವರ ಬಳಿಗೆ ಶೇರಿಸಿ, ನಿತ್ಯ ಭಾಗ್ಯದಲ್ಲಿ ಮುಟ್ಟಿಸಿ ಕುಂಡ್ರಿಸುವವನು. ಆದರೆ ಆತನು ಅಪರಿಮಿತ ಪುಣ್ಯವೂ ನೀತಿಯೂ ಉಳ್ಳವನಾ

ಗಿ ಎಲ್ಲಾ ಪಾಪವನ್ನು ಪರಿಹರಿಸಿ, ಪಿಶಾಚನನ್ನು ಜಯಿಸಿ ಆಳಿಸಿ ಬಿಟ್ಟವನಾದಾಗ್ಯೂ, ನಾನು ಆತನಿಗೆ ಹೊಂದಿರದೆ, ಕೂಡಿರದೆ, ಶೇರಿರದೆ ಇದ್ದರೆ, ನನಗೆ ಅದೆಲ್ಲಾದರಲ್ಲಿ ಏನು? ಏನೂ ಇಲ್ಲ. ಆತನು ಸಂಪೂರ್ಣ ರಕ್ಷಕನೇ ಸರಿ. ಪಾಪದ ದಂಡಕ್ಕೂ ಅಧಿಕಾರಕ್ಕೂ ಆತನು ತಪ್ಪಿಸುವವನೇ. ವಿಶ್ವಾಸವೋ? ಅದು ನನ್ನನ್ನು ಆತನಿಗೆ ಕಟ್ಟಿ ಹೊಂದಿಸಿರುವ ಸಂಕೋಲೆ. ವಿಶ್ವಾಸವು ತಾನೇ ನನಗೆ ನಿತ್ಯ ಜೀವವನ್ನು ಕೊಡುವಂಥಾದ್ದಲ್ಲ: ಅದು ಯೇಸುವಿನಲ್ಲಿ ಮಾತ್ರ ಉಂಟು, ಯೇಸು ಅದನ್ನು ಕೊಡಬೇಕು, ಕೊಡುತ್ತಾನೆ; ವಿಶ್ವಾಸವು ನಿತ್ಯ ಜೀವವೆಂಬ ಜಲವು ನನ್ನ ಬಳಿಗೆ ಹರಿದು ಬರಲಿಕ್ಕೆ ತಕ್ಕ ಕಾಲಿವೆಯಷ್ಟೇ.

ಆದರೆ ಹೊಗೆಗಾಡಿಯ ಸಾಮ್ಯ ಎಷ್ಟೋ ಚಲೋದಾಗಿದ್ದರೂ, ಚನ್ನಾಗಿ ಒಪ್ಪದ್ದು; ನಿರ್ಜೀವವಾದ ಹೊಗೆಭಂಡಿಗೆ ಯೇಸು ಸಮಾನನೆಂತ ಹೇಳಲಾಗದು. ಹೊಗೆಭಂಡಿ ತನಗೆ ಏನಾದರೂ ಹೊಂದಿರುತ್ತದೋ ಇಲ್ಲವೋ? ಎಂಬುವ ವಿಷಯದಲ್ಲಿ ಚಿಂತಿಸದೆ ಓಡುತ್ತದೆ; ಆದರೆ ಯೇಸು ನಾವು ತನಗೆ ಹೊಂದಿಕೊಳ್ಳುವ ಹಾಗೆ ಚಿಂತಿಸುತ್ತಾನೆ, ನಮ್ಮನ್ನು ತನ್ನ ಕಡೆಗೆ ಎಳ ಕೊಳ್ಳುತ್ತಾನೆ. ಯೇಸು ಸಮುದ್ರದಲ್ಲಿಯ ಬಂಡೆಯಂತೆ ನರಜಾತಿ ಎಂಬ ಜಲನಿಧಿಯಲ್ಲಿ ಒಂದೇ ರಕ್ಷಣೋಪಾಯವಾಗಿ ನಿಂತಿದ್ದಾನೆ. ಸಮುದ್ರದಲ್ಲಿಯ ಬಂಡೆ ಮುಣಿಗಿ ಹೋಗುವ ಸಮುದ್ರಪಯಣಸ್ಥರಿಗೆ, ಅವರು ನಾಶನಕ್ಕೆ ತಪ್ಪಿಸಿ ಕೊಳ್ಳುವಂತೆ, ತನ್ನ ಮೇಲೆ ಹತ್ತಲಿಕ್ಕೆ ಸಹಾಯ ಮಾಡದು. ಭವಸಾಗರವೆಂತಲೂ ದುಃಖಸಾಗರವೆಂತಲೂ ಎನ್ನಿಸಿ ಕೊಳ್ಳುವ ಈ ಭೂಲೋಕವೆಂಬ ಸಮುದ್ರದ ತೆರೆಗಳು ನಮ್ಮನ್ನು ಶಳಕೊಂಡು ಅಳಿಸದ ಹಾಗೆ ಯೇಸುವೆಂಬ ಬಂಡೆ ನಮ್ಮನ್ನು ತನ್ನ ಕಡೆಗೆ ಕರದು, ಎಳದು, ತನ್ನನ್ನು ಹತ್ತಿಕೊಳ್ಳಲಿಕ್ಕೆ ನಮಗೆ ಕೈಕೊಟ್ಟು ಸಹಾಯ ಮಾಡುತ್ತಾನೆ. ನಮಗೆ ಹ್ಯಾಗಾದರೂ ರಕ್ಷಣೆ ಆಗ ಬೇಕೆಂತ ಆತನು ತಾನೇ ಸಹಾ ಸರ್ವ ಪ್ರಯತ್ನ ಮಾಡುತ್ತಾನೆ. ಬಂಡೆಯನ್ನು ಹತ್ತಿ ಕೊಳುವದೇ ವಿಶ್ವಾಸ. ಹತ್ತಿಕೊಂಡವನಿಗೆ ಬಂಡೆಯೇ ರಕ್ಷಣೆ, ಬಂಡೆಯೇ ಪ್ರಾಣದಾನ ಕೊಟ್ಟಂಥಾದ್ದು.

ಅಪವಿಶ್ವಾಸವು.

ದೃಢ ನಿಜ ವಿಶ್ವಾಸಕ್ಕೂ ಅಪವಿಶ್ವಾಸಕ್ಕೂ ಬಹಳ ವ್ಯತ್ಯಾಸವೇ. ಕೆಲವು ದಿನಗಳ ಹಿಂದೆ ನಾನು ನನ್ನ ಬಿಡಾರದಿಂದ ಹೊರಟು ಕ್ರೈಸ್ತಕೇರಿಯಲ್ಲಿ ವಿಹಾರಿಯಾಗಿ ತಿರುಗಾಡುತ್ತಿರಲಾಗಿ, ಎರಡು ಕ್ರೈಸ್ತ ಮನೆಗಳಿಗೆ ಶೇರಿದ ಹಿತ್ತಲಿನಲ್ಲಿ ದಾರಿಯ ಬದೀಲಿರುವ ಎರಡು ಹಲಸಿನ ಮರಗಳಿಗೆ ಒಂದೊಂದು ಹಳೇ ಪಾಪಾಸು ತೂಘಾಕಿ ಇದ್ದದನ್ನು ಕಂಡೆನು. ದೇವರು ಫಲಗಳಿಂದ ಶೃಂಗರಿಸಿ ರಮ್ಯವಾಗಿ ಶೋಭಿಸ ಮಾಡಿದ ಮರಗಳಿಗೆ ಆ ಮನೆಯವರು ಸವೆದು ಹೋಗಿ ವಿರೂಪವಾಗಿ ಕಂಡ ವೊಜ್ಜೆಗಳನ್ನು ಕಟ್ಟಿದ್ದು ಯಾಕೆ? ಎಂತ ನಾನು ವಿಚಾರಿಸಿ ಕೇಳಿದ್ದಲ್ಲಿ, ಆ ಮರಗಳಿಗೆ "ಕೆಟ್ಟ ದೃಷ್ಟಿ" ಬೀಳದ ಹಾಗೆ ಎಂಬ ಉತ್ತರ ನನಗೆ ಶಿಕ್ಕಿತು. ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು. ಯಾತಕ್ಕಂದರೆ: ಆ ಮನೆಗಳು ಕ್ರೈಸ್ತರವೇ. ಕ್ರೈಸ್ತರಲ್ಲಿ, ಬೆಳಕಿನ ಮಕ್ಕಳಾಗಿರ ಬೇಕಾಗಿದ್ದವರಲ್ಲಿ ಇನ್ನು ಇಂಥ ಅಂಧಕಾರ ಕಂಡರೆ, ದುಃಖಕ್ಕೆ ಕಾರಣವಲ್ಲವೋ? ಅದೆಂಥ ಅಪವಿಶ್ವಾಸದ ಕಾರ್ಯ! ಅದರಲ್ಲಿ ಎರಡು ತಪ್ಪು, ಎರಡು ಮಹಾ ದೊಡ್ಡ ದೋಷಗಳು ಉಂಟು: ೧. ಬೇರೊಬ್ಬರಲ್ಲಿ "ಕೆಟ್ಟ ದೃಷ್ಟಿ" ಇರ ಬಹುದು; ಯಾರಾದರೂ ಬಂದು, ನನ್ನ ತೋಟದ ಮರಗಳನ್ನು ನೋಡಿ, ತನ್ನ ದೃಷ್ಟಿಯಿಂದಲೇ ನನ್ನ ಮರವನ್ನು ಕೆಡಿಸಿ, ಇನ್ನು ಫಲ ಫಲಿಸದ ಹಾಗೆ ಮಾಡಲಿಕ್ಕೆ ಸಾಕು ಎಂಬುವ ಸಂಶಯವು. ಅಂಥಾ ಸಂಶಯವನ್ನು ಯಾರೊಬ್ಬರ ವಿಷಯದಲ್ಲಿ ಹಿಡಿದಿರುವದು ಪ್ರೀತಿಯೋ? ನಂಬಿಕೆಯೋ? ಪ್ರೀ

ತಿಯಿಲ್ಲದಂಥಾ, ನಂಬಿಕೆ ಕೆಟ್ಟಂಥಾ ಸಂಗತಿಯಲ್ಲವೋ? ೨. ಯಾರಾರೂ ಬಂದು ಏನೇನೂ ಮಾಡಿದರೂ, ನಾನೂ ನನ್ನದೆಲ್ಲವೂ ನನ್ನದೊಂದೊಂದು ಕೂದಲೂ ರೋಮವೂ ದೇವರ ಕೈಯಲ್ಲಿ, ದೇವರ ಆಶ್ರಯದಲ್ಲಿ ಇರಲಾಗಿ, ಆತನ ಚಿತ್ತವಿಲ್ಲದೆ ನನಗೇನೂ ಕೇಡಾಗದು, ಆತನೇ ನನ್ನನ್ನೂ ನನ್ನದನ್ನೂ ಕಾಯುತ್ತಾನೆ, ಕಾಪಾಡುತ್ತಾನೆ ಎಂದು ಒಬ್ಬೊಬ್ಬ ಕ್ರೈಸ್ತನು ನಂಬಿರ ಬೇಕಾಗಿದ್ದಾಗ, ಒಬ್ಬನು ದೇವರ ಮೇಲೆ ಇಂಥ ನಂಬಿಕಿಡದೆ, ನಾರುವ ಹರಕು ಪಾಪೋಸುಗಳ ಮೇಲೆ ನಂಬಿಕಿಟ್ಟು, ವೊಜ್ಜೆಯನ್ನು ಯಂತ್ರವಾಗಿ ಕಟ್ಟಿ, "ಕೆಟ್ಟ ದೃಷ್ಟಿ"ಯಿಂದಾಗುವ ನಷ್ಟಕ್ಕೆ ತಪ್ಪಿಸುವದು ಎಂತಾ ನಂಬುವಂಥಾದ್ದಕ್ಕೆ ಏನು ಹೇಳ ತಕ್ಕದ್ದು? "ಕೆಟ್ಟ ದೃಷ್ಟಿಯು" ಬಲದಿಂದ ಕೆಟ್ಟ ವೊಜ್ಜೆಯ ಬಲವು ಹಿರಿದೇ? ನಷ್ಟವಾಗಲಿ, ನಷ್ಟ ಬರ ಬೇಕು ಎಂತ ದೇವರಿಗೆ ಒಪ್ಪಿಕೆ ಕಂಡರೆ, ನಿನ್ನ ವೊಜ್ಜೆ ತಡದೀತೇ? ವೊಜ್ಜೆ ಕಾಲಿಗೆ ಹಾಕಿ ಕೊಂಡು ನೀಡಿ ಕೊಂಡರಾದರೂ ನಷ್ಟ ಬಂದೀತಲ್ಲಾ! ಹಾಗಾದರೆ ಪಾಪೋಸು ಮರಕ್ಕೆ ಕಟ್ಟಿದರೆ, ಕೆಟ್ಟ ದೃಷ್ಟಿಯಿಂದ ನಷ್ಟವಾಗದು ಎಂಬ ನಂಬಿಕೆ ಎಂಥಾ ವಿಚಾರಬುದ್ಧಿಯಿಲ್ಲದ ಹುಚ್ಚು ನಂಬಿಕೆ!

ಈ ಅಪವಿಶ್ವಾಸಕ್ಕೂ ಲುಥರನಲ್ಲಿಯೂ ಬೇರೆ ಭಕ್ತರಲ್ಲಿಯೂ ಬಲವಾಗಿದ್ದ ವಿಶ್ವಾಸಕ್ಕೂ ಎಂಥಾ ವ್ಯತ್ಯಾಸ, ಎಂಥಾ ವಿರೋಧವೇ! ಲುಥರನು ಒರ್ಮ್ಸ್ ಪಟ್ಣದಲ್ಲಿ ಒಂದೇ "ಕೆಟ್ಟ ದೃಷ್ಟಿಗೆ" ಮಾತ್ರವಲ್ಲಾ, ಸಾವಿರಾರು ಕಡು ಶತ್ರುಗಳ ಕ್ರೂರ ದೃಷ್ಟಿಗೆ ಗುರಿಯಾಗಲಿಕ್ಕಿದ್ದಾಗ, ಅವನ ಸ್ನೇಹಿತರು, ಹೋಗ ಬೇಡೇ ಬೇಡಿರಿ! ಎಂತ ಹೇಳಲೂ ಬೇಡಲೂ ತೊಡಗಿದಾಗ್ಯೆ, ಅವನು ಅಂದದೇನಂದರೆ: ಅವರು (ವೈರಿಗಳು) ವಿತ್ತೆಂಬೆರ್ಗ್ ಪಟ್ಣಕ್ಕೂ ಒರ್ಮ್ಸ್ ಪಟ್ಣಕ್ಕೂ ನಡುವೆ ಆಕಾಶಕ್ಕೆ ಮುಟ್ಟಿ, ತಾರಾಳಿಗಳನ್ನಾದರೂ ದಹಿಸುವಂಥ ಬೆಂಕಿಯನ್ನು ಹೊತ್ತಿಸಿದರೂ, ನಾನು ಕರ್ತನ ಹೆಸರಿನಲ್ಲಿ ಹೋಗಿ, ಅಲ್ಲಿ ಹೊಂಚಿಕೊಂಡಿರುವ ಮಹಾ ವ್ಯಾಘ್ರದ ದವಡೇ ಹಲ್ಲುಗಳ ನಡುವೆ ನಿಂತು ಕೊಂಡು, ನನ್ನ ಕ್ರಿಸ್ತನಾಥನನ್ನು ಅರಿಕೆ ಮಾಡುವೆನು. ಮತ್ತು—ಒರ್ಮ್ಸ್ ಪಟ್ಣದಲ್ಲಿ ಮನೆಗಳ ಮೇಲೆ ಹೊದ್ದಿಸಿರುವ ಹಂಚುಗಳಷ್ಟು ಭೂತಪಿಶಾಚರು ಇದ್ದರೂ, ನಾನು ಹೋಗಲೇ ಹೋಗಿ ಶೇರುತ್ತೇನೆ.

ಅಪವಿಶ್ವಾಸವೆಂಬದು ಆ ಎರಡೇ ಮನೆಗಳಲ್ಲಿ ಮಾತ್ರ ಇದ್ದರೆ, ನಾನು ಮೇಲಿನ ಸಂಗತಿಯನ್ನು ಈ ಪತ್ರದಲ್ಲಿ ಪ್ರಸ್ತಾಪಿಸುತ್ತಿದ್ದಿಲ್ಲಾ; ಆದರೆ ಅದು ಹೆಚ್ಚು ಮನೆಗಳಲ್ಲಿ ಇರಲಿಕ್ಕೆ ಸಾಕು, ಇಲ್ಲದಿರದು ಎಂತ ನನಗೆ ಅನುಮಾನವಿರುವದರಿಂದ, ಅದರ ಪ್ರಸ್ತಾಪ ಉಚಿತವೆಂತಲೂ ಅವಶ್ಯವೆಂತಲೂ ಕಂಡಿತು. ಅಂಥ ಅಪವಿಶ್ವಾಸದವರು ಏನಾದರೂ ಕಷ್ಟ ಉಪದ್ರ ತಾಳಿಕೊಳ್ಳ ಬೇಕಾದರೆ, ದೇವರಲ್ಲಿ ಸ್ಥಿರ ವಿಶ್ವಾಸವೂ ತಕ್ಕ ತಾಳ್ಮೆಯೂ ಇಲ್ಲದವರಾಗಿ ಮಾಟ, ಮಂತ್ರವಾದ, ಶೂನ್ಯ ಇತ್ಯಾದಿ ಮಹಾ ದೋಷ ಕರ್ಮಗಳಲ್ಲಿ ಬೀಳುತ್ತಾರೆ. ಅದರಿಂದ ವ್ಯರ್ಥ ಖರ್ಚು ಮುಂತಾದ ಕೇಡು ಆಗುವದಲ್ಲದೆ ದೇವರಲ್ಲಿ ಇದ್ದಷ್ಟು ಸ್ವಲ್ಪ ವಿಶ್ವಾಸದ ಬಲವೂ ಭಕ್ತಿಯ ಬಲವೂ ಜ್ಞಾನವೂ ಕುಂದಿ ಹೋಗಿ, ಅಳಿದು ಹೋಗುವದಾದರೂ ಆಗುತ್ತದೆ. ಇಷ್ಟೆಲ್ಲ ನಷ್ಟ ನಾಚಿಕೆಗಳ ಬೆನ್ನಿನಲ್ಲಿ ನಿತ್ಯಜೀವಕ್ಕೆ ತಪ್ಪಿ ಹೋಗಿ, ನರಕದಲ್ಲಿ ಬೀಳುವ ನಷ್ಟ ಸಹಾ ಇರುತ್ತದೆ. ವಿಶ್ವಾಸಿಗಳ ತಂದೆಯೆನ್ನಿಸಿ ಕೊಳ್ಳುವ ಅಬ್ರಹಾಮನ ಸಂತಾನದವರಾದ ಇಸ್ರಯೇಲ್ಯರ ಮಧ್ಯದಲ್ಲಿ ಶೂನ್ಯ, ಮಾಟ, ಮಂತ್ರವಾದ ಮೊದಲಾದ್ದು ಇರ ಬಾರದಾಗಿತ್ತು. ಮಾಟ ಮಾಡುವವರೂ ಮಾಡಿಸುವವರೂ, ಕಣಿ ಹೇಳುವವರೂ ಕೇಳುವವರೂ ಮುಂತಾದ ಪಾಪಿಗಳೆಲ್ಲರು ಸಾಯಲೇ ಸಾಯ ಬೇಕು, ಸಭೆಯೆಲ್ಲಾ ಅವರನ್ನು ಕಲ್ಲೆಸೆದು ಕೊಂದು, ನಿರ್ಮೂಲ ಮಾಡ ಬೇಕು ಎಂಬ ದಿವ್ಯಾಜ್ಞೆ ಇದ್ದ ಮೇಲೆ ಯೇಸುವಿನ ವಂಶದವರೇ, ದೇವರ ಮಕ್ಕಳೂ ಸ್ವಾಶ್ರಿತ ಪ್ರಜೆಯೂ ಆಗಿರ ತಕ್ಕವರಲ್ಲಿ ಅಂಥ ಪಾಪಗಳು ಇರ ಬಹುದೋ? ಅಂಥ ಪಾಪಗಳಿಂದ ತಮ್ಮನ್ನು ಅಶುದ್ಧರಾಗ ಮಾಡಿ ಕೊಂಡವರು ಪಿಶಾಚನನ್ನು ಜಯಿಸಿ, ಅಂಧಕಾರದ

ಕ್ರಿಯೆಗಳನ್ನು ಹಗೆ ಮಾಡುವವರಾಗಿ ಯೇಸುವಿಗೆ ಹೊಂದಿರುವ ಸತ್‌ಕ್ರೈಸ್ತರ ಸಂಗಡ ದೇವರ ರಾಜ್ಯದಲ್ಲಿ ಶೇರ್ರ್ಯಾರೋ? ಎಂದೂ ಶೇರರು. ಬೆಂಕಿ ಗಂಧಕಗಳಿಂದ ಉರಿಯುವ ಕೆರೆಯಲ್ಲಿ ಆಗುವ ಎರಡನೇ ಮರಣವು ಅವರ ಪಾಲು. ಪ್ರಕಟ. ೨೧, ೮.

ಲೇಖನ.

ಶ್ರೀಮಂತ ಸಭಾಪತ್ರಕರ್ತರಿಗೆ.

ಅಯ್ಯಾ,

ನೀವು ಬಡವರ ಮೇಲಿಟ್ಟ ನಿಮ್ಮ ಕೋಮಲ ಅಂತಃಕರಣೆಯಿಂದ, ಕಳೆದ ಮೇ ತಿಂಗಳಿನ ನಿಮ್ಮ ಸಭಾಪತ್ರದ ಕೊನೆಯಲ್ಲಿ ಆರು ಮನೆತನಗಳವರ ಆರು ಮನೆಗಳು ಅಗ್ನಿಗೆ ಆಹುತಿಯಾಗಿ ಅವರಿಗಾದ ನಷ್ಟಕ್ಕೆ ಏನಾದರೂ ಸಹಾಯ ಮಾಡ ಬೇಕೆಂತ ಪ್ರಕಟಿಸಿದ್ದೀರಿ. ಆ ನಿಮ್ಮ ಪರಸಾಹಿತ್ಯದ ಸಂಗತಿಯನ್ನೂ, ಹಾಗು ಹಿಂದಕ್ಕೆ ಈ ನಮ್ಮ ಘಟ್ಟದ ಮೇಗಳ ಶೀಮೆಯಲ್ಲಿ ಕೆಲವು ವರುಷಗಳ ಹಿಂದೆ ಆದ ತುಟಗ್ರದಲ್ಲಿ ನಮ್ಮ ಹುಬ್ಬಳ್ಳಿಯಿಂದ ಈ ಸಭೆಯಲ್ಲಿರುವ ಬಡವರ ನಿಮಿತ್ಯವಾಗಿ ನಿಮ್ಮ ಮಂಗಳೂರ ಸಭೆಯವರಿಗೆ ವಿಜ್ಞಾಪನೆಯ ಪತ್ರ ಹೋದಲ್ಲಿ ಅಲ್ಲಿಯ ಸಭೆಯ ಉದಾರ ಗೃಹಸ್ಥರು ನಮ್ಮಲ್ಲಿಯ ಸಭೆಯವರಿಗೆ ಬಹಳ ಸಹಾಯ ಮಾಡಿದ್ದನ್ನೂ ಅಂತಃಕರಣಪೂರ್ವಕವಾಗಿ ಜ್ಞಾಪಕ ಮಾಡಿ ಕೊಂಡು, ತಕ್ಕ ಸಮಯದಲ್ಲಿ ತಮ್ಮ ವಿಜ್ಞಾಪನೆಯ ಪತ್ರವನ್ನು ಮಾನಿಸಿ, ಆ ಬಡ ಸಹೋದರರಿಗೆ ನಮ್ಮ ಶಕ್ತ್ಯಾನುಸಾರ ಸಹಾಯ ಮಾಡುವದು ನಮಗೆ ಲಭ್ಯವಾಯಿತು.

ಮತ್ತು ನಮ್ಮಲ್ಲಿಯ ಬಡ ಸಹೋದರರು, ಹಿಟ್ಟಿನಲ್ಲಿ ಉಪ್ಪು ಬೆರಸಿದ ಹಾಗೆ, ಅಲ್ಪ ಸ್ವಲ್ಪ ಸಹಾಯ ಮಾಡಿದ್ದಾರೆ. ದಯ ಮಾಡಿ ಈ ಚಿಕ್ಕ ದಾನವನ್ನು ಅಂಗೀಕೃತ ಮಾಡಿಕೊಳ್ಳ ಬೇಕೆಂಬದೇ ನಮ್ಮ ಮನಃಪೂರ್ವಕವಾದ ವಿಜ್ಞಾಪನೆಯಾಗಿದೆ. ಆ ಬಡವಿಯ ಎರಡು ಕಾಸಿನ ದುಗ್ಗಾಣಿಯಾದರೂ ಆ ಕಾಣಿಕೆಯ ಡಬ್ಬಿಯಲ್ಲಿ ಬಿದ್ದು ಏನಾದರೂ ಸಾರ್ಥಕ ಮಾಡಿದ್ದೀತು. ಅದರಂತೆ ಈ ನಮ್ಮ ಸಣ್ಣ ದಾನವಾದ ೩೪ ರೂಪಾಯಿಗಳಿಂದಲಾದರೂ ಸಾರ್ಥಕವಾಗದೆ ಇರಲಿಕ್ಕಿಲ್ಲ.

ಇದಲ್ಲದೆ ಬೇರೆ ಕಡೆಯಿಂದ ಸಹ ಈ ಅವಸರಕ್ಕೆ ಸಹಾಯವಾದೀತೆಂತ ನಂಬುತ್ತೇನೆ. ಹನಿಗೆ ಹನಿ ಕೂಡಿದರೆ ಹಳ್ಳ, ತೆನೆಗೆ ತೆನೆ ಕೂಡಿದರೆ ರಾಶಿ ಎಂಬ ಗಾದೆಯಂತಾಗಿ, ಕರ್ತನ ಕೃಪೆಯಿಂದ ಸದ್ಯಕ್ಕೆ ಬಿಸಿಲಲ್ಲಿ ಕೂತಿರುವ ಆ ಸಹೋದರರು ಬೇಗ ನೆರಳಲ್ಲಿ ಕೂಡ್ರುವಂಥವರಾಗಲೆಂಬದೇ ನಮ್ಮ ಪ್ರಾರ್ಥನೆ.

೧೮೭೫ ಜೂನ ತಾರೀಖು ೫.   ಇಷ್ಟಕ್ಕೆ ತಮ್ಮ

ಹುಬ್ಬಳ್ಳಿಯಿಂದ.   ಪತ್ರ ಓದುವವನೊಬ್ಬನು.

ನಮ್ಮ ಮಂಗಳೂರ ಸಭೆಯಲ್ಲಿ ಮನೆ ಸುಟ್ಟು ಹೋದ ಆಪತ್ತಿಗೆ ಗುರಿಯಾದವರಿಗಾಗಿ ಹುಬ್ಬಳ್ಳೀ ಸಭೆಯ ಸಹೋದರರು ಹಣ ಕೂಡಿಸಿ ಕಳುಹಿಸಿದ್ದು "ಹಿಟ್ಟಿನಲ್ಲಿ ಉಪ್ಪು ಬೆರಸಿದ" ಕೆಲಸ ಮಾತ್ರವೇ ಆಗಿರದೆ, ಹಿಟ್ಟಿಗೆ ರುಚಿ ಕೊಟ್ಟು, ಓಗರವನ್ನು ಮೇಲೋಗರವೇ ಆಗ ಮಾಡಿದ ಕೆಲಸವಾಯಿತು. ಈ ಹಣದಿಂದಲೂ ಬೇರೆ ಕಡೆಯಿಂದ ಕೂಡಿ ಬಂದಂಥಾದ್ದರಿಂದಲೂ ಅವಸರದ ಬಾಯಿಯನ್ನು ತಕ್ಕಷ್ಟು ಮುಚ್ಚಿಸಿ ಬಿಡಲಿಕ್ಕಾಯಿತು. ಬಂದ ಹಣವನ್ನೇ ಮಾತ್ರವಲ್ಲಾ, ಅದನ್ನು ಕೊಟ್ಟಂಥಾ "ಸಹೋದರಪ್ರೀತಿ" ಎಂಬ ಕೈಯನ್ನು ಸಹಾ ನೋಡ ತಕ್ಕದ್ದು, ನೋಡಿರುತ್ತೇವೆ, ನೋಡಿ ಕೃತಜ್ಞತಾಭಾವಪೂರ್ವಕ ಸಂತೋಷ ಪಟ್ಟು, ಪ್ರತಿಯಾಗಿ ಕೈಕೊಟ್ಟು ವಂದಿಸಿ, ಆಶೀರ್ವದಿಸುತ್ತೇವೆ.

ಸರ್ವ ಶಕ್ತಿಯೂ ಅಪಾರ ಪ್ರೀತಿ ಕರುಣೆಯೂ ಉಳ್ಳ ಮಹಾ ದೇವರಾದ ತಂದೆಯು ಹುಬ್ಬಳ್ಳೀ ಸಭೆಯನ್ನು (ಸಕಲ ಸಭೆಗಳನ್ನೂ) ಎಲ್ಲಾ ಕೇಡಿಗೆ ತಪ್ಪಿಸಿ, ಕಾಪಾಡಿ, ಅಪರಿಮಿತವಾಗಿ ಆಶೀರ್ವದಿಸುವವನಾಗಿ ಬದಲು ಕೊಡಲಿ!—ಕ್ರೈ. ಸ. ಕ.

ವಿವಿಧ ವರ್ತಮಾನಗಳು.

ಬ್ರೀಗಲ್ ಧೊರೆ ಧೊರೆಸಾನಿ ಮಗು ಸಮೇತವಾಗಿ ಮೇ ೧೪ನೇ ತಾರೀಕಿಗೆ ಸುಕ್ಷೇಮದೊಂದಿಗೆ ಬಾಸಲ್ ಪಟ್ಣದಲ್ಲಿ ಮುಟ್ಟಿದರಂತೆ.

ಕೆಲವು ವರುಷ ಆನಂದಪುರದಲ್ಲಿಯೂ ಬೆಟ್ಟಿಗೇರಿಯಲ್ಲಿಯೂ ಇದ್ದ ಹಾನ್ ಧೊರೆ ಬಹಳ ದಿನ ಅಕ್ಷೇಮದ ಶ್ರಮೆಯನ್ನು ತಾಳಿದ ಮೇಲೆ ಯೇಸುವಿನ ಶ್ರಮಾಶುಕ್ರವಾರ ಮಾರ್ಚ ೨೬ರಲ್ಲಿ ಪರವನ್ನೈದಿದರು.

ಬಾಸಲ್ ಮಿಶ್ಯನ್ ಸಂಘವು ಹಿಂದುಸ್ಥಾನದಲ್ಲಿರುವ ಪ್ರವೃತ್ತಿಯ ಸಂಕ್ಷೇಪ ವರ್ತಮಾನವು ಹಿಂದಿನ ಒಂದು ಅಂಕೆಯಲ್ಲಿ ಕೊಡಲಾಯಿತು. ಅದೇ ಮಿಶ್ಯನಿಗೆ ಅಫ್ರಿಕ ಚೀನ ದೇಶಗಳಲ್ಲಿಯೂ ಠಾಣ್ಯಾಗಳು ಉಂಟು. ಅಫ್ರಿಕದ ಗೋಲ್ಡ್ ಕೋಸ್ತ ಪ್ರದೇಶದಲ್ಲಿ ಇಪ್ಪತ್ತಾರು ಠಾಣ್ಯಾಗಳಲ್ಲಿಯೂ ಒಳಠಾಣ್ಯಾಗಳಲ್ಲಿಯೂ ೧೪೧೪ ಮಂದಿ ಕ್ರೈಸ್ತರಿದ್ಧಾರೆ. ೧೮೭೩ನೇ ಇಸವಿಯಲ್ಲಿ ಸಭೆಗೆ ಶೇರಿದವರ ಲೆಖ್ಖವು ೧೬೭.

ಚೀನದಲ್ಲಿ ೧೪ ಠಾಣ್ಯಾಗಳಲ್ಲಿ ೮ ಮಂದಿ ಮಿಶ್ಯನೆರಿಗಳೂ ೫೬೮ ಮಂದಿ ದೇಶೀಯರೂ ಕ್ರೈಸ್ತರಿದ್ಧಾರೆ; ಇವರಲ್ಲಿ ೧೦೬ ಮಂದಿ ಕಳೆದ ವರುಷದಲ್ಲಿ ಸಭೆಗೆ ಶೇರಿದವರು. ಲೀಲೊಂಗ್ ಪಟ್ಣದಲ್ಲಿರುವ ಮೇಲ್ಶಾಲೆಯಲ್ಲಿ ೧೦ ವಿದ್ಯಾರ್ಥಿಗಳು ಕಲಿಯುತ್ತಿದ್ಧಾರೆ. ಅಲ್ಲಿಯ ಒಂದು ಸಭೆಯಲ್ಲಿ, ಅಜ್ಞಾನದಲ್ಲಿರುವಾಗ ತನ್ನ ೬ ಹೆಣ್ಣು ಮಕ್ಕಳನ್ನು ಕೊಂದವಳೊಬ್ಬಳೂ, ೨ ಮಂದಿಯನ್ನು ಕೊಂದ ಇನ್ನೊಬ್ಬಳೂ ಇದ್ಧಾರೆ. ಇದರಿಂದ ಚೀನಿಯರು ಎಷ್ಟೋ ಸನ್ಮಾರ್ಗಭ್ರಷ್ಟರೆಂದು ತಿಳುಕೊಳ್ಳ ಬಹುದು. ಕಳೆದ ಸಪ್ತಂಬರಿನಲ್ಲಿ ಉಂಟಾದ ಪ್ರಚಂಡ ತುಫಾನಿನಿಂದ ಅನೇಕ ಮನೆಗಳೂ ಪ್ರಾಣಗಳೂ ನಷ್ಟವಾಗಿ ಹೋದಾಗ್ಯೆ ಮಿಶ್ಯನ್ ಮನೆಯೂ ನೆಲಗತವಾಗಿ, ಕೆಲವು ಕೋಣೆಗಳು ಮಾತ್ರ ಉಳಿದವು.

೧೮೭೪ನೇ ಇಸವಿಯ ವೆಸ್ಲಿಯನ್ ಮಿಶ್ಯನ ರಿಪೋರ್ಟು (ವರ್ಷಚರ್ಯವಹಿ) ನಾವು ಓದಿದೆವು. ಅದರಲ್ಲಿ ಆ ಮಿಶ್ಯನು ಮೈಸೂರು ರಾಜ್ಯದ ಬೆಂಗಳೂರು, ಮೈಸೂರು, ತುಮುಕುರು, ಗುಬ್ಬಿ, ಶಿವಮೊಗೆ ಈ ಊರುಗಳಲ್ಲಿಯೂ ನೀಲಗಿರಿಯ ಹೊತ್ತೆಗೆಮುಂದಿನಲ್ಲಿಯೂ ನಡಿಸುತ್ತಿರುವ ಪ್ರವೃತ್ತಿಯ ವಿವರವು ಅದೆ. ೯ ಮಂದಿ ವಿಲಾಯತಿಯ ಮಿಶ್ಯನೇರಿಗಳೂ ೪ ಮಂದಿ ದೇಶೀಯ ಬೋಧಕರೂ ೧೧ ಮಂದಿ ಉಪದೇಶಿಗಳೂ ೪ ಮಂದಿ ರೀಡರ್ಸ್ ಅಂದರೆ ಕಿರೀ ಉಪದೇಶಿಗಳೂ ಅದರಲ್ಲಿದ್ಧಾರೆ. ದೇಶೀಯ ಕ್ರೈಸ್ತರು ಒಟ್ಟಿಗೆ ೩೧೭ ಮಂದಿ; ಇವರಲ್ಲಿ ೨೩ ಮಂದಿ ಕಳೆದ ವರುಷದಲ್ಲಿ ಸಭೆಗೆ ಶೇರಿದವರು. ಬೇರೆ ಬೇರೆ ಊರುಗಳಲ್ಲಿರುವ ಶಾಲೆಗಳಲ್ಲಿ ೩೮೨೩ ಮಂದಿ ಹುಡುಗರೂ ಹುಡುಗಿಯರೂ ಕಲಿಯುತ್ತಾರೆ.

ಆರ್ಕಾಟು ಮಿಶ್ಯನಿನ ೧೮೭೪ನೇ ವರ್ಷದ ರಿಪೋರ್ಟು ಸಹಾ ನಮಗೆ ಹಸ್ತಗತವಾಯಿತು. ಈ ಮಿಶ್ಯನಿನಲ್ಲಿರುವ ೭ ಮಂದಿ ವಿಲಾಯತೀ ಮಿಶ್ಯನೆರಿಗಳಲ್ಲಿ ೪ ಮಂದಿ ವೈದ್ಯರೂ ಆಗಿರುತ್ತಾರೆ. ದೇಶೀಯ ಬೋಧಕರು ಇಬ್ಬರು; ಇವರ ಹೊರ್ತು ಉಪದೇಶಕರೂ ಪಂತೋಜಿಗಳೂ ಪುಸ್ತಕ ಮಾರುವವರೂ ಒಟ್ಟಿಗೆ ೮೬ ಮಂದಿ ಇದ್ಧಾರೆ; ಮತ್ತು ವಿಲಾಯತಿಯಿಂದ ಬಂದ ಇಬ್ಬರು ಸಾನಿಗಳೂ ಶಾಲೆಗಳ ಪಾರುಪತ್ಯ ನೋಡುತ್ತಾರೆ. ದೇಶೀಯ ಕ್ರೈಸ್ತರು ೨೫೨೩ ಮಂದಿ, ಕಳೆದ ವರ್ಷಕ್ಕಿಂತ ೧೦೧ ಮಂದಿ ಕಡಿಮೆ. ಇಷ್ಟು ಮಂ

ದಿಯನ್ನು ಅವರ ನಡತೆ ಯೋಗ್ಯವಲ್ಲದ್ದರಿಂದ ಸಭಾನ್ಯೋನ್ಯದಿಂದ ಬಹಿಷ್ಕಾರ ಮಾಡಲಾಯಿತು. ಆರ್ಕಾಟಿನಲ್ಲಿರುವ ಮೇಲ್ಶಾಲೆಯಲ್ಲಿ ೪೦ ಮಂದಿ ಯೌವನಸ್ಥರಿಗೆ ವಿಶೇಷವಾಗಿ ಮಿಶ್ಯನ ಕೆಲಸಕ್ಕೆ ಸಿದ್ಧ ಮಾಡುವದಕ್ಕೆ ವಿದ್ಯಾಭ್ಯಾಸ ಮಾಡಿಸೋಣಾಗುತ್ತದೆ; ಬೇರೆ ಶಾಲೆಗಳಲ್ಲಿ ೨೮೮ ಹುಡುಗರೂ ಹುಡುಗಿಯರೂ ಕಲಿಯುತ್ತಾರೆ; ಮತ್ತು ಹಗಲಿನಲ್ಲಿ ಓದಲಿಕ್ಕೆ ಸಮಯವಿಲ್ಲದವರಿಗಾಗಿ ಪ್ರಾರಂಭಿಸಿದ ರಾತ್ರಿಶಾಲೆಗಳಲ್ಲಿ ಸುಮಾರು ೧೦೯೧ ಮಂದಿ ಬರಹ ಕಲಿತು ಕೊಳ್ಳುತ್ತಾರೆ. ಆರ್ಕಾಟಿನಲ್ಲಿರುವ ಆಸ್ಪತ್ರಿಯಲ್ಲಿ ೬೩೦೬ ರೋಗಿಷ್ಠರಿಗೆ ವೈದ್ಯೋಪಚಾರ ಮಾಡಲಾಯಿತು.

ಬಡೋದೆಯ ಗಾಯಕವಾಡನ ಪಟ್ಟಕ್ಕೆ ಸರಕಾರದವರು ತೋರಿಸಿದ ಮೂವರಲ್ಲಿ ರಾಣಿ ಯಮುನಾಬಾಯಿ ಆದು ಕೊಂಡ ೧೦ ವರುಷದ ಹುಡುಗ ಗೋಪಾಲರಾವ್ ಎಂಬಾತನು ಬಡೋದೆಯ ಹೊಸ ಗಾಯಕವಾಡನಾಗಿದ್ದಾನೆ. ಮೇ ೨೭ರಲ್ಲು ರಾಜಕೀಯ ಆಡಂಬರದೊಡನೆ ಆತನನ್ನು ಸಿಂಹಾಸನಾರೂಢನಾಗ ಮಾಡಿ, ಶ್ಯಾಜಿರಾವ ಎಂತ ಹೊಸ ನಾಮವನ್ನಿಟ್ಟುಕೊಟ್ಟರು. ಸರಕಾರದವರು ತೋರಿಸಿದ ಮೂವರಲ್ಲಿ ಒಬ್ಬ ಮೊರಾರಾವ ಎಂಬವನು ತನಗೆ ಪಟ್ಟ ಕಟ್ಟಲಿಲ್ಲವೆಂತಾ ಸ್ವಘಾತ ಮಾಡಿ ಕೊಂಡನು.

ಪೇಶಾವರದಲ್ಲಿ ಕಳದ ತಿಂಗಳಲ್ಲಿ ಅಜಾಗ್ರತೆಯಿಂದ ಒಬ್ಬ ಮುಸಲ್ಮಾನನ ಮನೆಗೆ ಬೆಂಕಿ ತಾಗಿ, ಘಾಳಿ ಬಲವಾಗಿದ್ದದರಿಂದ ನಾಲ್ಕು ದಿಕ್ಕಿಗೆ ಹಬ್ಬಲಾಗಿ ಸಮಾರು ೩೦೦೦ ಮನೆಗಳು ಭಸ್ಮವಾದವು.

ದಖ್ಖಾನಿನ ಕೆಲವು ಹಳ್ಳಿಗಳವರು ಸಾಲ ಕೊಡುವ ಮಾರವಾಡಿ ಸಾವಕಾರರಿಗೆ ವಿರೋಧವಾಗಿ ಸೊಂಟ ಕಟ್ಟಿ ತಂಟೆ ನಡಿಸಲಿಕ್ಕಿದ್ದಾಗ ಶಿಪಾಯರನ್ನು ಕಳುಹಿಸಿ, ಅವರಿಗೆ ಬುದ್ಧಿ ಕಲಿಸೋಣವಾಯಿತು. ಈ ಬಡ ರೈತರು ಮಕ್ಕಳ ಮದಿವೆಗೆ ಮಾರವಾಡಿಗಳಿಂದ ಸಾಲ ತಕ್ಕೊಂಡು ಅವರ ಕೈಯೊಳಗೆ ಶಿಕ್ಕು ಎಷ್ಟು ಸಲ್ಲಿಸಿದಾಗ್ಯೂ ಬಡ್ಡಿಗೆ ಸಾಲದೆ, ಕಡೆಗೆ ಅವರ ಗುಲಾಮರೇ ಆಗುತ್ತಾರೆ.

ಧಾಮುಧೂಮು ಖರ್ಚು ಮಾಡಿ ಮಕ್ಕಳಿಗೆ ಮದಿವೆ ಮಾಡುವ ಕೆಟ್ಟ ಪದ್ಧತಿ ಈ ದೇಶದಲ್ಲಿ ಯಾವಾಗ ನಿಂತು ಹೋದೀತು?

ಮೇ ೪ರಲ್ಲು ಆದಂಥಾ ಚರ್ಚ ಮಿಶ್ಯನ್ ಸಂಘದ ವಾರ್ಷಿಕ ಕೂಟದಲ್ಲಿ ಓದಿದ ವರ್ಷಚರ್ಯೆ ಪ್ರಕಾರ ಆ ಮಿಶ್ಯನಿಗೆ ಬಂದ ಹಣ ೧೭,೫೮,೩೫೦ ರೂಪಾಯಿ. ಆ ಮಿಶ್ಯನಿನಲ್ಲಿ ೨೧೧ ವಿಲಾಯತಿ ಪಾದ್ರಿಗಳೂ ೧೫೪ ದೇಶೀಯ ಪಾದ್ರಿಗಳೂ ಇದ್ದಾರೆ. ರಾತ್ರಿಭೋಜನಕ್ಕೆ ಬರುವ ಕ್ರೈಸ್ತರು ೨೪,೪೯೭ ಮಂದಿ.

ಬೈಬಿಲ್ ಸೊಸೈತಿಯ ವಾರ್ಷಿಕ ಕೂಟವು ಮೇ ೫ರಲ್ಲು ಲಂಡನಿನಲ್ಲಿ ಕೂಡಿ ಬರೋಣವಾಯಿತು. ಆ ಕೂಟಕ್ಕೆ ಬಂದ ಹಣ ೨೨,೨೧,೯೧೦ ರೂಪಾಯಿ. ಅವರು ಛಾಪಿಸಿ ಪ್ರಕಟಿಸಿದ ಗ್ರಂಥಗಳು ೨೬,೧೯,೪೨೭.

ಹೊರೆಸ್ ಮೇನಾರ್ಡ್ ಧೊರೆ ಅಮೇರಿಕದ ಸಂಯುಕ್ತ ಸಂಸ್ಥಾನದಿಂದ ತುರ್ಕಿ ರಾಜ್ಯಕ್ಕೆ ರಾಯಭಾರಿಯಾಗಿ ನೇಮಿಸಲ್ಪಟ್ಟದ್ದಕ್ಕೆ ಭೂಲೋಕದಲ್ಲಿರುವ ಸಕಲ ಕ್ರೈಸ್ತರು ಸಂತೋಷ ಪಡುವರು. ತುರ್ಕಿ ಸರಕಾರದವರು ಸತ್ಯವೇದಗ್ರಂಥಗಳು ತಮ್ಮ ರಾಜ್ಯದಲ್ಲಿ ಮಾರಾಟವಾಗ ಬೇಡೆಂತಾ ಅಪ್ಪಣೆಕೊಟ್ಟಿರುತ್ತಾರಾದ್ದರಿಂದ ಈ ಭಕ್ತಿಯುಳ್ಳ ಧೊರೆ ಅಲ್ಲಿರುವದರಿಂದ ದೇವವಾಕ್ಯಪ್ರಸಾರಕ್ಕೆ ಬಹು ಸಹಾಯವಾದೀತು.

ಓಸ್ತ್ರಿಯ ಮಹಾರಾಜ್ಯದ ರಾಜಧಾನಿಯಾದ ವಿಯೆನೆಂಬ ಪಟ್ಣದಲ್ಲಿ ತ್ಯಾಗಭೋಗರಾಯನಾಗಿ ಬದುಕುತ್ತಾ ಬಂದ ಕಡೆಗೆ ಬಡವನಾಗಿ ಸಾಲದಲ್ಲಿ ಮುಣಿಗಿ ಹೋದ ಒಬ್ಬ ಗೃಹಸ್ಥನು ತನ್ನ ಹೆಂಡತಿಯನ್ನು ಪೇಟೆಗೆ ಕಳುಹಿಸಿದ ಸಮಯದಲ್ಲಿ ತನ್ನ ೫ ಮಕ್ಕಳನ್ನು ಕೊಂದು ಹಾಕಿದನು; ಹ್ಯಾಗಂದರೆ: ನಿಮಗೆ ಒಂದು ಹೊಸ ಆಟವನ್ನು ತೋರಿಸುತ್ತೇನೆಂಧೇಳಿ, ಅವರನ್ನು ಕೊರಳಿಗೆ ನೇಣು ಬಿಗಿಸಿ ತೂಗ ಹಾಕಿದನು. ಕಡೆಗೆ ತನ್ನನ್ನು ಸಹಾ ನೇಣು ಹಾಕಿ ಕೊಂಡು ಕೊಂದನು.

ಚೇನ ದೇಶದ ಮಹಾರಾಜನು ಸತ್ತು ಹೋ

ದ ವರ್ತಮಾನವನ್ನು ೭ನೇ ಪುಸ್ತಕದ ೧೨೦ನೇ ಪುಟದಲ್ಲಿ ಓದಿದ್ದೀರಿ. ಅವನು ಪಟ್ಟಾಭಿಷೇಕ ಹೊಂದುವಾಗ ೯ ವರುಷದ ಹುಡುಗನಾಗಿದ್ದನು. ಅಂದೇ ಅವನ ಮಂತ್ರಿಗಳು, ಇಷ್ಟು ಕಡಿಮೆ ಪ್ರಾಯದವನು ರಾಜ್ಯಭಾರ ಮಾಡಲಿಕ್ಕೆ ಸಮರ್ಥನಲ್ಲವೆಂಬ ಭಾವದಿಂದಲೋ, ನಿರ್ಣಯಿಸಿ ಕೊಂಡದ್ದೇನಂದರೆ: ರಾಜ್ಯದ ಆಯಾ ಮುಖ್ಯ ಹುದ್ದೆದಾರರು ಹೊಸ ಮಹಾರಾಜನಿಗೆ ಒಪ್ಪಿಸುವದಕ್ಕಾಗಿ ಭೇಟಿಯಾಗುವಾಗ ಒಬ್ಬೊಬ್ಬನು ಅವನಿಗೆ ಒಂದೊಂದು ವರುಷವನ್ನು ಕಾಣಿಕೆಯಾಗಿ ಕೊಡಬೇಕು ಎಂಬದು. ಈ ನಿರ್ಣಯಕ್ಕನುಸಾರವಾಗಿ ಹುಡುಗನಿಗೆ ೯ ವರುಷಗಳು ಕಾಣಿಕೆಯಾಗಿ ಶಿಕ್ಕಿದವು. ಆದ್ದರಿಂದ ಅವನ ವೃತ್ತಾಂತವನ್ನು ಮಹಾರಾಜರ ಇತಿಹಾಸದಲ್ಲಿ ಬರದಿಟ್ಟಾಗ, ಅವನು ೯ ವರುಷದವನಾಗಿ ಪಟ್ಟಕ್ಕೆ ಬಂದನೆಂತಲ್ಲ, ೧೮ ವರುಷದ ಯುವರಾಜನಾಗಿ ರಾಜ್ಯಾಭಿಷಿಕ್ತನಾದನೆಂತ ದಾಖಲಾಯಿತು. ಚೀನ ದೇಶದವರು ಇದ್ದ ಪ್ರಾಯಕ್ಕಿಂತ ಹೆಚ್ಚಿನ ಪ್ರಾಯವನ್ನು ಕೊಟ್ಟು, ಒಬ್ಬ ಹುಡುಗನನ್ನು ಪ್ರಾಯಸ್ಥನಾಗ ಮಾಡ ಶಕ್ತರಾಗಿದ್ದಾರೆ. ವಿಲಾಯತಿಯ ಹಾಗು ಅಮೇರಿಕದ ದಂತವೈದ್ಯರು ನೋವಿನಿಂದಾಗಲಿ ಮುಪ್ಪಿನಿಂದಾಗಲಿ ಉದುರಿ ಬಿದ್ದ ಹಲ್ಲುಗಳಿಗೆ ಬದಲಾಗಿ ಒಂದು ತರದ ಗಾಜಿನ ಹಲ್ಲು ಮಾಡಿ ಕುಂದ್ರಿಸಿ ಕೊಡ ಬಹುದು. ಹುಡುಗನಿಗೆ ಪ್ರಾಯಸ್ಥನಾದ ಒಳ್ಳೇ ಬುದ್ಧಿಶಾಲಿಯ ಬುದ್ಧಿಯನ್ನು, ಮಂಗಕ್ಕೆ ಚಲೋ ಮಾನುಷಬುದ್ಧಿಯನ್ನು ಕೊಡಲೂ, ಮುಪ್ಪಾಗಲಿ ಸಾವಾಗಲಿ ಬಾರದೆ ನಿತ್ಯಯೌವನವೂ ಕ್ಷೇಮವೂ ಇರಲೂ ಇನ್ನು ಯಾರಾದರೂ ಬಂದು ಮಾಡ ಸಮರ್ಥನಾದರೆ ಸೈ.

ಅಮೇರಿಕದವನಾದ ಬೊಯಿತನ್ ಎಂಬವನು ಈಜಾಡಲಿಕ್ಕೆ ತಕ್ಕ ದುಸ್ತನ್ನು ಮಾಡುವ ಚಮತ್ಕಾರಿಯಾದನು. ಆ ದುಸ್ತು ಹಾಕಿ ಕೊಂಡು ಈಜಾಡುವವನು ತನಗೆ ಮನಸ್ಸಿದ್ದಷ್ಟು ಹೊತ್ತು ನೀರಿನಲ್ಲಿ ಕಳೆಯಲಿಕ್ಕಾಗುವದಲ್ಲದೆ, ತಿನ್ನಲೂ, ಕುಡಿಯಲೂ, ಚುರುಟು ಸೇದಲೂ, ಓದಲೂ ಇತ್ಯಾದಿಗಳನ್ನು ಮಾಡಲೂ ಬಹುದು. ಆ ದುಸ್ತು ಹಾಕಿ ಕೊಂಡು ಬೊಯಿತನ್ ಹಡಗವನ್ನಾಗಲಿ ದೋಣಿಯನ್ನಾಗಲಿ ಹತ್ತದೆ ಇಂಗ್ಲಾಂಡಿನಿಂದ ಫ್ರೆಂಚ ದೇಶಕ್ಕೆ ಈಜಾಡಿ ಈಜಾಡಿ ಪ್ರಯಾಣ ಮಾಡಿ ಮುಟ್ಟಿದನು.

ಉತ್ತರ ಅಮೇರಿಕದ ಸರಕಾರಕ್ಕೂ ಆಯಾ ಕ್ರೈಸ್ತ ಸಭೆಗಳಿಗೂ ಏನೂ ಸಂಬಂಧವಿರದು. ಏನಾದರೂ ಧರ್ಮಸಂಬಂಧವಾದ್ದಾಗಲೀ, ಒಂದು ಸಭಾಕಾರ್ಯವಾಗಲೀ ನಡೆಯ ಬೇಕಾದರೆ, ಜನರು ತಾವೇ ಹಣ ಕೂಡಿಸಿ ತಕ್ಕ ಉಪಾಯವೂ ಪ್ರಯತ್ನವೂ ಮಾಡಿ ನಡಿಸ ಬೇಕು. ಸಭಾಕಾರ್ಯಗಳಿಗೆ ಆ ದೇಶದವರು ಕಳೆದ ವರುಷದಲ್ಲಿ ಬರೇ ಸ್ವೇಚ್ಛೆಯಿಂದ ೪೦ ಕೋಟಿ ರೂಪಾಯಿಗಳನ್ನು ಕೊಟ್ಟು ಕೂಡಿಸಿದರು. ಹಾಗೆಯೇ ಶಾಲೆಗಳಿಗಾಗಿಯೂ ವಿದ್ಯಾಕಾರ್ಯಗಳಿಗಾಗಿಯೂ ಬಹಳ ಔದಾರ್ಯದಿಂದ ಕೊಡುತ್ತಿರುತ್ತಾರೆ. ಕಳೆದ ವರುಷ ಒಂದರಲ್ಲಿ ೭೩ ಮಂದಿ ಗೃಹಸ್ಥರು ಈ ಬಗ್ಯೆ ಒಟ್ಟಿಗೆ ಸ್ವಲ್ಪ ಕಡಿಮೆ ೩ ಕೋಟಿ ರೂಪಾಯಿಗಳನ್ನು ಕೊಟ್ಟು ಬಿಟ್ಟರು.

ಅಮೇರಿಕದಲ್ಲಿರುವ ಯೋವದಲ್ಲಿ ಒಂದು ಮಹಾ ಅದ್ಭುತವಾದ ಉಲ್ಕಾಪಾತವು ಸಂಭವಿಸಿತು. ಹ್ಯಾಗಂದರೆ, ಬಹಳ ದೊಡ್ಡದಾದ ಒಂದು ಉಲ್ಕಾಶಿಲೆ ಆಕಾಶದಿಂದ ಭೂಮಿಗೆ ಬಿದ್ದು ಬರುವಂಥಾದ್ದಾಯಿತು. ಆ ಕಲ್ಲು ಅದು ಬಿದ್ದ ಕಡೆಯ ಮನೆಗಳಿಗೆಲ್ಲ ಬೆಂಕಿ ಹೊತ್ತಿತೋ ಎಂತ ತೋರುವಷ್ಟು ಪ್ರಕಾಶಮಯವಾಗಿತ್ತು. ಅದು ಭೂಮಿಗೆ ತಾಕಿದ ಪೆಟ್ಟು, ಭೂಕಂಪದಲ್ಲಿ ಆಗುವಂತೆ, ಭೂಮಿಯನ್ನು ಅದರಿಸಿ ಕಂಪಿಸ ಮಾಡಿತು. (ಸಭಾಪತ್ರ ೭ನೇ ಪುಸ್ತಕದ ೨೪ನೇ ಪುಟದಲ್ಲಿ ತ್ರಿಯೆಸ್ಟೆಂಬಲ್ಲಿ ಆದ ಉಲ್ಕಾಪಾತದ ವಿವರವನ್ನೂ ಅದಕ್ಕೆ ಜೋಡಿಸಿದ ಮಾತನ್ನೂ ಸರಿ ನೋಡ ತಕ್ಕದ್ದು.)

Printed by Stolz & Hirner, Basel Mission Press, Mangalore.

ಕ್ರೈಸ್ತಸಭಾಪತ್ರ

ಪುಸ್ತಕ ೮. **AUGUST 1875.** ಅಂಕೆ ೨.

ಅಡಕವು: ಹಿಂದೆ ಹೋಗ ಬೇಡಾ!— ಚಿನ್ನದ ಹರಳುಗಳು— "ಹೊರಗೊಂದು ಒಳಗೊಂದು"— ಗಣಿತವಿದ್ಯೆಯಲ್ಲಿ ಘಟ್ಟಿಗರಾಗಿರಿ— ದಂತವೈದ್ಯನು— ಲೇಖನ— ವಿವಿಧ ವರ್ತಮಾನಗಳು.

ಹಿಂದೆ ಹೋಗ ಬೇಡಾ!

ಮತ್ತಾ. ೧೯, ೧೬—೨೨ರಲ್ಲಿರುವ ವಿವರವನ್ನು ಓದುವಾಗ್ಯೆ, ಕರ್ತನು ಅದಕ್ಕೆ ಮುಂಚೆ ಒಂದು ಸಾರಿ ಹೇಳಿದ ಎಚ್ಚರಿಕೆಯ ಮಾತು ನೆನಪಿಗೆ ಬರುತ್ತದೆ. ಅದೇನಂದರೆ: "ಲೋಟನ ಹೆಂಡತಿಯನ್ನು ನೆನಪು ಮಾಡಿ ಕೊಳ್ಳಿರಿ!" ಆಕೆಯು ಒಂದೇ ನೋಟದಿಂದ ನಾಶವಾಗಿ ಉಪ್ಪಿನ ಸ್ತಂಭವಾದಳಲ್ಲಾ. ಅವಳು ತನ್ನ ಗಂಡನೂ ಮಕ್ಕಳೂ ಸಹಿತವಾಗಿ ನಾಶವಾಗುವ ಊರಿನಿಂದ ರಕ್ಷಿಸಲ್ಪಟ್ಟು ಜೀವದ ದಾರಿಯಲ್ಲಿದ್ದಾಗ್ಯೂ, ಹೃದಯವು ತಾನು ಬಿಟ್ಟು ಬಂದ ಮನೆ ಆಸ್ತಿ ಮುಂತಾದವುಗಳ ಕಡೆಗಿತ್ತು. ಅದರ ಮೇಲಣ ಅಭಿಲಾಷೆಯಿಂದ ಒಂದೇ ಸಾರಿ ಮಾತ್ರ ಹಿಂದೆ ನೋಡಿದ ಕ್ಷಣದಲ್ಲೇ ಉಪ್ಪಿನ ಸ್ತಂಭವಾಗಿ ಎಲ್ಲವರಿಗೆ ಗುರುತಾದಳು. ಜೀವಕ್ಕೂ ಮರಣಕ್ಕೂ ಒಂದೇ ಅಡಿ ದೂರ. ಹಾಗೆಯೇ ಯೇಸುವಿನ ಹಿಂದೆ ಬಂದು ಜಾರುವವರಿಗೂ ನಾಶನವೇ. ಅವರು ಆತ್ಮಶಕ್ತಿ, ಬುದ್ಧಿ ಕಳಕೊಂಡು ಬಲಹೀನರಾಗುತ್ತಾರೆ. ಆದ್ದರಿಂದ ನಾವು ದೇವರ ಶಬ್ದವನ್ನು ಕೇಳುವಾ. ಒಂದೇ ನೋಟದಿಂದ ನಾಶವಾಗುವ ಗಂಡಾಂತರವಿರುವದರಿಂದ ಹಿಂದಕ್ಕೆ ನೋಡದೆ ಮುಂದೆಯೇ ನೋಡುವಾ. ಇಲ್ಲಿ ಒಬ್ಬ ಯೌವನಸ್ಥನು ಯೇಸುವಿನ ಹತ್ತರ ಬಂದು ಹಿಂದೆ ಹೋದನು. ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸುವದಕ್ಕೆ ಹೋರಾಡಿರಿ; ಯಾಕಂದರೆ ಅನೇಕರು ಪ್ರವೇಶಿಸುವದಕ್ಕೆ ಹೋರಾಡುವರು, ಆದರೆ ಆಗದೆ ಹೋಗುವದೆಂದು ನಿಮಗೆ ಹೇಳುತ್ತೇನೆ ಎಂತಾ ಕರ್ತನು ಹೇಳಿದಂತೆಯೇ ಈ ಯೌವನಸ್ಥನಿಗೂ ಆಯಿತು. ಆದ್ದರಿಂದ ನಾವು ಈ ಹೊತ್ತು ಆಲೋಚಿಸುವ ಪ್ರಸ್ತಾಪವು:

ಅನೇಕರು ಜೀವದ ಬಾಗಲಿನ ಹತ್ತರ ಬಂದು ಹೋರಾಡಿ ಹಿಂದೆ ಹೋಗುತ್ತಾರೆ.

ಕರ್ತನ ಮುಂದೆ ಬಂದವನು ಯೌವನಸ್ಥನಾಗಿದ್ದಾಗ್ಯೂ ನಿತ್ಯಜೀವ ತನಗೆ ಬೇಕೆಂತ ಚಿಂತೆ ಮಾಡಿದನು. ಅನೇಕ ಯೌವನಸ್ಥರು ಅವನಂತೆ ಚಿಂತಿಸುವದಿಲ್ಲ. ಅವನು ಆಸ್ತಿವಂತನು, ಆದರೂ ಇಡೀ ಲೋಕ ಸಂಪಾದಿಸಿ ಆತ್ಮನಷ್ಟ ಪಟ್ಟರೆ ಪ್ರಯೋಜನವೇನು? ಅಥವಾ ತನ್ನ ಆತ್ಮಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕದ್ದೇನು? ಎಂಬ ಕರ್ತನ ಮಾತನ್ನು ನೆನವರಿಕೆ ಮಾಡಿದ್ದನು. ಲೂಕನು ಹೇಳುವಂತೆ, ಅವನು ಅಧಿಪತಿ, ಗುಣವಂತನೂ ಮಾನಸ್ಥನೂ; ಲೋಕಮರ್ಯಾದೆಯ ಪ್ರಕಾರ ಅವನಿಗೇನೂ ಕಡಿಮೆ ಇರಲಿಲ್ಲ. ಆದರೂ ಇಷ್ಟೆಲ್ಲಾ ಇದ್ದರೂ, ತನಗೆ ಅದರಿಂದ ನಿತ್ಯಜೀವ ಶಿಕ್ಕದು

ಎಂತ ಚನ್ನಾಗಿ ತಿಳಿದು, ಯೇಸುವಿನ ಹತ್ತರ ಅದನ್ನು ಹೊಂದುವದಕ್ಕೆ ಬಂದನು. ಅವನು ಕರ್ತನ ಹತ್ತರ ಕೇಳಿದ ಪ್ರಶ್ನೆಗೆ ಕರ್ತನು ಉತ್ತರವಾಗಿ ಒಂದು ಬಾಗಲನ್ನು ತೋರಿಸುತ್ತಾನೆ. ವ. ೧೭. ಹಾಗಂದರೆ "ನೀನು ಸ್ವಭರವಸವೆಂಬ ಬಾಗಲಿನಿಂದ ನಿತ್ಯಜೀವಕ್ಕೆ ಶೇರ ನೋಡುತ್ತೀ, ಅದಾಗದು; ನಾನು ತೋರಿಸುವ ಬಾಗಲು ಇಕ್ಕಟ್ಟು; ನಾನು ಬರೇ ಮನುಷ್ಯನೆಂತ ನೆನಸುತ್ತೀ; ಮನುಷ್ಯನು ಒಳ್ಳೆಯವನಲ್ಲ, ಚಿಕ್ಕತನದಾರಭ್ಯ ಕೆಟ್ಟವನೇ." ಆ ಯೌವನಸ್ಥನು ಕರ್ತನು ತನಗೊಂದು ಒಳ್ಳೇ ದಾರಿ ತೋರಿಸಿದರೆ ಸಾಕು, ತಾನು ಅದರಲ್ಲಿ ನಡದೇನೆಂತ ನೆನಸಿ ಬಂದಿದ್ದನು. ಕರ್ತನು ಜೀವದ ಬಾಗಲು ಇಕ್ಕಟ್ಟು ಎಂತ ತೋರಿಸಿ ದೃಷ್ಟಾಂತ ಕೊಡುತ್ತಾನೆ. ವ. ೧೮. ೧೯ರಲ್ಲಿ ದೇವರ ಲೆಖ್ಖದಲ್ಲಿ ಮನುಷ್ಯನು ಕೆಟ್ಟವನೆಂತ ತೋರಿಸುತ್ತಾನೆ. "ಕೊಲ್ಲ ಬೇಡ" ಎಂಬುವದರಲ್ಲಿ ಮನುಷ್ಯನು ತನ್ನಂಥಾ ಮನುಷ್ಯನನ್ನು ಪ್ರೀತಿ ಮಾಡದವನೂ ಹೆಚ್ಚಾಗಿ ದೇವರನ್ನೂ ಪ್ರೀತಿ ಮಾಡದವನೂ ಎಂತ ತೋರಿಸಿದನು. "ವ್ಯಭಿಚಾರ ಮಾಡ ಬೇಡ" ಎಂಬದರಲ್ಲಿ ಮನುಷ್ಯನು ಸಹಜವಾಗಿ ಅಶುದ್ಧನೆಂತ ತೋರಿಸಿದನು. "ಕದಿಯ ಬೇಡ" ಎಂಬದರಲ್ಲಿ ಮನುಷ್ಯನು ಅನ್ಯಾಯಗಾರನೇ ಎಂತ ತೋರಿಸಿದನು. ಈ ಮಾತುಗಳಿಂದ ಕರ್ತನು ಆ ಯೌವನಸ್ಥನ ಸ್ವನೀತಿ ಎಂಬ ವಸ್ತ್ರವನ್ನು ಅವನಿಂದ ಸುಲಿದು ತೆಗೆದು ಹಾಕಿದನು. ಆದರೆ ಯೌವನಸ್ಥನು ಅದನ್ನು ತಿಳಿಯದೆ (ವ. ೨೦.) ಇವನ್ನೆಲ್ಲಾ ಕೈಕೊಂಡಿದ್ದೇನೆ, ನನಗಿನ್ನೇನು ಕಡಿಮೆ? ಎಂತ ಉತ್ತರ ಕೊಟ್ಟಾಗ್ಯೆ, ಕರ್ತನು ಅವನಿಗೆ ಪ್ರಿಯವಾಗಿದ್ದದನ್ನು ಸಹಾ ತೆಗದು, ನಿನಗಿರುವವುಗಳನ್ನು ಮಾರಿ ಬಡವರಿಗೆ ಕೊಡು ಎಂತಾ ಹೇಳಿದನು. (ವ. ೨೧.) ದ್ರವ್ಯ ಅವನ ದೇವರೆಂದು ಕರ್ತನು ತಿಳಿದಿದ್ದನು. ಈ ಯೌವನಸ್ಥನ ಹಿಂದೆ ಆಸ್ತಿ, ಮುಂದೆ ನಿತ್ಯಜೀವ ಇದ್ದವು. ಕರ್ತನು, ಜೀವ ಬೇಕೋ? ಆಸ್ತಿ ಬೇಕೋ? ಎಂಬಂತೆ ಕೇಳಿದಾಗ, ಆಸ್ತಿ ಬೇಕು ಎಂಬ ಆಶೆ ಯೌವನಸ್ಥನಲ್ಲಿ ಬಲಗೊಳ್ಳಲಾಗಿ ಹಿಂದೆ ಹೋದನು. ಆಸ್ತಿ ಅವನನ್ನು ಎಳಿಯಿತು. ಇವನಂಥವರು ಎಷ್ಟು ಮಂದಿ! ನಿತ್ಯಜೀವದೊಳಗೆ ಶೇರ ಮನಸ್ಸುಂಟು; ಕರ್ತನು ಇಂಥಿಂಥಾದ್ದನ್ನು ಬಿಟ್ಟು ಬಿಡು ಎಂತ ಹೇಳುವಾಗ ಹಿಂಜಾರುತ್ತಾರೆ, ನಿತ್ಯಜೀವ ಕಳಕೊಳ್ಳುತ್ತಾರೆ. ಪ್ರಿಯನೇ! ನಿನ್ನ ಸಂಗತಿ ಹ್ಯಾಗೆ?

ಒಳಗೆ ಶೇರುವದು ಪ್ರಯಾಸವೇ, ಅನೇಕರಿಂದ ಕೂಡದ್ದೇ. ಹೊಸ್ತಾಗಿ ಹುಟ್ಟದ ಐಶ್ವರ್ಯವಂತರು ಸೂಜಿಯ ಬೆಜ್ಜದ ಮುಂದೆ ಒಂಟೆ ನಿಂತಂತೆ. ಸ್ವನೀತಿ ಪುಣ್ಯಗಳಿಂದ ಯಾರೂ ಶೇರರು. ಇದನ್ನು ಅನೇಕರು ನಂಬದೆ, ಯೇಸುವಿನ ಕೈಗೆ ತಮ್ಮನ್ನು ಒಪ್ಪಿಸದೆ ಹೋಗುತ್ತಾರೆ. ನಿತ್ಯಜೀವ ಮನುಷ್ಯನಿಗೆ ದೊರಕುವದು ದೇವರಿಂದಲೇ; ಯೇಸುವಿನ ಮುಖಾಂತರ ಶೇರಿಸುತ್ತಾನೆ. ಆತನಿಗೆ ಸರ್ವವೂ ಸಾಧ್ಯ. ಅತಿ ದುಷ್ಟ ಪಾಪಿಯನ್ನಾದರೂ ಶೇರಿಸ ಬಲ್ಲನು. ಯೇಸುವಿನ ಪಾದಗಳ ಮುಂದೆ ಬಿದ್ದು ಆತನನ್ನು ಶರಣ ಹೊಗುವಾ. ಹಿಂದೆ ಹೋಗುವವನಿಗೆ ನೆವನವಿಲ್ಲ. ಯೇಸು ಅವನನ್ನು ಶೇರಿಸುತ್ತಿದ್ದನು. ಲೋಟನ ಹೆಂಡತಿಯನ್ನು ನೆನಪು ಮಾಡಿ ಯೇಸುವಿನ ಹತ್ತರ ಬಂದು ಹಿಂದೆ ನೋಡದಿರುವಾ. ಆತನ ಹತ್ತರ ನೆಲೆಯಾಗಿರುವಾ. ಆತನು ನಮ್ಮನ್ನು ರಕ್ಷಿಸುವನು.

ಚಿನ್ನದ ಹರಳುಗಳು.

೧. ನನ್ನ ಕೃಪೆ ನಿನಗೆ ಸಾಕು; ಯಾಕಂದರೆ ನನ್ನ ಬಲವು ಅಶಕ್ತಿಯಲ್ಲಿ ಸಂಪೂರ್ಣವಾಗುವದು. (೨ ಕೊರಿ. ೧೨, ೯.) ಎಂಬ ವಾಕ್ಯದಲ್ಲಿ ಮೂರು ಮಾತು ಅಡಗಿಯವೆ; ಯಾವವಂದರೆ:

೧. ದೇವರ ಕೃಪೆ ನನಗೆ ಸಾಕು ಎಂಬ ಭಕ್ತಿಭಾವವನ್ನು ಕ್ರೈಸ್ತನು ಸರ್ವತ್ರ ತೋರಿಸಲಿಕ್ಕೆ ಕಾರಣಗಳೂ ಅವಸರಗಳೂ ಇದ್ದಾವೆ.

೨. ದೇವರ ಕೃಪೆ ನನಗೆ ಸಾಕು ಎಂಬ ಭಕ್ತಿಭಾವದಿಂದ ಕ್ರೈಸ್ತನು ಎಷ್ಟೋ ಬಲ ಹೊಂದಿ ಏನೇನು ಸಾಧಿಸಿ ಕೊಳ್ಳ ಬಹುದು.

೩. ದೇವರ ಕೃಪೆ ನನಗೆ ಸಾಕು ಎಂದಿರುವಂಥ ಕ್ರೈಸ್ತನು ಎಷ್ಟೋ ಭಾಗ್ಯವಂತನೇ.

೨. ಒಬ್ಬನ ನಿಜ ಸ್ವರೂಪವೂ ಗುಣವೂ ಹ್ಯಾಗೆಂದು ಪರೀಕ್ಷಿಸಿ ನೋಡ ಬೇಕಾದರೆ, ಮೂರು ಪರೀಕ್ಷೆ ಮಾಡಿ ನೋಡ ಬೇಕಂತೆ; ಏನಂದರೆ: ಅವನಲ್ಲಿ ಕೋಪ ಹುಟ್ಟುವ ಹಾಗೆ ಮಾಡಿ ನೋಡ ಬೇಕು; ಅವನಿಗೆ ಉಣ್ಣಿಸಿ ಕುಡಿಸಿ ನೋಡ ಬೇಕು; ಅವನೊಂದಿಗೆ ಒಂದು ಆಸ್ತಿಯನ್ನು ಪಾಲು ಮಾಡಿ ಹಂಚಿ ಕೊಂಡು ನೋಡ ಬೇಕು. ಈ ಮೂರು ಪರೀಕ್ಷೆಗಳೊಂದೊಂದರಲ್ಲಿ ಚನ್ನಾಗಿ ಪರೀಕ್ಷಿತನಾಗುವವನು ನಂಬಿಕೆಗೂ ಮಿತ್ರತ್ವಕ್ಕೂ ಯೋಗ್ಯನೇ ಎಂತ ನಂಬ ಬಹುದಂತೆ.

೩. ತಮ್ಮ ಮಕ್ಕಳನ್ನು ಸಾಕಿ ಸಲಹಿ ಬೆಳಿಸುವದಕ್ಕಾಗಿ ಚಿಂತಿಸಿ, ಕಷ್ಟ ಪಡುತ್ತಿದ್ದ ಉಪಕಾರಕ್ಕೆ ಪ್ರತ್ಯುಪಕಾರವಾಗಿ ಮೊಮ್ಮಕ್ಕಳನ್ನು ಸಹಾ ಸಾಕಿ ಸಂರಕ್ಷಿಸಿ ಬೆಳಿಸುವ ಕಷ್ಟದ ಹೊರ್ತಾಗಿ ಬೇರೇನೂ ಅನೇಕ ತಂದೆ ತಾಯಿಗಳಿಗೆ ತಮ್ಮ ಮಕ್ಕಳ ಕಡೆಯಿಂದ ಶಿಕ್ಕದು.

೪. ನಿನಗೆ ಬೆಳಕು ಕೊಡುವಂಥಾ ನೆರಳುಂಟು. ಅದರಲ್ಲಿ ಕೂತಿದ್ಧಿಯೋ? ದೇವರ ರೆಕ್ಕೆಗಳ ನೆರಳು (ಕೀರ್ತನೆ. ೩೬, ೭.) ಅಂಥಾದ್ದೇ; ಅದರಲ್ಲಿ ಕೂತುಕೋ!

೫. ದೇವರು ಇಲ್ಲದ ಸ್ಥಳವುಂಟೋ? ಎಂಬ ಪ್ರಶ್ನೆಗೆ ಒಬ್ಬ ರೋಮನ್ ಸಭೆಯವನು ಯಥಾರ್ಥಭಾವದಿಂದ—"ಹೌದು! ದೇವರಿಲ್ಲದ ಒಂದು ಸ್ಥಳವುಂಟು: ರೋಮುಪಟ್ಣವೇ! ರೋಮುಪಟ್ಣದಲ್ಲಿ ದೇವರು ಇಲ್ಲಾ: ದೇವರ ಪ್ರತಿನಿಧಿ(ಬದಲಿ)ಯೆನ್ನಿಸಿ ಕೊಳ್ಳುವ ಪಾಪಸ್ವಾಮಿಗಳವರು ಮಾತ್ರ ಅಲ್ಲಿದ್ದಾರೆ. ದೇವರು ಅಲ್ಲಿ ಇರುವವನಾದರೆ, ಪ್ರತಿನಿಧಿಯೊಬ್ಬನು ಬೇಕಾಗಿರುತ್ತಿದ್ದಿಲ್ಲಾ" ಎಂತ ಪ್ರತ್ಯುತ್ತರವಾಗಿ ಹೇಳಿ ಬಿಟ್ಟನು.

"ಹೊರಗೊಂದು ಒಳಗೊಂದು."

"ನಿನ್ನೇ ತಂಗಳನ್ನ ನನಗಿಕ್ಕು; ನಿನಗೆ ಎಂದೂ ಹಶಿವೆಯಾಗದ ಹಾಗೆ ಮಾಡುತ್ತೇನೆ" ಎಂಬಂತಾಗಿ ಲೋಕವು ಮಾತಾಡಿ, ವಂಚಿಸಲಿಕ್ಕೆ ನೋಡುವದು. ಲೋಕವು ಎಂಥಾ ಕಳ್ಳ! ಲೋಕದ ಮಾತು ಎಂಥಾ ಸುಳ್ಳು ಮಾತು! ಮತ್ತೊಬ್ಬನಿಗೆ ಎಂದೂ ಹಶಿವೆಯಾಗದ ಹಾಗೆ ಮಾಡ ಸಾಮರ್ಥ್ಯವಿದ್ದವನು ತನಗಾಗಿ ತಂಗಳನ್ನ ಬೇಡಿಕೋ ಬೇಕೋ? ತಂಗಳನ್ನ ಬೇಡದೆ, ತನಗೆನೇ ಹಶಿವೆಯಾಗದ ಹಾಗೆ ಮೊದಲೇ ಮಾಡ ಬೇಕಾಗಿತ್ತಲ್ಲಾ! ತಾನೇ ಗತಿಯಿಲ್ಲದವನಾಗಿ ಬೇರೊಬ್ಬರಿಗೆ ಗತಿ ಮೂಡಿಸುತ್ತೇನೆ ಎಂತ ಹೇಳಿ ನಂಬಿಸುವವನು ವಂಚಕ, ಕಳ್ಳ ಅಲ್ಲವೋ? ಅಂಥ ಕಳ್ಳರು ಅನೇಕರೇ. ತಿಳಿದು ಅನೇಕರು ಅಂಥ ಕಳ್ಳರಾಗಿದ್ದಾರೆ. ತಿಳಿಯದೆ ಸಹಾ ಮತ್ತನೇಕರು ಅಂಥಾ ಕಳ್ಳರೇ. "ಹೊರಗೊಂದು ಒಳಗೊಂದು" ಎಂಬದು ಯಾವಾತನ ವಿಷಯದಲ್ಲಿ ನ್ಯಾಯವಾದ ಮಾತಾಗಿರುತ್ತದೋ ಅವನೇ ಅಂಥಾ ಕಳ್ಳ. ಈ ಮಾತು ಲೋಕದ ವಿಷಯದಲ್ಲಿ ವಿಶೇಷ ಖರೆಯಾದ್ದೇ, ಯಾಕಂದರೆ ಲೋಕವೂ ಲೋಕದೆಲ್ಲವೂ, ಮುಖ್ಯವಾಗಿ "ಹೊನ್ನು ಹೆಣ್ಣು ಮಣ್ಣು" ಎಂಬುವ ಮೂರರಲ್ಲಿ ಸಂಗ್ರಹಿಸಿರುವಂಥಾದ್ದು, ಬರೇ ಮಾಯೆಯಾಗಿದೆ. ಲೋಕವು ಮಾಯೆಯಾಗಿದೆ, ಅಂದರೆ: ಲೋಕವೆಂಬದು ಇಲ್ಲವೇ ಇಲ್ಲಾ, ಲೋಕವೆಂತಾ ಕಾಣುವಂಥಾದ್ದು ನಿಜವಾಗಿ ಇರದ್ದೇ, ಮಾಯಾಪಾಶದಲ್ಲಿ ಶಿಕ್ಕಿ ಕೊಂಡ ಬ್ರಹ್ಮಜ್ಞಾನಹೀನನಾದವನ ಕಣ್ಣಿಗೆ ಮಾತ್ರ ಇರುವಂತೆ ತೋರುವಂಥಾದ್ದು ಅಂತಲ್ಲಾ: ಪ್ರಪಂಚದಲ್ಲಿ ಮೋಹಗೊಂಡು, "ಇಹಾ ನಂಬಿ ಪರಾ ಮರತು" ಹೋಗುವವನು ಮೋಸ ಹೋಗುತ್ತಾನೆ ಎಂಬರ್ಥ ಮಾತ್ರವಾಗುತ್ತದೆ. ಲೋಕವುಂಟೇ ಉಂಟು; ಆದರೆ ಪರವನ್ನು ಮರತು,

ಮೋಕ್ಷಸಾಧನೆ ಮಾಡದೆ, ಲೋಕವನ್ನೇ ನೆಚ್ಚಿ, ಪ್ರಪಂಚಾನುಭೋಗದಲ್ಲಿ ಮುಣಿಗಿ ಹೋಗುವವನು ಗತಿಯಿಲ್ಲದೆ ಮುಣಿಗಿ ಹೋಗುತ್ತಾನೆ. ಅತ್ತೀ ಮರದ ಹಣ್ಣು ಉಂಟು, ಇಲ್ಲವೆಂತ ಹುಚ್ಚನಲ್ಲದೆ ಯಾರೂ ಹೇಳನು. ಆದರೆ ಚನ್ನಾಗಿ ಕೆಂಪಾಗಿ ತೋರುವ ಅತ್ತೀ ಮರದ ಹಣ್ಣು ಶಿಕ್ಕುತ್ತದಲ್ಲಾ, ಪ್ರಯಾಣಕ್ಕೆ ನಾನು ಯಾಕೆ ಬುತ್ತಿ ಕಟ್ಟಿ ಕೊಂಡು ಹೋಗ ಬೇಕು? ಆ ಹಣ್ಣು ದಾರಿಯಲ್ಲಿ ತಿಂದು ಬದುಕುತ್ತೇನೆಂತ ಯಾರಾದರೂ ಗಂಟಿಲ್ಲದೆ ಪ್ರಯಾಣಕ್ಕೆ ಹೊರಟು ಹೋದರೆ, ಮೋಸ ಹೋದಾನು. ಲೋಕವನ್ನು ನೆಚ್ಚಿ, ಪ್ರಪಂಚಾನುಭೋಗಾಸಕ್ತರಾದವರ ವಿಚಾರವು ಹಾಗೆಯೇ ಸೈ. ಅತ್ತೀ ಮರದ ಹಣ್ಣು ಹಂದಿಗೂ ಮಂಗಕ್ಕೂ ಕಾಕೆಗೂ ಆದರೂ, ಮನುಷ್ಯನಿಗಾಗದು. ಹಾಗೆಯೇ ತಿರುಳಿಲ್ಲದ ಅತ್ತೀ ಮರದ ಹಣ್ಣಿನಂತಾದ ಪ್ರಪಂಚವು ಎಷ್ಟೋ ಮನೋಹರವಾಗಿಯೂ ಇಷ್ಟವಾಗಿಯೂ ಕಂಡು ಮೋಹನ ಮಾಡಿದರೂ, ಮೋಕ್ಷಾರ್ಥಸಾಧನೆಗಾಗಿ ಹೊರಟ (ಹುಟ್ಟಿದ) ಮನುಷ್ಯನಿಗೆ ತೃಪ್ತಿ ಕೊಡಲಾರದೆ ಇಷ್ಟಾರ್ಥವಾಗಿರ ತಕ್ಕದ್ದಲ್ಲ.

ಆದರೆ ಪ್ರಪಂಚ ತಾನೇ ಮಾತ್ರವಲ್ಲಾ, ಪ್ರಪಂಚಾಸಕ್ತರಾಗಿ ಪ್ರಪಂಚವೆಂಬ ಮೋಹಿನಿಯ ಸ್ತನಗಳನ್ನು ಹಿಡಿದು, ಚನ್ನಾಗಿ ಹಾಲು ಕುಡಿಯುವವರಾಗಿ -ತೃಪ್ತರೂ ಪುಷ್ಟರೂ ಇಷ್ಟಾಪೂರ್ತಿ ಹೊಂದಿದವರೂ ಎಂತಾ ಕಾಣಿಸಿ ಕೊಂಬುವಂಥವರು ಸಹಾ ಹೊರಗೂ ಒಳಗೂ ಒಂದೇ ಪ್ರಕಾರವಾಗಿರದೆ, ಒಳಗೆ ತಿರುಳೇನೂ ಇಲ್ಲದ ಅತ್ತೀ ಮರದ ಹಣ್ಣಿನಂತಾದವರಷ್ಟೇ.

ಒಂದಾನೊಂದು ದಿವಸ ಒಬ್ಬ ಧೊರೆ ಲಂಡನ್ ಮಹಾನಗರದಲ್ಲಿ ಬಹಳ ಪ್ರಖ್ಯಾತನಾಗಿದ್ದ ವೈದ್ಯನೊಬ್ಬನ ಭೇಟಿಗೆ ಬಂದನು. ದುಸ್ತು ವಸ್ತ್ರಾಲಂಕಾರಾದಿಗಳಿಂದಲೂ, ಮುಖಭಾವದಿಂದಲೂ, ಬಹಳ ಸೊಂಪಾಗಿಯೂ ಕೋಮಲವಾಗಿಯೂ ತೋರಿದ ನಾಗರೀಕತನದ ಲಕ್ಷಣಗಳಿಂದಲೂ ಬಂದವನು ಸಾಧಾರಣ ಗೃಹಸ್ಥನೊಬ್ಬನಲ್ಲವೆಂತ ತಿಳುಕೊಳ್ಳ ಬಹುದಿತ್ತು. ಆದರೆ ಏನೂ ರಕ್ತಪ್ರಸಾದವಿಲ್ಲದ ಅವನ ಮುಖವೆಂಬ ಕನ್ನಡಿಯಲ್ಲಿ ಅಸ್ವಸ್ಥ, ಅಸೌಖ್ಯ ಶೋಕಾದಿಗಳ ಲಕ್ಷಣಗಳು ಸಹಾ ಕಾಣದಿರಲಿಲ್ಲಾ. ಶೋಕವೂ ಮನೋವ್ಯಥೆಯೂ ಅವನಿಗೆ ಅಸ್ವಸ್ಥಕ್ಕಿಂತ ಹೆಚ್ಚಿನ ಬಾಧಕವಾಗಿತ್ತು. ಬಹಳ ಅನುಭವವೂ ಸೂಕ್ಷ್ಮವಿಚಾರಬುದ್ಧಿಯೂ ಇದ್ದಂಥಾ ಆ ವೈದ್ಯನು ಅದನ್ನು ಬೇಗನೇ ತಿಳುಕೊಂಡು, ಅವನಿಗೆ ಹೇಳಿದ್ದೇನಂದರೆ: “ಸಾಹೇಬರೇ! ‘ಚಿಂತೆಯೇ ಮುಪ್ಪು, ಸಂತೋಷವೇ ಯೌವನ.’ ನೀವು ಅಷ್ಟು ವಿಶೇಷ ಅಸ್ವಸ್ಥದವರಲ್ಲಾ: ಸ್ವಲ್ಪ ಚಿಂತಾಪಂಕಮಗ್ನರಾಗಿ ಹೋಗಿ, ತಾಪತ್ರಯಗಳಿಂದ ಸ್ವಲ್ಪ ಬಾಧೆ ಬಿದ್ದವರೆಂತ ನನಗೆ ತೋರುತ್ತದೆ. ಆದ್ದರಿಂದ ಖಾವಂದರು ಶೋಕೋಪಶಮನ ಮಾಡಿಕೊಂಡು, ನಿಶ್ಚಿಂತರಾಗ ಬೇಕು. ತನ್ನ ಆಟಪಾಟ, ಹಾಡುಪಾಡು, ಹಾಸ್ಯರಸದ ನಾಟಕ ವಿಕಟಕಾವ್ಯಾದಿಗಳಿಂದ ಸರ್ವರನ್ನು ನೆಗಾಡ ಮಾಡಿ, ಖುಷಾಲು ಪಡಿಸುವ ನಾಟಕಗಾರನೊಬ್ಬನು ನಮ್ಮ ನಗರದಲ್ಲಿ ಬಂದಿದ್ದಾನೆ. ಅವನನ್ನು ನೋಡಿ, ಕೇಳಿ, ದುಃಖೋಪಶಮನ ಹೊಂದುವ ಬಗ್ಯೆ ಖಾವಂದರು ನಾಟಕವಾಗುವಷ್ಟು ಸಾರಿ ನಾಟ್ಯರಂಗಕ್ಕೆ ಹೋಗಿ ಬರ ತಕ್ಕದ್ದು.” ಈ ಮಾತನ್ನು ಕೇಳಿ ಆ ಧೊರೆ ಹೆಚ್ಚು ದುಃಖಾಕ್ರಾಂತನಾಗಿ ಆರ್ತ ಸ್ವರದಿಂದ— “ಆ ನಾಟಕಗಾರ ನಾನೇ” ಎಂತ ಹೇಳಿದನು.

ಆ ನಾಟಕಗಾರನ ಅವಸ್ಥೆ ಇನ್ನೆಷ್ಟೋ ಪ್ರಪಂಚದಾಸರದು! ಹೊರಗೊಂದು, ಒಳಗೆ ಮತ್ತೊಂದು; ಹೊರಗೆ ಖುಷಾಲು, ಸಂತೋಷ, ಉಲ್ಲಾಸ, ಹರುಷ: ಒಳಗೆ ಚಿಂತೆ, ದುಃಖ, ಮನಸ್ತಾಪ, ವ್ಯಾಕುಲತೆ, ನಿರಾಶೆ. ಮನಸ್ತಾಪ ಪೀಡಿತ ಆಶಾಭ್ರಷ್ಟನಿಗೆ ಲೋಕವು ಕೊಡುವಂಥಾದ್ದೇನು? ವ್ಯರ್ಥ ಶುಷ್ಕೋಪಚಾರವಲ್ಲದೆ, ಹೆಚ್ಚಿನದೇನೂ ಕೊಡದು. ಹೆಚ್ಚು ಕೊಡ ಬೇಕಾದರೆ, ನೀನೇ ನೋಡಿಕೋ! ಎಂತ ಹೇಳುವದು; ಇಲ್ಲವೇ ಆ ವೈದ್ಯ ಮಾಡಿದಂತೆ ಹಶಿದವನಿಗೆ—ನಿನ್ನ ಬೊ

ಟ್ಟನ್ನು ಶೀಪಿ, ಹೊಟ್ಟೆ ತುಂಬಿಸಿಕೋ! ಎಂಬ ಹಾಗೆ ಹೇಳುವದು; ಇಲ್ಲವೇ ಘಾಯದ ಮೇಲೆ ಬರೆ ಹಾಕಿ ಬಿಡುವದು.

ಆದರೆ ಯೇಸುವಿನವರ ವಿಷಯದಲ್ಲಿಯೂ "ಹೊರಗೊಂದು ಒಳಗೊಂದು" ಎಂಬ ಮಾತು ನಿಜವೇ. ಅವರಿಗೆ ಹೊರಗೆ ದುಃಖವಿರುವಾಗಲೇ ಒಳಗೆ ಸುಖವುಂಟು: ಹೊರಗೆ ಶೋಕ, ಒಳಗೆ ಭೋಗ; ಹೊರಗೆ ನಷ್ಟ, ಬಡತನ, ಅವಮಾನ; ಒಳಗೆ ಲಾಭ, ಐಶ್ವರ್ಯ, ಮಹಿಮಾನ. ಕಡೆಗೆ ಅವರು ನಂಬಿ ಕಾದು ಕೊಂಡಿರುವ ಈಶನಾದ ಯೇಸು ಬಂದು, ಹೊರಗಣದಕ್ಕೂ ಒಳಗಣದಕ್ಕೂ ಇರುವ ವ್ಯತ್ಯಾಸವನ್ನು ಪರಿಹರಿಸಿ, ಅವರನ್ನು ಅನಂತಾನಂದದಲ್ಲಿಯೂ ತನ್ನ ದಿವ್ಯ ಶ್ರೇಯಸ್ಸು ಮಹಿಮೆಯಲ್ಲಿಯೂ ಶೇರಿಸಿ ಕೊಂಡು, ಸಂಪೂರ್ಣ ಸಂಸಿದ್ಧರಾಗಿರ ಮಾಡುವನು. ಆತನಲ್ಲಿ ಹೊರಗೊಂದು ಒಳಗೊಂದು ಎಂಬದಿಲ್ಲಾ. ಆತನಿಗೆ ಮಹಿಮೆಯಾಗಲಿ!

ಗಣಿತವಿದ್ಯೆಯಲ್ಲಿ ಘಟ್ಟಿಗರಾಗಿರಿ.

ಗಣಿತವಿದ್ಯೆಯೆಂಬ ವೃಕ್ಷಕ್ಕೆ ಸಂಕಲನ (ಕೂಡಿಸೋಣ), ವ್ಯವಕಲನ (ಕಳೆಯೋಣ), ಭಾಗಾಕಾರ (ವಿಭಾಗಿಸೋಣ), ಗುಣಾಕಾರ (ಗುಣಿಸೋಣ) ಎಂಬೀ ನಾಲ್ಕು ಶಾಖೆಗಳುಂಟು. ಆದರೆ ಈ ನಾಲ್ಕು ಗಣಿತವಿದ್ಯಾಶಾಖೆಗಳನ್ನು ಶಾಲೆಯಲ್ಲಿ ಗಣಿತಶಾಸ್ತ್ರದಿಂದ ತಕ್ಕಷ್ಟು ಅಭ್ಯಾಸ ಮಾಡಿ, ಸಾಧಿಸಿ ಕೊಂಡವರಾದರೂ ಈ ನಾಲ್ಕರಲ್ಲಿ ವಿಶೇಷವಾಗಿರುವ ಗುಣಾಕಾರವೆಂಬದನ್ನು ತಮ್ಮ ಅನುದಿನದ ಕೊಳ್ಳೋಣ ಕೊಡೋಣಗಳಲ್ಲಿ ಚನ್ನಾಗಿ ಉಪಯೋಗ ಮಾಡದೆ ಇರುತ್ತಾರೆ. ಇದು ಸಮವಲ್ಲಾ. ಒಂದು ವಿದ್ಯೆಯನ್ನು ಶಾಲೆಯಲ್ಲಿ ಅಭ್ಯಾಸ ಮಾಡಿ ಕಲಿತು ಕೊಂಡರಾಗಲಿಲ್ಲಾ: ಶಾಲೆಯಲ್ಲಿ ಕಲಿತು ಕೊಂಡದನ್ನು ಮನೆಯಲ್ಲಿ, ತನ್ನ ವ್ಯಾಪಾರ ಗೀಪಾರದಲ್ಲಿ, ಸಾಧಿಸುತ್ತಾ ಉಪಯೋಗ ಮಾಡುತ್ತಾ ಬರ ಬೇಕು.

ಒಂದು ಮನೆಯಲ್ಲಿ ಒಂದೊಂದು ದಿನದಲ್ಲಿ ಒಂದೊಂದು ಆಣೆ ಮಾತ್ರವೇ ಅನವಶ್ಯವಾದ ಕಾರ್ಯಕ್ಕೆ ಅಥವಾ ಸಾಮಾನಿಗಾಗಿ ಖರ್ಚಾದರೆ, ಅದು ಲೆಖ್ಖಕ್ಕೆ ಬರುವ ಖರ್ಚುವೆಚ್ಚವಲ್ಲವೆಂತ ಕಾಣ ಬಹುದು. ಎಷ್ಟೋ ಜನರು ಈ ತರದ ಚಿಲ್ಲರೆ ವೆಚ್ಚ, ಅದರ ಚಿಂತೆಯೂ ಲಕ್ಷ್ಯವೂ ಇಲ್ಲದೆ ಮಾಡಿದ್ದುಂಟು, ಮಾಡುತ್ತಿದ್ದಾರೆ! ಆದರೆ ದಿನ ಒಂದರಲ್ಲಿ ಒಂದೊಂದು ಆಣೆ ಆ ಪ್ರಕಾರ ವ್ರಯವಾದರೆ, ಒಂದು ವರುಷದಲ್ಲಿ ತುಸ ಕಡಿಮೆ ೨೩ ರೂಪಾಯಿ, ೩೦ ವರುಷಗಳಲ್ಲಿ ಸ್ವಲ್ಪ ಕಡಿಮೆ ೬೯೦ ರೂಪಾಯಿ ವ್ಯರ್ಥವಾಗಿ ವ್ರಯವಾಗುವದು. ಅಷ್ಟು ಖರ್ಚು ಲೆಖ್ಖಕ್ಕೆ ಬಾರದ್ದೋ? ನಷ್ಟವಲ್ಲವೋ?

ಬೇರೊಬ್ಬನು ಒಂದು ದಿನದಲ್ಲಿ ಒಂದು ಅಥವಾ ಎರಡು ತಾಸು ಕೆಲಸವೇನೂ ಮಾಡದೆ ಸುಮ್ಮನೆ ಕಳೆಯುವವನು. ಹೊತ್ತು ಎಂಬದು ಎಷ್ಟು ವಿಶೇಷವೇ, ಎಂಥಾ ದೊಡ್ಡ ಅಸಲು ಎಂಬದನ್ನು ನೀನು ತಿಳಿಯದೆಯೂ ಎಣಿಸದೆಯೂ, ಒಂದು ದಿನದಲ್ಲಿ ಎರಡು ತಾಸು ಸುಮ್ಮನೆ ಕಳೆದ್ದಕ್ಕೆ ಚಿಂತಿಲ್ಲಾ, ಎರಡು ತಾಸು ದೊಡ್ಡದಲ್ಲಾ ಎಂತ ಪಶ್ಚಾತ್ತಾಪ ಪಡದೆ ಹೋಗ ಬಹುದು. ಆದರೆ ನೀನು ಒಂದೊಂದು ದಿನದಲ್ಲಿ ಎರಡೆರಡು ತಾಸು ಹಾಗೆಯೇ ಕಳದರೆ, ಒಂದು ವರುಷದಲ್ಲಿ ೭೩೦ ತಾಸು, ೩೦ ವರುಷಗಳಲ್ಲಿ ೨೧,೯೦೦ ತಾಸುಗಳು ಅಂದರೆ ೯೧೨ ದಿವಸವೇ ವ್ಯರ್ಥವಾಗಿ ಕಳದು, ಎಂಥಾ ದೊಡ್ಡ ಹೊತ್ತುಕಳ್ಳನಾದ ಹಾಗಾಯಿತು. ೯೧೨ ದಿವಸ ವ್ಯರ್ಥವಾದ ನಷ್ಟವು ೬೯೦ ರೂಪಾಯಿ ವ್ಯರ್ಥವಾಗಿ ವ್ರಯ ಮಾಡಿದ ನಷ್ಟಕ್ಕಿಂತ ದೊಡ್ಡದೇ.

ಪೃಥ್ವಿಯ ಸುತ್ತಳತೆ ೫,೪೦೦ ಜರ್ಮನ್ ಮೈಲು ಅಂದರೆ ೧೦,೮೦೦ ಹರದಾರಿಯಾಗಿದೆ. ಸ್ವಲ್ಪ ಕಡಿಮೆ ೧೧,೦೦೦ ಹರದಾರಿ ದೂರ ನಡದು ಪ್ರಯಾಣ ಮಾಡ ಬೇಕಾದರೆ, ಯಾರಿಗೆ ಬ

ಹಳ ಪ್ರಯಾಸವೆಂತ ಕಾಣದಿದ್ದೀತು? ಆದರೆ ಒಬ್ಬನು ತಾನು ಇದ್ದ ಊರಿನಿಂದ ನೆಟ್ಟಗೆ ಪಶ್ಚಿಮಕ್ಕೆ ಹೊರಟು, ಒಂದೊಂದು ದಿನದಲ್ಲಿ ಒಂದೊಂದೇ ಹರದಾರಿ ಮಾತ್ರ ನಡದು ಮುಂದರಿಯುವದಾದರೆ, ಹೊರಟ ಮೂವತ್ತನೇ ವರುಷದಲ್ಲಿ ತಿರಿಗಿ ತಾನು ಹೊರಟ ಊರಿಗೆ ಬಂದು ಮುಟ್ಟ್ಯಾನು. ಇದರಿಂದ ತೋರ ಬರುವದೇನಂದರೆ: ಒಬ್ಬನು ಸ್ವಲ್ಪ ಮಾತ್ರ, ಅಂದರೆ ಒಂದೊಂದು ದಿನದಲ್ಲಿ ಒಂದೊಂದು ತಾಸು ಮಾತ್ರ, ಆದರೆ ಬಿಡದೆಯೂ ತಪ್ಪದ ಕ್ರಮವಾಗಿಯೂ ಪ್ರಯತ್ನ ಮಾಡಿದರೆ, ಅವನು ಬಹಳ ಸಾಧಿಸಿ ಕೊಂಡು, ಮಹಾ ಲಾಭ ಮಾಡಿ ಕೊಳ್ಳ ಬಹುದು. (ಇದಕ್ಕೆ ಓಟದಲ್ಲಿ ಪಂಥ ಗೆದ್ದ ಆಮೆಯ ಕಥೆಯನ್ನು ಸರಿ ನೋಡ ತಕ್ಕದ್ದು.) ಆದ್ದರಿಂದ ಓದುವ ನೀನು ಸಹಾ ಒಂದು ತಾಸಾದರೂ ವ್ಯರ್ಥವಾಗಿ ಕಳೆಯದೆ, ನಿನ್ನ ಎಲ್ಲಾ ಸಮಯವನ್ನು ನಿನ್ನ ಹಿತಕ್ಕೂ ನಿನ್ನವರ ಹಿತಕ್ಕೂ ಪರರ ಹಿತಕ್ಕೂ ಉಪಯೋಗ ಮಾಡಿ, ಸಾರ್ಥಕವಾಗುವಂತೆ ಮನಸೋಲದೆ ಪ್ರಯತ್ನ ಮಾಡುತ್ತಿರು. ಆದರೆ ನೀನು ಒಳ್ಳೇದೇನಾದರೂ ಮಾಡ ತೊಡಗದೆ, ಅಥವಾ ತೊಡಗಿದ್ದನ್ನು ಬಿಡದೆ ಸಾಗಿಸದೆ ಹೋದರೆ, ಸಾರ್ಥಕವೇನೂ ಆಗದೆ, ಓಟದಲ್ಲಿ ಪಂಥ ಸೋತ ಮೊಲದ ಸಂಗತಿಯೇ ಆಗಿ, ನಿನ್ನದೆಲ್ಲವು, ನಿನ್ನ ಜನ್ಮ ಸಹಾ, ನಷ್ಟವಾಗ ಬಹುದು. ಒಬ್ಬೊಬ್ಬನು ತನ್ನ ಆಯುಷ್ಯದ ಒಂದೊಂದು ತಾಸಿಗಾಗಿಯೂ, ತಾನು ಆಡಿದ ಒಂದೊಂದು ನುಡಿಗಾಗಿಯೂ, ದೇವರಿಗೆ ಜವಾಬುದಾರನಾಗಿ ಲೆಖ್ಖ ಕೊಡ ಬೇಕು. ನೀನು ಮಹಾ ಪಾತಕಗಳೇ ಎಂತ ಸರ್ವರಿಗೆ ತೋರುವ ದೋಷಕರ್ಮಗಳನ್ನು ಮಾಡದೆ, ಬರೀ ಹೊತ್ತುಕಳ್ಳತನದ ಪಾಪಕ್ಕಾಗಿಯೂ, ಹರಟೆ ಮುಂತಾದ ವ್ಯರ್ಥ ಮಾತುಗಳನ್ನು ಆಡುತ್ತಿದ್ದ ಪಾಪಕ್ಕಾಗಿಯೂ, ದೇವರ ದೃಷ್ಟಿಯಲ್ಲಿ ಮಹಾ ಪಾಪಿ ಎಂತ ಕಂಡು, ಪರಮ ನರಕದಲ್ಲಿ ಬೀಳ ಬಹುದು. ಕೇಳಿದಿಯೋ?

ದಂತವೈದ್ಯನು.

ಬಹಳ ದಿವಸ ಒಬ್ಬರಿಗೊಬ್ಬರು ಹೊಂದಿ ಕೊಂಡು "ಊಟಕ್ಕೆ ಮುಂಚು, ದಂಡಿಗೆ ಹಿಂಚು" ಎಂಬಂತೆ ಉಂಡಾಡಿಭಂಟರಾಗಿಯೂ ಹೊತ್ತುಕಳ್ಳರಾಗಿಯೂ ಊರೂರು ಗ್ರಾಮಗ್ರಾಮ ಸಂಚಾರ ಮಾಡಿ, ಬೇಡುತ್ತಾ ಠಕ್ಕುತನ ಮಾಡುತ್ತಾ ಹೊಟ್ಟೆ ಹೊರಕೊಂಡ ಜನರಿಬ್ಬರು ಒಂದಾನೊಂದು ಸಮಯದಲ್ಲಿ ಉಪಜೀವನಕ್ಕೆ ಇನ್ನು ಉಪಾಯ ಕಾಣದೆ, ಏನು ಮಾಡುವ? ಎಂತ ಚಿಂತಿಸಿ, ಯೋಚನೆ ಮಾಡಿದ ಕಡೆಗೆ, ಒಬ್ಬನಿಗೆ ಒಂದು ಯುಕ್ತಿ ಕಂಡಿತು. ಅದನ್ನು ತನ್ನ ಜತೆಗಾರನಿಗೆ ಹೇಳಿ ತಿಳಿಸಿದಾಗ, ಅವನು ಆಗುವದು ಎಂದು ಒಪ್ಪಿ ಕೊಳ್ಳಲು, ಅದನ್ನು ನೆರವೇರಿಸಲೆಸಗಿದರು. ಹ್ಯಾಗಂದರೆ: ಇಬ್ಬರು ನಾಲ್ಕೈದು ಮನೆಗಳಿಗೆ ಹೋಗಿ, ರೊಟ್ಟಿ ಬೇಡಿ ಕೊಂಡು, ಅದರ ತೊಗಟನ್ನು ಮಾತ್ರ ತಿಂದು, ಒಳಗಣ ಮೆತ್ತಗಾದ ರೊಟ್ಟಿಯನ್ನು ನಾದಿ, ಅದರಿಂದ ಒಂದೊಂದು ಸಾರಿ ಒಂದು ಕಡ್ಲೇ ಬೇಳೆಯಷ್ಟು ಚಿಮಟ ತೆಗೆದು, ಕೈಯಲ್ಲಿ ಹಿಸಿಕಿ, ಒಂದೊಂದು ಗುಳಿಗೆ, ಈ ಪ್ರಕಾರ ಸುಮಾರು ಏಳೆಂಭೈನೂರು ಗುಳಿಗೆಗಳನ್ನು ಮಾಡಿ, ಅವುಗಳ ಮೇಲೆ ಹುಳ ಬಿದ್ದ ಕಟ್ಟಿಗೆಗಳ ಪುಡಿಯನ್ನು ಚಲ್ಲಿ, ಕೆಲವು ದುಡ್ಡು ಕೊಟ್ಟು ಕೆಂಪು ಕಾಗದಗಳನ್ನು ಕೊಂಡು ಕೊಂಡು, ಪಟ್ಟಿಗಳಾಗಿ ಕತ್ತರಿಸಿ, ಆ ಪಟ್ಟಿಗಳಿಂದ ಚಿಕ್ಕ ಚಿಕ್ಕ ಅಂಡೆಗಳನ್ನು (ಡಬ್ಬಿಗಳನ್ನು) ಮಾಡಿ, ಒಂದೊಂದರಲ್ಲಿ ಆರಾರು ಎಂಟೆಂಟು ಗುಳಿಗೆಗಳನ್ನು ಹಾಕಿ ಸುತ್ತಿದರು. ಆ ಮೇಲೆ ಒಬ್ಬನು ಸಂತೆ ನೆರೆದಿದ್ದ ಒಂದೂರಿಗೆ ಹೋಗಿ, ಬಹಳ ಜನ ಕೂಡಿ ಕೊಂಡಿದ್ದ ಅಂಗಡಿಯಲ್ಲಿ ಒಂದಿಷ್ಟು ಫಲಹಾರ ತೆಗೆದು ಕೊಂಡು, ಆ ಅಂಗಡಿಯ ಹತ್ತರವೇ ಅದನ್ನು ತಿನ್ನ ಬೇಕೆಂಬುವ ಹಾಗೆ ಕೂತು ಕೊಂಡು, ಆದರೆ ತಿನ್ನದೆ, ಕಠಿಣ ಹಲ್ಲು ನೋವು ಇದ್ದವನಂತೆ ಕೆನ್ನೆಗೆ ಮುಷ್ಟಿ ಊರಿಸಿ ಕೊಂಡು, ಗಂಟುಮೋರೆ ತಗ್ಗಿಸಿ, ನರಳುತ್ತಾ ನಿಟ್ಟು

ಸುರುಗಳನ್ನು ಬಿಡುತ್ತಾ, ಮೈಯನ್ನು ಹಿಂದಕ್ಕೂ ಮುಂದಕ್ಕೂ ಅಲ್ಲಾಡಿಸುತ್ತಾ ಇದ್ದನು. ಸುತ್ತ ಮುತ್ತಲು ನಿಂತು ಅವನನ್ನು ಕಂಡ ಜನರಲ್ಲಿ ಕೆಲವರಾದರೂ — ಏನ್ರಪ್ಪಾ! ಹಲ್ಲುನೋವುಂಟೋ? ಅಕಟಾ! ಅದನ್ನು ನಾನೂ ಬಲ್ಲೆ, ಅದರಷ್ಟು ವೇದನೆ ಕೊಡುವ ರೋಗ ಒಂದೂ ಇಲ್ಲಾ ಎಂಬದಾಗಿ ಮಾತಾಡಿ, ಅವನನ್ನು ನೋಡಿ ಕನಿಕರ ಪಟ್ಟರು. ಅವನು ಅಲ್ಲಿ ಬಂದು ಕೂತು ಕೊಂಡು ಸುಮಾರು ಒಂದು ಕಾಲು ತಾಸಾದ ಮೇಲೆ ಅವನ ಸಂಗಡಿಗನೂ ಬಂದು, ಅದೇ ಅಂಗಡೀ ಹತ್ತರ ತಡದು, ಇಲ್ಲ್ಯಲ್ಲಿದ್ದ ಜನರುಗಳನ್ನೂ ಸಾಮಗ್ರಿಗಳನ್ನೂ ನೋಡುವವನಾಗಿ ನಿಂತಿರಲು, ಅವನ ಕಿವಿಗೆ ಆ ಹಲ್ಲುನೋವಿನವನ ನರಳುವ ಶಬ್ದವು ಬಿದ್ದದರಿಂದ ಅವನವನ ಕಡೆಗೆ ದೃಷ್ಟಿ ತಿರಿಗಿಸಿ ನೋಡಿ, ಅವನ ಹತ್ತರ ಹೋಗಿ, ಗುರ್ತು ಪರಿಚಿತಿ ಏನೂ ಇಲ್ಲದವನಂತೆ ಅವನ ಸುಖ ದುಃಖ ವಿಚಾರಿಸಿ ಕೇಳಿದನು. ಎಲ್ಲಾ ಕೇಳಿ ತಿಳು ಕೊಂಡ ಬಳಿಕ ಅವನು—ನನ್ನ ಕೈಯಲ್ಲಿ ಯಾವ ಯಾವ ಹಲ್ಲು ನೋವನ್ನಾದರೂ ಪರಿಹರಿಸುವ ಮಾತ್ರೆಗಳವೆ. ಗುರ್ತೇನೂ ಇಲ್ಲದ ನನ್ನ ಮಾತಿಗೆ ನೀನು ಭರವಸ ಹಿಡಿದು ಒಂದೆರಡನ್ನು ತೆಗೆದು ಕೊಂಡು ತಿನ್ನಲಿಕ್ಕೆ ಧೈರ್ಯ ಮಾಡಿದರೆ, ನಿನಗೆ ಪೂರ್ಣ ಗುಣವಾಗುವದು ಎಂದು ಹೇಳಿ, ಒಂದು ಅಂಡೆಯನ್ನು ತನ್ನ ಹಸಿಬೇ ಚೀಲದಿಂದ ತೆಗೆದು ತೋರಿಸಲು, ಆ ಹಲ್ಲುನೋವಿದ್ದವನು—ಅಯ್ಯಾ! ನೀವು ದಯ ಮಾಡಿ ನನಗೊಂದು ಕೊಟ್ಟು, ನಾನು ಇನ್ನು ತಡೆಯಲಾರದ ಹಲ್ಲುನೋವನ್ನು ಪರಿಹರಿಸಿ ಕೊಟ್ಟರೆ, ನಾನು ನಿಮ್ಮ ಉಪಕಾರ ಎಂದೂ ಮರತು ಹೋಗದೆ, ತ್ರಿಲೋಕದಲ್ಲಿ ನಿಮ್ಮ ಹೆಸರು ಹೇಳಿ ಹರಸುವೆನು ಎಂತ ಹೇಳಲು, ಅವನವನಿಗೆ ಒಂದು ಮಾತ್ರೆ ಕೊಟ್ಟು—ಅದನ್ನು ನೋಯಿಸುವ ಹಲ್ಲಿನ ಮೇಲೆ ಹಾಕಿ, ಚನ್ನಾಗಿ ಕಚ್ಚಿಕೋ! ಎಂದು ಹೇಳಿದನು. ಅಷ್ಟರೊಳಗೆ ಇಲ್ಲ್ಯಲ್ಲಿ ನಿಂತಿದ್ದ ಎಲ್ಲಾ ಜನರುಗಳು ಅವರಿಬ್ಬರೊಳಗೆ ನಡೆದ ಸಂಭಾಷಣೆ ಕೇಳಿ, ಆಗುವಂಥಾದ್ದನ್ನು ನೋಡ ಬೇಕೆಂತಾ ಸಮಿಾಪಿಸಿ, ಇಬ್ಬರ ಸುತ್ತಮುತ್ತಲು ಒಟ್ಟಾಗಿ ಕೂಡಿ ಕೊಂಡು ನಿಲ್ಲಲು, ಆ ಮನುಷ್ಯನು ನೋವಿದ್ದ ಹಲ್ಲಿನ ಮೇಲೆ ಆ ಗುಳಿಗೆಯನ್ನು ಹಾಕಿಟ್ಟು, ಆ ವೈದ್ಯನು ಹೇಳಿದಂತೆ ಕಚ್ಚಿಕೊಂಡನು. ಆದರೆ ಕಚ್ಚಿ ಕೊಳ್ಳುತ್ತಲೇ ಒಂದು ಕಠೋರ ಬೊಬ್ಬೆ ಇಟ್ಟನು. ಆ ಬೊಬ್ಬೆಗೆ ಮತ್ತಷ್ಟು ಜನರು ಓಡಿ ಬಂದು ಕೂಡಿದರು. ಆದರೆ ಆ ಹಲ್ಲುವೈದ್ಯನು ಆ ಬೊಬ್ಬೆ ಕೇಳಿ—ಚನ್ನಾಯಿತು, ಠೀಕ್, ಠೀಕ್! ನೋವಿನ ನರಕ್ಕೆ ತಾಗಿತು. ಇನ್ನೊಂದು ಮಾತ್ರೆ ತೆಗೆದು, ಕಚ್ಚಿ ತಿಂದರಾಯಿತು ಎಂಥೇಳಿ, ಇನ್ನೊಂದು ಗುಳಿಗೆ ಕೊಟ್ಟನು. ಇದನ್ನು ಅವನು ತೆಗೆದು ಕೊಂಡು ಕಚ್ಚುತ್ತಲೇ, ಎಲ್ಲಾ ನೋವು ಹಾರಿ ಹೋಯಿತು ಎಂಥೇಳಿ, ಎದ್ದು, ಸಂತೋಷದಿಂದ ಕೈ ಚಪ್ಪಳ ಬಡಿದು, ಒಂದೆರಡು ಸಾರಿ ಹಾರಿ ಕುಣಿದಾಡಿ, ಆ ವೈದ್ಯನ ಮುಂದೆ ಅಡ್ಡ ಬಿದ್ದು—ಅಯ್ಯಾ! ನೀವು ನನಗೆ ಪ್ರಾಣದಾನ ಮಾಡಿದ ಹಾಗಾಯಿತು. ನಿಮ್ಮುಪಕಾರಕ್ಕೆ ನಾನು ಕೊಡ ತಕ್ಕದ್ದೇನು? ಎಂತ ಹೇಳಿ ಕೊಂಡಾಡಲು, ನೆರೆದಿದ್ದ ಜನರೆಲ್ಲರು ಆ ವೈದ್ಯನ ಮೇಲೆ ಬೀಳುತ್ತಾರೋ ಏನೋ ಎಂಬ ಹಾಗೆ ಒಟ್ಟಿಕೊಂಡು, ಒಬ್ಬೊಬ್ಬನು—ನನಗೂ ಕೊಡಿ! ನನಗೂ ಕೊಡಿ! ಎಂತಾ ಕೂಗಿ, ಬೇಡಿ ಕೈಯೊಡ್ಡಿದರು. ಆ ವೈದ್ಯನು ತನ್ನ ಕೈಯಲ್ಲಿದ್ದಷ್ಟು ಅಂಡೆಗಳೆಲ್ಲವನ್ನು, ಒಬ್ಬನಿಗೆರಡು, ಒಬ್ಬನಿಗೊಂದು, ಕೆಲವರಿಗೆ ಮೂರು ನಾಲ್ಕು ಸಹಾ, ಒಂದೊಂದನ್ನು ಆರಾಣೇ ಪ್ರಕಾರ ತುಸ ಹೊತ್ತಿನಲ್ಲಿ ಮಾರಿ ಬಿಟ್ಟನು. ಈ ಉಪಕಾರವು ಜನರಿಗೆ ಅವನಿಂದಾದ ಕೂಡಲೇ ಅವನು ನಡದು ಬಿಟ್ಟನು. ಸ್ವಲ್ಪ ಹೊತ್ತಿನ ಮೇಲೆ ತನ್ನ ಹಲ್ಲುನೋವು ಪರಿಹರಿಸಿ ಕೊಂಡ ಅವನ ಜತೆಗಾರನು ಸಹಾ ತನ್ನ ಫಲಾರ ತೀರಿಸಿ ಕೊಂಡು, ಅವನ ಹಿಂದೆ ಹೊರಟು ಹೋಗಿ, ಅವನು ಮುಂದಾಗಿ ಶೇರಿದ ನೆರೇ ಊರಿನಲ್ಲಿ ಅವನನ್ನು ಕೂಡಿ ಕೊಂಡು, ಆ ಜನರ ಬೋಳೆತನಕ್ಕೆ ನಕ್ಕು, ಅವರು ನಂಬಿ ಕೊಟ್ಟ ಹಣಗಳಿಂದ ಕೆಲವು ದಿನ ತ್ಯಾಗಭೋಗರಾಯರಾಗಿ ಕಾಲಕ್ಷೇಪ ಮಾಡಿದರು.

ಆದರೆ ಹಲ್ಲುನೋವಿಗೆ ಒಳ್ಳೇ ಔಷಧವೆಂತ ಆ ರೊಟ್ಟಿಯ ಗುಳಿಗೆಗಳನ್ನು ಹಣ ಕೊಟ್ಟು ತೆಗೆದು ಕೊಂಡ ಜನರು ವ್ಯರ್ಥ ಖರ್ಚು ಮಾಡಿ ಲುಕ್ಸಾನಿಗೆ ಗುರಿಯಾದ್ದಲ್ಲದೆ ಇನ್ನೊಂದು ಕಷ್ಟಕ್ಕೂ ಗುರಿಯಾಗಿ ಹೋದರು. ಹ್ಯಾಗಂದರೆ: ದಿನ ಹೋಗುತ್ತಾ ಆ ಗುಳಿಗೆಗಳು ಘಟ್ಟಿಯಾಗುತ್ತಾ ಬಂದವು. ಇನ್ನು ಮುಂದೆ ಹಲ್ಲುನೋವಾಗಿ ಕೆಲಸಕ್ಕೆ ಬಂದೀತು ಎಂತ ಅಂದು, ಅವುಗಳನ್ನು ಕೊಂಡು ಕೊಂಡವರಲ್ಲಿ ಅನಂತರ ಯಾವಾಗಾದರೂ ಒಬ್ಬನಿಗೆ ಅಥವಾ ಒಬ್ಬಳಿಗೆ ಹಲ್ಲುನೋವು ಹಿಡಿದ ಸಮಯದಲ್ಲಿ ಅಂಥಾ ಘಟ್ಟಿಯಾದ ಮಾತ್ರೆಯನ್ನು ನೋಯಿಸಿದ ಹಲ್ಲಿನ ಮೇಲೆ ಹಾಕಿ, ಚನ್ನಾಗಿ ಕಚ್ಚಿ ಕೊಳ್ಳಲು, ಹಲ್ಲುನೋವು ವಿಪರೀತವಾಗಲಾಗಿ, ಅದು ಸಮವೇ, ಆ ಮನುಷ್ಯನಿಗೆ ಹಾಗೆಯೇ ಆಯಿತು ಎಂಧೇಳಿ, ಇನ್ನೊಂದು ಗುಳಿಗೆ ಆ ಹಲ್ಲಿನ ಮೇಲೆ ಇಟ್ಟು ಘಟ್ಟ್ಯಾಗಿ ಕಚ್ಚಿ ಕೊಳ್ಳಲು, ಹಲ್ಲು ಬೇನೆಯನ್ನು ನಿವಾರಿಸದೆ, ಹೆಚ್ಚಿಸೇ ಹೆಚ್ಚಿಸಿ ಕೊಂಡು, ತಾವು ಠಕ್ಕರನ್ನು ನಂಬಿ ಮೋಸ ಹೋದವರು ಎಂತ ಪಶ್ಚಾತ್ತಾಪ ಪಡ ಬೇಕಾಯಿತಷ್ಟೇ. "ಅನಂತೈಯ್ಯನ ಮಾತ್ರೆ ವೈಕುಂಠಯಾತ್ರೆ."

"ಎರಡು ದಾಸರಿಗೆ ನಂಬಿ ಕುರುಡ ದಾಸ ಕೆಟ್ಟ" ಎಂಬುವಂತೆ ಲೆಖ್ಖವಿಲ್ಲದಷ್ಟು ಜನರಿಗೆ ಆಯಿತು, ಆಗುತ್ತಿರುತ್ತದೆ. ಎಷ್ಟೋ ಜನರು ಠಕ್ಕರನ್ನು ನಂಬಿ ಮೋಸ ಹೋದ್ದನ್ನು ನೋಡಿಯೂ ಕೇಳಿಯೂ ಇದ್ದಾಗ್ಯೂ ಇನ್ನು ಅನೇಕರು ಠಕ್ಕು ಮಾತನ್ನೂ ಠಕ್ಕು ವಿದ್ಯೆಯನ್ನೂ ನಂಬಿ ಮೋಸ ಹೋಗುತ್ತಾರೆ. ಸತ್ಯವನ್ನೂ ನಿಜವಾದ್ದನ್ನೂ ಬೇಗ ಯಾರೂ ನಂಬದಿದ್ದರೂ, ಸುಳ್ಳು ವಿದ್ಯೆಗಳನ್ನು ಬೇಗ ನಂಬುತ್ತಾರೆ. ಈ ದೇಶದಲ್ಲಿ ಯಾರಾದರೂ ಬಂದು, ತಾನು ವೈದ್ಯಗಾರ, ಒಳ್ಳೇ ಔಷಧವನ್ನು ಕೊಡ ಬಲ್ಲಾದವ ಎಂಧೇಳಿ, ಏನೊಂದು ನೀರನ್ನಾಗಲಿ ಬೇರನ್ನಾಗಲಿ, ಮಣ್ಣು ಮಸಣವನ್ನಾಗಲಿ ಮಾರಿ ಕೊಟ್ಟರೆ, ಜನರು ವಿಚಾರಬುದ್ಧಿಯಿಲ್ಲದೆ ಮರುಳು ನಂಬಿಕೆಯಿಂದ ಹಣ ಕೊಟ್ಟು, ಬೇಕಾದರೆ ಸಾಲ ಸಹಾ ಮಾಡಿ, ತೆಗೆದು ಕೊಳ್ಳುತ್ತಾರೆ. ಅಥವಾ ಒಬ್ಬನು ಬಂದು, ತಾನು ಭಂಗಾರ ಮಾಡುವ ವಿದ್ಯೆ ಬಲ್ಲವನೆಂಧೇಳಿದರೆ, ಜನರು ಆಶಾಮಾರಿತನದಿಂದ ನಂಬಿ, ಕಣ್ಣು ಕಟ್ಟಿಸಿ ಕೊಂಡು, ಅವನು ಕೇಳಿ ಕೊಳ್ಳುವಂಥಾದ್ದನ್ನು ಅವನ ಕೈಯಲ್ಲಿ ತಂದು ಕೊಟ್ಟು ಹಾಕುತ್ತಾರೆ. ಭಂಗಾರ ಮಾಡುವ ವಿದ್ಯೆಯಾಗಲಿ ಯಾವದೊಂದು ರೋಗಕ್ಕೆ ವಾಶಿ ಮಾಡುವ ಒಳ್ಳೇ ವೈದ್ಯವಾಗಲಿ ನಿಜವಾಗಿ ಒಬ್ಬನಿಗೆ ಇರುವದಾದರೆ, ಗಂಟು ಕಟ್ಟಿ ಹೊತ್ತು ಕೊಳ್ಳುವ ತಿರಿಕನಾಗಿ ಊರೂರು, ಗ್ರಾಮ ಗ್ರಾಮ ಸಂಚರಿಸಿ, ನೀಚ ನಿಂದ್ಯ ಕಾಲಕ್ಷೇಪ ಮಾಡುತ್ತಿದ್ದಾನೋ?

ಲೇಖನ.

ಘನವುಳ್ಳ ಸಭಾಪತ್ರಕರ್ತರಿಗೆ.

ಅಯ್ಯಾ,

ತಾವು ಜೂನ್ ತಿಂಗಳ ಸಭಾಪತ್ರದ ಕೊನೆಯಲ್ಲಿ ಛಾಪಿಸಿದಂಥ, ಮಂಗಳೂರಿನ ಕ್ರೈಸ್ತ ಸಹೋದರರ ಆರು ಮನೆಗಳು ಬೆಂಕಿಯಿಂದ ಸುಟ್ಟು ಹೋಗಿ ನಷ್ಟವಾದ ಸಂಗತಿಯನ್ನು ಓದಿದ್ದರಿಂದ ದುಃಖವಾಯಿತು. ಆದದರಿಂದ ಅವರ ಸಹಾಯಕ್ಕಾಗಿ ಈ ಪತ್ರದಲ್ಲಿ ಕಳುಹಿಸಿರುವ ಮೂರು ರೂಪಾಯಿಗಳ ಸ್ಟಾಂಪುಗಳನ್ನು ಅಂಗೀಕರಿಸ ಬೇಕೆಂದು ಬೇಡಿ ಕೊಳ್ಳುತ್ತೇನೆ.

ತಾರೀಖು ೧೧ನೇ ಜುಲಾಯಿ ೧೮೭೫. ಹೀಗೆ ತಮ್ಮ ವಿಧೇಯನಾದ

ಬೆಂಗಳೂರಿನಿಂದ. *N. N.*

ಬೆಂಗಳೂರ ಕ್ರೈಸ್ತ ಸಭಾಂಗನಾದ ಒಬ್ಬ ಸಹೋದರನು ಬೆಂಕೀ ಗಂಡಕ್ಕೆ ಗುರಿಯಾದ ಮಂಗಳೂರ ಕ್ರೈಸ್ತ ಸಭಾಂಗಗಳಿಗಾಗಿ ೩ ರೂಪಾಯಿಗಳನ್ನು ಸಹಾಯಾರ್ಥವಾಗಿ ಕಳುಹಿಸಿ ಕೊಟ್ಟದಕ್ಕೆ ನಮಗೆ ಬಹಳ ಸಂತೋಷವಾಯಿತು. ಸ್ವಾರ್ಥವೂ ಭೇದಬುದ್ಧಿಯೂ ಪ್ರಬಲವಾಗಿ, ಪ್ರೀತಿ ಅನೇಕರಲ್ಲಿ ತಣ್ಣಗಾಗಿ ಇರುವ ಈಗಿನ ಕಾಲದಲ್ಲಿ ಇಂಥಾ ಸಹೋದರಪ್ರೀತಿಯ ಒಂದೊಂದು ದೃಷ್ಟಾಂತವು ಹದಿನಾರು ಬಣ್ಣವುಳ್ಳ ಚಿನ್ನದಪರಂಜಿಗಿಂತಲಾದರೂ ಅಮೂಲ್ಯವಾಗಿದೆ. ನಮ್ಮನ್ನು ಮೊದಲೇ ಪ್ರೀತಿ ಮಾಡಿ, ತನ್ನನ್ನೇ ನಮಗಾಗಿ ಅರ್ಪಿಸಿ ಕೊಟ್ಟಾತನು ಸಹೋದರಪ್ರೀತಿಯನ್ನು ಹೆಚ್ಚಿಸಿ, ಬಲವಾಗಿ ಉರಿಯ ಮಾಡಲಿ! ಬಡವೆಯಾದ ವಿಧವೆ ಬೊಕ್ಕಸದಲ್ಲಿ ಹಾಕಿದ ದುಗ್ಗಾಣಿಯನ್ನು ಪ್ರಿಯವೆಂದೆಣಿಸಿ, ಆಕೆಯನ್ನು ಒಲಿದು ಕಟಾಕ್ಷಿಸಿದ ಸ್ವಾಮಿ ಈ ಕಾಣಿಕೆಯನ್ನೂ ಒಲುಮೆಯಿಂದ ನೋಡಿ, ಕೊಟ್ಟವರನ್ನು ಬಹಳವಾಗಿ ಆಶೀರ್ವದಿಸಲಿ!—ಕ್ರೈ. ಸ. ಕ.

ವಿವಿಧ ವರ್ತಮಾನಗಳು.

ಕ್ರೈಸ್ತ ಸಭಾಪತ್ರದ ೮ನೇ ಪುಸ್ತಕದ ಈಗಿನ ೨ನೇ ಅಂಕೆಯ ಸಂಗಡ ೭ನೇ ಪುಸ್ತಕದಲ್ಲಿ ಛಾಪೆಯಾದ ಸಂಗತಿವಿಶೇಷಗಳ ಹಾಗೂ ಪ್ರಸ್ತಾಪವಾದ ದೇವರ ವಾಕ್ಯದ ವಚನಗಳ "ಅಡಕ ಪಟ್ಟಿ" ಛಾಪೆಯಾಗಿ, ಓದುವವರಿಗೆ ಹಸ್ತಗತವಾಗುವದು. ಈ ಅಡಕ ಪಟ್ಟಿಯನ್ನು, ಮನಸ್ಸಿದ್ದವರು ಏಳನೇ ಪುಸ್ತಕ ಕಟ್ಟಿಸಿ, ಅದರ ತುದಿಯಲ್ಲಿ ಅದನ್ನು ಅಂಟಿಸಿ ಹಚ್ಚಿ ಬಿಟ್ಟರೆ, ತಕ್ಕ ಪ್ರಯೋಜನವಾಗದೆ ಹೋಗದು ಎಂತ ಚಂದಾದಾರರಲ್ಲಿ ಒಬ್ಬರು ತಾವಾಗಿ ಛಾಪೆಗೆ ತಯಾರು ಮಾಡಿ, ಮುಟ್ಟಿಸಿದ್ದಾರೆ.

ನಮ್ಮ ಉಡುಪೀ ಠಾಣ್ಯದ ದಕ್ಷಿಣ ದಿಕ್ಕಿನ ಉಪಠಾಣ್ಯಗಳಾದ ಗುಡ್ಡೆಯಲ್ಲಿ ೫೦ ಜನ, ಕೊಪ್ಪಳ ಎಂಬಲ್ಲಿ ೫೦, ಅಂಬಾಡಿಯಲ್ಲಿ ೨೧, ಕುರ್ಕಾಳದಲ್ಲಿ ೩೯, ಹೀಗೆ ಒಟ್ಟಿಗೆ ೧೬೦ ಜನರು ಸದ್ಯಕ್ಕೆ ಸ್ನಾನಕ್ಕಾಗಿ ಬೋಧನೆ ಹೊಂದುತ್ತಿದ್ದಾರೆ.

ಕಳೆದ ತಿಂಗಳಲ್ಲಿ ನೆಲ್ಲೂರಿನವನಾದ ೨೫ ವರುಷ ಪ್ರಾಯವುಳ್ಳ ಒಬ್ಬ ಬ್ರಾಹ್ಮಣ ಯೌವನಸ್ಥನು ಕ್ರೈಸ್ತನಾದನು. ಅವನು ನೆಲ್ಲೂರಿನಲ್ಲಿ ಒಬ್ಬ ಮಿಶ್ಯನೆರಿಯ ಹತ್ತರ ವಿದ್ಯಾಭ್ಯಾಸ ಮಾಡಿದವನಾಗಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಟ್ಟವನು.

ಒಬ್ಬ ಬ್ರಾಹ್ಮಣ ಯೌವನಸ್ಥನು ತಿನವೆಲ್ಲಿಯಿಂದ ಬೆಂಗಳೂರಿಗೆ ಬಂದು ಕ್ರೈಸ್ತಸ್ನಾನ ಹೊಂದಿದನು. ತಂಜಾವೂರಿನಲ್ಲಿದ್ದ ಅವನ ಹೆಂಡತಿಯು ಗಂಡನು ಜಾತಿಭ್ರಷ್ಟನಾದ್ದರಿಂದ ಸ್ವಘಾತ ಮಾಡಿ ಕೊಂಡಳಂತೆ.

ಸಿಮ್ಲದಲ್ಲಿ ಕಳೆದ ತಿಂಗಳಿನಲ್ಲಿ ಮೂವರು ಹೆಂಗಸರನ್ನೂ ಒಬ್ಬ ಗಂಡಸನ್ನೂ ಕ್ರೈಸ್ತಸಭೆಗೆ ಸೇರಿಸಿ ಕೊಳ್ಳಲಾಯಿತು.

ಒಬ್ಬ ದೇಶೀಯ ಪಾದರಿಯು ದಖನದಲ್ಲಿ ಕುಟುಂಬ ಸಮೇತ ಪ್ರಯಾಣ ಮಾಡುತ್ತಿರುವಾಗ ಆದಿತ್ಯವಾರ ಒಂದು ಹಳ್ಳಿಯಲ್ಲಿ ಇಳುಕೊಂಡು ಸೇವಕಳನ್ನು ನೀರು ತರುವದಕ್ಕೆ ಕಳುಹಿಸಿದನು. ಅವಳು ಒಬ್ಬ ಗಾಡಿಗಾರನಿಂದ ನೀರು ಸೇದಿಸಿ ಕೊಂಡು ಬಂದಳು. ಆ ಒಬ್ಬ ಹೊಲತಿ ಭಾವಿ ಮುಟ್ಟಿದಳೆಂಬದಾಗಿ ಆ ಗ್ರಾಮದ ಪಟೇಲನಿಗೆ ಸುದ್ದಿ ಮುಟ್ಟಿದಾಗ ಅವನು ತಡ ಮಾಡದೆ ಆ ಹೆಂಗಸನ್ನು ಕಟ್ಟಿಸಿ ಅನ್ಯಾಯವಾಗಿ ಹೊಡಿಸಿದನು. ಪಾದರಿ ಆ ಹೆಂಗಸು ಭಾವಿಯಿಂದ ನೀರು ಸೇದಲಿಲ್ಲವೆಂತಾ ಆ ಗಾಡಿಗಾರನಿಂದ ಸಾಕ್ಷಿ ನುಡಿಸಿದಾಗ್ಯೂ ಪಟೇಲನು ಕೇಳದೆ ಅದರ ಮೇಲೆ ೭ ರೂಪಾಯಿ ಜುಲುಮಾನೆ ಮಾಡಿಸಿದನು. ಇಂಥಾ ಅನ್ಯಾಯ ಆ ಕಡೆಯಲ್ಲೆಲ್ಲಾ ಆಗುತ್ತದೆ.

ಕಲ್ಕತದಲ್ಲಿ ಒಬ್ಬ ವೈದ್ಯಶಾಲೆಯ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ತೇರ್ಗಡೆ ಪಡದ್ದರಿಂದ ಮನೆಗೆ ಬಂದು ಹೆಂಡತಿಯನ್ನೂ ತಾಯಿಯನ್ನೂ ನಾದಿನಿಯನ್ನೂ ಕೊಲ್ಲಲಿಕ್ಕೆ ಯತ್ನೈಸಿ ಹೊಡೆ

ಯುತ್ತಿರುವಾಗಲೇ ಅವನನ್ನು ಬಂದೋಬಸ್ತು ಮಾಡಲಾಯಿತು.

ತಿರುವಾಂಕೋಡಿನ ಮಹಾರಾಜನು ತನ್ನ ಶೀಮೆಯಲ್ಲಿ ವಿದ್ಯಾವರ್ಧನೆ ಆಗುವದಕ್ಕೆ ಸಹಾಯ ಮಾಡಿ, ರಾಜಭಂಡಾರದಿಂದ ವರ್ಷಂಪ್ರತಿ ೧೫,೦೦೦ ರೂಪಾಯಿ ಸಲ್ಲಬೇಕೆಂದು ನಿಷ್ಕರ್ಷೆ ಮಾಡಿದ್ಧಾನೆ.

ದಖನದ ರೈತರು ಸಾವಕಾರರ ಮೇಲೆ ಎದ್ದ ಸಂಗತಿ ಕಳೆದ ಸಾರಿ ಹೇಳಿದೆವಷ್ಟೆ. ಅಲ್ಲಿಗೆ ಕೆಲವು ಶಿಪಾಯರನ್ನು ಕಳುಹಿಸಿ, ಬಂದೋಬಸ್ತು ಮಾಡಿ, ಆ ತಂಟೆ ಮಾಡಿದವರಲ್ಲಿ ೪೨ ಮಂದಿಗೆ ಫಿತುವೆ ನೇಮಿಸಲಾಯಿತು. ಮತ್ತು ಆ ಸಾವಕಾರರು ಅನ್ಯಾಯವಾಗಿ ಬಡ್ಡಿ ತಕ್ಕೊಳ್ಳುವ ವಿಷಯ ಯಾವದಾದರೂ ಹುಕುಮು ಏರ್ಪಡಿಸುವಂತೆ ಸರಕಾರದವರು ಆಲೋಚಿಸುತ್ತಿದ್ಧಾರೆ.

ಪಂಢರಪುರದಲ್ಲಿ ವಾಂತಿಭೇದಿ ಪ್ರಾರಂಭವಾದ್ದರಿಂದ ಬರುವ ತಿಂಗಳಿಗೆ ಯಾತ್ರೆ ಅಲ್ಲಿ ಆಗಬಾರದೆಂದು ಅಪ್ಪಣೆಯಾಯಿತು.

ಪ್ರಿನ್ಸ್ ಒಫ್ ವೇಲ್ಸ್ ರಾಜಕುಮಾರನು ಹಿಂದುಸ್ಥಾನಕ್ಕೆ ದಯ ಮಾಡುವಾಗ್ಯೆ ಅವರೊಂದಿಗೆ ಮಹಾರಾಜ ದಿಲೀಪಸಿಂಗ ಎಂಬವನೂ ಬರುತ್ತಾನಂತೆ.

ಇಂಗ್ಲಾಂದಿನಲ್ಲಿ ಬಾಳೆ ಎಲೆಯಿಂದ ಕಾಗದ ಮಾಡುವದಕ್ಕೆ ಪ್ರಯತ್ನ ಮಾಡುತ್ತಾರಂತೆ.

ಜಂಜಿಬಾರಿನ ಸುಲ್ತಾನನು ಜೂನ್ ತಿಂಗಳ ೧೧ರಲ್ಲು ಲಂಡನಿಗೆ ಹೋಗಿ ಮುಟ್ಟಿದನು.

ಸ್ಪೇನ್ ದೇಶದ ಗ್ರನದ ತಗ್ಗಿನಲ್ಲಿ ಭಯಂಕರವಾದ ಭೂಕಂಪ ಉಂಟಾಗಿ, ಬಹು ಜನರ ಪ್ರಾಣನಷ್ಟಕ್ಕೆ ಕಾರಣವಾಯಿತು.

ಸಂಣಾಸ್ಯದಲ್ಲೂ ಆದ ಭೂಕಂಪದ ವರ್ತಮಾನವೇನಂದರೆ—ಇಶಿಕ್ಲಿ ಎಂಬ ಜಿಲ್ಲೆಯಲ್ಲಿ ೫೦ ಮನೆಗಳು ಉಳಿಯಲಿಲ್ಲ. ೨೦೦೦ ನಿವಾಸಿಗಳಿರುವ ಒಂದು ಹಳ್ಳಿಯಲ್ಲಿ ಒಂದು ಮನೆಯೂ ಉಳಿಯದೆ ೫೦೦ ಮಂದಿ ನಾಶವಾದರು. ಇಶಿಕಿಲ್ ಪಟ್ಟಣದಲ್ಲಿ ೧ ಸಾವಿರ ಮನೆಗಳಿರುವಲ್ಲಿ ೧೫ ಮನೆಗಳೂ ೨ ಮಶೀದಿಗಳೂ ಉಳಿದವು. ಜೇಪ್ರಿಲ್ ಎಂಬ ಸ್ಥಳಕ್ಕೆ ಸಮೀಪ ಭೂಕಂಪದಿಂದುಂಟಾದ ಒಂದು ಬಿರುಕಿನಿಂದ ಬಿಶಿ ನೀರಿನ ಬುಗ್ಗೆ ಹೊರಟದೆ.

ಗ್ರೀಕ ದೇಶದಲ್ಲಿಯೂ ಒಂದು ಭೂಕಂಪದಿಂದ ಬಹಳ ಅವಾಂತರವೂ ನಷ್ಟವೂ ಆಯಿತು. ಒಂದು ದೇವಾಲಯ ಅದರ ಸಮ್ಮಂಧದಿಂದ ಬಿದ್ದು ಹೋಗಿ ೪೭ ಜನರನ್ನು ಕೊಂದು ಹಾಕಿತು.

ಫ್ರೇಂಚ್ ದೇಶದಲ್ಲಿ ಗಾರೋನ್ ಎಂಬ ನದಿಗೆ ನೆರೆ ಬಂದು, ತೂಲೂಸ್ ಎಂಬಲ್ಲಿ ಅನೇಕ ಜನರ ಪ್ರಾಣನಷ್ಟಕ್ಕೂ ಆಸ್ತಿನಷ್ಟಕ್ಕೂ ಹೇತುವೆ ಆಯಿತು. ಅದೇ ಪ್ರಕಾರ ಹುಂಗಾರ್ಯದಲ್ಲಿಯೂ ನಷ್ಟಕರವಾದ ಪ್ರವಾಹಗಳು ಬಂದವಂತೆ.

ಚಿಕ್ಕ ಅಂತಿಲ್ಲಗಳೆಂಬ ದ್ವೀಪಗಳಲ್ಲಿ ಒಂದಾದ ದೊಮಿನಿಕ ಎಂಬ ದ್ವೀಪದಲ್ಲಿ ಸುತ್ತಮುತ್ತಲು ಘೋರಾರಣ್ಯವಿರುವ ಒಂದು ಗುಡ್ಡದ ತಪ್ಪಲಿನಲ್ಲಿ ಕುದಿಯುವಷ್ಟು ಬಿಸಿಯಾದ ನೀರಿರುವ ಸರೋವರವನ್ನು ಇತ್ತಲಾಗಿ ಕಂಡು ಕೊಂಡರಂತೆ. ಅದರ ಸುತ್ತಳತೆ ೨ ಮೈಲು; ಕರೆಯ ನೆಲವೆಲ್ಲವೂ ಬರೀ ಗಂಧಕವಂತೆ.

ಅಮೇರಿಕದ ಸಂಯುಕ್ತಸಂಸ್ಥಾನಗಳಲ್ಲಿ ಒಂದಾದ ಪೆನ್ಸಿಲ್ವಾನ್ಯವೆಂಬ ಶೀಮೆಯಲ್ಲಿ ಕಲ್ಲಿದ್ದಲೀ ಮೊದಲಾದ ಖನಿಗಳಲ್ಲಿ ಕೆಲಸ ಮಾಡುತ್ತಿದ್ದ ಜನರು ಕೆಲಸ ಬಿಟ್ಟು, ಆಯುಧಧಾರಿಗಳಾಗಿ, ಗುಂಪುಗುಂಪಾಗಿ ಕೂಡಿಕೊಂಡು, ಕಲ್ಲಿದ್ದಲೀ ಖನಿಗಳಲ್ಲಿ ಬೆಂಕಿ ಹೊತ್ತಿಸಿ, ಬೇರೆ ಖನಿಗಳಲ್ಲಿ ನೀರು ಬಿಡಿಸಿ, ಖನಿಗಳನ್ನು ಹಾಳು ಮಾಡಿ, ಊರಿಗಾರರಾಗಿ ಹೇರಳ ನಷ್ಟ ಮಾಡುತ್ತಿದ್ಧಾರಂತೆ.

ಅರಬನಾಗಿದ್ದ ಮೊಹಮ್ಮದ್ ಈಬು ಅಬ್ದುಲ ವೆಖಾಬನೆಂಬವನ ಅವಲಂಬಿಗಳಾಗಿ, ತುರ್ಕರ ಸುನ್ನವೆಂಬ ಸಂಪ್ರದಾಯವನ್ನು ನಿರಾಕರಿಸಿ, ಮೊಹಮ್ಮದನು ನಾಬಿ (ದಿವ್ಯ ಪುರುಷನು) ಆಗಿರದೆ, ಗುರು (ದೊಡ್ಡ ಕಾಜಿ) ಮಾತ್ರವೇ ಆಗಿದ್ದನೆಂತ ಪ್ರತಿಪಾದಿಸುವ ತುರ್ಕ ಮತಭೇದಿಗಳು ಸುಲ್ತಾನನ (ತುರ್ಕ್ಯಸಮ್ರಾಜನ) ಅಧಿಕಾರವನ್ನು ತಮ್ಮ ದೇಶವಾದ ಅರಬಿಸ್ಥಾನದಲ್ಲಿ ತಳ್ಳಿ ಬಿಟ್ಟು, ಪುನ

ಹ ಖಲೀಫಾತೆಂಬ ಸ್ವದೇಶರಾಜ್ಯಾಧಿಕಾರವನ್ನು ಸ್ಥಾಪಿಸ ಬೇಕೆಂದಿರುತ್ತಾರಂತೆ.

ತುರ್ಕ್ಯ ಸಾಮ್ರಾಜ್ಯಕ್ಕೂ ರುಸ್ಯ ಸಾಮ್ರಾಜ್ಯಕ್ಕೂ ಪಾಲಾಗಿ ಶೇರಿರುವ, ಪಾಲಾಗಿ ಹೊಂದಿರುವ ಬೇರೆ ಬೇರೆ ಶೀಮೆಗಳಲ್ಲಿ ರೋಮನ್ ಪಾಪಸ್ವಾಮಿಗಳು ಯಾವಾಗಲೂ ಸಾಗಿಸುತ್ತಿದ್ದ ಮಿತ್ರಸಂಧಾನಗಳಿಗೆ ಇಂಬು ಕೊಟ್ಟು, ರೋಮನ್ ಸಭೆಗೆ ಐಕ್ಯವಾದ ಗ್ರೀಕಮತಸ್ಥರಲ್ಲಿ ಇತ್ತಲಾಗಿ ಅನೇಕರು (೧,೦೦,೦೦೦ ಜನರಿಗಿಂತ ಹೆಚ್ಚಾದವರು) ರೋಮನ್ ಸಭೆಯ ಸಂಸರ್ಗವನ್ನು ಬಿಟ್ಟುಬಿಟ್ಟು, ತಮ್ಮನ್ನು ಪುನಶ್ಚ ರುಸ್ಯ ಮಹಾರಾಜನ ಶ್ರೇಷ್ಠಾಧ್ಯಕ್ಷತೆಯೊಳಗಿರುವ ಗ್ರೀಕ ಸಭೆಯಲ್ಲಿ ಶೇರಿಸಿ ಕೊಂಡರು.

ಸಂಯುಕ್ತಸಂಸ್ಥಾನಗಳಲ್ಲಿ ಮತ್ತೊಂದಾದ ಮಸ್ಸಚೂಸೆತ್ಸದಲ್ಲಿ ಯೇಸುನಾಥನ ಶವೋತ್ಸವವೆಂಬ ರೋಮಾಯರ ಒಂದು ಹಬ್ಬದಲ್ಲಿ (ಮೇ ೨೭ರಲ್ಲಿ) ಒಂದು ದೇವಾಲಯವೂ ೧೦೦ ಜನರೂ ಸುಟ್ಟು ಹೋಗಿ, ಮತ್ತು ೧೦೦ ಜನರು ಜಖಮಾಗಿ, ಮಹಾ ಭಯಂಕರವಾದ ಸಂಗತಿ ಸಂಭವಿಸಿತು. ಹ್ಯಾಗಂದರೆ: ಸುಮಾರು ೬೦೦ ಜನರು ನೆರೆದಿದ್ದಂಥಾ, ನಾನಾ ಬಣ್ಣದ ಕಾಗದಗಳಿಂದಲೂ ಅರಿವೆಗಳಿಂದಲೂ ಮಾಡಲ್ಪಟ್ಟ ಧ್ವಜಗಳಿಂದಲೂ, ಪರೆತೆರೆಗಳಿಂದಲೂ, ವಸ್ತ್ರಾಲಂಕಾರಗಳಿಂದ ಶೃಂಗರಿಸಿದ ಬೊಂಬೆಗಳಿಂದಲೂ ದೀಪಗಳಿಂದಲೂ ತುಂಬಿದ್ದಂಥ ದೇವಾಲಯದಲ್ಲಿ ಪೂಜೆಗೀಜೆ ನಡೆಯುವ ಹೊತ್ತಿನಲ್ಲಿ ಘಾಳಿ ಬೀಸಿ, ಮರೀಯಳ ಗೊಂಬೆಯ ವಸ್ತ್ರದ ಕೊನೆಯನ್ನು ಆಡಿಸಿ ಒಂದು ದೀಪದ ಜ್ವಾಲೆಗೆ ತಾಗಿಸಲು, ಅಗ್ನೀಶ್ವರನು ಎದ್ದು, ಕ್ಷಣದಲ್ಲಿ ಸಮಸ್ತ ಕಾಗದಗೀಗದ ಬಟ್ಟೆಗಿಟ್ಟೆಗಳನ್ನು ಹಿಡಿದು, ಜನರಿಗೆ ತನ್ನ ಹಲ್ಲುಗಳನ್ನು ತೋರಿಸಲು, ಎಲ್ಲರು ಓಡಿ ಹೋಗ ಬೇಕೆಂತ ಬಾಗಲನ್ನು ದಾಟಲಾರದಷ್ಟು ದೊಡ್ಡ ಹತ್ತೀ ವಜ್ಜೆಯ ಹಾಗೆ ಒಬ್ಬರಮೇಲೊಬ್ಬರು ಬಿದ್ದು ಬಾಗಲಿನ ಒಳಗೆ ಒಂದು ಗಂಟಿನಷ್ಟು ಬಿಮ್ಮಗಾದ ಒಟ್ಟಾಗಲಾಗಿ ಹೆಚ್ಚಾದವರು ತಪ್ಪಿಸಿ ಕೊಳ್ಳಲಾರದೆ ನರಕಕ್ಕೆ ಬಿದ್ದ ಹಾಗಾದರು. ೧೮೬೩ನೇ ಇಸವಿಯ ದಶಂಬರ ೮ರಲ್ಲಿ ದಕ್ಷಿಣ ಅಮೇರಿಕದ ಚಿಲಿ ಎಂಬ ದೇಶದ ಸಂತಿಯಾಗೊ ಎಂಬ ರಾಜಧಾನಿಯಲ್ಲಿ ಸಹಾ ಅದೇ ಪ್ರಕಾರ ೨೦೦೦ ಜನ ಹೆಂಗಸರು ಅಗ್ನೀಶ್ವರನ ಬಾಯಿಯಲ್ಲಿ ಬಿದ್ದರು. ಅಲ್ಲಿ ಸಹಾ ಬೆಂಕಿ ಮೊದಲೇ ಮರೀಯಳ ಪ್ರತಿಮೆಯನ್ನು ಹಿಡಿದು ದಹಿಸುವಂಥಾದ್ದಾಯಿತು. ಹೀಗೆ ಬೆಂಕಿ ಎರಡು ಸಾರಿ ಮರೀಯಳ ಪ್ರತಿಮೆಯ ಸಂಗಡ ಮರೀಯಳನ್ನು ಪೂಜೆ ಮಾಡಿ ಭಜಿಸುವ ಅಪಭಕ್ತರನ್ನು ಹಿಡಿದು ದಹಿಸಿಬಿಟ್ಟದನ್ನು ನೋಡಿ, ಅನ್ಯ ಬೆಂಕಿಯನ್ನು ತನ್ನ ಸನ್ನಿಧಿಗೆ ತಂದ ನಾದಬನನ್ನೂ ಅಬೀಹುವನ್ನೂ ದೇವರು ಬೆಂಕಿಯಿಂದ ನಾಶನ ಮಾಡಿದ ಸಂಗತಿಯನ್ನು ನೆನಪು ಮಾಡಿ ಕೊಳ್ಳ ತಕ್ಕದ್ದು.

ಓಸ್ತ್ರಿಯ ದೇಶದ ಸ್ತ್ರೈಯರ್ ಎಂಬ ಶೀಮೆಯಲ್ಲಿ ಯಾತ್ರೆಗೆ ಹೊರಟ ಕಥೋಲಿಕರು ಒಂದು ದೋಣಿ ಹತ್ತಿ ಕೊಂಡು ಮುರ್ ಎಂಬ ಹೊಳೆಯನ್ನು ದಾಟಿ ಹೋಗಲಿಕ್ಕಿದ್ದಾಗ, ದೋಣಿ ಮಗುಚಿ ಬಿದ್ದದರಿಂದ ಸುಮಾರು ೧೩೦ ಜನರಿಗೆ ಅಲ್ಲಿಯ ತೀರ್ಥಸ್ನಾನದಲ್ಲಿ ಯಮದರ್ಶನವಾಯಿತು.

ರೋಮಪಟ್ಟಣದಲ್ಲ್ಯಾದರೂ ಸುವಾರ್ತೆಯ ಪ್ರಸಂಗಕ್ಕೆ ಬಾಗಲು ತೆರೆದಂತಾಯಿತೆಂಬದನ್ನು ಈ ಪತ್ರದಲ್ಲಿ ಓದಿದ್ದೀರಿ. ಆ ಪಟ್ಟಣದ ಒಬ್ಬ ಘನಸ್ಥಗೃಹಸ್ಥನು ಸುವಾರ್ತೆಯನ್ನು ಕೇಳಿ ಪ್ರೊಟೆಸ್ಟಾಂಟ ಸಭೆಯನ್ನು ಶೇರಿದ್ದರಿಂದ, ಅವನ ಹೆಂಡತಿಗೆ ಕಥೋಲಿಕ ಮತದ ವಿಷಯದಲ್ಲಿ ಸಂಶಯ ಹುಟ್ಟಿದ್ದಲ್ಲದೆ, ಪಾದ್ರಿ ಅವಳಿಗೆ—ನೀನು ನಿನ್ನ ಗಂಡನನ್ನು ಹಿಂಬಾಲಿಸಿದರೆ, ನಾಶನ ಹೋಗುವಿ ಎಂಬದಾಗಿ ಹೇಳಿ, ನಾನಾ ವಿಧವಾಗಿ ಭಯ ಹುಟ್ಟಿಸಿದ್ದರಿಂದ, ಬಹಳ ಕರಕರೆಯಾಯಿತು. ಅದನ್ನು ತಾಳಲಾರದೆ ಅವಳು ತನ್ನ ಪಾದ್ರಿಗೆ—ನೀವೂ ನನ್ನ ಗಂಡ ಈಗ ಶೇರಿದ ಸಭೆಯ ಪಾದ್ರಿಯೂ ನಮ್ಮ ಮನೆಯಲ್ಲಿ ಬಂದು ಸತ್ಯದ ವಿಷಯದಲ್ಲಿ ತರ್ಕ ಮಾಡ ಬೇಕು. ನೀವು ಗೆದ್ದರೆ, ನಾನು ಕಥೋಲಿಕ ಸಭೆಯನ್ನು ಬಿಡೆ; ಅವರು ಗೆದ್ದರೆ, ಅವರ ಸಭೆ ಶೇರುವೆ ಎಂಧೇಳಿ, ಇಬ್ಬರನ್ನು ತರ್ಕಕ್ಕೆ

ಕರಿಸಿದಳು. ಇಬ್ಬರು ಬಂದು ತರ್ಕ ಮಾಡಿದರು. ರೋಮನ್ ಪಾದ್ರಿ ತನ್ನದೊಂದು ಮಾತನ್ನು ರುಜು ಪಡಿಸುವರೆ, ದೇವವಾಕ್ಯದ ಒಂದು ವಚನವೆಂತ ಒಂದು ವಾಕ್ಯವನ್ನು ಉದಹರಿಸಿದ್ದಲ್ಲಿ, ಪ್ರೊಟೆಸ್ಟಾಂಟ ಪಾದ್ರಿ ಆ ವಾಕ್ಯವು ದೇವವಾಗ್ಗ್ರಂಥದಲ್ಲಿರದ್ದೇ ಎಂತ ತಿಳಿದು, ತನ್ನ ಎದುರಾಳಿಗೆ— ನೀವು ಉದಹರಿಸಿದ ವಾಕ್ಯವು ಬೈಬಲಿನಲ್ಲಿ ಎಲ್ಲಿ ಎಂತ ತೋರಿಸಿರಿ ಎಂಧೇಳಿ, ಒಂದು ಬೈಬಲನ್ನು ಕೊಟ್ಟಾಗ, ಆ ರೋಮನ್ ಪಾದ್ರಿ ಬಹಳ ಹೊತ್ತು ಹುಡುಕಿ, ಹುಡುಕಿ, ಆ ವಾಕ್ಯವನ್ನು ಕಂಡು ಕೊಳ್ಳಲಾರದೆ ಹೋದಾಗ—ಈ ಬೈಬಲ್ ಪ್ರೊಟೆಸ್ಟಾಂಟ ಬೈಬಲ್, ನಿಜವಾದ ಬೈಬಲಲ್ಲಾ; ನಮ್ಮ ರೋಮನ್ ಸಭೆಯ ಬೈಬಲಿನಲ್ಲಿ ಆ ವಾಕ್ಯವನ್ನು ತೋರಿಸ್ಯೇನು ಎಂಧೇಳಲಾಗಿ, ಒಂದು ಕಥೋಲಿಕ ಬೈಬಲನ್ನು ಅವನ ಕೈಯಲ್ಲಿ ಕೊಟ್ಟರು. ಅದರಲ್ಲಿಯೂ ಸುಮಾರು ಹೊತ್ತು ಪುಕಸಟೆಗೆ ಹುಡುಕಿದ ಮೇಲೆ— ನನಗೆ ಗ್ರೀಕ್ ಭಾಷೆಯ ಮೂಲಗ್ರಂಥವನ್ನು ಕೊಟ್ಟರೆ, ಬೇಗ ತೋರಿಸಿ ಕೊಡುತ್ತೇನೆ, ಯಾಕಂದರೆ ನಾನು ಗ್ರೀಕ್ ಮೂಲಗ್ರಂಥವನ್ನು ಹೆಚ್ಚಾಗಿ ಪ್ರಯೋಗಿಸುವವನಾದ್ದರಿಂದ ಈ ಲತೀನ ಬೈಬಲಿನಲ್ಲಿ ನನಗಷ್ಟು ಪರಿಚಿತಿಯಿಲ್ಲಾ ಎಂತ ಹೇಳಿದನು. ಆಗ ಗ್ರೀಕ್ ಬೈಬಲನ್ನು ಸಹಾ ಅವನ ಕೈಯಲ್ಲಿ ಕೊಟ್ಟರು. ಆದರೆ ಅವನು ಅದನ್ನು ಬುಡ ಮೇಲೆ, ತುದಿ ಕೆಳಗೆ ಮಾಡಿ ಹಿಡಿದು ಹುಡುಕಿ ಹುಡುಕಿದನು. ಕಡೆಗೆ ಲಿಬೆತ್ತಿಯೆಂಬ ಆ ಪ್ರೊಟೆಸ್ಟಾಂಟ ಪಾದ್ರಿ—ಇವನ ಕಪಟವೂ ಠಕ್ಕೂ ಈಗ ಸಾಕು ಎಂದು, ಅವನು ಗ್ರೀಕ್ ಭಾಷೆಯನ್ನಾದರೂ ತಿಳಿಯದೆ, ಗ್ರಂಥವನ್ನು ಮೇಲೆ ಕೆಳಗೆ ಮಾಡಿ ಹಿಡಿದಿದ್ದಾನೆ ಎಂತ ತೋರಿಸಿದ್ದಲ್ಲಿ ತರ್ಕವು ನಿಂತು ಹೋಗಿ, ಆ ಪಾದ್ರಿ ಸೋತವನಾಗಿ ಮಾತ್ರವಲ್ಲಾ, ತನ್ನ ಅಜ್ಞಾನವನ್ನೂ ಠಕ್ಕನ್ನೂ ಮಾಜಲಾರದವನಾಗಿಯೂ ನಾಚಿಕೊಂಡು ನಡೆದು ಬಿಡ ಬೇಕಾಯಿತು. ಈ ಚಲೋ ತರ್ಕವನ್ನು ನೋಡಿ, ಆ ಧೊರೆಸಾನಿ ಸಹಾ ಪ್ರೊಟೆಸ್ಟಾಂಟ ಸಭೆಯನ್ನು ಸೇರಿದಳು.

ರೋಮನ್ ಕಥೋಲಿಕ ಮಠವಾಸಿಗಳೂ ಸನ್ಯಾಸಿಗಳೂ ಮೊದಲಾದ ದೀಕ್ಷಾಬದ್ಧರೂ ಕೈಕೊಳ್ಳ ತಕ್ಕ ಧರ್ಮವೆಂಥಾದ್ದೆಂಬದು ಒಂದು ಮಠನೀತಿಬೋಧನಾಶಾಸ್ತ್ರದಿಂದ ತೆಗದ ಉದಾಹರಣೆಯಿಂದ ತಿಳಿದು ಬರ ಬಹುದು. ಅಧೀನತೆ ಅಥವಾ ವಿಧೇಯತೆ ಎಂಬುವದರ ವಿಷಯ ಆ ಶಾಸ್ತ್ರದಲ್ಲಿ ಬೋಧಿಸಿರುವದೇನಂದರೆ: "ಮಠವಾಸಿಗಳು ತಮ್ಮ ಮಠಾಧಿಪತಿಯನ್ನು (ಮೇಲ್ವಿಚಾರಕನನ್ನು) ದೇವರೆಂಬ ಹಾಗೆ ಲಕ್ಷಿಸಿ ಸನ್ಮಾನಿಸ ಬೇಕು. ಅವನ ಸನ್ನಿಧಿಗೆ ಬರುವವರು ತಾವು ದೇವರ ಸನ್ನಿಧಿಗೆ ಹೋಗುತ್ತೇವೆ ಎಂತ ನೆನಸಿ ಭಯ ಭಕ್ತಿಪೂರ್ವಕರಾಗಿ ಬರ ಬೇಕು. ಏನೊಂದು ನಿಮಿತ್ಯಕ್ಕೆ ಅವನು ಒಬ್ಬನಿಗೆ ಬುದ್ಧಿ ಹೇಳಿದರೆ, ಅಥವ ಗದರಿಸಿದರೆ, ಕೇಳ ತಕ್ಕವನು ಕೂತು ಕೊಂಡಿರುವ ಪಕ್ಷದಲ್ಲಿ ಎದ್ದು ನಿಂತು ಕೊಂಡು ಕೇಳ ಬೇಕು; ಮೊದಲು ನಿಂತು ಕೊಂಡಿರುವ ಪಕ್ಷದಲ್ಲಿ ಮೊಣಕಾಲೂರಿ ಕೊಂಡು ಕೇಳ ಬೇಕು; ಮೊದಲು ಮೊಣಕಾಲೂರಿ ಕೊಂಡಿದ್ದರೆ, ನೆಲಕ್ಕೆ ಮುದ್ದಿಟ್ಟು ಕೇಳ ಬೇಕು. ಅಪ್ಪಣೆಯಾದ ಕ್ಷಣಕ್ಕೆ ಅದನ್ನು ಶಿರಸಾವಹಿಸಿ ಕೊಂಡು ತಡೆಯದೆಯೂ, ಯಾತಕ್ಕೆಂದು ವಿಚಾರಿಸದೆಯೂ, ನನ್ನಿಂದ ಕೂಡದು ಎಂತ ಹೇಳದೆಯೂ, ನೆವವನ್ನು ಹಿಡಿಯದೆಯೂ ಪೂರೈಸಲಿಕ್ಕೆ ಹತ್ತ ಬೇಕು. ಒಂದು ಹೆಣವು ತನ್ನನ್ನು ಹೊರಳಿಸಲ್ಪಡಲೂ ವೈಯಲ್ಪಡಲೂ ಬಿಡುವಂತೆಯೂ, ಒಂದು ಕೋಲು ಅದನ್ನು ಹಿಡುಕೊಂಡವನಿಗೆ ಪೂರ್ಣ ವಶವಾಗಿ ಅವನಿಗೆ ಬೇಕಾದ ಕೆಲಸಕ್ಕೆ ಬರುವಂತೆಯೂ ಮಠವಾಸಿಗಳೂ ದೀಕ್ಷಾಬದ್ಧರೂ ತಮ್ಮ ಮೇಲ್ವಿಚಾರಕರಿಗೆ ಪೂರ್ಣ ವಶರಾಗಿ, ಅವರು ಹೇಳಿದ್ದನ್ನೇ ತಡೆಯದೆಯೂ ವಿಚಾರವಿಲ್ಲದೆಯೂ ಮಾಡಲೇ ಮಾಡ ಬೇಕು."— ಇಂಥ ಮಠನೀತಿ ಬೋಧನೆ— "ನೀನು ಅಡ್ಡಬಿದ್ದು, ನನಗೆ ನಮಸ್ಕರಿಸಿದರೆ, ಇವುಗಳನ್ನೆಲ್ಲಾ ನಿನಗೆ ಕೊಡುತ್ತೇನೆ" ಎಂಧೇಳಿದ ಸೈತಾನನ ಶಬ್ದದ ಪ್ರತಿಧ್ವನಿಯಂತೆ ಕೇಳುತ್ತದಲ್ಲಾ!

Printed by Stolz & Hirner, Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೮. **SEPTEMBER 1875.** ಅಂಕೆ ೩.

ಗೋಳಾಡ ಬೇಡಾ: ಕೊಂಡಾಡು!

ಯೆಹೋವನಿಗೆ ಹಾಡುವೆನು, ಯಾಕಂದರೆ ನನಗೆ ಮೇಲು ಮಾಡಿದ್ದಾನೆ. ಕೀರ್ತ. ೧೩, ೬.

ಕಷ್ಟವು ಕಷ್ಟವೆಂತ ಕ್ರೈಸ್ತನಿಗೆ ಕಾಣ ಬಾರದು, ತಾಪತ್ರಯಕ್ಕೆ ದುಃಖ ಪಡಲೂ ಶೋಕಗೊಳ್ಳಲೂ ಬಾರದು ಎಂಬುವ ಮಾತು ಇಲ್ಲವೇ ಇಲ್ಲಾ. ಸತ್ಕ್ರೈಸ್ತನಾದರೂ ಶ್ರಮಾದಿಗಳಿಗೆ ದುಃಖ ಪಡುತ್ತಾನೆ, ಮನೋವ್ಯಥಿತನಾಗುತ್ತಾನೆ. ಆದರೆ ತನ್ನ ಕಷ್ಟ ಸಂಕಟಗಳ ನೆನಪೂ, ತನ್ನ ಶೋಕವೂ ಮನೋವ್ಯಾಕುಲತೆಯೂ ಮರತು ಹೋಗ ಬೇಕೆಂತ, ಅವನು ಎಂದಿಗೂ ಕುಡಿದಾಟಕ್ಕಾಗಲಿ ಬೇರೆ ಯಾವ ಯಾವ ಆಟಕ್ಕಾಗಲಿ ಶೇರದೆ, ವಿಷಯಗಳಲ್ಲಿ ಮುಣುಗಿ ಹೋಗದೆ, ತನ್ನ ಕಷ್ಟವನ್ನು ತಾಳಿ ಕೊಳ್ಳುತ್ತಾನೆ. ತನಗೆ ಕಷ್ಟವಿಲ್ಲವೆಂಬ ಹಾಗೆಯೂ ಎಂದೂ ಮಾಡನು; ತಾನು ದುಃಖದಲ್ಲಿಯೂ ಕಷ್ಟದಲ್ಲಿಯೂ ಇದ್ದವನು, ಆದ್ದರಿಂದ ತಾನು ಕಷ್ಟದಲ್ಲಿದ್ದವನಿಗೆ ಸರಿ ಬೀಳುವಂತೆ ತಾಳಲೂ ಪ್ರಾರ್ಥಿಸಲೂ ಸಾಧಿಸಲೂ ಬೇಕು ಎಂತ ಪ್ರಾರ್ಥನೆ ಮಾಡಿ ಸಾಧಿಸುತ್ತಿದ್ದಾನೆ. ಕಷ್ಟ ಶೋಕ ಎಂಬ ನೀರಿನಲ್ಲಿ ಬಿದ್ದು, ಈಜಾಡಿ, ಈಜಾಡಿ, ಸಾರಾಗಲಿಕ್ಕೆ ನೋಡುತ್ತಾನೆ. ದುಃಖೋಪಶಮನವನ್ನೂ ಶೋಕ ಪರಿಹಾರವನ್ನೂ ಆಶಿಸಿ ಹುಡುಕುತ್ತಿರುತ್ತಾನೆ. ಕತ್ತಲೆಯಲ್ಲಿಂದ ಬೆಳಕಿಗೆ, ಇಕ್ಕಟ್ಟಿನಲ್ಲಿಂದ ವಿಸ್ತಾರವಾದ ಬೈಲಿಗೆ ಬಂದು ಶೇರ ಪ್ರಯತ್ನ ಮಾಡುತ್ತಾನೆ, ಪ್ರಾರ್ಥಿಸಿ, ಪ್ರಾರ್ಥಿಸಿ, ವಿಶ್ವಾಸದಿಂದ ಹೋರಾಡಿ, ಹೋರಾಡಿ ಪ್ರಯತ್ನ ಮಾಡುತ್ತಾನೆ. ಹೀಗೆ ಪ್ರಯತ್ನ ಮಾಡುವವನಿಗೆ ದೇವರು ಕರುಣಾಳಾಗಿ ಸಹಾಯಕನಾಗುತ್ತಾನೆ. ಇದು ಹ್ಯಾಗೆ ಆಗುತ್ತದೆಂಬದು ೧೩ನೇ ಕೀರ್ತನೆಯಲ್ಲಿ ಕಾಣುತ್ತದೆ. ಈ ಕೀರ್ತನೆಯಲ್ಲಿ ದಾವೀದನು ಮೊದಲು ಗೋಳಾಡಿ, ಅವಿಶ್ವಾಸಭಾವದ ಸಂಶಯದಿಂದ ಪ್ರಶ್ನೆ ಹಾಕಿ ಕೇಳಿದ್ದೇನಂದರೆ: "ಯೆಹೋವನೇ! ಎಷ್ಟು ವರೆಗೆ ನನ್ನನ್ನು ಯಾವಾಗ್ಯೂ ಮರತು ಬಿಡುವಿ? ಎಷ್ಟು ವರೆಗೆ ನಿನ್ನ ಮುಖವನ್ನು ನನಗೆ ಮರೆ ಮಾಡುವಿ? ಎಷ್ಟು ವರೆಗೆ ನನ್ನ ಪ್ರಾಣದಲ್ಲಿ ಆಲೋಚನೆಗಳನ್ನು ನನ್ನ ಹೃದಯದಲ್ಲಿ ಚಿಂತೆಯನ್ನು ದಿನಾಲು ಇಟ್ಟುಕೊಳ್ಳ ಬೇಕು? ಎಷ್ಟು ವರೆಗೆ ನನ್ನ ಶತ್ರು ನನ್ನ ಮೇಲೆ ಏಳುವನು?"

ಪ್ರಾರ್ಥನೆ ಸಹಾ ಮಾಡಿ, ಮೊರೆ ಇಟ್ಟು ಬೇಡಿ ಕೊಂಡನು. ಹ್ಯಾಗಂದರೆ: "ನನ್ನ ದೇವರಾದ ಯೆಹೋವನೇ! ದೃಷ್ಟಿಸಿ, ನನಗೆ ಉತ್ತರ ಕೊಡು. ನಾನು ಮರಣದ ನಿದ್ದೆ ಗೈಯದ ಹಾಗೆಯೂ, ನನ್ನ ಶತ್ರುವು, ಅವನನ್ನು ಗೆದ್ದೆ ಎಂದು, ಹೇಳದ ಹಾಗೆಯೂ, ನನ್ನ ವೈರಿಗಳು ನಾನು ಕದಲುವಾಗ ಉಲ್ಲಾಸ ಪಡದ ಹಾಗೆಯೂ, ನನ್ನ ಕಣ್ಣುಗಳನ್ನು ಬೆಳಗ ಮಾಡು." ಅಂದಿನ ವರೆಗೆ ದಾವೀದನು ಪೂರ್ಣ ಆರ್ತನಾಗಿ, ಅಗಾಧದಿಂದ ದೇವರಿಗೆ ಕೂಗಿ ಮೊರೆ ಇಡುತ್ತಿದ್ದನು. ಆದರೆ ಅವನು ಅಂದೇ ಹಾಗೆ ಮೊರೆ ಇಟ್ಟ ಬಳಿಕ ದೇವರು ಅವನ ಕಣ್ಣುಗಳನ್ನು ಬೆಳಗ ಮಾಡಿ, ಅವನ ವಿಶ್ವಾಸ ಬಲ ಪಡಿಸಿ ಅವನನ್ನು ಉದ್ಧಾರ ಮಾಡಿದ್ದರಿಂದ ಅವನು ಕಡೆಗೆ ಕರ್ತನನ್ನು ಕೊಂಡಾಡಿ ಹೇಳಿದ್ದೇನಂದರೆ: "ನಾನಾದರೆ ನಿನ್ನ ಕೃಪೆಯಲ್ಲಿ ಭರವಸವಿಟ್ಟು, ಕೋರಿಕೆ ಹಿಡಿದಿದ್ದೇನೆ, ನಿನ್ನ ರಕ್ಷಣೆಯಲ್ಲಿ ನನ್ನ ಹೃದಯವು ಉಲ್ಲಾಸ ಪಡುವದು. ಯೆಹೋವನಿಗೆ ಹಾಡುವೆನು, ಯಾಕಂದರೆ ನನಗೆ ಮೇಲು ಮಾಡಿದ್ದಾನೆ." ಮೊದಲು ಭರವಸವೂ ಕೋರಿಕೆಯೂ ಅವನಿಗೆ ತಿರಿಗಿ ಬಂದು ಹೆಚ್ಚಿದ ಬಳಿಕ ಉಲ್ಲಾಸವೂ ಹುಟ್ಟಿತು. ಈ ಉಲ್ಲಾಸದಿಂದ "ಕರ್ತನಿಗೆ ಹಾಡುವೆನು" ಎಂಬ ಹರಿಕೆ ಹುಟ್ಟಿತು. ಮೊದಲು ದೇವರು ಕರುಣಾಳು ಎಂಬದನ್ನು ಜ್ಞಾಪಕ ಮಾಡಿ ಕೊಂಡನು. ಬಳಿಕ ಆತನು ಸಹಾಯಕನು, ಅಂದರೆ ಸಹಾಯ ಮಾಡ ಶಕ್ತನು ಮಾತ್ರವಲ್ಲಾ ಮನಸ್ಸಿದ್ದವನು ಎಂತಲೂ, ಕಡೆಗೆ ಕರ್ತನು ಶೋಕಹರನೂ ಕಷ್ಟನಿವಾರಕನೂ ಮಾತ್ರವಲ್ಲಾ, ಉಪಕಾರಿಯೂ ತನ್ನ ಹಿತಾಹಿತಗಳನ್ನು ಚಿಂತಿಸುವಾತನೂ ಸುಖಕ್ಷೇಮದಾಯಕನೂ ಎಂತಲೂ ನೆನಸಿ, ಮನಸ್ಸಿಗೆ ಖಚಿತ ಮಾಡಿ ಕೊಂಡನು.

ಈ ಕೀರ್ತನೆ ದುಃಖವನ್ನೂ ಗೋಳಾಟವನ್ನೂ ಬಿಡಲೊಲ್ಲದ ಹಠಬುದ್ಧಿಯುಳ್ಳವರನ್ನು ಗದರಿಸಿ ಖಂಡಿಸುತ್ತದೆ. ದಾವೀದನು ದುಃಖಕ್ಕೂ ಗೋಳಾಟಕ್ಕೂ ತಪ್ಪಿಸಿ ಕೊಳ್ಳ ಪ್ರಯತ್ನ ಮಾಡಿ ತಪ್ಪಿಸಿ ಕೊಂಡಂತೆ ನಾವು ಸಹಾ ತಪ್ಪಿಸಿ ಕೊಳ್ಳ ಬಹುದು, ಬೇಕು. ನಾವು ನಮ್ಮ ದುಃಖಾದಿಗಳನ್ನು ಸಾವಿರಾರು ಸಾರಿ ನೆನಸಿ ದುಃಖಿಸಿದರೂ ಪ್ರಯೋಜನವೇನೂ ಇಲ್ಲಾ. ನಮ್ಮ ಪ್ರಯತ್ನದಿಂದಾಗಲಿ, ಬೇರೊಬ್ಬರ ಸಹಾಯದಿಂದಾಗಲಿ ಕಷ್ಟ ನಿವಾರಣೆಯಾಗ ಬೇಕೆಂತ ನಾವು ಪೇಚಾಡಿದರೂ ಆಗದು. ಆದರೆ ನಮ್ಮ ದುಃಖವನ್ನು ಕರ್ತನಿಗೆ ಅರಿಕೆ ಮಾಡಿ, ವಿನಯಪೂರ್ವಕ ವಿಶ್ವಾಸದಿಂದ ಅದು ಯಾಕೆಂತ ಕೇಳಿ, ತಿಳುಕೊಂಡು, ಆತನ ಸಹಾಯವನ್ನೂ ಕರುಣೆಯನ್ನೂ ಬೇಡಿ ಕೊಂಡರೆ, ಸಹಾಯವಾಗುತ್ತದೆ. ಭಯಭ್ರಷ್ಟವಾಗ ಮಾಡಿ ಬಿಡುವ ಚಿಂತೆಗಳು ಬೇಡಿ ಕೊಳ್ಳುವವನನ್ನು ಬಿಟ್ಟು ಹೋಗುತ್ತವೆ. ಚಿಂತೆಗಳು ಬಿಟ್ಟ ಮೇಲೆ ದೇವರ ಕೃಪೆಯೂ ಕರುಣೆಯೂ ಮನಸ್ಸಿಗೆ ಖಚಿತವಾಗುವದು. ಇದು ಖಚಿತವಾಗುತ್ತಲೇ ದೇವರನ್ನು ಸಹಾಯವಾಗುವ ಮೊದಲಾದರೂ ಕೊಂಡಾಡ ಬಹುದು. ದೇವರನ್ನು ಕೊಂಡಾಡುವವನ ದುಃಖ ನಿಲ್ಲಲಾರದೆ ಹೋಗುವದು. ದುಃಖವು ಸಂತೋಷವೇ ಗೋಳಾಟವು ಕೊಂಡಾಟವೇ ಆಗುವದು.

೧. ನಂಬತಿಪ್ರಿಯ ದೇವರಲ್ಲಿ,
ಆತಂಗೆ ಎಲ್ಲ ಒಪ್ಪಿಸು!
ನಿನ್ನನ್ನು ಎಲ್ಲ ಕಷ್ಟದಲ್ಲಿ
ಆಶ್ಚರ್ಯವಾಗಿ ಕಾಯ್ವನು.
ಈ ಬಂಡೆಯಲ್ಲಿ ಮನೆಯು
ಕಟ್ಟಿದ್ದರೆಂದೂ ಬೀಳದು.

೨. ಅಘೋರ ಚಿಂತೆಯಿಂದ ಏನು,
ಓ ದುಃಖಭ್ರಾಂತ ಮನವೆ?
ನಾವನುದಿನ ಅತ್ತರೇನು?
ಈ ಶೋಕವೆಲ್ಲ ಯಾತಕೆ?
ಈ ರೀತಿ ಕಷ್ಟಭಾರವು
ಮತ್ತಷ್ಟು ಹೆಚ್ಚೇ ಹೆಚ್ಚೋದು.

ಪ್ರಾರ್ಥನಾಬೋಧಕಶಾಸ್ತ್ರಸಾರವು.

(೭ನೆ ಪುಸ್ತಕದ ೧೫೯ನೇ ಪುಟದಿಂದ ಮುಂದೆ.)

ದೇವರ ಪರಿಶುದ್ಧ ಗುಡಾರದಲ್ಲಿ ಯಾಜಕರು ಪರಿಶುದ್ಧ ಧೂಪವನ್ನು ಸುಡುವದಕ್ಕಾಗಿ ಯಾವದೊಂದು (ಅನ್ಯ) ಬೆಂಕಿಯನ್ನು ತೆಗಿಯದೆ, ದೇವರ ಬಲಿಪೀಠದ ಕೆಂಡಗಳಿಂದ ತೆಗಿಯ ಬೇಕಾಯಿತು. ನಾದಬ ಅಬೀಹು ಆ ಪ್ರಕಾರ ಮಾಡದೆ, ಅನ್ಯ ಬೆಂಕಿಯನ್ನು ತೆಗೆದ್ದರಿಂದ ದೇವರ ಸನ್ನಿಧಿಯಿಂದ ಬೆಂಕಿ ಹೊರಟು, ಅವರನ್ನು ದಹಿಸಿ ಬಿಟ್ಟಿತು. ಹಾಗೆಯೇ ನಮ್ಮ ಕಡೆಯಿಂದ ಸಹಾ ದೇವರಿಂದ ಶುದ್ಧೀಕೃತವೂ ದೇವರ ಆತ್ಮದಿಂದ ಹುಟ್ಟಿ ಬೆಳದ್ದೂ ಆಗಿರುವಂಥಾದ್ದಲ್ಲದೆ ಬೇರೇನೂ ದೇವರ ಪರಿಶುದ್ಧ ಸನ್ನಿಧಿಗೂ ದೇವರ ರಾಜ್ಯಕ್ಕೂ ಸೇರದು, ಆಗದು. ನಮ್ಮ ಸ್ವಭಾವ ಆತನಿಗೆ ಅನ್ಯವೂ ಅಪವಿತ್ರವೂ ಅಸಹ್ಯವೂ ಆಗಿರುತ್ತದೆ. "ಮಾಂಸವು ಯಾವದಕ್ಕೂ ನಿಷ್ಪ್ರಯೋಜಕವೇ." "ಮಾಂಸಕ್ಕೆ ಬಿತ್ತುವವನು ಮಾಂಸದಿಂದ ಲಯವನ್ನು ಪೈರಾಗಿ ಹೊಂದಿ ಕೊಯ್ಯುವನು." "ಮಾಂಸವೂ ರಕ್ತವೂ ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದವು." ಆತ್ಮವು ಮಾತ್ರ ಬಾಳುವಂಥಾದ್ದೂ ಬದುಕಿಸುವಂಥಾದ್ದೂ ಆಗಿದೆ. ದೇವರ ಆತ್ಮದಿಂದ ನಡಿಸಲ್ಪಡುವವರು ಮಾತ್ರ ದೇವರ ಮಕ್ಕಳಾಗಿದ್ದಾರೆ. ಆದರೆ ದೇವರ ಆತ್ಮ ಪ್ರಾರ್ಥನೆಯಲ್ಲಿ ಲೋಕಕ್ಕೆ ವಿಮುಖವಾಗಿ ದೇವರಿಗೆ ಅಭಿಮುಖವಾಗಿ ದೇವರನ್ನು ಹುಡುಕುವ ಆತ್ಮದಲ್ಲಿ ಮಾತ್ರ ವ್ಯಾಪಿಸಿ, ವಾಸ ಮಾಡಿ ಯತ್ನೈಸುವಂಥಾದ್ದಾಗುತ್ತದೆ. ಆದದರಿಂದ ಪ್ರಾರ್ಥನೆ ಮಾಡದವರಿಗೆ ಜೀವವೂ ಪರಿಶುದ್ಧಾತ್ಮನ ಐಕ್ಯವೂ ತಂದೆಯ ಪ್ರೀತಿಯೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೊರಕದು. ಯಾಕಂದರೆ ಬೇಡುವವನಿಗೆ ಮಾತ್ರ ಕೊಡಲ್ಪಡುವದು; ಹುಡುಕುವವನಿಗೆ ಮಾತ್ರ ಸಿಕ್ಕುವದು; ಬಾಗಲಿಗೆ ತಟ್ಟುವವನಿಗೆ ಮಾತ್ರ ತೆರೆಯಲ್ಪಡುವದು.

ಹಾಗಾದರೆ ಪ್ರಾರ್ಥನೆಯಿಲ್ಲದೆ ದಿವ್ಯ ಕೃಪೆಯೂ ಜೀವವೂ ದೊರಕದಿರಲಾಗಿ ಅನೇಕರು ಯಾಕೆ ಪ್ರಾರ್ಥಿಸುವದಿಲ್ಲ? ಮತ್ತು ಪ್ರಾರ್ಥಿಸುವವರಲ್ಲಿ ಅನೇಕರು ಯಾಕೆ ಸರಿಯಾಗಿ ಪ್ರಾರ್ಥನೆ ಮಾಡುವದಿಲ್ಲ?—ತನಗಾಗಿ ಮಾತ್ರ ಬದುಕುವ ಯಾವನಾದರೂ ಕರ್ತನಿಗಾಗಿ ಬದುಕನು; ತನಗೆನೇ ಸೇವೆ ಮಾಡುವವನು ಕರ್ತನಿಗೆ ಸೇವಿಸಲಾರನು; ತನ್ನನ್ನೇ ದೇವರೆಂಬ ಹಾಗೆ ಲಕ್ಷಿಸಿ ಲೋಕವನ್ನೂ ಲೋಕದ ಅಪದೈವಗಳನ್ನೂ ಭಜಿಸುವವನು ಕರ್ತನನ್ನು ಮೆಚ್ಚಿಸಿ ಭಜಿಸಲಾರನು.

ಪ್ರಿಯ ಸ್ನೇಹಿತರೇ! ಪ್ರಾರ್ಥನೆ ಮಾಡದವರಾಗಿ ನೀವು ಸುಖವಾಗಿರ ಬಹುದೋ? ನಿಮಗೆ ನಿಜ ಸುಖವುಂಟೋ? ಸುಖವಿದ್ದರೆ, ಅಸಮಾಧಾನವ್ಯಾಕೆ? ಯಾಕೆ ಒಳಗಣ ಅಸಮಾಧಾನವನ್ನು ಲೋಕದ ಭೋಗ, ಖುಷಾಲು ಮುಂತಾದ್ದರಿಂದ ಪರಿಹರಿಸಿ ಕೊಳ್ಳ ಬೇಕೆಂತ ಲೋಕದಲ್ಲಿ ಮುಣಿಗಿ ಪೇಚಾಡುತ್ತಾ ಇದ್ದೀರಿ? ಪರಸ್ಪರ ಸಮಾಧಾನವನ್ನೂ ಪ್ರೀತಿಯನ್ನೂ ಕೆಡಿಸಿ, ಸುಖಕ್ಷೇಮಗಳೆಂಬ ಹಗಲನ್ನು ಓಡಿಸಿ ಬಿಟ್ಟು, ಜಗಳ ಹೊಡದಾಟ ಬೈದಾಟ ಇತ್ಯಾದಿಗಳು ರಾತ್ರಿಯ ಕತ್ತಲೆಯಂತೆ ಗಂಡ ಹೆಂಡರಲ್ಲಿಯೂ ಕುಟುಂಬಗಳಲ್ಲಿಯೂ ಕಂಡು ಬರುವ ಕಾರಣವೇನು? ದೇವರ ವಿಷಯವೂ ಪರಗತಿಯ ವಿಷಯವೂ ಕೇಳ ಮನಸ್ಸಿಲ್ಲದವರಾಗಿರುವದೂ, ಕ್ರೈಸ್ತರ ವಿಶ್ವಾಸವು ಅಬದ್ಧವೆಂತ ನಿಮ್ಮನ್ನು ನೀವೇ ಮೋಸಗೊಳ್ಳಿಸುವಂಥಾದ್ದೂ, ಅಲ್ಪ ವಿಶ್ರಾಂತಿಗಾಗಿ ನಿಮ್ಮ ಮನಸ್ಸಾಕ್ಷಿಯನ್ನು ವಂಚಿಸಿ ಸಂತೈಸಿ ಕೊಳ್ಳುವದೂ ಯಾಕೆ? ಅಯ್ಯೋ! ನೀವು ಪ್ರಾರ್ಥನೆ ಮಾಡದೆ ದೇವರಿಗೆ ದೂರವಾದಿರಿ. ಹೀಗಿರುವದರಿಂದ ಎಲ್ಲಾ ಸುಖ ಸಮಾಧಾನದ ಬುಗ್ಗೆ ನಿಮಗೆ ಬತ್ತಿ ಹೋದಂತಾಯಿತು. ನಿಮ್ಮ ಹೃದಯ ಬರಿದಾಗಿ ನೊಂದು ಕೊಂಡ ಸಮಯದಲ್ಲಿಯೂ, ನಿಮ್ಮ ಎದೆಯಲ್ಲಿ ಕೀವು ಕಟ್ಟಿದ ಕುರುಗಳಂತೆ ಚಿಂತೆ ವ್ಯಸನ ಶೋಕಗಳು ಕಾಡುವ ಸಮಯದಲ್ಲಿಯೂ ನಿಮಗೆ, ನಾವು ಗತಿಯೂ ಆಶೀ

ರ್ವಾದವೂ ಇಲ್ಲದವರೇ ಎಂಬ ಎಚ್ಚರವೂ ಮನಃಸಾಕ್ಷಿಯ ಶಬ್ದವೂ ಹುಟ್ಟಲಿಲ್ಲವೋ? ಇದೆಲ್ಲ ದೇವರ ಕರೆಯುವ ಶಬ್ದವೇ. ನಿಮ್ಮಲ್ಲಿಯ ಆತ್ಮವು ಅನೇಕಾವರ್ತಿ ಹಶಿವೆಯಿಂದ ಕೂಗಿದ ಹಾಗಾಯಿತಲ್ಲ! ಎಂದಿಗೂ ನಿಜ ಸಮಾಧಾನ ಕೊಡದಂಥಾ, ಕಡೆಗೆ ನಿತ್ಯ ಮರಣಕ್ಕೆ ಕಾರಣವಾಗುವಂಥಾ ಈ ಲೋಕದ ವಿಷಯಭೋಗಗಳನ್ನು ಮಾಡುವವರಾಗಿ ಆತ್ಮವನ್ನು ಪೋಷಣೆಯಿಲ್ಲದೆ ಬೀಳಗೊಡುತ್ತೀರೋ? ದಾಟಿ ಹೋದ ನಿಮ್ಮ ಬಾಲ್ಯಪ್ರಾಯದ ಸುಖವನ್ನು ನೆನಸಿರಿ. ಅಂದು ನೀವು ಬೆಳಿಗ್ಯೆ ಎಚ್ಚತ್ತು ಏಳುವಾಗಲೇ ದೇವರಿಗೆ ಸ್ತೋತ್ರ ಮಾಡಿ ಆತನ ಆಶೀರ್ವಾದವನ್ನು ಬೇಡಿ ಕೊಂಡಾಗಲೂ, ಸಂಜೆಗೆ ಮಲಗಿ ಕೊಳ್ಳುವ ವೇಳೆಯಲ್ಲಿ ಮಮತೆಯುಳ್ಳ ತಾಯಿಯ ಹತ್ತರ ನೀವು ಕೈಗಳನ್ನು ಜೋಡಿಸಿ ಪ್ರಿಯ ರಕ್ಷಕನಿಗೆ ಪ್ರಾರ್ಥಿಸಿದಾಗಲೂ ನೀವು ಭಾಗ್ಯವಂತರಾಗಿದ್ದಿರಲ್ಲವೋ? ಇಂದಿನ ಸುಖಕ್ಕಿಂತ ಅಂದಿನದು ಹೆಚ್ಚಾಗಿದ್ದಿಲ್ಲವೋ? ದೃಢೀಕರಣದಲ್ಲಿ ನಿಮ್ಮನ್ನು ಕರ್ತನಿಗೆ ಒಪ್ಪಿಸಿ ಕೊಟ್ಟು, ಅವನ ಆಶೀರ್ವಾದ ಬೇಡಿ ಕೊಂಡಾಗ, ನಿಮ್ಮಲ್ಲಿ ದಿವ್ಯ ಸಮಾಧಾನವು ಉಂಟಾಗಲಿಲ್ಲವೋ? ಅದೀಗ ಎಲ್ಲಿ ಹೋಯಿತು? ಪಾಪವು ಅದನ್ನು ಅಪಹಾರ ಮಾಡಿ ಬಿಟ್ಟಿತು. ನೀವು ಪ್ರಾರ್ಥನೆ ಮಾಡದವರಾದ್ದರಿಂದ ಕರ್ತನು ತನ್ನ ಆಶೀರ್ವಾದವನ್ನು ನಿಮ್ಮಿಂದ ತೆಗೆಯ ಬೇಕಾಯಿತು. ಆದರೆ ತಪ್ಪಿ ಹೋದ್ದನ್ನು ಹುಡುಕುವದಕ್ಕಾಗಿ ಯೇಸು ಭೂಲೋಕಕ್ಕೆ ಪ್ರತ್ಯಕ್ಷವಾದನು. “ಹುಡುಕಿರಿ, ಆಗ ನಿಮಗೆ ಶಿಕ್ಕುವದು; ಬೇಡಿ ಕೊಳ್ಳಿರಿ, ಆಗ ನಿಮಗೆ ಕೊಡಲ್ಪಡುವದು.” ಆದರೆ ಹ್ಯಾಗೆ ಹುಡುಕಿ ಬೇಡಿ ಕೊಳ್ಳ ಬೇಕು?

(ಮುಂದೆ ಸಾಗಿಸಲ್ಪಡುವದು.)

ನನ್ನ ಬಿನ್ನಹವನ್ನು ಹೊಂದುತ್ತೇನೆ ಎಂಬ ಪೂರ್ಣ ನಂಬಿಕೆಯಿಂದ ಪ್ರಾರ್ಥಿಸ ಬೇಕು.

ಒಬ್ಬ ಚಿಕ್ಕ ಹುಡುಗಿ ಯೇಸುವಿಗೆ ಪ್ರಾರ್ಥಿಸಿ, ಆತನು ತನಗೆ ಹೊಸ ಹೃದಯವನ್ನು ಕೊಟ್ಟು, ತನ್ನನ್ನು ಎಲ್ಲಾ ಪಾಪದಿಂದ ಬಿಡಿಸಿ, ಶುದ್ಧ ಮಾಡಿ, ದೇವರ ಮಗುವೂ ಆತನ ಮಂದೆಯ ಕುರಿಮರಿಯೂ ಆಗ ಮಾಡ ಬೇಕೆಂದು ಬೇಡಿ ಕೊಂಡಳು. ಆವಳು ಪ್ರಾರ್ಥಿಸಿದ ಬಳಿಕ ಯಾರೋ ಅವಳನ್ನು—ನೀನು ಈಗ ಪ್ರಾರ್ಥಿಸಿ ಬೇಡಿ ಕೊಂಡದನ್ನು ಹೊಂದುವಿಯೋ? ಹೊಂದುತ್ತೇನೆಂತ ನಂಬುತ್ತೀಯೋ? ಎಂದು ಕೇಳಿದ್ದಕ್ಕೆ, ಅವಳು—ನಾನು ಹೊಂದದೆ ಹೋದೇನೋ? ನನ್ನ ಪ್ರಿಯ ರಕ್ಷಕ ಕೊಡದೆ ಹೋದಾನೋ? ನಾನು ಬೇಡಿದ್ದನ್ನು ಹೊಂದುತ್ತೇನೆ; ಆತನು ಕೇಳಿ, ಕೊಡುತ್ತಾನೆ, ನಿಶ್ಚಯವಾಗಿ ಕೊಡುತ್ತಾನೆ ಎಂಬ ಪ್ರತ್ಯುತ್ತರ ಕೊಟ್ಟಳು. ಆ ಹುಡುಗಿ ಪ್ರಾರ್ಥಿಸಿ ಬೇಡಿದ್ದನ್ನೇ ತನ್ನ ಪ್ರಾರ್ಥನೆಯಲ್ಲಿ ಬೇಡಿ ಕೊಂಡ ಪ್ರಾಯಸ್ಥನೊಬ್ಬನು ಅದೇ ಪ್ರಶ್ನೆಗೆ ಉತ್ತರ ಕೊಡ ಬೇಕಾದಾಗ, ಅವನು ಹೇಳಿದ್ದೇನಂದರೆ: ನಾನು ಬೇಡಿ ಕೊಂಡದ್ದು ನನಗೆ ಶಿಕ್ಕುತ್ತದೆ ಎಂಬದು ನನಗೆ ಹ್ಯಾಗೆ ಗೊತ್ತಿರ ಬಹುದು? ಶಿಕ್ಕುವದು ಎಂತ ನಾನು ನಂಬಿದರೆ ಶಿಕ್ಕೀತೇ? ಜನರು ನಂಬುವಂಥಾದ್ದೆಲ್ಲಾ ಆಗುತ್ತದೋ?

ಯೋಹಾನನು ತನ್ನ ಒಂದನೇ ಪತ್ರಿಕೆಯ ೫, ೧೪. ೧೫ರಲ್ಲಿ ಹೇಳಿರುವದೇನಂದರೆ: “ಆತನ ಕಡೆಗೆ ನಮಗಿರುವ ಧೈರ್ಯವು ಏನಂದರೆ: ಆತನ ಚಿತ್ತದ ಪ್ರಕಾರ ನಾವು ಯಾವದನ್ನಾದರೂ ಬೇಡಿ ಕೊಂಡರೆ, ನಮಗೆ ಕಿವಿ ಕೊಡುತ್ತಾನೆ. ಮತ್ತು ನಾವು ಯಾವದನ್ನಾದರೂ ಬೇಡಿ ಕೊಂಡರೆ, ನಮಗೆ ಕಿವಿ ಕೊಡುತ್ತಾನೆಂತ ನಾವು ತಿಳುಕೊಂಡರೆ, ಆತನಿಂದ ಬೇಡಿ ಕೊಂಡ ಬಿನ್ನಹಗಳನ್ನು ಹೊಂದಿದ್ದೇವೆಂದು ಬಲ್ಲೆವು.” ಆ ಪ್ರಾಯಸ್ಥನಂಥ ನಂಬಿಕೆಯಿಲ್ಲದ ಪ್ರಾರ್ಥನೆ ಯೋಹಾನನ ಮಾತಿಗೆ ಒಪ್ಪುವದೋ? ಆ ಹುಡುಗಿಯ ಧೈರ್ಯವು ಅದಕ್ಕೆ ಒಪ್ಪುವದೋ? ಎಷ್ಟೋ ಮಂದಿ ಪ್ರಾಯಸ್ಥರು

ಪ್ರಾರ್ಥಿಸುತ್ತಿರುತ್ತಾರೆ; ಆದರೆ ತಾವು ಪ್ರಾರ್ಥಿಸಿ ಬೇಡಿ ಕೊಳ್ಳುವಂಥಾದ್ದನ್ನು ಹೊಂದಲಿಕ್ಕಿಲ್ಲಾ ಎಂಬ ಹಾಗೆ ಪ್ರಾರ್ಥಿಸುತ್ತಾರೆ. ಹೀಗೆ ಪ್ರಾರ್ಥಿಸುವಂಥವರು ಆ ಚಿಕ್ಕ ಹುಡುಗಿಯ ಮುಂದೆ ನಾಚಿ ಕೊಳ್ಳ ತಕ್ಕದ್ದು.

ಪಾಪ ಪ್ರಲಾಪ.

ರಾಗ ಕಲ್ಯಾಣಿ.] [ಅಟತಾಳ.

ಪಲ್ಲವಿ.

ಕಾಪಾಡುವರಿಲ್ಲವೋ—ಮಹಾನುಭಾವ
ಪಾಪಹರನ ಕಾಣೆನೋ!
ಕೋಪಕ್ಕೀಡಾದೆನೋ ಶಾಪಭರಿತನಯ್ಯೋ!
ಕೂಪನರಕದಿಂದಯಾಪತ್ಥರಿಸ ಕಾಣೆ.

ಚರಣಗಳು.

೧. ಜನ್ಯದುರಿತನಾದೆನೋ—ಗರ್ಭದಿ ಪುಟ್ಟಿ
ಅನ್ಯ ಕೀಟವನಾದೆನು.
ಧನ್ಯರಹಿತನೆಂದು ಮನ್ಯುಲಾಂಛಿತನಾದೆ,
ಇನ್ನ್ಯಾರ ಕಾಣೆನೊ ವಿನ್ಯಾಸ ಕರುಣಾತ್ಮ! ಕಾಪಾ—

೨. ಮಾಡ ಬಾರದ ಕೃತ್ಯವು—ಮಾಡುವೆನೆಂದು
ಕೂಡಲೆಣಿಸಿ ಮಾಡಿದೆ.
ಕಾಡುಗುಣದ ಹಾನಿ ಪೀಡೆ ಸಹಿಸಲಾರೆ,
ಕಾಡಿತು ಹೃದಯಾಂತ, ಹೂಡಿತು ಮನಸಾರ. ಕಾಪಾ—

೩. ದಿಕ್ಕು ಕಾಣದೆ ಬಂದೆನೋ—ಯನ್ನಯ ದೇವ
ಹೊಕ್ಕೆ ಪಾದವ ನಿನ್ನನೂ,
ಸೊಕ್ಕಿನಿಂದಲೆ ಕೂಡಿ ಎಕ್ಕಸನರನಾದೆ,
ಅಕ್ಕರ ಸೊಬಗಿಂದ ದಕ್ಕಿಸೊ ಕೃಪೆ ವರ. ಕಾಪಾ—

೪. ಬಿಟ್ಟೆ ಲೋಕವ ದೂರದಿ—ನಿನ್ನಳಿ ಸಾರಿ,
ಇಟ್ಟೆ ಶ್ರದ್ಧೆಯು ನಿನ್ನಲಿ.
ತಟ್ಟನೆ ಶೆಳದೆನ್ನ ನೆಟ್ಟನೆತನದಲ್ಲಿ
ಕೊಟ್ಟು ನಿನ್ನಭಯವ ಮುಟ್ಟಿಸೊ, ಹರಣಾಂತ! ಕಾಪಾ—

೫. ಮಾಯಜಾಲಕೆ ಶಿಕ್ಕಿದೆ—ನಿತ್ಯವು ನಾನು
ಸಾಯಲೋಕವ ನೋಡಿದೆ.
ಕಾಯಕಷ್ಟವ ಮಾಡಿ ನ್ಯಾಯಮಾರ್ಗವ ಕಾಣೆ;
ಛಾಯೆ ನಿನ್ನದರಲ್ಲಿ ಲೀಯ್ಯ ಮಾಡಿಸೊ, ದೇವಾ! ಕಾಪಾ—

ಮನೇ ಸಾಮಾನಿನ ವಿಷಯ.

ನಿನ್ನ ಮನೆಗೆ ಸಾಮಾನು ತಂದ್ಹಾಕ ಬೇಕೆಂತಾ ನಿನಗೆ ಮನಸ್ಸಾದರೆ, ನಿನ್ನ ಕೈಯಲ್ಲಿದ್ದ ರೊಖ್ಖ ವನ್ನು ಸ್ವಲ್ಪವಾಗಲಿ ಬಹಳವಾಗಲಿ ಎಲ್ಲಾ ವೆಚ್ಚ ಮಾಡಿ ಬಿಡ ಬೇಡ. ಈ ಒಡವೆ ಚೆಲೋದು! ಇದು ಬಹಳ ಅಗ್ಗ ಎಂಥೇಳಿ ನಿನಗೆ ಅವಶ್ಯವಲ್ಲದ್ದನ್ನು ಕೊಂಡು ಕೊಳ್ಳ ಬೇಡ. ಅನವಶ್ಯವಾದ ಸರಕು ಅಗ್ಗವಾಗಿದ್ದರೇನು? ಪ್ರಿಯವಾಗಿದ್ದರೇನು? ಪ್ರಾರಂಭಕ್ಕೆ ನಿನಗೆ ಅತ್ಯಗತ್ಯವಾದ ಸಾಮಾನು ಮಾತ್ರ ಕೊಂಡುಕೋ. ನಿನ್ನ ಮನೆಗೆ ಏನೇನು ಬೇಕೋ ನಿನಗೆ ಅನುಭವದಿಂದಲೇ ತಿಳಿದು ಬರುವದು. ಕೈಯಲ್ಲಿದ್ದ ರೊಖ್ಖವನ್ನೆಲ್ಲಾ ವೆಚ್ಚ ಮಾಡಿದ ಮೇಲೆ, ನನಗೆ ಬೇಕಾಗದ್ದು ಬಹಳ ಕೊಂಡು ಕೊಂಡೆ; ಈಗ ಬೇಕಾದ್ದು ಕೊಳ್ಳುವದಕ್ಕೆ ಹಣವಿಲ್ಲವಲ್ಲಾ ಎಂತ ಮತ್ತೆ ನಿನಗೆ ಪಶ್ಚಾತ್ತಾಪವಾದೀತು. ನಿನ್ನ ಸ್ಥಿತಿಗೆ ತಕ್ಕವಾಗಿ ಬೇಕಾದ್ದೆಲ್ಲಾ ಕೊಳ್ಳುವದಕ್ಕೆ ನಿನಗೆ ಸಾಕಷ್ಟೂ ಅಥವಾ ಸಾಕಾಗುವದಕ್ಕಿಂತ ಹೆಚ್ಚೂ ಹಣವಿದ್ದರೆ, ಎಲ್ಲಾ ಖರ್ಚು ಮಾಡ ಬೇಕೆಂತಾ ನೆನಸ ಬೇಡ. ಮೊದಲು ಬಡತನದಲ್ಲಿ ಶುರು ಮಾಡು. ಕೈಯಲ್ಲಿ ನಾಲ್ಕು ಕಾಸು ಆದ ಮೇಲೆ ಸ್ವಲ್ಪ ಹೆಚ್ಚಿನ ಸ್ಥಿತಿಯಲ್ಲಿ ಶೇರಿ ಸುಖ ಪಡುವದು ಸುಲಭ ಮತ್ತು ಒಳ್ಳೇದು. ಆದರೆ ಮತ್ತೇ ಬಡ ಸ್ಥಿತಿಯಲ್ಲಿ ಶೇರುವದು ಎಷ್ಟು ನೋವು ಕೊಡುವದು! ಒಂದು ಮನೆತನ ಬಡತನದ ಸ್ಥಿತಿಯಲ್ಲಿ ನಡಿಸುವದರಲ್ಲಿಯೂ ಶೋಭೆಯನ್ನೂ ಸೌಂದರ್ಯವನ್ನೂ ವಿವೇಕವನ್ನೂ ತೋರಿಸ ಬಹುದು. ಇದಕ್ಕೆ ಸಜ್ಜನರು ಮೆಚ್ಚುತ್ತಾರೆ. ದೊಡ್ಡವರು ಅನ್ನಿಸಿ ಕೊಳ್ಳ ಬೇಕೆಂದು ತಮ್ಮ ಆದಾಯ ಮಿಾರಿ ಖರ್ಚು ಮಾಡುವವರು ಹ್ಯಾಗೂ ಸಾಲ ಮಾಡ ಬೇಕಾಗುವದರಿಂದ ಪರರ ಕಷ್ಟದಿಂದ ಬದುಕುವವರೇ. ಹೊರಗಿನ ಬಡಾಯಿಗಿಂತ ಒಳಗಿನ ಲಡಾಯಿ ಬಹು ಕಠಿಣವೇ. ಈ ವ್ಯರ್ಥವಾದ ಕೆಟ್ಟ ಬಡಾಯಿ ಆತ್ಮವಂಚನೆಯಲ್ಲದೆ ಮತ್ತೊಂದಲ್ಲಾ. ಅಂಥವರಿಗೆ ಸಜ್ಜನ ಸ್ನೇಹಿತರೂ ಶಿಕ್ಕರು; ನಾಲ್ಕು ಮಂದಿಯ ಮಧ್ಯದಲ್ಲಿ ಅವನನ್ನು ಅಪ್ಪಂತ ಗೃಹಸ್ಥನೆಂದು ಯಾರೂ ಕರಿಯರು.

ಲೇಖನ.

ಅಯ್ಯಾ,

ನಮ್ಮ ಬೆಟ್ಟಗೇರಿಯಲ್ಲಿ ಅನ್ಯ ಜನರಲ್ಲಿಬ್ಬರು ಮಿಶ್ಯನ್ ಕಾರ್ಯಕ್ಕೆ ಧರ್ಮಸಹಾಯಕರಾದರು. ಇದು ನಮ್ಮೆಲ್ಲರಿಗೆ ಸಂತೋಷಕರ ಮಾತಾಗಿರುವ ಕಾರಣ, ಈ ಸಂಗತಿಯನ್ನು ಕುರಿತು ನಾನು ಕೆಲವು ವಳಿಗಳನ್ನು ಬರೆದು, ತಮ್ಮ ಕಡಿಗೆ ರವಾನೆ ಮಾಡಿರುತ್ತೇನೆ. ಇದನ್ನು ತಾವು ತಮ್ಮ ಪ್ರಿಯ ಸಭಾಪತ್ರದಲ್ಲಿ ದಯ ಮಾಡಿ ಶೇರಿಸುವಿರೆಂದು ಕೋರುತ್ತೇನೆ.

ಈ ಊರ ಅನ್ಯರಲ್ಲಿ ನಮ್ಮ ಪ್ರಿಯ ಮಿತ್ರರೂ ಅತಿ ವಹಿವಾಟದಾರರೂ ಆಗಿರುವಂಥ ಗೃಹಸ್ಥರಿಬ್ಬರು ವಾಡಿಕೆಯಾಗಿ ಮೊನ್ನಿನ ದಿವಸ ನನ್ನ ಹತ್ತರ ಬಂದಾಗ, ನಾನು ಅವರಿಗೆ, ದೇವರ ವಾಕ್ಯವನ್ನೂ ಮಿಶ್ಯನ್ ಕಾರ್ಯದ ಧರ್ಮಾರ್ಥವನ್ನೂ ಕುರಿತು ಸಂಭಾಷಣೆ ಮಾಡಿ ಬೋಧಿಸಿದೆನು. ಆಗ ಅವರು ಇದರ ವಿಷಯ ಸಂತೋಷ ಪಟ್ಟು, ಪ್ರೀತ್ಯಾಸಕ್ತಿಯಿಂದ—ನಾವು ಈ ಧರ್ಮಾರ್ಥ ಕೆಲಸಕ್ಕೆ ಏನಾದರೂ ಧರ್ಮದಾನಾ ಮಾಡುವಂಥಾದ್ದು ಉಚಿತವಾಗಿದೆ; ಆದ ಕಾರಣ ನಾವಿಬ್ಬರು ಕೂಡಿ, ದರ ವರುಷಾ ಒಬ್ಬರು ೧೫ ಇನ್ನೊಬ್ಬರು ೧೦, ಹೀಗೆ ೨೫ ರೂಪಾಯಿ ಕೊಡುತ್ತೇವೆಂದು ಪ್ರೀತಿಪೂರ್ವಕ ಹೇಳಿ, ಮಾರಣೇ ದಿವಸ ಸದರಿ ರೂಪಾಯಿಗಳನ್ನು ಇಬ್ಬರು ತಂದು ಕೊಟ್ಟರು. ಪ್ರಿಯರೇ! ನಾವು ಇದು ಅಲ್ಪವೆಂದೆಣಿಸಲಾಗದು. ಅವರು ಅನ್ಯರಾಗಿದ್ದು, ಈ ಕಾರ್ಯಕ್ಕೆ ಇಷು

ಪ್ರೀತಿ ಸಹಾಯಕರಾದ್ದು ಅಪೂರ್ವ ಮತ್ತು ಹೆಚ್ಚಿನ ಮಾತು ಆಗಿರುವದು. ಇದಕ್ಕೋಸ್ಕರ ಕರ್ತನು ಅವರನ್ನು ಪ್ರತಿಯಾಗಿ ಆಶೀರ್ವದಿಸಿ, ತನ್ನ ರಾಜ್ಯದಲ್ಲಿ ಶೇರಿಸುವಂತೆ ಮಾಡುವಾತನಾಗಲಿ!

ಪ್ರಿಯರೇ! ಅನ್ಯ ಜನರ ಈ ದಾನವು ಕ್ರೈಸ್ತರಾದ ನಮ್ಮನ್ನು ಆಸಕ್ತಿ ಪಡಿಸ ತಕ್ಕಂಥಾದ್ದಾಗಿರುತ್ತದೆ. ಹಂಗಿಗರಾದ ನಾವು ಇದಕ್ಕೆ ಎಷ್ಟು ಹೆಚ್ಚಾಗಿ ಕೊಡ ಬೇಕೆಂಬದು ಸಹಜ. ಇದನ್ನು ಮಾಡೋದಕ್ಕೆ ಕರ್ತನು ತನ್ನ ಆತ್ಮದಿಂದ ನಮ್ಮೆಲ್ಲರನ್ನು ಪ್ರೇರಿಸಿ ಆಸಕ್ತಿ ಪಡಿಸುವಾತನಾಗಲಿ!

೧೮೭೫ ಜೂಲೈ ತಾರೀಖು ೨೬, ಬೆಟ್ಟಗೇರಿಯಿಂದ.

ಇಷ್ಟಕ್ಕೆ ತಮ್ಮ
ಪತ್ರ ಓದುವವನೊಬ್ಬನು.

ಅವಿಧೇಯತ್ವವು.

ಒಬ್ಬ ಪಾದ್ರಿಧೊರೆಗೆ ಜೇಮ್ಸನೆಂಬ ಹೆಸರುಳ್ಳ ಒಬ್ಬನೇ ಮಗನಿದ್ದನು. ಅವನ ಮನೆಯ ಹತ್ತರ ಒಂದು ಚೆರಿಸ್ ಮರವಿತ್ತು. ಅದು ಹಣ್ಣುಕಾಯಿಗಳಿಂದ ತುಂಬಿತ್ತು. ಆ ಮರವನ್ನು ನೋಡುವವರಿಗೆ ಆಶೆ ಹುಟ್ಟುತ್ತಿತ್ತು. ತಂದೆ ತನ್ನ ಮಗನನ್ನು ಬಿಟ್ಟು ದೇವಾಲಯಕ್ಕೆ ಹೋಗ ಬೇಕಾಯಿತು. ಆದ್ದರಿಂದ ತಂದೆ ಮಗನು ಈ ಹೊತ್ತು ಆ ಮರದ ಹತ್ತರ ಹೋಗಿ ಹಣ್ಣುಗಳನ್ನು ಉದುರಿಸಿ, ಸಬ್ಬತ್ತನ್ನು ಮಿಾರಿಯಾನು ಎಂತ ತಿಳಿದು, ತಾನು ಹೊರಡುವದಕ್ಕಿಂತ ಮುಂಚೆ ಜೇಮ್ಸನನ್ನು ಕರದು, ನನ್ನ ಮಗನೇ, ಈ ಹೊತ್ತಿನ ದಿನ ಯಾವದೆಂತ ನಿನಗೆ ಗೊತ್ತುಂಟೋ? ಎಂತ ಕೇಳಿದನು.

ಜೇ. ಹೌದು, ಈ ಹೊತ್ತು ಸಬ್ಬತ್ತು ದಿನವಾಗಿದೆ.

ತಂ. ಹಣ್ಣಾಗಿರುವಂಥಾ ಚೆರಿಸನ್ನು ಉದುರಿಸಿ ತೆಗೆಯಲಿಕ್ಕೆ ನಾಳೇ ವರೆಗೆ ಕಾಯುವಿಯೋ?

ಜೇ. ಆದೀತು, ತಂದೆಯೋ!

ತಂ. ನನ್ನ ಪ್ರಿಯ ಹುಡುಗನೇ! ಇದು ದೇವರ ದಿನವೆಂದು ನೆನಪು ಮಾಡಿಕೋ. ನೀನು ಆ ಮರದ ಹತ್ತರ ಹೋಗ ಬೇಡ. ನಿನ್ನ ತಂದೆಯ ಅಪ್ಪಣೆಯನ್ನು ಮರತು ಬಿಡದಿರು.

ಜೇ. ಮರತು ಬಿಡೆನು.

ತದನಂತರ ತಂದೆಯು ಮನೆಯನ್ನು ಬಿಟ್ಟು ದೇವಾಲಯಕ್ಕೆ ಹೋದನು. ಹುಡುಗನ ತಾಯಿಯು ಏನೋ ಒಂದು ಕೆಲಸದ ನಿಮಿತ್ತ ಬೇರೊಂದು ಕೊಠಡಿಯಲ್ಲಿದ್ದಳು. ಹುಡುಗನೊಬ್ಬನೇ ತೆರೆದಿದ್ದಂಥಾ ಕಿಟಕಿಯ ಹತ್ತರ ನಿಂತು ಕೊಂಡು, ಕಣ್ಣಿಗೆ ಬಹಳ ಇಂಪಾಗಿ ಇದ್ದಂಥಾ ಹಣ್ಣುಗಳನ್ನೇ ನೋಡುತ್ತಾ ಇದ್ದನು. ಹೀಗೆ ನೋಡುತ್ತಿರಲಾಗಿ ಮನಸ್ಸಿನಲ್ಲಿ ಶೋಧಕನು ಆಶೆಗೆ ಬಲ ಕೊಟ್ಟು ಅಂದದ್ದೇನಂದರೆ: "ಹಣ್ಣಾಗಿದೆಂದು ನಿನಗೆ ಕಾಣುವದಿಲ್ಲವೋ? ಅವುಗಳಲ್ಲಿ ಕೆಲವು ನಿನಗೆ ಶಿಕ್ಕಿದ್ದರೆ ಆಗುತ್ತಿತ್ತಲ್ಲವೋ? ಅದಕ್ಕೆ ಅಡ್ಡಿ ಏನು? ತಾಯಿ ಇಲ್ಲವಲ್ಲಾ! ನಿನ್ನನ್ನು ನೋಡುವವರಿಲ್ಲ. ತಂದೆಗೆ ಹ್ಯಾಗೂ ತಿಳಿಯಲಿಕ್ಕಿಲ್ಲ. ನೀನು ಯಾಕೆ ಹೋಗಿ ಕೆಲವು ತೆಗೆದು ಕೊಂಡು ಬರುವದಿಲ್ಲ?"

ಜೇಮ್ಸನು ಈ ಶಬ್ದಕ್ಕೆ ಕಿವಿ ಕೊಟ್ಟು, ಆ ಹಣ್ಣುಗಳನ್ನು ದೃಷ್ಟಿಸಿ, ಅವುಗಳಲ್ಲಿ ಕೆಲವನ್ನು ತೆಗೆದು ಕೊಂಡು ಬರ ಬೇಕೆಂತ ನಿಶ್ಚೈಸಿದನು. ಆಗಲವನು ಮನೆಯ ಹೊರಗೆ ಹೋಗಿ, ಮರ ಹತ್ತಿ, ತನಗೆ ಬೇಕಾದಷ್ಟು ತಿಂದು, ಇನ್ನು ಕೆಲವುಗಳನ್ನು ಕಿಶೆಯೊಳಗೆ ಹಾಕಿ ಕೊಂಡು ಬರ ಬೇಕೆಂದು ನೆನಸುವಷ್ಟರೊಳಗೆ ಘಕ್ಕನೇ ಮನೆಯ ಬಾಗಲು ತೆರೆಯಲಾಯಿತು. ಕದ ತೆಗೆದ ಸಪ್ಪಳವನ್ನು ಕೇಳಿ, ಹುಡುಗನು ಬೆಬ್ಬರ ಬಿದ್ದು, ಕೈ ತಪ್ಪಿ, ೧೨ ಅಡಿ ಎತ್ತರದಿಂದ ಕೆಳಗೆ ಬಿದ್ದನು. ಆ ಕ್ಷಣ ಚಾಕ್ರಿಯವನು ಓಡಿ ಬಂದು, ಅವನನ್ನು ಎತ್ತಿ ಕೊಂಡು, ಮನೆಯೊಳಗೆ ವೈದನು. ಆದರೆ ಜೇಮ್ಸನ ಕುತ್ತಿಗೆ ಮುರಿದಿತ್ತು. ದೇವರ ದಶಾಜ್ಞೆಗಳಲ್ಲಿ ೪ನೇ ೫ನೇ ಆಜ್ಞೆಗಳನ್ನು ಒಮ್ಮೆಯೇ ಮಿಾರಿ ಪ್ರಾಣ ಕಳಕೊಂಡನು.

ವಿವಿಧ ವರ್ತಮಾನಗಳು.

ಹೊನ್ನಾವರದಿಂದ ಒಂದು ಕಥಾಪ್ರಸ್ತಾಪವೂ, ಆಪತ್ತು ಬಿದ್ದವರಿಗಾಗಿ ಸಹಾಯಾರ್ಥವಾಗಿ ಮೂರು ರೂಪಾಯಿಗಳೂ, ಹುಬ್ಬಳ್ಳಿಯಿಂದ ಒಂದು ಪ್ರಸಂಗಪ್ರಯಾಣದ ರಿಪೋರ್ಟೂ ನಮಗೆ ರವಾನೆಯಾಗಿ ತಲಪಿಸೋಣಾದ್ದು ಉಪಕಾರವೇ.

ಜೂಲೈ ತಿಂಗಳಿನಲ್ಲಿ ನಮ್ಮ ಬೆಟ್ಟಿಗೇರಿಯ ಸಭೆಯವರಿಗೆ ಒಂದು ಉತ್ಸವದಿನದಂಥಾ ಸಂತೋಷವಾಯಿತು: ಮೂರು ಜನರು ಕ್ರಿಸ್ತನನ್ನು ಅರಿಕೆ ಮಾಡಿ, ಕ್ರೈಸ್ತಸ್ನಾನ ಹೊಂದಿ, ಸಭೆಯನ್ನು ಶೇರಿದರು.

ಕಳೆದ ಜೂಲೈ ತಾರೀಕು ೨೫ರಲ್ಲು ಮಂಗಳೂರು ಬಲಮಠ ಕ್ರೈಸ್ತವಿದ್ಯಾಸಂಘದ ವಾರ್ಷಿಕ ಕೂಟವಿತ್ತು. ಅಗ್ರಸ್ಥರು ಪ್ರಾರ್ಥನೆ ಮಾಡಿದ ಬಳಿಕ ಸಂಘದ ಕರಣೀಕನು ೧೮೭೪ನೇ ಇಸವೀ ಅಗೊಸ್ತು ತಿಂಗಳಲ್ಲಿ ಆರಂಭವಾಗಿ ೧೮೭೫ನೇ ಇಸವಿ ಜೂಲೈ ತಿಂಗಳಲ್ಲಿ ಮುಗಿದ ವರುಷದ ರಿಪೋರ್ಟನ್ನು ಓದಿ ಹೇಳಿದನು. ಅದರ ಸಂಕ್ಷೇಪವೇನಂದರೆ: ಈ ವರುಷದಲ್ಲಿ ಸದಸ್ಯರಲ್ಲಿಯೂ ಸದಸ್ಯರಲ್ಲದವರಲ್ಲಿಯೂ ಕೆಲವರು ಭಾಷಣೆಗಳನ್ನು ಸಿದ್ಧ ಮಾಡಿ ಕೊಟ್ಟರು. ಆ ಭಾಷಣೆಗಳಲ್ಲಿ ಪಂಚೇಂದ್ರಿಯಗಳ ವಿಷಯದಲ್ಲಿ ೪. ಲೋಕಚರಿತ್ರೆಯ ಸಂಬಂಧವು ೩, ಸಭಾಚರಿತ್ರೆಯ ಸಂಬಂಧವು ೩, ದೇವವಾಕ್ಯದ ವಿಷಯ ೩, ಹಿಂದು ಮತದ ವಿಷಯದಲ್ಲಿ ೨, ಪರಿಶುದ್ಧ ಯುದ್ಧವೆಂಬದರಿಂದ ೨, ದೇಹಕ್ಷೇಮಸೂತ್ರಗಳ ವಿಷಯದಲ್ಲಿ ೧, ಕೊರಗರ ವಿಷಯದಲ್ಲಿ ೧, ಹೀಗೆ ಒಟ್ಟಿಗೆ ೧೮ ಭಾಷಣೆಗಳು ಕೊಡೋಣಾದವು. ಸಂಘವು ಕೂಡುವದರಿಂದ ಪ್ರಬಂಧಗಳನ್ನು ಬರಿಯುವದಕ್ಕೂ ಮನಸ್ಸಿನಲ್ಲಿಟ್ಟು ಕೇಳಿಕೊಳ್ಳುವದಕ್ಕೂ ಸಂಶಯಗಳನ್ನು ಪರಿಹರಿಸಿಕೊಳ್ಳುವದಕ್ಕೂ ಉಪಾಯವಾಗುತ್ತದೆ—ಇತ್ಯಾದಿ. ರಿಪೋರ್ಟು ಓದಿ ಆದ ಮೇಲೆ ಸದಸ್ಯರಲ್ಲಿ ಮೂರು ಮಂದಿಯೂ ಸಭಾನಾಯಕರೂ ಅಗ್ರಸ್ಥರೂ ಈ ಸಂಘದಿಂದ ಆದ ಪ್ರಯೋಜನಗಳನ್ನು ತೋರಿಸಿ ಅದರ ವರ್ಧನೆಯನ್ನು ಕುರಿತು ಮಾತಾಡಿದರು.

ದಕ್ಷಿಣ ಹಿಂದುಸ್ಥಾನದಲ್ಲಿ ಲಂಡನ್ ಮಿಶ್ಯನಿಗೆ ಶೇರಿರುವ ಠಾಣ್ಯಗಳು ಯಾವವಂದರೆ—ಕನ್ನಡ ಠಾಣ್ಯಗಳು: ಬೆಂಗಳೂರು, ಬಳ್ಳಾರಿ, ಬೆಳಗಾವು; ತಮಿಳ ಠಾಣ್ಯಗಳು: ಮದ್ರಾಸು, ತ್ರಿಪತೂರು, ಸೇಲಮು, ಕೊಯಂಬತ್ತೂರು; ತೆಲುಗು ಠಾಣ್ಯಗಳು: ಕಡಪೆ, ನಂದಿಯಲ್ಲು, ವಿಶಾಖಪಟ್ಣ, ವಿಜಯನಗರ.

ಬೆಂಗಳೂರಿನಲ್ಲಿ ನಾಲ್ವತ್ತು ವರುಷಗಳಿಂದ ಮುಖ್ಯವಾಗಿ ಪ್ರಸಂಗಪರ್ಯಟನೆಯಲ್ಲಿದ್ದ ಕೆಂಬಲ್ ಅಯ್ಯನವರು ವಿಲಾಯತಿಗೆ ಹೋದ್ದರಿಂದ ಇ. ರೈಸ್ ಅಯ್ಯನವರು ಅವರ ಬದಲಿಗೆ ನೇಮಕವಾಗಿದ್ಧಾರೆ. ಕನ್ನಡ ಸಭೆಯಲ್ಲಿ ೨೪೧ ಮಂದಿ ಕ್ರೈಸ್ತರಿದ್ಧಾರೆ. ಅವರಲ್ಲಿ ಕೆಲವರು ಕರ್ತನ ಕಾರ್ಯದಲ್ಲಿ ಆಸಕ್ತಿ ಪಡುವವರು. ಮುಖ್ಯವಾಗಿ ಒಬ್ಬನು ತನಗೆ ಪುರ್ಸತ್ತು ಇರುವಾಗಲೆಲ್ಲಾ ಜನರ ಸಂಗಡ ಸಂಭಾಷಿಸುತ್ತಾ ಚಿಕ್ಕ ವಹಿಗಳನ್ನು ಹಂಚುತ್ತಾ ಇರುತ್ತಾನೆ. ಇದೇ ಆತ್ಮವು ಎಲ್ಲಾ ಕ್ರೈಸ್ತರೊಳಗೆ ಇದ್ದರೆ, ಎಷ್ಟೋ ಒಳ್ಳೇದು. ಆದಿತ್ಯವಾರ ದೇವಾರಾಧನೆಯಲ್ಲಿ ಇಂಗ್ಲಿಷ ರೀತಿಯ ಗೀತಗಳನ್ನು ಮಾತ್ರವಲ್ಲ, ಹಿಂದು ಗೀತಗಳನ್ನು ಹಾಡುವದಕ್ಕೆ ಪ್ರಾರಂಭಿಸಿದ್ಧಾರೆ. ಇದು ಬಹು ಒಳ್ಳೇದು; ಯಾಕಂದರೆ ಹಿಂದು ಜನರ ಕಿವಿಗಳಿಗೆ ವಿಲಾಯತಿ ರೀತಿಯ ಹಾಡುಗಳು ಇಂಪಾಗಿ ಕೇಳುವದಿಲ್ಲ.

ಕಳೆದ ವರುಷದಲ್ಲಿ ನಾಲ್ಕು ಮಂದಿ ಸ್ನಾನ ಹೊಂದಿ, ಸಭೆಗೆ ಶೇರಿದರು. ಅವರಲ್ಲಿ ಒಬ್ಬಳು ಬ್ರಾಹ್ಮಣಿ ವಿಧವೆ; ಇನ್ನೊಬ್ಬಳು ಅವಳ ಮಗಳು; ಮೂರನೆಯವನು ಒಬ್ಬ ಯೌವನಸ್ಥನು. ಇವನು ಹೊಸ ಒಡಂಬಡಿಕೆಯನ್ನು ಕೊಂಡು ಕೊಂಡು, ಓದಲಾರಂಭಿಸಿ, ಅದು ಸತ್ಯವೆಂತ ತಿಳುಕೊಂಡು, ಧೈ

ರ್ಯಗೊಂಡು, ಸ್ನಾನ ತಕ್ಕೊಂಡು, ತನ್ನ ವಿಶ್ವಾಸ ಅರಿಕೆ ಮಾಡುವವನಾದನು. ಇನ್ನು ಕೆಲವರು ದೇವರ ವಾಕ್ಯಕ್ಕೆ ಮನಸ್ಸು ಕೊಡುವವರೂ ಅಂತರಂಗದಲ್ಲಿ ವಿಶ್ವಾಸಿಗಳಾಗಿರುವವರೂ ಇದ್ದಾರೆ. ಎರಡು ವರುಷಗಳ ಹಿಂದೆ ಕ್ರೈಸ್ತನಾದ ಒಬ್ಬನ ತಾಯಿತಂದೆಗಳೂ ಈಗ ಸುವಾರ್ತಾವಾಕ್ಯಕ್ಕೆ ಸ್ವಲ್ಪ ಮನಸ್ಸು ಕೊಡುತ್ತಾರೆ. ತಾಯಿ ಕ್ರೈಸ್ತಳಾಗಿರುವ ತನ್ನ ಮಗಳ ಮುಖಾಂತರ ಕ್ರೈಸ್ತಗೀತಗಳನ್ನು ಹಾಡಲಿಕ್ಕೆ ಕಲಿಯುತ್ತಾಳೆ. ಅನ್ಯ ಜನರಲ್ಲಿಯೂ ಈಗ ದೇವರ ವಾಕ್ಯದ ಕಡೆಗೂ ಧರ್ಮ ಸಂಬಂಧ ವಹಿಗಳನ್ನು ಓದಲಿಕ್ಕೂ ತಾತ್ಪರ್ಯವು ಅದೆ ಎಂತ ಕಳದ ವರುಷದಲ್ಲಿ ೫೦೦ ರೂಪಾಯಿ ಕ್ರಯದ ೩,೫೦೦೦ ಸತ್ಯವೇದದ ಅಂಶಗಳೂ ಬೇರೆ ಚಿಕ್ಕ ವಹಿಗಳೂ ಮಾರಿ ಹೋದದರಿಂದ ತಿಳಿದು ಬರುತ್ತದೆ. ಅರವ ಸಭೆಯಲ್ಲಿ ೧೪೦ ಮಂದಿ ಕ್ರೈಸ್ತರಿದ್ದಾರೆ. ಆರು ಮಂದಿ ಕಳದ ವರುಷ ಶೇರಿದವರು. ಕನ್ನಡ ಸಭೆಯವರೂ ಅರವ ಸಭೆಯವರೂ ಬೇರೆ ಬೇರೆ ಕಾರ್ಯಗಳಿಗೆ ರೂಪಾಯಿ ೪೯೨-೧೨-೨ ಕೂಡಿಸಿ ಕೊಟ್ಟರು.

ಶಾಲೆಗಳಲ್ಲಿ (ಹುಡುಗರ ಶಾಲೆಗಳು ೬, ಹುಡುಗಿಯರವು ೫.) ಒಟ್ಟಿಗೆ ೯೭೬ ಮಂದಿ ಉಪದೇಶ ಹೊಂದುತ್ತಾರೆ.

ಮಿಶ್ಯನ ಶಾಲೆಯಲ್ಲಿ ಕಲಿತ ಒಬ್ಬನು ಸತ್ಯವೇದವನ್ನು ಜಾಗ್ರತೆಯಿಂದ ಓದುವವನಾಗಿ, ತನಗೆ ತಿಳಿಯದ್ದನ್ನು ಬಂದು ಕೇಳಿ, ಸಂಶಯ ಪರಿಹರಿಸಿ ಕೊಳ್ಳುತ್ತಿದ್ದನು. ಆದರೆ ಅವನಿಗೆ ವಿಶ್ವಾಸವನ್ನು ಪ್ರಕಟವಾಗಿ ಅರಿಕೆ ಮಾಡಲಿಕ್ಕೆ ಸಮಯ ಒದಗದೆ ಜ್ವರ ಬಂದು, ಅವನು ಅಕಾಲಮರಣ ಪಟ್ಟನು. ಮರಣಕಾಲದಲ್ಲಿ ಅವನ ಹೃದಯಸ್ಥಿತಿ ಹ್ಯಾಗಿತ್ತೆಂದು ಹೇಳ ಕೂಡದು.

ಬಳ್ಳಾರಿಯಲ್ಲಿ ಒಬ್ಬ ಯೌವನಸ್ಥನು ಕ್ರೈಸ್ತನಾಗುವದಕ್ಕೆ ಬಂದನು. ಆದರೆ ಅವನ ತಂದೆ ಆ ವರ್ತಮಾನ ಕೇಳಿ, ಮಿಶ್ಯನ ಬಂಗ್ಲೆಗೆ ಬಂದು, ಮಗನನ್ನೂ ಮಿಶ್ಯನೆರಿಗಳನ್ನೂ ನಿಂದಿಸಿ ಬೈದ ಮೇಲೆ, ಶಿಟ್ಟಿನಿಂದ ಏನೂ ಆಗುವದಿಲ್ಲವೆಂತ ತಿಳಿದು, ಸೌಮ್ಯ ವಾಕ್ಯಗಳಿಂದ ಮಗನನ್ನು ಒಡಂಬಡಿಸಿ, ಕಾಲಿಗೆ ಅಡ್ಡ ಬಿದ್ದು, ಮನೆಗೆ ಬರ ಬೇಕೆಂತಾ ಬೇಡಿ ಕೊಂಡಾಗ್ಯೆ ಮಗನಲ್ಲಿ ತಾಯಿ ತಂದೆಗಳ ಮೇಲಣ ಮಮತೆ ಅತಿರೇಕವಾಗಿ, ಅವನು ತಂದೆಯ ಸಂಗಡ ಹೋಗಿ ಬಿಟ್ಟನು. ಹಾಗೆಯೇ ಇನ್ನೊಬ್ಬ ಯೌವನಸ್ಥನು ಕ್ರೈಸ್ತನಾಗಲಿಕ್ಕೆ ಬಂದು, ಸ್ವಲ್ಪ ಸಮಯದ ಮೇಲೆ ತನಗೆ ಜಂಬರ ಉಂಟು, ಅದನ್ನು ತೀರಿಸಿ ಬರುತ್ತೇನೆಂತ ಹೇಳಿ, ಹೋದ ಮೇಲೆ ತಿರಿಗಿ ಕಾಣಲೇ ಇಲ್ಲ. — ಅಲ್ಲಿಯ ಸಭೆಯಲ್ಲಿ ೩೬೫ ಮಂದಿ ಕ್ರೈಸ್ತರಿದ್ದಾರೆ. ಅವರು ಮಿಶ್ಯನ ಕೆಲಸಕ್ಕೆ ೧೭೬ ರೂಪಾಯಿ ಕೂಡಿಸಿ ಕೊಟ್ಟರು. ಒಬ್ಬನು ತನಗೆ ಹೆಚ್ಚಿನ ಉದ್ಯೋಗವಾದ್ದರಿಂದ ದೇವಾಲಯಕ್ಕೆ ಎರಡು ದೀಪಗಳನ್ನು ದಾನ ಮಾಡಿ, ತಾನೇ ಅವುಗಳ ಎಣ್ಣೇ ಖರ್ಚು ನಡಿಸುತ್ತಾನೆ. ಸಭೆಯ ಯೌವನಸ್ಥರು ಆತ್ಮಸಂತೋಷದಿಂದ ಬೈಬಲ್ ಸಂಘಕ್ಕೆ ೬೫ ರೂಪಾಯಿ ಕೂಡಿಸಿ ಕೊಟ್ಟರು. ಬೇರೆ ಬೇರೆ ಶಾಲೆಗಳಲ್ಲಿ ೩೫೮ ಹುಡುಗರೂ ೧೫೬ ಹುಡುಗಿಯರೂ ವಿದ್ಯಾಭ್ಯಾಸ ಮಾಡುತ್ತಾರೆ. ಹುಡುಗರಲ್ಲಿ ಅನೇಕರಿಗೆ ಸತ್ಯವೇದದ ಒಳ್ಳೇ ತಿಳಿವಿಕೆಯು ಅದೆ.

ಬೆಳಗಾವಿಗೆ ಶೇರಿದ ಒಂದು ಠಾಣ್ಯದಲ್ಲಿ ಏಳು ಮಂದಿಯಿರುವ ಒಂದು ಮನೆಯವರಿಗೆ ಸ್ನಾನವಾಯಿತು. ಅವನ ಹೆಂಡತಿ ಅನೇಕ ಸಾರಿ ದೇವಾರಾಧನೆಗೆ ಬರುವವಳಾಗಿ ಮಕ್ಕಳನ್ನು ಧರ್ಮೋಪದೇಶಕ್ಕೆ ಕಳುಹಿಸುತ್ತಿದ್ದಳು. ತನ್ನ ಗಂಡನ ಮನಸ್ಸು ಸ್ಥಿರವಾಗುವ ವರೆಗೆ ಅವಳು ಬಹಳ ಸಮಯ ಕಾದು ಕೊಂಡು, ಆ ಸಮಯ ಬಂದೊದಗಿದಾಗ ಅವಳಿಗೆ ಸಂತೋಷವಾಯಿತು. ಅವರು ಬಹು ಬಡವರಾಗಿದ್ದಾಗ್ಯೂ ಸಾಲ ಮಾಡದೆ, ಕಷ್ಟಾರ್ಜಿತದಿಂದ ಜೀವನ ಮಾಡುವವರಾಗಿದ್ದಾರೆ. ಇನ್ನೊಂದು ಠಾಣ್ಯದಲ್ಲಿ ಒಬ್ಬನು ಮೂರು ಸಾರಿ ವಿನಾಕಾರಣವಾಗಿ ಶೆರೆಮನೆಗೆ ಹಾಕಲ್ಪಟ್ಟವನಾಗಿ, ಈ ಸಂಕಷ್ಟ ತನ್ನ ಪಾಪದ ಫಲವೆಂತ ತಿಳುಕೊಂಡು, ಮೂರನೆ ಸಾರಿ ಬಿಡುಗಡೆಯಾದ ಕ್ಷಣ ಬಂದು ಕ್ರೈಸ್ತನಾದನು. ಇನ್ನೊಬ್ಬನು ಕ್ರೈಸ್ತನಾದ

ವನು ಬಹು ಆಸಕ್ತನೂ ಕರ್ತನಲ್ಲಿ ಸಂತೋಷಪಡುವವನೂ ಆಗಿದ್ದಾನೆ. ಬರಹವರಿಯದವನಾದರೂ ಉಪದೇಶಕನ ಸಂಗಡ ದೇವರ ವಾಕ್ಯದ ವಿಷಯ ಮಾತಾಡುವದಕ್ಕೆ ಹೋಗುತ್ತಾನೆ. ಅವನ ಪ್ರಯತ್ನದಿಂದ ಹೆಂಗತಿಯೂ ತಾಯಿಯೂ ಅವನನ್ನು ಕೂಡಿ ಕೊಳ್ಳುವವರಾದರು. ಬೆಳಗಾವಿನ ಎಂಟು ಶಾಲೆಗಳಲ್ಲಿ ೫೮೦ ಹುಡುಗರೂ ೫೨ ಹುಡುಗಿಯರೂ ಕಲಿಯುತ್ತಿದ್ದಾರೆ.

ಕಾಶಿಯಿಂದ ಬಂದ ದಯಾನಂದ ಸರಸ್ವತಿ ಎಂಬ ಪಂಡಿತನು ಪುಣೆಯಲ್ಲಿ ವಿಗ್ರಹಾರಾಧನೆ ದೋಷವೆಂದು ವೇದಶಾಸ್ತ್ರಗಳಿಂದ ಪ್ರಮಾಣಪಡಿಸಿ, ಭಾಷಣೆಗಳನ್ನು ಮಾಡುತ್ತಿದ್ದಾನೆ. ಅನೇಕ ಬ್ರಾಹ್ಮಣರು ಅವನ ಭಾಷಣೆ ಕೇಳುವದಕ್ಕೆ ಬರುತ್ತಾರೆ.

ಸಂತಾಲಿಸ್ಥಾನಿನ ಮಿಶ್ಯನೆರಿಗಳು ಮದ್ಯಪಾನದಿಂದ ಅಲ್ಲಿಯ ಕ್ರೈಸ್ತರೂ ಬೇರೆ ಮೂಲನಿವಾಸಿಗಳೂ ಬಹಳವಾಗಿ ಕೆಟ್ಟು ಹೋಗುತ್ತಾರೆಂದು ಸರ್ಕಾರಕ್ಕೆ ತಿಳಿಸಲಾಗಿ, ಆ ಪ್ರಾಂತ್ಯದ ಅನೇಕ ಮದ್ಯ ಮಾರುವ ಅಂಗಡಿಗಳನ್ನು ಸರ್ಕಾರದವರು ಮುಚ್ಚಿಸಿದರು. ಆ ಸಂತಾಳರು ತಮ್ಮ ಮನೆಗಳಲ್ಲೇ ಸಾರಾಯಿ ಮಾಡುವದನ್ನೂ ನಿಲ್ಲಿಸುವಂತೆ ಆ ಮಿಶ್ಯನೆರಿಗಳು ಅರ್ಜಿ ಬರ ಕೊಂಡಿದ್ದಾರೆ.

ನಾಗಪುರದಲ್ಲಿ ರಾವಬಹದೂರ ಎಂತ ಬಿರುದುಳ್ಳ ಒಬ್ಬ ದೊಡ್ಡ ಹುದ್ದೆದಾರನು ಕ್ರೈಸ್ತಧರ್ಮವನ್ನಂಗೀಕರಿಸಿದನು. ಅವನು ಸುಮಾರು ೩೫ ವರ್ಷಗಳ ಹಿಂದೆ ಸಮುದ್ರಪಯಣ ಮಾಡಿದ್ದರಿಂದ ಬಹಿಷ್ಕಾರ ಮಾಡಿಸಿ ಕೊಂಡವನಾಗಿ, ಹಣ ಖರ್ಚು ಮಾಡಿ, ತಿರಿಗಿ ಜಾತಿಗೆ ಶೇರ ಬೇಕೆಂತ ಎಷ್ಟು ಮಂದಿ ಹೇಳಿದಾಗ್ಯೂ ಕೇಳದೆ ಹಾಗೆಯೇ ಇದ್ದು, ಕಡೆಗೆ ಪೂರ್ಣ ಹೃದಯದಿಂದ ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಸ್ನಾನ ಹೊಂದಿದನು.

ಹಿಂದುಸ್ಥಾನದ ಅನೇಕ ಕಡೆಗಳಲ್ಲಿ ಶಾಂತಿ ಭೇದಿಯು ಪ್ರಬಲವಾಗುವಂಥಾದ್ದಾಯಿತು.

ಮುಂಬೈ ಸಂಸ್ಥಾನದಲ್ಲಿ ೧೧೮, ಬಂಗಾಳದಲ್ಲಿ ೯೯, ಮದ್ರಾಸ್ ಸಂಸ್ಥಾನದಲ್ಲಿ ೬೪ ವರ್ಷ ಮಾನಪತ್ರಗಳು ಛಾಪೆಯಾಗಿ ಪ್ರಕಟವಾಗುತ್ತಿದ್ದಾವಂತೆ.

ಇತಾಲ್ಯದಲ್ಲಿ ೨,೬೮,೦೧,೧೫೪ ನಿವಾಸಿಗಳಿದ್ದಾರೆ. ಇವರಲ್ಲಿ ೧,೯೫,೫೩,೭೯೨ ಮಂದಿ ಓದಲಿಕ್ಕಾದರೂ ಬರಿಯಲಿಕ್ಕಾದರೂ ಅರಿಯದವರು!

ಇತಾಲ್ಯಕ್ಕೆ ಶೇರಿದ ಸಿಸಿಲ್ಯವೆಂಬ ದ್ವೀಪದ ಒಂದು ಪಟ್ಣವಾದ ಗ್ರೊತ್ತ ಎಂಬಲ್ಲಿ ಪಾಪುಸ್ವಾಮಿಯ ಹೊಸ ವಿಶ್ವಾಸಬೋಧನಾಂಶಕ್ಕೆ ಸಮ್ಮತರಾಗಮೊಲ್ಲದ ೫ ಮಂದಿ ಪಾದ್ರಿಗಳನ್ನು ಅಧ್ಯಕ್ಷನು ಬಹಿಷ್ಕಾರ ಮಾಡಿದದರಿಂದ ಆ ಪಟ್ಣದ ಉಳಿದ ೨೦ ಮಂದಿ ಪಾದ್ರಿಗಳೂ ಅವರ ಸಭೆಗಳೂ ಪೂರ್ವ ಕಥೋಲಿಕ ಸಭೆಯನ್ನು ಶೇರಿ ಕೊಂಡರು.

ಇತ್ತಲಾಗಿ ಪಾಪುಸ್ವಾಮಿ ಒಂದು ಪ್ರಸಂಗದಲ್ಲಿ ರೋಮುಪಟ್ಣದವರಿಗೆ ಮಾನಸಾಂತರ ಪಡಬೇಕೆಂಬ ಪ್ರಸಂಗಗಳನ್ನು ಮಾಡಲಿಕ್ಕೆ ಎಷ್ಟೋ ಕಾರಣವೆಂತ ತೋರಿಸುವಲ್ಲಿ ಅವಿಶ್ವಾಸ, ಚಾರ್ಯ, ಸೂಳೇ ಮನೆಗಳನ್ನು ಉದಾಹರಿಸಿದ ಕಡೆಗೆ ರೋಮುಪಟ್ಣದಲ್ಲಿ ಇತ್ತಲಾಗಿ ಕಟ್ಟೋಣಾದ ಪ್ರೊಟೆಸ್ಟಾಂಟ ದೇವಾಲಯಗಳನ್ನು ಸಹಾ ಉದಾಹರಿಸಿದನು. ಇದರಿಂದ ಕಂಡು ಬಂದದ್ದೇನಂದರೆ: ಸೂಳೇ ಮನೆಗಳಿಗಿಂತ ಪ್ರೊಟೆಸ್ಟಾಂಟ ದೇವಾಲಯಗಳೇ ಪಾಪುಸ್ವಾಮಿಗೆ ಅಸಹ್ಯವಾಗಿದ್ದಾವೆ! ಚಲೋದಾಗಿದೆ. ಆದರೆ ಇದರಲ್ಲಿ ಆಶ್ಚರ್ಯ ಕಾಣದು. ಪ್ರೊಟೆಸ್ಟಾಂಟ ದೇವಾಲಯಗಳ ದೆಶೆಯಿಂದ ಪಾಪನಿಗೆ ಬಹಳ ಲುಕಸಾನಾಗುತ್ತದೆ. ಸೂಳೇ ಮನೆಗಳಿಂದ ಅಷ್ಟು ನಷ್ಟವಿಲ್ಲಾ; ಯಾಕಂದರೆ ರೋಮುಪಟ್ಣದ ಸೂಳೆಗಳು ಪಾಪುಸ್ವಾಮಿಗಳ ಖಜಾನೆಗೆ ಹೇರಳ ತೆರಿಗೆ ಇತ್ಯಾದಿ ಹಣವನ್ನು ಪ್ರಾಯಶ್ಚಿತ್ತಾರ್ಥವಾಗಿ ಸಲ್ಲಿಸುತ್ತಾ ಬರ ಬೇಕಾಯಿತು, ಸಲ್ಲಿಸುತ್ತಾ ಬಂದಿದ್ದಾರೆ.

ಈ ಪತ್ರದ ೭ನೇ ಪುಸ್ತಕದ ೧೬೨ನೇ ಪುಟದಲ್ಲಿ ಶಾಂತಸಾಗರದ ಉವೇಯವೆಂಬ ದ್ವೀಪದಲ್ಲಿ ಫ್ರೆಂಚ ರೋಮನ್ ಪಾದ್ರಿಗಳು ನಡಿಸಿದ ಧರ್ಮಾರ್ಥ ಹಿಂಸೆಯನ್ನು ನಿಲ್ಲಿಸಿ ಬಿಡುವರೆ ಇಂ

ಗ್ಲಾಂಡಿನ ಸರಕಾರವೂ ಜರ್ಮನ್ ಸರಕಾರವೂ ನೋಡಿದರೆಂಬ ಸಂಗತಿಯನ್ನು ಓದಿದ್ಧೀರಿ. ಇವರ ಯತ್ನ ತಕ್ಕಷ್ಟು ಸಫಲವಾಯಿತೆಂಬ ವರ್ತಮಾನ ಈಗ ತಲಪಿದೆ. ಫ್ರೆಂಚ ಸರಕಾರವು ಅಲ್ಲಿಯ ರೆಶಿಡೆಂಟರಾದ ಪ್ರತಿ ಧೊರೆಯನ್ನೂ ಮುಖ್ಯ ಪಾದ್ರಿಯನ್ನೂ ವರ್ಗ ಮಾಡಿ, ಇನ್ನು ಮುಂದೆ ಹಿಂಸೆ ನಡೆಯ ಬಾರದೆಂತ ಹುಕುಂ ಕೊಟ್ಟರು.

ದಕ್ಷಿಣ ಅಮೇರಿಕದ ನವಗ್ರನಾದವೆಂಬ ಶೀಮೆಯಲ್ಲಿ ಮೇ ೧೮ರಲ್ಲಿ ಒಂದು ಅತಿ ಭೀಕರ ಭೂಕಂಪವು ಸಂಭವಿಸಿತು. ಅದರಲ್ಲಿ ಹೇರಳ ಮನೆಗಳೂ ಆಸ್ತಿಪಾಸ್ತಿಗಳೂ ನಾಶವಾಗಿ ಹೋದದಲ್ಲದೆ, ಸುಮಾರು ೧೬,೦೦೦ ಜನರು ಸಹಾ ಹುಗಿದು ಹೋಗಿ ಮೃತಿ ಪಟ್ಟರು. ಈ ಭೂಕಂಪದ ಸಮಯದಲ್ಲಿಯೇ ಚೋರರು ಎದ್ದು, ಬಹಳ ಲೂಟಿ ಮಾಡಿ, ತಮ್ಮ ಭಯವನ್ನು ಭೂಕಂಪದ್ದಕ್ಕೆ ಜೋಡಾಗ ಮಾಡಿದರಂತೆ.

ಈ ಪುಸ್ತಕದ ೨೨ನೇ ಪುಟದಲ್ಲಿ ಪ್ರಸ್ತಾಪವಾದ ನೆರೆಯ ಸಂಬಂಧವಾಗಿ ಫ್ರೆಂಚ ದೇಶದಲ್ಲಿ ೧೨ ಕೋಟಿ ರೂಪಾಯಿಯಷ್ಟು ನಷ್ಟವಾದ್ದಲ್ಲದೆ, ೩,೦೦೦ ಜನರು ಸಹ ಅಳಿದು ಹೋದರಂತೆ.

ಉತ್ತರ ಅಮೇರಿಕದ ಸಂಯುಕ್ತಸಂಸ್ಥಾನಗಳಲ್ಲಿ ಒಂದಾದ ಮಿಸ್ಸೂರಿಯೆಂಬ ಶೀಮೆಯಲ್ಲಿ ಬಂದ ನೆರೆಯ ದೆಶೆಯಿಂದ ಬಹಳ ಉಪಕಾರವಾಯಿತು. ಹ್ಯಾಗಂದರೆ ಆ ಶೀಮೆಯಲ್ಲಿ ಮಿಡಿತೆಗಳ ಬಾಧೆ ವಿಪರೀತವಾಗಿ ಪೈರು ಬೆಳೆಯೆಲ್ಲಾ ನಾಶವಾಗುತ್ತದೆಂತ ಕಾಣುವಾಗಲೇ ಬಹಳ ಮಳೆ ಬಂದು ಹೊಳೆ ನದಿಗಳು ನೆರೆಯಾಗಿ ಉಬ್ಬಿ ಹೋದದರಿಂದ ಆ ಮಿಡಿತೆಗಳೆಲ್ಲಾ ಸತ್ತು ಹೋದವು.

ಐರ್ಲಾಂಡದ ಮುಖ್ಯ ಪಟ್ಣವಾದ ದಬ್ಲಿನದಲ್ಲಿ ಸಹಾ ಒಂದು ತರದ ಪ್ರವಾಹವು ಕೆಲವು ಜನರು ಅಳಿದು ಹೋಗುವದಕ್ಕೆ ಕಾರಣವಾಯಿತು. ಹ್ಯಾಗಂದರೆ: ಒಂದು ದೊಡ್ಡ ಸಾರಾಯ್ನ ಕಾರ್ಖಾನೆಗೆ ಬೆಂಕಿ ಹಿಡಿದು ಹೋದಾಗ, ದೊಡ್ಡ ದೊಡ್ಡ ಪೀಪಾಯಿಗಳಲ್ಲಿದ್ದ ಸಾರಾಯಿ ಬೀದಿಯಲ್ಲೆಲ್ಲಾ ಹರಿದು ಹೋಗಿರಲು, ಘಾಳಿ ಬೀಸುವಾಗಲೇ ತೂರಬೇಕೆಂಬಂತೆ ಅನೇಕರು, ನಾಯಿ ನರಿಗಳು ಕಂಡ ಹೆಣದ ಮೇಲೆ ಬೀಳುವಂತೆ, ಅತ್ಯಾಶೆಯಿಂದ ಸಾರಾಯದ ಮೇಲೆ ಬಿದ್ದು ಯಥೇಷ್ಟ ಕುಡಿದು ಬಿಟ್ಟದರಿಂದ, ಹೊಟ್ಟೆಯಲ್ಲಿ ಬೆಂಕಿ ಹುಟ್ಟಿ, ಅವರಿಗೆ ಯಮಪುರಕ್ಕೆ ದಾರಿ ತೋರಿಸುವಂಥಾದ್ದಾಯಿತು.

ಕಳೆದ ವರುಷದಲ್ಲಿ ನಷ್ಟವಾದ ಹಡಗಗಳ ಲೆಖ್ಖವೇನಂದರೆ—ಇಂಗ್ಲಿಷ ದೇಶದ ತೀರದಲ್ಲಿ ನಷ್ಟವಾದ ಹಡಗಗಳು ೧,೮೦೩; ಪರದೇಶಗಳಲ್ಲಿ ನಷ್ಟವಾದ ಇಂಗ್ಲಿಷರ ಹಡಗಗಳು ೩,೦೯೪; ಇವುಗಳಲ್ಲಿ ಸತ್ತು ಹೋದ ಜನರು ೪,೦೧೩; ಇದಕ್ಕೆ ಏಶಿಯ ಇಂದಸ್ ಎಂಬ ಎರಡು ಹಡಗಗಳು ನಷ್ಟವಾಗಿ ಸತ್ತು ಹೋದ ೧,೨೪೧ ಜನರ ಲೆಖ್ಖವನ್ನೂ ಕೂಡಿಸಿ ಕೊಳ್ಳ ಬೇಕು. ಸಮುದ್ರದ ಮೇಲೆ ಹೋದಂಥ ೧೫೦ ಹಡಗಗಳ ವಿಷಯ ವರ್ತಮಾನವೇ ಇಲ್ಲ. ಇವುಗಳೊಂದಿಗೆ ೨,೩೮೧ ಜನರು ಸತ್ತು ಹೋಗಿದ್ದಾರು.

ಜೂನ್ ತಿಂಗಳಲ್ಲೂ ಜೂಲೈ ತಿಂಗಳಲ್ಲೂ ದಕ್ಷಿಣ ಜರ್ಮನ್ ದೇಶದಲ್ಲಿ ಬಹಳ ಭೀಕರ ಗುಡುಗು ಮೋಡಗಳುಂಟಾಗಿ, ಹುಚ್ಚು ಮಳೆಗಳಿಂದಲೂ ಕಲ್ಮಳೆಗಳಿಂದಲೂ ಹಳ್ಳ ಹೊಳೆಗಳ ನೆರೆಯಿಂದಲೂ ಅತ್ಯಂತ ನಷ್ಟವಾಯಿತು. ಅನೇಕ ಮನೆಗಳು ಶಿಡಿಲು ತಾಗಿ ಸುಟ್ಟು ಹೋದವು. ಪಸ್ಸಾವೆಂಬ ಪಟ್ಣದಲ್ಲಿ ಇಡೀ ಪಟ್ಣಕ್ಕೆ ಅಗ್ನಿಪ್ರಳಯ ಬಂತೇನೋ? ಎಂಬಂತೆ ಕಾಣುವಷ್ಟು ಭೀಕರ ಭೂತ ಶಿಡಿಲು ಭೂಕಂಪಿಸುವಂಥಾ ಗರ್ಜನೆಯೊಂದಿಗೆ ದೋನೌ ಎಂಬ ನದಿಯಲ್ಲಿ ಬಿತ್ತು.

ಐಸ್ಲಂದೆಂಬ ದ್ವೀಪದಲ್ಲಿ ಜ್ವಾಲಾಮುಖಿ ಪರ್ವತಶಿಖರಗಳಿಂದ ಅಪೂರ್ವ ಬೂದಿಯೂ ಅಗ್ನಿಪ್ರವಾಹಶಿಲಾದಿಗಳೂ ಕಾರಿ ಬಂದು, ಸುತ್ತಮುತ್ತಲಿನ ಪ್ರದೇಶದ ಹೊಲಗಳನ್ನೂ ಮೇವು ಜಾಗಗಳನ್ನೂ ಮುಚ್ಚಿ ಬಿಟ್ಟದ್ದು ಮಹಾ ಕ್ಷೋಭೆಗೆ ಕಾರಣವಾಯಿತು.

ಸನ್ನಿಪಾತ ಜ್ವರ ಇತ್ಯಾದಿ ವ್ಯಾಧಿಗಳು ಬಹುಶಾ ನೀರಿನ ದೋಷದಿಂದ ಆಗುವಂಥಾವುಗಳು ಎಂಬದಕ್ಕೆ ಇತ್ತಲಾಗಿ ಸ್ಟುತ್ಗರ್ಟೆಂಬ ಪಟ್ಣದಲ್ಲೂ

ಹೊಸ ದೃಷ್ಟಾಂತ ಶಿಕ್ಕಿತು. ಆದ್ದರಿಂದ ತಾವು ಕುಡಿಯುವ ನೀರು ನಿರ್ಮಲವಾಗಿರುವಂತೆ ಬಹು ಜಾಗ್ರತೆಯಾಗಿ ನೋಡ ಬೇಕೆಂಬದಾಗಿ ಜನರಿಗೆ ಮತ್ತೂ ಮತ್ತೂ ಎಚ್ಚರಿಸಿ ಬುದ್ಧಿ ಹೇಳಲಿಕ್ಕೆ ಎಷ್ಟೋ ಕಾರಣ ತೋರುತ್ತದೆ.

ಈ ವರೆಗೂ ಅಸಾಧ್ಯರೋಗವೆಂತ ಎನ್ನಿಸಿಕೊಂಡ ಕುಷ್ಠರೋಗಕ್ಕಾದರೂ ತಕ್ಕ ಚಿಕಿತ್ಸೆ ಉಂಟೆಂತ ತಿಳಿದು ಬಂತಂತೆ. ಈ ಚಿಕಿತ್ಸೆ ಏನಂದರೆ: (Gurjun Oil) ಗರ್ಜನ್ * ಎಣ್ಣೆಯಾಗಲಿ (Chulmoogra Oil) ಚಲ್ಮುಗ್ರ* ಎಣ್ಣೆಯಾಗಲಿ. ಗರ್ಜನ್ ಎಣ್ಣೆಯ ಪ್ರಯೋಗವು ಹ್ಯಾಗಂದರೆ: ಈ ಎಣ್ಣೆಯನ್ನೂ ಸುಣ್ಣದ ತಿಳಿನೀರನ್ನೂ† ಸಮಪಾಲಾಗಿ ಬೆರಸಿ, ಪ್ರಾಯಸ್ಥ ಕುಷ್ಠರೋಗಿ ಚಿಕ್ಕ ಚಮ್ಚ (ಸೌಟು) ತುಂಬ ದಿನ ಒಂದಕ್ಕೆ ಮೂರು ಸರ್ತಿ ಕುಡಿಯ ಬೇಕು. ಇದಲ್ಲದೆ ಈ ಎಣ್ಣೆಯನ್ನೂ ಈ ಎಣ್ಣೆಯ ಮೂರಷ್ಟು ಪಾಲು ಸುಣ್ಣದ ತಿಳಿನೀರನ್ನೂ ಕಲಸಿ, ಸಾಯಂಕಾಲದಲ್ಲೂ ಪ್ರಾತಃಕಾಲದಲ್ಲೂ ಎರಡು ತಾಸು ಬಿಡದೆ ರೋಗಿಯ ಮೈಗೆಲ್ಲಾ ಸಾರಿಸಿ, ಚನ್ನಾಗಿ ತಿಕ್ಕಿ ಉಜ್ಜುತ್ತಿರ ಬೇಕು. ಅರ್ಧ ತೆಂಗಿನ ಬುರುಡೆಯಷ್ಟು ಒಂದು ದಿನಕ್ಕೆ ಸಾಕು. ದಿನಾಲು ಮಧ್ಯಾಹ್ನದಲ್ಲಿ ಒಂದು ಸಾರಿ ತಣ್ಣೀರಿನಲ್ಲ್ಯಾಗಲಿ ಉಗುರು ಬೆಚ್ಚಗಾದ ನೀರಲ್ಲ್ಯಾಗಲಿ ಮಿಂದು ಕೊಳ್ಳ ಬೇಕು. ಮೈಯನ್ನು ಶುದ್ಧ ಮಾಡಲಿಕ್ಕಾಗಿ "ಸೋಪು" ಪ್ರಯೋಗಿಸ ಬಹುದು. ಈ ಚಿಕಿತ್ಸೆ ಮಾಡುವಷ್ಟು ಸಮಯಕ್ಕೆ ಯಾವ ಆಹಾರವಾದರೂ ನಿಷೇಧವಲ್ಲಾ. ತ್ರಾಣ ಕೊಡುವ ಯಥೇಷ್ಟ ಆಹಾರ ತೆಗೆದು ಕೊಳ್ಳ ಬಹುದು. — ಚಲ್ಮುಗ್ರ ಎಣ್ಣೆಯ ಪ್ರಯೋಗವು ಹ್ಯಾಗಂದರೆ: ಹತ್ತು ಬೊಟ್ಟು (ತಟುಕು) ಈ ಎಣ್ಣೆ ಒಂದು "ವೈನ್ ಗ್ಲಾಸ್" ತುಂಬ ಹಾಲಿನಲ್ಲಿ ದಿನವೊಂದಕ್ಕೆ ಎರಡು ಅಥವಾ ಮೂರು ಸಾರಿ ಕುಡಿಯ ತಕ್ಕದ್ದು. ಇದಲ್ಲದೆ ಈ ಎಣ್ಣೆಯ ಒಂದು ಪಾಲನ್ನೂ ತೆಂಗಿನ ಎಣ್ಣೆಯ ಹದಿನಾರು ಪಾಲನ್ನೂ ಚನ್ನಾಗಿ ಬೆರಸಿ, ಎರಡು ಅಥವಾ ಮೂರು ಚಮ್ಚ ತುಂಬ ಸಾಯಂಕಾಲದಲ್ಲೂ ಪ್ರಾತಃಕಾಲದಲ್ಲೂ ಎರಡು ತಾಸು ಬಿಡದೆ ಮೈಗೆ ಸಾರಿಸಿ ಉಜ್ಜುತ್ತಿರ ಬೇಕು. ಸ್ನಾನ ಪಥ್ಯ ಇವೆರಡರ ವಿಷಯದಲ್ಲಿ ಗರ್ಜನ್ ಎಣ್ಣೆಯ ಪ್ರಯೋಗದಲ್ಲಿ ಮಾಡುವಂತೆ ಮಾಡ ತಕ್ಕದ್ದು.

*ಈ ಎರಡು ಎಣ್ಣೆಗಳ ಹೆಸರನ್ನು ಯಾರಾದರೂ ಕನ್ನಡದಲ್ಲಿ ತಿಳಿಸಿ ಕೊಟ್ಟರೆ, ಬಹಳ ಉಪಕಾರವಾಗುವದು.

†ಸುಣ್ಣದ ತಿಳಿನೀರನ್ನು ತಯಾರು ಮಾಡುವ ವಿಧ ೧೮೭೬ನೇ ಇಸವಿಯ ಪಂಚಾಂಗದ ೩೦ನೇ ಪುಟದಲ್ಲಿ ಹೇಳಿಕೊಟ್ಟದೆ. ಸದರಿ ಪಂಚಾಂಗದಲ್ಲಿ ಒಂದು ಸಂಕ್ಷೇಪವಾದ ವೈದ್ಯಶಾಸ್ತ್ರವೂ, ವಿಶೇಷವಾಗಿ "ಊರೌಷಧಿಗಳ" ಪ್ರಯೋಗವಿಧವೂ ಛಾಪಿಸಿ ಕೊಟ್ಟದೆ. ಅದರಿಂದ ಜನರಿಗೆ ಬಹಳ ಪ್ರಯೋಜನವಾದೀತು ಎಂತ ನಂಬಿದ್ದೇವೆ.

ಸದರಿ ಕನ್ನಡ ಪಂಚಾಂಗದಲ್ಲಿ "ನವವಿಧಭಕ್ತಿಯ" ವಿಷಯವಾದ ಒಂದು ಪ್ರಸಂಗ ಸಹಾ ಛಾಪಿಸಿ ಕೊಟ್ಟದೆ. ಈ ಪ್ರಸಂಗದಿಂದ ಹಿಂದು ಜನರ ಶ್ಲೋಕ ಮೊದಲಾದವುಗಳನ್ನು ಕ್ರೈಸ್ತಧರ್ಮ ಪ್ರಸಂಗಿಗಳು ತಮ್ಮ ಪ್ರಸಂಗಗಳಲ್ಲಿ ಹ್ಯಾಗೆ ಉಪಯೋಗ ಮಾಡ ಬಹುದು? ಎಂಬದು ಕಂಡು ಬರುವದರಿಂದ, ಉಪದೇಶಿಗಳು ಮೊದಲಾದ ಸಭೋದ್ಯೋಗಸ್ಥರು ಈ ಹೊಸ ಪಂಚಾಂಗವನ್ನು ದೊರಕಿಸಿ ಕೊಂಡು, ಆ ಪ್ರಸಂಗವನ್ನು ವಿಶೇಷ ತಾತ್ಪರ್ಯದಿಂದ ಓದಿ ಪರಾಂಬರಿಸಿ ಕೊಂಡಾರೆಂತ ಕೋರುತ್ತೇವೆ. ನಮ್ಮ (ಮಿಶ್ಯನ್ ಛಾಪೆಯ) ಕನ್ನಡ ಪಂಚಾಂಗವು ಈ ವರೆಗೂ ದಕ್ಷಿಣ ಮಹಾರಾಷ್ಟ್ರ ಶೀಮೆಯಲ್ಲಿ ತಕ್ಕಷ್ಟು ಪ್ರವೇಶ ಹೊಂದಲಿಲ್ಲಾ. ಅದಕ್ಕೆ ಅಲ್ಲಿಯೂ ಹೆಚ್ಚು ನೆಲೆ ಶಿಕ್ಕುವ ಹಾಗೆ ನಮ್ಮ ಧಾರವಾಡ, ಹುಬ್ಬಳ್ಳಿ, ಬೆಟ್ಟಗೇರಿ ಮೊದಲಾದ ಸಭೆಯವರು ಸಹಾಯ ಮಾಡ ಬೇಕೆಂದು ಬೇಡಿ ಕೊಳ್ಳುತ್ತೇವೆ. ನಮ್ಮ ಪಂಚಾಂಗದಲ್ಲಿ ಅನೇಕ ಜನಹಿತ ಪ್ರಸ್ತಾಪಗಳು ಮಾತ್ರವಲ್ಲಾ ಧರ್ಮಸಂಬಂಧ ಪ್ರಬಂಧಗಳೂ ಛಾಪೆಯಾಗುವದರಿಂದ ಅದನ್ನು ಆಗುವಷ್ಟು ಹಬ್ಬಿಸ ತಕ್ಕದ್ದಾಗಿದೆ.

☞ ಕ್ರೈಸ್ತಸಭಾಪತ್ರದ ಕ್ರಯವು ಇನ್ನು ಮುಂದೆ ೮ ಆಣೆ ಸೈ.

Printed by Stolz & Hirner, Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೮. **OCTOBER 1875.** ಅಂಕೆ ೪.

Mel: Jehovah, deinem Namen.

(ಒಂದನೇ ತುಳು ಗೀತದ ರಾಗದಲ್ಲಿ ಹಾಡ ತಕ್ಕದ್ದು.)

ಯೆಹೋವಾ! ಯೆಹೋವಾ! ಯೆಹೋವಾ, ನಿನ್ನ ನಾಮ
ಸದಾ ಸಂಕೀರ್ತ್ಯವೇ! ಆಮೆನ್, ಆಮೆನ್!
ತ್ರಿಜಗನ್ನಾಥನೇ! ಕರ್ತಾ! ಸದಾನಂದನೇ! ಸದಾ ನಮ್ಮ ಪತಿ ನೀನು.
ಸಂಕೀರ್ತ್ಯ, ಕೀರ್ತ್ಯ, ಕೀರ್ತ್ಯ, ಈಶಾ! ಹಲ್ಲೆಲುಯಾ! ಹಲ್ಲೆಲುಯಾ!

ಚಿನ್ನದ ಹರಳುಗಳು.

೧. ಉತ್ತಮ ವಿದ್ಯೆಯನ್ನು, ಸರ್ವವಿದ್ಯೆಗಳಲ್ಲಿ ಶಿಖಾಮಣಿಯಾದ ವಿದ್ಯೆಯನ್ನು ಅಭ್ಯಾಸ ಮಾಡಿ, ಸಾಧಿಸಿ ಕೊಳ್ಳಿರಿ! ಈ ವಿದ್ಯೆ ಯಾವದಂದರೆ: ಮಹಾ ಲಾಭ ಮಾಡಿ ಕೊಂಡು, ಸರ್ವೈಶ್ವರ್ಯ ಸಂಪನ್ನನಾಗುವ ವಿದ್ಯೆಯೇ. ಈ ವಿದ್ಯೆ ಯಾವದಂದರೆ: ನಾಲ್ಕು ಲಾಭಗಳನ್ನು ಮಾಡಿ ಕೊಳ್ಳುವ ವಿದ್ಯೆ. ಈ ನಾಲ್ಕು ಲಾಭಗಳು ಯಾವವಂದರೆ: ೧. ಕ್ರಿಸ್ತನನ್ನು ಲಾಭ ಮಾಡಿ ಕೊಳ್ಳೋಣ. ಫಿಲಿ. ೩, ೮. ೨. ಭಕ್ತಿಯೂ ತುಷ್ಟಿಯೂ (ಸಾಕೆಂಬುವ ಮನಸ್ಸು) ೧ ತಿಮೊ. ೬, ೬. ೩. ಬೇರೊಬ್ಬರನ್ನು ಕ್ರಿಸ್ತನಿಗಾಗಿ ಸಂಪಾದಿಸೋಣ. ೧ ಕೊರಿ. ೯, ೨೦—೨೨. ೪. ಕ್ರಿಸ್ತನಿಗೂ ಕ್ರಿಸ್ತನಲ್ಲಿಯೂ ಬದುಕಿ ಸಾಯುವದು. ಫಿಲಿ. ೧, ೨೧.

೨. ಸೈತಾನನು "ಆದಿಯಿಂದ ಕೊಲೆಗಾರ"ನಾಗಿರುವದಲ್ಲದೆ ಕಳ್ಳನೂ ಆಗಿರುತ್ತಾನೆ. ತನ್ನ ಕೆಲಸಕ್ಕೆ ನಿನ್ನ ಹೊತ್ತಿನ ಒಂದು ಕ್ಷಣ ಮಾತ್ರವೇ ಅಪಹರಿಸಿ ಕೊಳ್ಳಲಿಕ್ಕೆ ಅವನಿಗೆ ಇಂಬು ಶಿಕ್ಕಿದರೆ, ಸಂತೋಷ ಪಡುತ್ತಾನೆ. ಆದರೆ ಒಂದು ಕ್ಷಣವನ್ನು ಅಪಹರಿಸಿ ಕೊಂಡ ಮೇಲೆ ಇನ್ನೊಂದನ್ನೂ, ಇನ್ನೊಂದನ್ನೂ, ಕಡೆಗೆ ಬರೀ ಕ್ಷಣಕ್ಷಣಗಳೇ ಆಗಿರುವ ನಿನ್ನ ಆಯುಷ್ಕಾಲವೆಲ್ಲವನ್ನೇ ಅಪಹರಿಸಿ ಕೊಂಡವನಾಗುತ್ತಾನೆ.

೩. ಮೈಲೆ ರೋಗದಿಂದ ಬಹಳ ಬಾಧೆ ಬಿದ್ದ ಒಬ್ಬ ಚಿಕ್ಕ ಹುಡುಗನನ್ನು ನೋಡಲಿಕ್ಕಾಗಿ ಮನೇ ಸ್ನೇಹಿತನೊಬ್ಬನು ಬಂದು, ಹುಡುಗನನ್ನು ನೋಡಿ, ಶ್ರಮಾದಿಗಳಿಂದ ಭಕ್ತರಿಗೆ ಬರುವ ಉತ್ಕೃಷ್ಟ ಫಲಗಳ ವಿಷಯದಲ್ಲಿ ಮಾತಾಡಿ, ದೇವರನ್ನು ಪ್ರೀತಿ ಮಾಡುವವರಿಗೆ ಇಹದಲ್ಲಿ ಬಿದ್ದ ಒಂದೊಂದು ಕಷ್ಟ ಪರದಲ್ಲಿ ಒಂದೊಂದು ರತ್ನವೇ, ಒಂದೊಂದು ಬೊಕ್ಕೆ ಒಂದೊಂದು ಮುತ್ತೇ ಎಂಬ ಹಾಗೆ ಆಗುವದೆಂದು ಹೇಳಿ, ಆದರಿಸಿದ್ದರಿಂದ ಆ ಚಿಕ್ಕ ಹುಡುಗನಿಗೆ ಬಹಳ ಶಮನವಾಗಿ ಸಮಾಧಾನವೂ ಸಂತೋಷವೂ ಆಯಿತು. ಆ ಮಾತನ್ನು ಕೇಳಿದ ಅವನ ಅಕ್ಕಂದಿಯರಲ್ಲೊಬ್ಬಳು ಅವನಿಗೆ—ನಿನ್ನ ಬೊಕ್ಕೆಗಳಲ್ಲಿ ಒಂದನ್ನಾದರೂ ನನಗೆ ಮಾರಿ ಬಿಡು! ಎಂತ ಹೇಳಿದ್ದಕ್ಕೆ, ಅವನು—ಬೇಡ, ಒಂದನ್ನಾದರೂ ಕೊಟ್ಟು ಬಿಡೆ! ಎಂತ ಪ್ರತ್ಯುತ್ತರವಾಗಿ ಹೇಳಿದನು. ಅವಳು—ಒಂದನ್ನಾದರೂ ಯಾಕೆ ಕೊಟ್ಟು ಬಿಡ ಬಾರದು? ನಿನಗೆ ಇನ್ನು ತಕ್ಕಷ್ಟುಂಟಲ್ಲಾ! ಎಂಥೇಳಲು, ಅವನು—ಕೊಟ್ಟು ಬಿಡೆ, ಯಾಕಂದರೆ ತಂದೇ ಮನೆಯಲ್ಲಿ ಒಂದೊಂದು ಕಷ್ಟ ಒಂದೊಂದು ರತ್ನವೇ, ಒಂದೊಂದು ಬೊಕ್ಕೆ ಒಂದೊಂದು ಮುತ್ತೇ ಆಗುವದುಂಟು ಎಂತ ಕಟ್ಟುತ್ತರವಾಗಿ ಹೇಳಿದನು.

೪. ಕ್ರೈಸ್ತರು ತಾರತಮ್ಯ ನೋಡಿ, ಮಾನ ಮರ್ಯಾದೆಗಳಲ್ಲಿ ಹೆಚ್ಚುಕಡಿಮೆ ಮಾಡ ತಕ್ಕದ್ದೋ? ಮಾಡ ಬೇಕು. ಒಂದಾನೊಂದು ದಿವಸ ಅಷ್ಟು ಭಕ್ತಿಯಿಲ್ಲದ ಒಬ್ಬ ದೊಡ್ಡ ಧೊರೆ ಬೆಂಗಲ್ ಎಂಬ ದೇವಜ್ಞಾನಪಂಡಿತನ ಭೇಟಿಗೆ ಬಂದಿದ್ದ ಹೊತ್ತಿನಲ್ಲಿ ಒಬ್ಬ ಸದ್ಭಕ್ತನಾದ ಹಳ್ಳಿಯವನು ಸಹಾ ಬೆಂಗಲ್ ಧೊರೆಯ ಭೇಟಿ ಮಾಡಲಿಕ್ಕೆ ಬಂದನು. ಇವನು ಬಾಗಲಿನಲ್ಲಿ ಬರುವದನ್ನು ನೋಡಿ, ಬೆಂಗಲ್ ಎದ್ದು, ಅವನನ್ನು ಎದುರ್ಗೊಂಡು, ಆಶೀರ್ವದಿಸಿ, ಮುದ್ದಿಟ್ಟು, ಆ ಧೊರೇ ಕಡೆಗೆ ದೃಷ್ಟಿಸಿ, ಹೇಳಿದ್ದೇನಂದರೆ: "ಆದರೆ ಯೆಹೋವನಿಗೆ ಭಯ ಪಡುವವರನ್ನು (ನೀತಿವಂತನು) ಘನ ಪಡಿಸುತ್ತಾನೆ." (ಕೀರ್ತ. ೧೫, ೪.)

೫. ಬಹಳ ದೊಡ್ಡ ಧೊರೆಸಾನಿಯೊಬ್ಬಳು ಬೆಂಗಲ್ ಧೊರೆಯ ಭೇಟಿಗೆ ಬಂದು, ಸಂಭಾಷಣೆ ಮಾಡಲಾರಂಭಿಸಿದಳು. ಸಂಭಾಷಣೆಯಲ್ಲಿ ಬಿನ್ನೈಸಿ ಹೇಳಿ ಕೊಂಡಳು ಏನಂದರೆ: ಅಯ್ಯಾ! ನೀವು ಕಾಲಜ್ಞಾನಿಗಳೂ ದೀರ್ಘದರ್ಶಿಗಳೂ ಎಂತ ನಿಮ್ಮ ವಿಷಯ ಸುದ್ದಿ ಕೇಳಿದ್ದೇನೆ. ಆದ್ದರಿಂದ ದಯ ಮಾಡಿ ನನ್ನ ಪ್ರಶ್ನೆಗೆ ಉತ್ತರ ಕೊಡ ಬೇಕೆಂತ ಬೇಡಿ ಕೊಳ್ಳುತ್ತೇನೆ. ಅದೇನಂದರೆ: ಪರಲೋಕರಾಜ್ಯದಲ್ಲಿ ಶೇರಿದವರೆಲ್ಲರ ಸ್ಥಾನಗಳು ಒಂದೇ ತರವೋ? ದೊಡ್ಡ ಜನರಿಗೆ ಹೆಚ್ಚಿನ ಸ್ಥಾನಗಳು ಅಲ್ಲಿ ಶಿಕ್ಕವೋ? ಈ ಪ್ರಶ್ನೆಗೆ ಬೆಂಗಲ್ ಪ್ರತ್ಯುತ್ತರವಾಗಿ ಅಂದದೇನಂದರೆ: ನಾನು ಕಾಲಜ್ಞಾನಿಯಾಗಲಿ ದೀರ್ಘದರ್ಶಿಯಾಗಲಿ ಅಲ್ಲವೇ ಅಲ್ಲಾ. ದೇವರ ವಾಕ್ಯವನ್ನು ಓದಿ ಕೊಂಡು, ಒಂದಿಷ್ಟು ತಿಳುಕೊಂಡಿದ್ದೇನಷ್ಟೆ. ದೇವರ ವಾಕ್ಯವನ್ನು ನೋಡಿದರೆ, ಪರಲೋಕದ ಭಾಗ್ಯಸ್ಥಾನಗಳಲ್ಲಿ ತಾರತಮ್ಯವೆಂತ ಹೇಳ ಬೇಕು. ಹೆಚ್ಚಿನ ಸ್ಥಾನಗಳೂ ಸಿಂಹಾಸನಗಳೂ ಅಲ್ಲಿದ್ದಾವೆ. ಆದರೆ ಈ ಹೆಚ್ಚಿನ ಸ್ಥಾನಗಳಿಗೆ ಹೆಚ್ಚು ಅಭ್ಯಂತರಗಳಿರುತ್ತವೆ. ಆ ಸಿಂಹಾಸನಗಳ ಮೇಲೆ ಹೇರಳ ಧೂಳು ತೂರಿ ಬಿದ್ದದೆ. ಆ ಸಿಂಹಾಸನಗಳಲ್ಲಿ ದೊಡ್ಡ ಜನರು ಕೂತು ಕೊಳ್ಳ ಬೇಕಾದರೆ, ಅವರು ಆ ಧೂಳನ್ನು ಹಾರಿಸಿ ಒರಸಿ ಬಿಡ ಬೇಕು. ಮತ್ತಾ. ೧೯, ೨೪—೩೦; ೧ಕೊರಿ. ೧, ೨೬—೨೯.

ಒಬ್ಬ ರಾಜಕುಮಾರ.

ಗ್ರೀಷ್ಮ (ಬೇಸಿಗೇ) ಕಾಲದ ಒಂದಾನೊಂದು ದಿವಸ ಸಾಯಂಕಾಲ ಮಂದಮಾರುತವೆಂಬ ತಂಘಾಳಿ ಮಂದವಾಗಿ ಬೀಸಿ ಬರಲಾರಂಭಿಸಿದ ಹೊತ್ತಿನಲ್ಲಿ ದ್ವೀಪಾಂತರ ವ್ಯಾಪಾರದಿಂದ ಒದಗಿ

ಬಂದ ಐಶ್ವರ್ಯದ ದೆಶೆಯಿಂದ ಹೆಸರುಗೊಂಡ ಹಂಬುರ್ಗೆಂಬ ಜರ್ಮನ್ ದೇಶದ ಒಂದು ದೊಡ್ಡ ಪಟ್ಟದಲ್ಲಿ ಸಂಭವಿಸಿದ್ದೇನಂದರೆ: ಆ ನಗರದ ಉಪಪಟ್ಟ ಉಪವನಾದಿಗಳಿಗೆ ಹೋಗಿ, ಆಹಾರಕ್ಕೆ ತಕ್ಕ ವಿಹಾರ ಮಾಡಿ, ಹವ ತೆಗೆಯ ಬೇಕೆಂದಿದ್ದ ಅನೇಕ ಪಾದಚಾರಿಗಳಿಂದಲೂ ಕುದುರೇ ಸವಾರರಿಂದ ಲೂ ರಥಾರೂಢರಿಂದಲೂ ಆ ಪಟ್ಣದ ಒಂದು ಬೀದಿ ತುಂಬಿದ್ದಾಗ, ಊಚ ತರದ ವಸ್ತ್ರಾದಿಗಳನ್ನು ಹಾಕಿ ಕೊಂಡಂಥಾ, ಮುಖಲಕ್ಷಣ ಮೊದಲಾದ್ದರಿಂದ ಯೆಹೂದ್ಯನೆಂತ ಕಾಣಿಸಿ ಕೊಂಡಂಥಾ ಒಬ್ಬ ಯೌವನಸ್ಥನು ಸಹಾ ಕಾಲುಸವಾರಿ ಮಾಡಿ ಬಂದನು. ಅದೇ ಹೊತ್ತಿನಲ್ಲಿ ಆ ಬೀದಿಯ ತುದೀ ಕಡೆಯಲ್ಲಿಯ ಒಂದು ಚಿಕ್ಕ ಮನೆಯ ಬಾಗಲಿನಲ್ಲಿ ಒಬ್ಬ ಮೊಚ್ಚೆಗಾರನು ಕೂತು ಹಾಡುತ್ತಾ, ತನ್ನ ಕಸುಬಿನ ಕೆಲಸ ಮಾಡುತ್ತಿದ್ದನು. ಆ ಯೌವನಸ್ಥನು ಆ ಹಾಡನ್ನು ಕೇಳಿ, ಹಾಡುವವನ ಕಡೆಗೆ ತಲೆ ತಿರಿಗಿಸಿ ನೋಡಲಾಗಿ, ಆ ಮೊಚ್ಚೆಗಾರನ ಮುಖವೆಂಬ ಕನ್ನಡಿಯಲ್ಲಿ ಆನಂದಕಾಂತಿಯನ್ನು ಕಂಡು, ಅವನು ತಾಪತ್ರಯವೆಂಬದನ್ನರಿಯದ ನಿಶ್ಚಿಂತನೋ? ಎಂದು ಆಶ್ಚರ್ಯ ಪಟ್ಟು, ಅವನ ಹತ್ತರ ಹೋಗಿ, ಸಲಾಮ್ ಮಾಡಿ, ಮಾತಾಡಿಸಿ—"ನೀನು ಶೋಕ ತಾಪತ್ರಯಗಳೇನಿಲ್ಲದ ಸುಖಜೀವಿಯೋ ಎಂತ ಕಾಣುತ್ತದೆ, ಹಾದೋ?" ಎಂದು ಕೇಳಿದನು.

ಅದಕ್ಕೆ ಆ ಸಮಗಾರನು—"ನಾನು ಸುಖಜೀವಿ ಸರಿ; ಸಂಶಯವಿಲ್ಲಾ. ಇಷ್ಟಾಪೂರ್ತಿ ಹೊಂದಿದಂಥವನು ಸುಖವಾಗಿಯೂ ಸಂತೋಷಪೂರಿತನಾಗಿಯೂ ಬಾಳುವದು ಆಶ್ಚರ್ಯವೋ? ಸಹಜವಾದ್ದಲ್ಲವೋ?" ಎಂತ ಪ್ರತ್ಯುತ್ತರವಾಗಿ ಹೇಳಿದನು.

ಆ ಯೌವನಸ್ಥನು—"ನಿನಗೆ ಇಷ್ಟಾಪೂರ್ತಿಯಾಯಿತೋ? ಇಷ್ಟಾಪೂರ್ತಿ ಪ್ರಾಪ್ತಿ ಅಪರೂಪವೇ. ಅನೇಕಾನೇಕರಿಗೆ ಸುಖವೆಂಬದು ಇಲ್ಲವೇ ಇಲ್ಲಾ. ನಿನಗೆ ಆಶ್ಚರ್ಯ ಪಟ್ಟದ್ದೇನೆ. ನೀನು ಬಡವನಲ್ಲವೋ? ಬಡವನೆಂತ ಕಾಣುತ್ತಿದ್ದಿ. ನೀನು ಬಡವನಾದಾಗ್ಯೂ ಸುಖಿಯಾಗಿರುವದು ಹ್ಯಾಗೆ? ನಿನಗೆ ಸಂಸಾರವಿಲ್ಲದರಿಂದ, ಯಾರ ಚಿಂತೆಯೂ ಹಂಗೂ ಇಲ್ಲದೆ ನೀನು ಪಾಪಾಸುಗಳನ್ನು ಮಾಡಿ, ನಿನ್ನೊಬ್ಬನ ಹೊಟ್ಟೆ ತಕ್ಕ ಮಟ್ಟಿಗೆ ಹೊರ ಕೊಳ್ಳ ಬಹುದು ಎಂದು ನನಗೆ ತೋರುತ್ತದೆ. ಹಾದೋ? ಅಲ್ಲವೋ?" ಎಂತ ಕೇಳಿದ್ದಕ್ಕೆ

ಮೊಚ್ಚೆಗಾರನು—"ಅಲ್ಲಾ! ನಾನು ಕುಟುಂಬಿಯೇ: ಹೆಂಡತಿಯೂ ಏಳು ಮಂದಿ ಮಕ್ಕಳೂ ಹೀಗೆ ಒಂಭತ್ತು ಜನರ ಕಾಲಕ್ಷೇಪ ನನ್ನ ಕಷ್ಟಾರ್ಜಿತದಿಂದ ಆಗ ಬೇಕು. ಒಂದು ವಿಚಾರದಲ್ಲಿ ನಾನು ಬಡವನಾದರೂ, ನಾನು ಸುಖಜೀವಿ. ಬಡತನವು ನನ್ನ ಸಂತೋಷವನ್ನು ಹರಣ ಮಾಡಿ ಬಿಡಲಾರದ್ದು" ಎಂತ ಉತ್ತರ ಕೊಡಲು, ಆ ಯೌವನಸ್ಥನು—"ನಿನ್ನಂಥ ಅಲ್ಪ ಮನುಷ್ಯ ಇಷ್ಟು ಸಂತುಷ್ಟನಾಗಿಯೂ ತೃಪ್ತನಾಗಿಯೂ ಇರುವದು ಹ್ಯಾಗೆ? ಎಂಬದು ನನಗೇನು ತಿಳಿಯವಲ್ಲದು. ನಾನು ಬಹು ದಿವಸದಿಂದ ಸುಖಿಯಾಗ ಬೇಕೆಂತ ಆಶೆ ತಾಳಿ ಪ್ರಯತ್ನ ಮಾಡಿದೆ; ಆದರೆ ಸುಖದ ದಾರಿ ನನಗೆ ಯಾರೂ ಕಾಣಿಸಲಿಲ್ಲಾ" ಎಂತ ದುಃಖಭಾವದಿಂದ ಅರಿಕೆ ಮಾಡಿದಾಗ, ಆ ಸಮಗಾರನು ಅವನನ್ನು ಪ್ರೀತಿಭಾವದ ದೃಷ್ಟಿಯಿಂದ ನೋಡಿ, ಅವನಿಗೆ—"ನಾನು ನೀವು ನೆನಸುವಷ್ಟು ಬಡವನೂ ಅಲ್ಪನೂ ಅಲ್ಲವೇ ಅಲ್ಲಾ; ನಾನು ಒಬ್ಬ ರಾಜಕುಮಾರನಾಗಿದ್ದೇನೆ" ಎಂಧೇಳಿದನು.

ಈ ಮಾತನ್ನು ಕೇಳುತ್ತಲೇ ಆ ಯೌವನಸ್ಥನು—"ಇವನು ಹುಚ್ಚನೇ ಸೈ; ಅವನ ಸುಖ ಹುಚ್ಚುತನವೇ; ನನಗೆ ತಿಳಿಯದ ಸುಖಕ್ಕೆ ಶೇರುವ ದಾರಿ ಒಂದು ವೇಳ್ಯೆ ತೋರಿಸ್ಯಾನು ಎಂತ ನಾನು ಆಶೆ ತಾಳಿ ಕೋರಿದ್ದು ಮಣ್ಣಾಯಿತು" ಎಂದಂದು ಕೊಂಡು, ಅವನ ಹತ್ತರ ಹೆಚ್ಚು ತಡೆಯಲಿಕ್ಕೆ ಮನಸ್ಸಿಲ್ಲದೆ ನಡೆದು ಬಿಟ್ಟನು.

ಇದಾಗಿ ಏಳೆಂಟು ದಿನಗಳ ಮೇಲೆ ಆ ಯೌವನಸ್ಥನು ತಿರಿಗಿ ಆ ಸಮಗಾರನ ಮನೆಯ ಹಾದಿ

ಯನ್ನು ಹಾದು ಬರುವವನಾದಾಗ, ಸಮುಗಾರನನ್ನು ತಿರಿಗಿ ಆನಂದಮುಖನಾಗಿ ಕೆಲಸ ಮಾಡುವದರಲ್ಲಿ ಕಂಡು ಕೊಳ್ಳಲು, ಸಲಾಮ್ ಮಾಡಿ—"ಓ, ಯುವರಾಜಸಾಬ್! ನಿನ್ನ ಕ್ಷೇಮಲಾಭ ಸಮಾಚಾರ ಹ್ಯಾಗೆ?" ಎಂತ ಹಾಸ್ಯಮುಖನಾಗಿ ಕೇಳಿ, ಗೇಲಿ ಮಾಡಲಾಗಿ, ಆ ಸಮುಗಾರನು—"ಸ್ವಲ್ಪ ದಯ ಮಾಡಿ ಇತ್ತ ಬಂದು, ನನ್ನ ಮಾತನ್ನು ಕೇಳಿ; ರಾಯರೇ! ನೀವು ಅಂದು ನನ್ನ ಮಾತನ್ನು ಕೇಳಿ, ಇವನು ಹುಚ್ಚನೇ ಸೈ ಎಂದಂದು ಕೊಂಡು, ಹೆಚ್ಚಿನ ಉದಾಹರಣೆ ಏನೂ ಕೇಳದೆ, ನಡದು ಬಿಟ್ಟರಿ; ಅಲ್ಲವೋ?" ಎಂದು ಕೇಳಿದ್ದಕ್ಕೆ

ಆ ಯೌವನಸ್ಥನು—"ಹೌದು, ನೀನು ಮರುಳು; ನಿನ್ನ ಹತ್ತರ ಹೆಚ್ಚು ಮಾತಾಡಿದರೆ, ಅಪ ಮಾನವಾದೀತು ಎಂದು ನಾನು ನಡೆದು ಬಿಟ್ಟೆ" ಎಂದು ಯಥಾರ್ಥವಾಗಿ ಅರಿಕೆ ಮಾಡಿದಾಗ,

ಮೊಚ್ಚೆಗಾರನು—"ನಾನು ಹುಚ್ಚನಲ್ಲಾ, ನಾನು ಅಂದು ಹೇಳಿದ್ದು ಪೂರ್ಣ ನಿಜವೇ: ನಾನು ಒಬ್ಬ ರಾಜಪುತ್ರನೇ ಸರಿ. ದಯ ಮಾಡಿ, ನನ್ನ ಉದಾಹರಣೆಯನ್ನು ಲಾಲಿಸಿರಿ" ಎಂತ ಬೇಡಿ ಕೊಂಡು, ಆ ಯೌವನಸ್ಥನು ನೂತನ ಯೆಹೂದ್ಯರೆನ್ನಿಸಿ ಕೊಳ್ಳುವವರ ಮತವಾದದ ಶಳವಿನಲ್ಲಿ ಬಿದ್ದು, ವಿಶ್ವಾಸದ ಆಧಾರವೇನೂ ಇಲ್ಲದವನಾಗಿ ಶಳಕೊಂಡು ಹೋಗುವ ಯೆಹೂದ್ಯ ವಿದ್ಯಾರ್ಥಿ ಎಂತ ತಿಳುಕೊಂಡು, ಸಮಾಧಾನದ ಪ್ರಭುವೂ ಸಕಲ ಜನಾಂಗಗಳ ಅರಸನೂ ವಿಶ್ವರಾಜನೂ ಎನ್ನಿಸಿ ಕೊಳ್ಳುವ ಮೆಸ್ಸಿಯನ ವಿಷಯದಲ್ಲಿ ಮಾತಾಡಿ, ಸಾಕ್ಷಿ ಕೊಡ ತೊಡಗಿ, ಕೀರ್ತನೆಗಳ ಹಾಗೂ ಪ್ರವಾದಿಗಳ ಆಧಾರದ ಮೇಲೆ ತಾನು ನಂಬುವ ಯೇಸು ಮೆಸ್ಸಿಯನೇ, ಯಾಕೋಬ, ದಾವೀದ, ಯೆಶಾಯ ಮುಂತಾದವರ ಮೆಸ್ಸೀಯನ ವಿಷಯವಾದ ಕಾಲಜ್ಞಾನದ ವಾಕ್ಯಗಳು ಯೇಸುವಿನಲ್ಲಿ ಈಡೇರಿ ಪೂರ್ತಿಯಾದವು ಎಂತಾ ತೋರಿಸಿ, ಯೇಸು ತಿರಿಗಿ ಬಂದು, ತನ್ನ ರಾಜ್ಯವನ್ನು ಪೂರ್ಣ ಸಿದ್ಧಿಗೆ ಹತ್ತಿಸಿ, ಮಹಿಮೆಯುಳ್ಳದ್ದಾಗಿ ಭೂಲೋಕದಲ್ಲಿ ಸ್ಥಾಪಿಸುವ ಕಾಲದಲ್ಲಿ ಆತನಲ್ಲಿ ವಿಶ್ವಾಸವಿಟ್ಟ ತಾನು ಆತನವರ ಜೊತೆಯಲ್ಲಿ ಆತನೊಂದಿಗೆ ರಾಜನಾಗಿ ಸದಾಕಾಲ ಬಾಳಿ ಆಳುವ ಕೋರಿಕೆಯನ್ನು ಅರಿಕೆ ಮಾಡಿದ ಮೇಲೆ ಆ ಯೌವನಸ್ಥನಿಗೆ—"ನಾನು ಒಬ್ಬ ರಾಜಪುತ್ರನೇ ಎಂಬ ಮಾತಿಗೆ ನೀವು ಇನ್ನು ವಿಸ್ಮಿತರಾಗಿ ಸಂಶಯ ಹಿಡಿದಿದ್ಧೀರೋ? ನಾನು ಇಷ್ಟಾಪೂರ್ತಿ ಹೊಂದಿ, ಕೇವಲ ಸಂತುಷ್ಟನೂ ಪೂರ್ಣ ಸಂತೃಪ್ತನೂ ಆಗಿದ್ಧೇನೆಂಬದಕ್ಕೆ ತಕ್ಕ ಆಧಾರವಿಲ್ಲವೋ? ನಾನು ಆತನವನೇ ಆಗಿರೋಣವೂ ಆತನೂ ಅದಕ್ಕೆ ಆಧಾರ. ನಾನು ಸರ್ವೈಶ್ವರ್ಯವಿದ್ದಂಥ ಯುವರಾಜ, ಯಾಕಂದರೆ ನಾನು ಯೇಸುವಿನವನಾದ್ದರಿಂದ ಇರುವಂಥಾದ್ದೆಲ್ಲವು ನನ್ನದೇ, ಆಗುವಂಥಾದ್ದೆಲ್ಲವು ನನ್ನ ಮೇಲಿಗೆನೇ ಕೈಕೂಡಿ ಬರ ಬೇಕು. ಇದು ನನ್ನನ್ನು ಪೂರ್ಣ ಭಾಗ್ಯವಂತನಾಗ ಮಾಡಿರಿಸಲಿಕ್ಕೆ ಸಾಲದೋ?" ಎಂತ ವಿವರವಾಗಿ ಮಾತಾಡಿದ ಕಡೆಗೆ ಆ ವಿದ್ಯಾರ್ಥಿ—"ನನ್ನ ಸ್ಥಿತಿ ಸಹಾ ನಿನ್ನದರಂತಾಗಿದ್ದರೆ, ಆಗುತ್ತಿತ್ತು. ನಾನು ಹ್ಯಾಗೆ ಮಾಡಿ, ನೀನು ಹಿಡುಕೊಂಡಿರುವ ಮಾರ್ಗಕ್ಕೆ ಶೇರಲಿ?" ಎಂತ ಹೇಳಿದಾಗ, ಆ ಮೊಚ್ಚೆಗಾರನು ಅವನಿಗೆ ಒಂದು ಬೈಬಲನ್ನು ಕೊಟ್ಟು, ಅದನ್ನು ತನ್ನ ಪಿತೃಗಳ ದೇವರಾದ ಯೆಹೋವನಿಗೆ ಪ್ರಾರ್ಥಿಸುವವನಾಗಿ ಓದಿಕೊಳ್ಳ ಬೇಕೆಂಧೇಳಿದನು. ಆ ವಿದ್ಯಾರ್ಥಿ ಅದನ್ನು ತೆಗೆದು ಕೊಂಡು, ಹಾಗೆಯೇ ಓದಿ ಕೊಂಡು, ಯೇಸುವಿನಲ್ಲಿ ನಂಬುವವನಾಗಿ, ನಿಜ ಸಮಾಧಾನವನ್ನೂ ಭಾಗ್ಯವನ್ನೂ ಹೊಂದಿ, ಕ್ರೈಸ್ತ ಸ್ನಾನದಲ್ಲಿ ಯೇಸುವನ್ನು ಬಹಿರಂಗವಾಗಿಯೂ ಅರಿಕೆ ಮಾಡಿ, ತನ್ನ ಸ್ವಜಾತಿಯವರಾದ ಯೆಹೂದ್ಯರಲ್ಲಿ ಮಿಶ್ಯನೆರಿಯಾದನು.

ಆ ಮೊಚ್ಚೆಗಾರನು ಈಗ ಮೊಚ್ಚೇ ಕೆಲಸವನ್ನು ಬಿಟ್ಟು, ತನ್ನ ರಾಜಪಟ್ಟಕ್ಕೆ ಹೋಗಿ ಕೂತಿದ್ಧಾನೆ. ಅಂಥಾ ರಾಜಪುತ್ರರು ನಮ್ಮಲ್ಲಿ ಎಷ್ಟು ಮಂದಿ?

ಕಿವಡ ಮೂಕ ಫ್ರೆಂಚ ಹುಡುಗನೊಬ್ಬನು.

ವಿಲಾಯತೀ ಬೇರೆ ಬೇರೆ ದೇಶಗಳಲ್ಲಿ ಹ್ಯಾಗೋ ಹಾಗೆ ಫ್ರೆಂಚ ದೇಶದಲ್ಲಿಯೂ ಕುರುಡ ಹುಡುಗರಿಗಾಗಿಯೂ, ಕಿವಡ ಮೂಕ ಹುಡುಗರಿಗಾಗಿಯೂ ಶಾಲೆಗಳು ಸ್ಥಾಪಿಸಿ ಅವೆ. ಇಂಥಾ ಶಾಲೆಗಳನ್ನು ಹೋಗಿ ನೋಡ ಬೇಕೆಂತ ಒಬ್ಬ ಭಕ್ತನಾದ ಧೊರೆ ಫ್ರೆಂಚ ದೇಶದಲ್ಲಿ ಸಂಚಾರ ಮಾಡುವವನಾಗಿ, ಒಂದಾನೊಂದು ಅಂಥಾ ಶಾಲೆಯ ಹುಡುಗರಲ್ಲಿ ವಿಶೇಷ ಸಾಧುಭಾವದ ಮುಖಲಕ್ಷಣವುಳ್ಳ ಕಿವಡ ಮೂಕ ಹುಡುಗನನ್ನು ಕಂಡು, ಅವನನ್ನು ಕೆಲವು ಪ್ರಶ್ನೆ ಹಾಕಿ ಮಾತಾಡಿಸ ಬೇಕೆಂತ ಮನಸ್ಸಾಗಿ, ಪ್ರಶ್ನೆ ಹಾಕಿ ಕೇಳಿದ್ದೇನಂದರೆ: "ಈ ಭೂಲೋಕವನ್ನು ಸೃಷ್ಟಿಸಿದಾತನು ಯಾರು?" ಆ ಹುಡುಗನು ತನ್ನ ಸ್ಲೇಟು ತೆಗೆದು ಕೊಂಡು ಅದರಲ್ಲಿ ಬರದು ತೋರಿಸಿ ಕೊಟ್ಟ ಜವಾಬು ಏನಂದರೆ: "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿದನು." (ಉತ್ಪ. ೧, ೧) ಬಳಿಕ—"ನಿನಗೆ ಸದ್ಗತಿಯಾಗುವ ದಾರಿಯೇನು?" ಎಂಬ ಪ್ರಶ್ನೆಗೆ ಆ ಹುಡುಗನು—"ಪಾಪಿಗಳನ್ನು ರಕ್ಷಿಸಲಿಕ್ಕಾಗಿ ಯೇಸು ಕ್ರಿಸ್ತನು ಲೋಕಕ್ಕೆ ಬಂದನೆಂಬುವ ವಾಕ್ಯವು ಪೂರ್ಣ ಅಂಗೀಕಾರಕ್ಕೂ ನಂಬಿಕೆಗೂ ಅತಿ ಯೋಗ್ಯವಾದ್ದೆ" (೧ ತಿಮೊ. ೧, ೧೫.) ಎಂತ ಬರದು ಪ್ರತ್ಯುತ್ತರ ಕೊಟ್ಟನು. ಕಡೆಗೆ—"ಹೆಚ್ಚಾದ ಜನರಿಗೆ ಬಾಯಿ ಕಿವಿ ಮೊದಲಾದ್ದು ಇರಲಾಗಿ, ದೇವರು ನಿನ್ನನ್ನು ಕಿವಡ ಮೂಕನಾಗಿ ಹುಟ್ಟಿಸಿದ್ದು ಯಾಕೆ?" ಎಂತ ಆ ಧೊರೆ ಕೇಳಿದ್ದಕ್ಕೆ, ಹುಡುಗನು ಸ್ವಲ್ಪ ಅಡಚಣಿಬಿದ್ದಂತಾಗಿ ಒಂದಿಷ್ಟು ತಡದ ಮೇಲೆ ಜವಾಬಾಗಿ ಬರದು ಕೊಟ್ಟದ್ದೇನಂದರೆ: "ಹೌದು, ತಂದೆಯೇ! ಯಾಕಂದರೆ ಹೀಗೆ ನಿನ್ನ ದೃಷ್ಟಿಯಲ್ಲಿ ಒಳ್ಳೇದಾಗಿತ್ತು." (ಮತ್ತಾ. ೧೧, ೨೬.)

ದೃಷ್ಟಿ, ಕಿವಿ ಮೊದಲಾದ ಪಂಚೇಂದ್ರಿಯಗಳು ಮಾತ್ರವಲ್ಲಾ, ಬರಹವನ್ನೂ ದೇವರ ವಾಕ್ಯವನ್ನೂ ಕಲಿತು ಕೊಳ್ಳಲಿಕ್ಕೆ ಬಹಳ ಸಹಾಯವೂ ಅನುವೂ ಇದ್ದಂಥಾ ನಿನ್ನನ್ನೂ ಆ ಹುಡುಗನನ್ನೂ ಕರ್ತನು ತನ್ನ ದಿನದಲ್ಲಿ ಸರಿ ನೋಡಿದರೆ, ನಿನಗೆ ಹೆಚ್ಚು ಮೆಚ್ಚಲಿಕ್ಕೆ ಕಾರಣವಿದ್ದೀತೋ? ಆ ಕಿವಡ ಮೂಕ ಫ್ರೆಂಚ ಹುಡುಗನಿಗೆ ಹೆಚ್ಚು ಮೆಚ್ಚಲಿಕ್ಕೆ ಕಾರಣ ಕಂಡೀತೋ? "ಮೊದಲಿನವರು ಕಡೆಯವರೇ, ಕಡೆಯವರೇ ಮೊದಲಿನವರು" ಆಗುವದುಂಟು ಎಂಬದನ್ನು ನೆನಸಿ ಕೊಂಡು, ಹಿಂದೆ ಬೀಳದ ಹಾಗೆ ಜಾಗ್ರತೆ ಪಟ್ಟು, ನೋಡಿಕೋ!

ಕ್ರಿಸ್ತನಲ್ಲಾನಂದವು.

ರಾಗ: ಅಸಾವೇರಿ.] [ತ್ರಿಪುಟತಾಳ.

ಪಲ್ಲವಿ

ಲೋಕೇಶ ಕ್ರಿಸ್ತನಾಶ್ರಯ ಹೊಕ್ಕೆ ಬಿಡದೆ
ಶೋಕೆಯಿಂದಲೆ ಸುಮೋದವು ನಿತ್ಯ ಕೆಡದೆ.

ಚರಣಗಳು.

೧. ಸುವಿಶೇಷ ಬೋಧೆಗಳ್ಮನದಿ ಗ್ರಹಿಸಿದೆ,
ಅವಿವೇಕ ಶಾಸ್ತ್ರೋಕ್ತಗಳು ನಿಗ್ರಹಿಸಿದೆ,
ಭವರೋಗಹರನ ಮಂಗಳ ಮಾರ್ಗ ಪಿಡಿದೆ,
ಅವರೋಧ ಪಾಪಗಳ್ಬಿಟ್ಟು ಜೀವಿಸಿದೆ. ಲೋಕೇ—

೨. ರಾಗದ್ವೇಷಗಳ ಸಂಭ್ರಮವೆಲ್ಲ ಹರಿದು,
ಮೂಗಿ ಬೊಂಬೆಗಳ ಸ್ವರೂಪಗಳ್ಕಡಿದು,
ಯೋಗಮಾರ್ಗಗಳೆಲ್ಲ ಬೆಂಬತ್ತಿ ಮಡಿದು,
ಸಾಗಿ ಪಾದಕೆ ಶುದ್ಧನೇಸುವನ್ನೊಲಿದು. ಲೋಕೇ—

೩. ಬಾಧೆ ಗುರುವುಗಳಿಂದ ಬಹು ಲಜ್ಜೆ ವಹಿಸಿ,
ಗಾಧೆ ಮಂತ್ರಗಳೆಲ್ಲ ಕಡೆಗೆ ಧಿಕ್ಕರಿಸಿ,
ಶೋಧನಾತ್ಮದಿ ನಾನು ಶುದ್ಧತ್ವವೆಳಸಿ,
ಸಾಧೀಯು ಕರುಣೇಸು ಶರಣಕ್ಕೆ ಬಯಸಿ. ಲೋಕೇ—

೪. ಕುಲ ಗೋತ್ರಗಳ ಬುದ್ಧಿ ಕುಟಿಲ ಚೆಂಡಿರಿದು,
ಬಲವತ್ಪಿಶಾಚ ಶೃಂಖಳವೆಲ್ಲ ಮುರಿದು,
ಶಿಲುಬೆ ಪೊತ್ತವನ ಸೌಖ್ಯೋಗ್ನ ತಿನ್ಬೆರದು,
ನೆಲೆಯಾಗಿ ಆತನೋಳ್ನಿತ್ಯನಾ ಮೆರೆದು. ಲೋಕೇ—

೫. ದುರಿತ ಭಂಜನ ಸೊಂಪು ಪೆಂಪು ಮಾಡುತಲಿ,
ನಿರುತ ಜೀವವನ್ನೋಳ್ವಹಿಸಿ ಕೂಡುತಲಿ,
ಪರಮ ಭಾಗ್ಯವು ಭಕ್ತಿಯಿಂದ ನೋಡುತಲಿ,
ಹಿರಿದು ಮೋಕ್ಷಾನಂದದಿನವು ಬೇಡುತಲಿ. ಲೋಕೇ—

"ತ್ವರೆ ಪಡುವೆ".

ಗೋಧಿ ಮೊದಲಾದ ಧಾನ್ಯಗಳನ್ನು ಕೊಂಡುಕೊಂಡು, ಬೀಸಿ, ಹಿಟ್ಟು ಮಾರಿ ವ್ಯಾಪಾರ ಮಾಡುವ ಗೃಹಸ್ಥನೊಬ್ಬನು ಹೊಸ ಧಾನ್ಯಗಳನ್ನು ಕ್ರಯಕ್ಕೆ ತೆಗೆದು ಕೊಳ್ಳ ಬೇಕೆಂತ ಕೆಲವು ಹರ ದಾರಿ ದೂರವಾದ ಊರಿನಲ್ಲಿ ನೆರೆಯುವ ಸಂತೆಗೆ ಹೋಗಲಿಕ್ಕಿದ್ದ ಒಂದಾನೊಂದು ದಿನದ ಹೊತ್ತಾರೆಯಲ್ಲಿ ಎದ್ದು, ಹೊರಡಲಿಕ್ಕೆ ಸೌರಣೆ ಮಾಡಿದ ಸಪ್ಪಳವನ್ನು ಅವನ ಏಳು ವರುಷದ ಮಗನು ಕೇಳಿ, ನಿದ್ರೆ ತಿಳಿದು, ತಂದೆಯನ್ನು ಕರದು: ತಂದೆಯೇ! 'ಜೀವವನ್ನ ಹೊಂದ ನನ್ನ ಆಶೆ ಇಹುದು' ಎಂಬ ಗೀತವನ್ನು ನನ್ನ ಸಂಗಡ ಹಾಡಿ, ನನಗೆ ಮುದ್ದಿಟ್ಟು ಹೋಗ ಬೇಕು ಎಂದು ಬೇಡಿ ಕೊಂಡನು. ಆ ಗೃಹಸ್ಥನು ದಿನಾಲು ತನ್ನ ಮನೆಯವರನ್ನು ಕೂಡಿಸಿ, ಅವರ ಸಂಗಡ ದೇವರ ವಾಕ್ಯ ಓದಿ, ಪ್ರಾರ್ಥನೆ ಮಾಡಿ, ಗೀತಗಳನ್ನು ಸಹಾ ಹಾಡುತ್ತಾ ಹಾಡಿಸುತ್ತಾ ಬಂದು, ಒಳ್ಳೇ ಸದ್ಭಕ್ತನಾಗಿದ್ದದರಿಂದ ಆ ದಿನದ ಹೊತ್ತಾರೆಯಲ್ಲಿ ಎಷ್ಟು ಅವಸರದಲ್ಲಿದ್ದಾಗ್ಯೂ, ಮಗನ ವಿಜ್ಞಾಪನೆ ಕೇಳಿ, ತಡದು, ಸದರಿ ಗೀತದ ಮೊದಲನೇ ಶ್ಲೋಕವನ್ನು ಉಳಿದ ಮಕ್ಕಳು ಎಚ್ಚರಾಗದ ಹಾಗೆ ಮೆಲ್ಲ ಸಪೂರ ಸ್ವರದಿಂದ ಮಗನ ಸಂಗಡ ಹಾಡಿದನು. ಆ ಇಡೀ ಶ್ಲೋಕ ಹ್ಯಾಗಂದರೆ:

ಜೀವವನ್ನ ಹೊಂದ ನನ್ನ ಆಶೆ ಇಹುದು;
ದೃಢದಿಂದ ಇಂದಿನಿಂದ ತಡ ಮರೆತು,
ಹೋಗುತ್ತೇನೆ ಗುರಿಗೆ; ಹಿಂದಕೆಂದು ದೃಷ್ಟಿಸೆ.
ಎಲ್ಲ ಬಿಟ್ಟು, ಮನಸಿಟ್ಟು ಅರ್ಸಿ ಕೊಂಬೆನು.

ಅದನ್ನು ಹಾಡಿದ ಮೇಲೆ—ಈಗ ಹೋಗುತ್ತೇನೆಂಧೇಳಿ, ಮಗನಿಗೆ ಮುದ್ದಿಟ್ಟನು. ಆದರೆ ಮಗನು—ಎರಡನೇ ಶ್ಲೋಕ ವಿಶೇಷ ಮನೋಹರವಾದ್ದು, ಆದ್ದರಿಂದ ಅದನ್ನು ಸಹಾ ತನ್ನ ಸಂಗಡ ಹಾಡಿ ತೀರಿ

ಸುವರೆ ದಯ ಮಾಡಿ ತಡೆಯ ಬೇಕೆಂತ ಬೇಡಿಕೊಳ್ಳಲು, ತಂದೆ ಅದನ್ನೂ ಹುಡುಗನ ಸಂಗಡ ಹಾಡಿದನು, ಹ್ಯಾಗಂದರೆ:

> ಪೀಠಕಾಗಿ ಓಡಲಾಗಿ ತ್ವರೆ ಪಡುವೆ.
> ಲಾಭವೇನು, ಕೀರ್ತಿಯೇನು ಉದಾಸೀನನಗೆ?
> ಯುದ್ಧದೊಳ್ ಮೈಗಳ್ಳನು ಜಯ ಹೊಂದ ಕೂಡದು,
> ನಿದ್ರೆಗಾರ ಗೆಲ್ಲಲಾರ; ನೆನೆ, ಮನವೆ!

ಈ ಶ್ಲೋಕ ಸಹಾ ಹಾಡಿಯಾದ ಮೇಲೆ ತಂದೆ ಮಗನಿಗೆ ಇನ್ನೊಮ್ಮೆ ಮುದ್ದಿಟ್ಟನು. ಮುದ್ದಿಡುವಾಗ ಹುಡುಗನು ಮಮಕಾರಪೂರ್ವಕದಿಂದ ತಂದೆಯ ಕುತ್ತಿಗೆಯನ್ನು ಅಪ್ಪಿ ಕೊಂಡನು. ಆ ಗೃಹಸ್ಥನು ಸಂತೆಗೆ ಹೊರಟನು; ಆದರೆ ಸಾಯಂಕಾಲದಲ್ಲಿ ಮನೆಗೆ ಬರುವಾಗ ಹುಡುಗನು ಸಹಾ ಹೊರಟಿದ್ದನು, ಎಲ್ಲಿಗಂದರೆ: ಕ್ರಿಸ್ತರಾಜನ ಅರಮನೆಗೆನೇ. ಆ ದಿನದ ಮಧ್ಯಾಹ್ನದಲ್ಲಿ ಅವನು ಚಾಕ್ರಿಯವನ ಜತೆಯಲ್ಲಿ ಕುದುರೇ ಗಾಡಿಯನ್ನು ಹತ್ತಿಕೊಂಡು ಹೋಗಲು, ನಿದ್ದೆ ಬಿದ್ದು, ಮೈಮರತು ಹೋಗಿರಲಾಗಿ, ಗಾಡಿಯಿಂದ ಕೆಳಗೆ ಹೊರಳಿ ಬಿದ್ದು, ಗಾಲಿಯಿಂದ ಜಖಮಾಗಿ ತೀರಿ ಹೋದನು. ಹುಡುಗನ ಶವ ನೋಡಿ, ತಂದೆ—"ಪೀಠಕಾಗಿ ಓಡಲಾಗಿ ತ್ವರೆ ಪಡುವೆ" ಎಂತ ನೀನು ಈ ಹೊತ್ತಿನ ಹೊತ್ತಾರೆಯಲ್ಲಿ ವಿಶೇಷ ಇಷ್ಟದಿಂದ ಹಾಡಿದ್ದು ನಿಜವಾಯಿತು. ತ್ವರೆ ಪಟ್ಟು ಹೋದಿ; ಆದರೆ ನೀನು ಕಳದು ಹೋಗಲಿಲ್ಲಾ; ನೀನು ಕ್ರಿಸ್ತರಾಜನ ಪೀಠಕ್ಕೆ ಆತನ ಕೈಯಿಂದ ನಿತ್ಯ ಜೀವದ ಕಿರೀಟವನ್ನು ಹೊಂದಲಿಕ್ಕೆ ಹೋದದರಿಂದ, ನಾನು ದುಃಖ ಪಡದೆ, ನೀನು ಹೋದಲ್ಲಿಗೆ ನಾನೂ ಹೋಗಲಿಕ್ಕೆ ತ್ವರೆ ಪಡ ತಕ್ಕದ್ದು ಎಂಥೇಳಿ, ದುಃಖೋಪಶಮನ ಮಾಡಿ ಕೊಂಡನು.

ಲೇಖನ.

ಅಯ್ಯಾ!

ಇದೇ ೧೮೭೫ನೆ ಇಸವಿಯ ಫೆಬ್ರುವರಿ ಮತ್ತು ಮಾರ್ಚ ತಿಂಗಳುಗಳಲ್ಲಿ ೧ ತಿಂಗಳು ೨೮ ದಿವಸಗಳ ವರೆಗು ೩೦೦-೩೨೦ ಹರದಾರಿ ದೂರದ ವರೆಗೆ ದಕ್ಷಿಣ ಹಿಂದುಸ್ಥಾನದಲ್ಲಿ ಮಾಡಿದ ನಮ್ಮ ಪ್ರಸಂಗಪ್ರಯಾಣದ ಸಾರಾಂಶವನ್ನು ಬರೆದು, ತಮ್ಮ ಸನ್ನಿಧಾನಕ್ಕೆ ಕಳುಹಿಸುತ್ತೇನೆ. ಈ ಸಂಕ್ಷೇಪ ಚರಿತ್ರೆ ನಾಲ್ಕು ಜನ ಓದಿ ಕೊಳ್ಳುವದಕ್ಕೆ ಉಪಯೋಗವಾದ್ದೆಂದು ತಮಗೆ ಕಂಡು ಬಂದ ಪಕ್ಷದಲ್ಲಿ, ಇದಕ್ಕೆ ದಯ ಮಾಡಿ ತಮ್ಮ ಸುಂದರವಾದ ಪತ್ರಿಕೆಯ ಗರ್ಭದಲ್ಲಿ ಠಾವು ಕೊಡ ಬೇಕಂತ ಬೇಡಿ ಕೊಳ್ಳುತ್ತೇನೆ.

ನಾವು ಇಬ್ಬರಾಗಿ ಹುಬ್ಬಳಿ ಬೆಟಗೇರಿಯಿಂದ ಫೆಬ್ರುವರಿ ೩ನೆ ತೇದಿಯಲ್ಲಿ ಹೊರಟು, ಮುಂದೆ ಮಾರ್ಚಿ ತಿಂಗಳಿನ ೨೮ನೆ ತಿಥಿಯ ವರೆಗು ನಮ್ಮ ದಕ್ಷಿಣ ಹಿಂದುಸ್ಥಾನದ ಕೆಲವು ದೊಡ್ಡ ಪಟ್ಣಗಳಿಗೂ ಗ್ರಾಮಗಳಿಗೂ ಹೋಗಿ, ನಡಿಸಿದ್ದನ್ನೂ ಅನುಭವಿಸಿದ್ದನ್ನೂ ಮೂರು ಪಾಲು ಮಾಡಿ ಹೇಳ ಬಹುದು; ಹ್ಯಾಗಂದರೆ:

ಮೊದಲನೆ ಪಾಲು — ನಾವು ನಮ್ಮ ಪ್ರಸಂಗಪ್ರಯಾಣವನ್ನು ಲಕ್ಕುಂಡಿಯಿಂದ ಪ್ರಾರಂಭಿಸಿ, ಮುಂದೆ ಬಳ್ಳಾರಿಯ ವರೆಗಿರುವ ದೊಡ್ಡ ದೊಡ್ಡ ಊರುಗಳಲ್ಲಿ ಒಂದೊಂದು ಎರಡೆರಡು ದಿವಸ ನಿಂತು ಒಟ್ಟಿಗೆ ಮಾರ್ಗದಲ್ಲಿ ೧೫ ದಿವಸ ಪ್ರಸಂಗ ಕೆಲಸ ನಡಿಸಿಕೋತ್ತ ಬಳ್ಳಾರಿಗೆ ಬಂದೆವು. ಲಕ್ಕುಂಡಿಯಿಂದ ಬಳ್ಳಾರಿಯ ವರೆಗಿರುವ ಡಂಬಳ, ಮುಂಡಗಿರಿ, ಹಂಪಸಾಗರ, ಹೆಸರೂರು, ನಾರಾಯಣಕೇರಿ, ಚಿತವಾಡಗಿ, ದರೋಜಿ, ಕುಡತನಿ ಮುಂತಾದ ಗ್ರಾಮಗಳಲ್ಲಿ ಜನರು ನಮ್ಮ ಸುದ್ದಿ ಅಂದರೆ ಸುವಾರ್ತೆಯನ್ನು ಚನ್ನಾಗಿ ಮನಗೊಟ್ಟು ಕೇಳಿ, ತಕ್ಕಷ್ಟು ಹೊತ್ತಿಗೆಗಳನ್ನು ಸಹಾ ಸಂತೋಷದಿಂದ

ಕೊಂಡು ಕೊಂಡರು. ಮತ್ತು ಇಳಿಯಲಿಕ್ಕೆ ಪ್ರೀತಿಯಿಂದ ಸ್ಥಳ ಕೊಟ್ಟು, ಯಾವ ಮಾತಿಗೂ ಏನು ಅಡ್ಡಿ ಮಾಡದೆ, ನಮ್ಮ ಹತ್ತರ ಬರುತ್ತಾ ಹೋಗುತ್ತಾ, ದೇವರ ವಾಕ್ಯವನ್ನು ಕೇಳುತ್ತಾ, ತಿಳಿಯುವ ಅಪೇಕ್ಷೆಯಿಂದ ತರ್ಕ ಮಾಡುತ್ತಾ ಇದ್ದರು. ಕರ್ತನು ಅವರು ಕೇಳಿದ ವಾಕ್ಯವನ್ನು ಅವರ ರಕ್ಷಣೆಯ ಪ್ರಯೋಜನಕ್ಕೋಸ್ಕರ ಆಶೀರ್ವದಿಸುವವನಾಗಲಿ.

ಆದಾಗ್ಯೂ ಈ ಮೊದಲನೆ ಪಾಲು ಮುಗಿಸುವದಕ್ಕಿಂತ ಮುಂಚಿತವಾಗಿ ನಡಿದ ಇನ್ನೊಂದು ವಿಶೇಷವಾದ ಸಂಗತಿಯನ್ನು ಪ್ರಿಯ ಪಾಠಕರಿಗೆ ಬಿಡದೆ ಹೇಳ ಬೇಕಾಗುತ್ತದೆ. ಅದೇನಂದರೆ—"ಏಡಿ ಹತ್ತಿದ ಕೆರೆ ಹಾಳು, ಹಾರವ ಇದ್ದ ಊರು ಹಾಳು" ಎಂಬ ಗಾದೆಯ ಮಾತು ನಮಗೆ ನಾರಾಯಣ ಕೇರಿಯಲ್ಲಿ ಸಂಭವವಾಯಿತು. ನಾವು ಈ ಊರೊಳಗೆ ಪ್ರಸಂಗಕ್ಕೆ ಹೋದ ಸಮಯದಲ್ಲಿ ನಮ್ಮ ಪ್ರಸಂಗ ಕೇಳುವದಕ್ಕೆ ಕೂಡಿ ಬಂದಿದ್ದ ಜನರೊಳಗಿರುವ ಹಾರುವರಲ್ಲಿ ಕೆಲವರು ನಮ್ಮ ಪ್ರಸಂಗ ಕೇಳೋದು ಬಿಟ್ಟು, ಅಲ್ಲಿಂದ ಘಟಕ್ಕನೆ ಎದ್ದು ಹೋಗಿ, ನಾವು ಇಳು ಕೊಂಡ ಸ್ಥಳ ಗೊತ್ತು ಹಚ್ಚಿ, ಅಲ್ಲಿರುವ ನಮ್ಮ ಆಳುಗಳಿಗೆ ಕಂಡಾಬಟ್ಟೆ ಬೈದಾಡಿ, ಗದ್ದಲ ಮಾಡಿ, ಆಗಲೇ ತೋಳಗಳ ಹಿಂಡಿನಂತೆ ಕೆಲ ಬ್ರಾಹ್ಮಣರು ಕೂಡಿ ಕೊಂಡು, ತಾವು ದೊರೆಯಲ್ಲ ದಿವಾಣವಲ್ಲದಿದ್ದರೂ, ಕೂಡಲೆ ದೊಡ್ಡ ದರಬಾರ ಮಾಡಿ, ವಾಲೆಕಾರರಿಂದ ನಮ್ಮನ್ನು ಕರೆ ಕಳುಹಿಸಿದರು. ಅವರು ಬಲವಂತ ಮಾಡಿದ ಕಾರಣ ನಾವು ಪ್ರಸಂಗ ಮಾಡುವದು ಬಿಟ್ಟು, ಅವರು ಕರೆದಲ್ಲಿಗೆ ಹೋಗಿ ನಿಂತಾಗಲೆ, ಅಲ್ಲಿ ಕೂಡಿರುವ ಬ್ರಾಹ್ಮಣರು ಕೆಂಡದಂತೆ ಕಣ್ಣು ಮಾಡಿ ಕೊಂಡು, ಮಹಾ ಉಗ್ರದಿಂದ ಮಾತಾಡಲಿಕ್ಕೂ ಬೈಯ್ಯುವದಕ್ಕೂ ಹತ್ತಿ, ನಮ್ಮ ಮೇಲೆ ಕೇವಲ ಬೈಗಳ ಮಳೆಯನ್ನೇ ಗರಿಸಿದರು. ಮತ್ತು ನಾವು ಆ ಬೈಗಳನ್ನೆಲ್ಲ ತಾಳಿ ಕೊಂಡು, ಸುಮ್ಮನೆ ನಮ್ಮ ಬಿಡಾರದ ಕಡಿಗೆ ಮಾರ್ಗ ಹಿಡಿದು ಹೋಗುವಾಗ, ಅನೇಕ ಜನರು ಮೋಡದಂತೆ ಕವಿದು, ಹುರ್‍ಯೋ ಅಂತ ನಮ್ಮ ಬೆನ್ನು ಹತ್ತಿ ಬಂದು, ತಿರಿಗಿ ನಾವು ಇಳಿದ ಠಿಕಾಣಿಯಲ್ಲಿ ನಾನಾ ಚೇಷ್ಟೆ ಅಪಹಾಸ್ಯಗಳನ್ನು ಮಾಡಿ, ಕಡೆಯಲ್ಲಿ ನಾಲ್ಕು ಮಂದಿ ವಾಲೆಕಾರರನ್ನು ನಮ್ಮ ಕಾವಲಾಗಿಟ್ಟು, ನಮ್ಮನ್ನು ಪಹರೆಯಲ್ಲಿ ಕೊಟ್ಟರು. ಆ ಸಮಯದಲ್ಲಿ ನಾವು ತಾಳ್ಮೆಯನ್ನು ಬಳಿಸದಿದ್ದರೆ, ಅವರು ನಮ್ಮನ್ನು ಹೊಡಿಯುವದಕ್ಕೇನೂ ಹೇಸುವ ಹಾಗಿದ್ದಿಲ್ಲ. ಆ ರಾತ್ರಿ ನಾವು ಕಾವಲಲ್ಲಿದ್ದು, ಮುಂಜಾನೆ ಹೋಗುವದಕ್ಕೆ ಕೇಳಿದರೆ ಬಿಡದೆ ಹೋದರು. ಅಲ್ಲಿಂದ ನಾವು ಬೇರೆ ಜಾತಿಯ ಜನರಿಗೆ ವಿನವಣಿ ಮಾಡಿ ಕೊಂಡಾಗ, ಆ ಜನರಿಗೆ ನಮ್ಮ ಮೇಲೆ ದೇವರ ದಯದಿಂದ ಅಂತಃಕರಣ ಹುಟ್ಟಿ, ಅವರು ಆ ಬ್ರಾಹ್ಮಣರ ಸಂಗಡ ಪಂಚಾಯತಿ ಮಾಡಿದ ಬಳಿಕ, ಕಡೆಯಲ್ಲಿ ಆ ಕೂಳ್ಯಾ ಹಾರವರು ನಮ್ಮಿಂದ ಎರಡು ರೂಪಾಯಿ ತಕ್ಕೊಂಡು, ಅಚ್ಚೆ ವಿಚ್ಚೆ ಬೈದಾಡಿ, ಸಡ್ಲು ಬಿಟ್ಟರು. ಅಲ್ಲಿಂದ ನಾವು ಈ ತೋಳಗಳಿಗೆ ಅಗಲಿ ಮುಂದಕ್ಕೆ ಪಯಣಸ್ಥರಾದೆವು. ಆ ಬೇರೆ ಜಾತೀ ಜನರು ಪಂಚಾಯತಿ ಮಾಡಿ ಬಿಡಿಸದಿದ್ದರೆ, ಇವರೇನು ನಮ್ಮನ್ನು ಶೆರೆಯಲ್ಲಿ ಹಾಕಿಸದೆ ಬಿಡುತ್ತಿದ್ದಿಲ್ಲ, ಯಾಕಂದರೆ ಸರಕಾರ ಇವರ ಕೈಯೊಳಗೆ. ಹಾಗಾದರೆ ನಾವು ಉಳಿದದ್ದು ಆ ಇತರ ಜಾತಿಯ ಜನರ ಧರ್ಮವೆ. ಈ ಬ್ರಾಹ್ಮಣರ ವಿಷಯ ಬಾಯಿಯ ಮೇಲೆ ಕೈ ಇಟ್ಟು ಕೊಂಡು, ಇನ್ನು ಸ್ವಲ್ಪ ಹೇಳ ಬೇಕು. ಅಮ್ಮಮ್ಮ ಸರಕಾರ ಎಲ್ಲಿದೆಯೋ, ಸರಕಾರವಲ್ಲ, ಅರಕಾರವಲ್ಲ, ಧನಿಯಲ್ಲ ಗೋಸಾವಿ ಅಲ್ಲದ ಈ ವೈದೀಕ ಮುಂತಾದ ಬ್ರಾಹ್ಮಣರು ಆಗಲೆ ವಾಲೆಕಾರರನ್ನು ಕರಿಸಿ, ನಮ್ಮ ಮೇಲೆ ಇಲ್ಲದ ಅಘಾಟ ಅಧಿಕಾರ ನಡಿಸಿ, ನಮ್ಮನ್ನು ಪಹರೇದಲ್ಲಿ ಕೊಟ್ಟರಲ್ಲ! ವಹವ್ವಾ, ಎಂಥಾ ಆಶ್ಚರ್ಯವಾದ ಅಧಿಕಾರವಿದು! ಇವರೇ ಕೇವಲ ಸರಕಾರವಾದರಲ್ಲ! ಈ ದೇಶವನ್ನು ಚಂದ್ರಮುಖಿಗಳಾದ ಅನೇಕ ವಿಲಾಯತಿ ಸರದಾರ ಶಿಪಾಯರ ರಕ್ತದಿಂದ ಸಂಪಾದಿಸಿದ ರಾಣಿ ಸರಕಾರವೆಂಬದು ಎಲ್ಲಿದೆಯೋ, ಎತ್ತದೆಯೋ. ಶಹಬಾಷ! ದೇಶದ ಮೇಲೆ ನಡಿಯುವ ಹಾರವರಾಟವೆ! ಶ್ರೇಷ್ಠ ಪುಂಡುತನವೆ!

ಮತ್ತು ಜನರು ಆಡುವ ಈ ಮಾತು ಸತ್ಯ ಕಾಣಿಸುತ್ತದೆ. ಏನಂದರೆ—"ಟೋಪಿವಾಲಾ ಕಮಾತಾಹೈ; ಪಗಡಿವಾಲಾ ಖಾತಾಹೈ!" ಅಂದರೇನು? ದುಡಿಯುವವರು ಇಂಗ್ರೇಜರು, ಉಣ್ಣುವವರು ಹಾರವರು ಎಂಬರ್ಥವೇ. ರಾಣಿ ಸರಕಾರವೆಂಬದು ಸುಮ್ಮನೆ ಹೆಸರಿದೆ; ಮತಾಭಿಮಾನಿಗಳಾದ ಹಾರವರ ಸರಕಾರವಿದು ಅಂದರೂ ಶೋಭಿಸೀತು. ಇದಲ್ಲದೆ ಈ ನಮ್ಮ ದೇಶಸ್ಥರು ಪೂರ್ವದಿಂದ ಹಾರವರ ಕೈಯಲ್ಲಿ ಅತ್ತೆಮನೆ ಸೊಸೆಯಂತೆ ನಡೆನಡೆದು ಬೇಸತ್ತು, ಈ ಇಂಗ್ರೇಜಿ ದರಬಾರ ಬಂದದ್ದು ಬೇಷ್ ಆಯಿತೆಂತ ಹಿಗ್ಗಿ ಕೊಂಡು, ಈಗ ಎಲೆಯಲ್ಲಿ ಉಣ್ಣುವವರಿಗೆ ವೇಳೆ ಬಂತು, ಇನ್ನು ಮುಂದೆ ಅವರ ಆಟ ನಡಿಯಲಿಕ್ಕಿಲ್ಲವಂತ ಯಥೇಷ್ಟ ಭರವಸ ಮಾಡಿ ಕೊಂಡಿದ್ದರು. ಆದರೆ ಇದು ಹಾಗಾಗದೆ, "ನೆಚ್ಚಿದೆಮ್ಮೆ ಕೋಣಾಂನೀಯಿತು" ಎಂಬ ಗಾದೆಯಂತಾಗಿ, ದೇಶದ ಮೇಲೆ ಅವರ ಆಟ ಮುಂಚೆಗಿಂತ ಹೆಚ್ಚು ಗುಣಿಸಿ, ಅವರ ಮೋಸ, ತಂತ್ರ ತಾಳಲಾರದೆ, ಇದು ಸರಕಾರಕ್ಕೆ ಯಾಕೆ ತಿಳಿಯುವಲ್ಲದಂತ ಹೇಳಿ, ದೇಶದ ಬಡ ಜನ ಸರಕಾರದ ಹೆಸರಲ್ಲೆ ಕಲ್ಲು ಒಡಿಯುತ್ತಾರೆ. ಮತ್ತು ದರಬಾರದ ಮಾತೆಲ್ಲ ಅಂದರೆ ಅದರ ಕೀಲೇ ಕೈಯೇ ಈ ಹಾರವರ ಕೈಯಲ್ಲಿ ಆದ ಕಾರಣ ಮೀಶೇ ಮೇಲೆ ಕೈ ಹಾಕಿ, "ಬದುಕಿರುವ ಶೂದ್ರ ಸತ್ತ ಹಾರವಗೆ ಸಮವಲ್ಲ" ಎಂತ ಹೇಳಿ ಕೊಂಡು, ದೇಶದ ಮೇಲೆ ಚಕ್ಕಂದ ಆಡುತ್ತ, ಕೇವಲ ಹಿಂದುಸ್ಥಾನದ ಧೊರೆಗಳೇ ಆಗಿ ಕೂತಿದ್ದಾರೆ. ಹಿಂದಕ್ಕೆ ಅನೇಕ ಸರಕಾರದ ಕುಂಡಿಗೆ ಬೂದಿ ಹಚ್ಚಿದ ತಂತ್ರವುಳ್ಳ ನರಿಯಂತಿರುವ ಈ ಹಾರವರು ಈ ಸರಕಾರಕ್ಕೂ ಯಾವ ಕಾಲದಲ್ಲಿ ಏನು ಮಾಡುತ್ತಾರೋ? ದೇವರೇ ಬಲ್ಲ. ಇವರೇನು ಕಡಿಮೆಯವರಲ್ಲ. ಮೂರು ಲೋಕಕ್ಕೂ ಹೊಟ್ಟೆ ನೋವು ಎಬ್ಬಿಸುವ ನಾರದನ ಸಾಂಪ್ರದಾಯಕರೇ, ಕ್ರೀಡಾಮೂರ್ತಿಯಾದ ವಿಷ್ಣುವಿನ ಶಿಷ್ಯರೇ. ಅಂದಬಳಿಕ, "ಯಥಾಗುರು ತಥಾಶಿಷ್ಯ", ಮಹಾ ಗರ್ವದಿಂದ ತಾವು ಭೂದೇವತೆಗಳೆಂದು ಹೇಳಿ ಕೊಳ್ಳುವ ಈ ಹಾರವರು ಏನಾದರೂ ಕೈ ಉದ್ಯೋಗಕ್ಕೆ ಹತ್ತಿದರೆ ಹೊರ್ತು ಅವರಿಗೆ ಬುದ್ಧಿ ಬರುವದಿಲ್ಲ. ಯಾಕಂದರೆ ಲೇಖಣೀ ಮೊನೆಯಿಂದ ಅಥವ ಭಿಕ್ಷಾಟನದಿಂದ ನಿರ್ವಾಹ ನಡಿಸ ಬೇಕೆಂಬ ಅವರ ಪಂಥ ಹೋದರೆ, ಅವರಿಗೆ ಬುದ್ಧಿ ಬರುವದು ಧಿಟ. ಇವರು ಹೋಗಲಿ! ಇನ್ನು ಬಳ್ಳಾರಿ ವಿಷಯ ಸ್ವಲ್ಪ ಹೇಳಿ, ಈ ಮೊದಲನೇ ಪಾಲು ಮುಗಿಸ ಬೇಕಾಗುತ್ತದೆ.

ಬಳ್ಳಾರಿ—ಇದು ಮೂಡಲ ದಿಕ್ಕಿನಲ್ಲಿರುವ ಕಿಸ್ಕಿಂದ ಪರ್ವತದ ಗುಡ್ಡನಾಡಿನ ಶೀಮೆಯನ್ನು ದಾಟಿ, ಮುಂದೆ ಬೈಲು ನಾಡಿನಲ್ಲಿ ಒಂದು ಬಂಟಿ ಗುಡ್ಡವಾದ ಬೋಳು ಗುಡ್ಡದ ಆಶ್ರಯಕ್ಕೆ ಕಟ್ಟಿರುವ ಹಳೇದೊಂದು ದೊಡ್ಡ ಪಟ್ಣವೇ. ಈಗಲು ಸಹ ಈ ಪಟ್ಣ ಬಹು ಸುಂದರವಾದ್ದಾಗಿಯೂ, ಐಶ್ವರ್ಯ ಭರಿತವಾದ್ದಾಗಿಯೂ ಇದ್ದು, ಇದರಲ್ಲಿ ಹೆಚ್ಚು ಕಡಿಮೆ ೧ ಲಕ್ಷ ನಿವಾಸಿಗಳು ವಾಸ ಮಾಡುತ್ತಾರೆ. ಈ ದೊಡ್ಡ ಪಟ್ಣ ಜೈಮಿನಿಭಾರತದಲ್ಲಿ ಹೇಳಿರುವ ಕುಂತಳನಗರವಂತೆ. ಈ ಪಟ್ಣ ಗುಡ್ಡದ ಆಚೆ ಈಚೆ ಇರುವ ದಂಡಿನ ಪೇಟಿ ಎಂತಲೂ, ಊರ ಜನದ ಪೇಟಿಯಂತಲೂ ಹೇಳಿಸಿ ಕೊಳ್ಳುವ ದೊಡ್ಡವೆರಡು ಪೇಟೆಗಳಿಂದ ಪ್ರಸಿದ್ಧವಾಗಿದೆ. ಎತ್ತರವಾಗಿರುವ ಈ ಬಂಡೆ ಬೋಳು ಗುಡ್ಡದ ಅಡಿಯಿಂದ ತುದಿ ವರೆಗೆ ಕಲ್ಲುಗಳಿಂದ ಕಟ್ಟಿರುವ ಮೂರು ಸುತ್ತಿನ ಕೋಟೆಯಿಂದಲೂ, ಬಹು ಸುಂದರವಾಗಿರುವ ಆಳುವರಿಯಿಂದಲೂ, ಅಗಶಿ ಅಗಳತೆಗಳಿಂದಲೂ, ಗಗನಚುಂಬಿತವಾದ ಬರುಜುಗಳಿಂದಲೂ ಬಹು ಸುಶೋಭಾಯಮಾನವಾಗಿ ಕಾಣಿಸುವ ಈ ಪಟ್ಣವನ್ನು ನೋಡುವಾಗ, ಹಸಿವೆ ನೀರಡಿಕೆ ಹಾರಿ ಹೋಗಿ, ಮನ ಬಂದು ನಿಬ್ಬೆರಗಾಗುತ್ತದೆ. ಯಾವ ಮಹಾರಾಯ ಎಂದು ಕಟ್ಟಿದ್ದಾನೋ ಏನೋ? ನೋಡ ತಕ್ಕ ಇಮಾರತಿಯೇ ಸರಿ. ಆದಾಗ್ಯು ವಿಜಾಪುರದ ಇಮಾರತಿಗಳಿಗೇನೂ ಸರಿಯಾದ್ದಲ್ಲ. ಮಾತ್ರ ಈ ಬಳ್ಳಾರಿ ನಾಡು ಬಹು ಬಿಸಿಲು ನಾಡು, ಪಾಪ! ಸಾಹೇಬಜನರಿಗಂತು ಈ ಸ್ಥಳದಲ್ಲಿ ನೀರೊಳಗಿನ ಮೀನ ಬೈಲಿಗೆ ಹಾಕಿದಂತಾಗುತ್ತಿದ್ದೀತು. ಇದೀಗಿರಲಿ, ನಮಗೆ ಮುಖ್ಯವಾಗಿ

ಬೇಕಾಗಿರುವ ನಮ್ಮ ಮಿಶ್ಯನ ಕೆಲಸ ಈ ಶಹರದಲ್ಲಿಯೂ ಇದರ ಪ್ರಾಂತದಲ್ಲಿಯೂ ಹ್ಯಾಗೆ ನಡಿಯುತ್ತದೆಂಬನ್ನು ಒಂದಿಷ್ಟು ತಿಳಕೊಂಡು, ಈ ವಿಷಯ ತೀರಿಸೋಣ.

ಈ ಶಹರದಲ್ಲಿ, ಲಂಡನ್ ಮಿಶ್ಯನೆರಿಗಳ ಕೆಲಸ ಚನ್ನಾಗಿ ನಡದದೆ. ಈ ಪಟ್ಣದಲ್ಲಿರುವ ಇವರ ಕನ್ನಡ ಇಂಗ್ಲಿಷ ಸಾಲೆಗಳಿಗೆ ಊರಿನ ಹುಡುಗರು ಯಥೇಷ್ಟ ಬಂದು, ಅವುಗಳಲ್ಲಿ ದೇವವಾಕ್ಯದ ಪಾಠ ಪುಷ್ಕಳ ನಡಿಯುವದಲ್ಲದೆ, ಬೀದಿಪ್ರಸಂಗಗಳೂ ಪ್ರಯಾಣಪ್ರಸಂಗಗಳೂ ಪುಸ್ತಕ ಮಾರೋಣವೂ ಬಹು ಅಂದವಾಗಿ ನಡಿಯುತ್ತವೆ. ಈ ಊರಲ್ಲಿ ಅರವ ಮತ್ತು ಕನ್ನಡಸ್ಥರು ಕೂಡಿ ಸುಮಾರು ೧೦೦-೧೧೦ ಜನ ಕ್ರಿಸ್ತಿಯರಿದ್ಧಾರೆ. ಮುಖ್ಯವಾಗಿ ಕನ್ನಡಸ್ಥರು ಷಂಡೂರವರೆ. ಇವರು ಕಂಚುಗಾರಿಕೆ ಅಕ್ಕಸಾಲಿಕೆ ಮಾಡಿ ಕೊಂಡು, ದೇವರ ಭಯಭಕ್ತಿಯಲ್ಲಿ ತಮ್ಮ ನಿರ್ವಾಹ ನಡಿಸುತ್ತಾರೆ. ಇದಕ್ಕೆ ಶೇರಿದ ಒಂದು ಉಪಶಾಖೆ ತುಂಗಭದ್ರಾತೀರದಲ್ಲಿರುವ ಹೊಳೆಹೊನ್ನೂರು; ಇದರಲ್ಲಿಯೂ ಹತ್ತೆಂಟು ಜನ ಕ್ರಿಸ್ತಿಯರು ವ್ಯವಸಾಯ ಮಾಡಿಕೊಂಡು, ಉಪಜೀವನ ಮಾಡುತ್ತಾರೆ. ಈ ಬಳ್ಳಾರಿಯಲ್ಲಿಯೂ ಇದರ ಪ್ರಾಂತದಲ್ಲಿಯೂ ನಡದಿರುವ ಮಿಶ್ಯನ್ ಕೆಲಸವನ್ನು ಕರ್ತನು ಸಹಸ್ರಸಹಸ್ರವಾಗಿ ಆಶೀರ್ವದಿಸುವವನಾಗಲಿ!

(ಮುಂದೆ ಸಾಗಿಸಲ್ಪಡುವದು.)

ವಿವಿಧ ವರ್ತಮಾನಗಳು.

ಸಪ್ತಂಬರ ತಾರೀಖು ೫ರಲ್ಲಿ ಉಡ್ಪಿ ಮಿಶ್ಯನ್ ಶಾಖೆಗೆ ಶೇರಿದ ಗುಡ್ಡೆ ಎಂಬ ಉಪಶಾಖೆಯಲ್ಲಿ ಒಂದು ದೊಡ್ಡ ಉತ್ಸವವೇ ಆಯಿತು. ೪೫ ಪ್ರಾಯಸ್ಥರಿಗೆ, ೩೮ ಹುಡುಗರಿಗೆ, ಒಟ್ಟಿಗೆ ೮೩ ಜನರಿಗೆ, ಕ್ರೈಸ್ತಸ್ನಾನವಾದ್ದಲ್ಲದೆ, ೧೦ ವರುಷದ ಹಿಂದೆಯೂ ೩-೪ ವರುಷದ ಹಿಂದೆಯೂ ಬಂದು ಸಭೆಯನ್ನು ಶೇರಿ ತಿರಿಗಿ ಹಿಂಜರಿದು ಹೋದ ಬೇರೆ ೯ ಜನರು ಸಹಾ ಈ ಹೊಸಬರನ್ನು ಕೂಡಿ ಕೊಂಡು, ತಮ್ಮನ್ನು ತಿರಿಗಿ ಸಭೆಯಲ್ಲಿ ಶೇರಿಸಿ ಕೊಂಡರು. ಅವರನ್ನೂ ಇವರನ್ನೂ ಕರ್ತನು ತನ್ನಲ್ಲಿ ತನ್ನ ಸತ್ಯ ನೀತಿ ಪ್ರೀತಿಯಲ್ಲಿ ನೆಲೆಗೊಳ್ಳಿಸಿ, ಕಾಪಾಡಿ, ಆಶೀರ್ವದಿಸಲಿ!

ಕಲ್ಕತದಲ್ಲಿ ಉಮಾಚರಣ ಚತರ್ಜಿ ಎಂಬ ಒಬ್ಬ ಬ್ರಾಹ್ಮಣನು ತನ್ನ ಹೆಂಡತಿ ೭ ಮಂದಿ ಮಕ್ಕಳು ಸಹಿತವಾಗಿ ಕ್ರೈಸ್ತನಾದನು. ಅವರಿಗೆ ಸ್ನಾನವಾಗುವಾಗ ಬಹುಶೇಕ ಜನರು ನೋಡಲಿಕ್ಕೆ ಬಂದಿದ್ದರು. ಅವನು ಮಿಶ್ಯನ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದವನು.

ರಂಗೂನ್ ಕಡೆಯ ಐರಾವತಿಯ ತಗ್ಗಿನಲ್ಲಿ ೫೧ ಮಂದಿ ಬರ್ಮದವರು ಸ್ನಾನ ಹೊಂದಿದರು; ಅವರಲ್ಲಿ ಕೆಲವರು ಸುವಾರ್ತೆಪ್ರಸಂಗ ಕೇಳದೆ, ವಹಿಗಳನ್ನು ಓದಿದ ಮಾತ್ರದಿಂದಲೇ ಸತ್ಯವನ್ನು ತಿಳುಕೊಂಡವರು.

ಎರಡು ತಿಂಗಳ ಹಿಂದೆ ಲಂಡನ ನಗರದಲ್ಲಿ ಕೆಲವು ಮಿಶ್ಯನುಗಳ ವಾರ್ಷಿಕ ಸಂಘಗಳು ಆದವು. ಆಯಾ ಸಂಘಗಳ ಕರಣಿಕರು ಓದಿದ ಪತ್ರಗಳಲ್ಲಿ ಕಾಣುವದೇನಂದರೆ: ಚರ್ಚ ಮಿಶ್ಯನಿಗೆ ಒಟ್ಟಿಗೆ ೧೫೭ ಠಾಣ್ಯಗಳೂ ೩೬೫ ಮಿಶ್ಯನೆರಿಗಳೂ ೨೪,೪೯೭ ಕ್ರೈಸ್ತರೂ ಇದ್ಧಾರೆ. ವೆಸ್ಲಿಯನ್ ಮಿಶ್ಯನಿಗೆ ೯೪೪ ಠಾಣ್ಯಗಳೂ ೭೦೪೭ ಪ್ರಾರ್ಥನಾಲಯಗಳೂ ೧೨೨೪ ಮಿಶ್ಯನೆರಿಗಳೂ ೪೮೪೦ ಉಪದೇಶಕರೂ ೧೭೪,೮೩೪ ಕ್ರೈಸ್ತರೂ ಇದ್ಧಾರೆ. ಲಂಡನ್ ಮಿಶ್ಯನಿನಲ್ಲಿ ೧೫೬ ಮಿಶ್ಯನೆರಿಗಳಿದ್ಧಾರೆ. ಅವರು ಅನೇಕ ಸಭೆಗಳನ್ನು ದೇಶಸ್ಥ ಬೋಧಕರಿಗೆ ಒಪ್ಪಿಸಿದ್ದರಿಂದ ೨೭ ಮಿಶ್ಯನೆರಿಗಳು ನೆಟ್ಟಗೆ ಸುವಾರ್ತೆಯ ಪ್ರಸಂಗಕ್ಕೆ ತಮ್ಮ ಸಮಯ ಒಪ್ಪಿಸ ಬಹುದಾಯಿತು. ಆ ಸಂಘದವರು ೨೫ ಹೊಸ ಠಾಣ್ಯಗಳನ್ನು ಆದು ಕೊಂಡರು. ಈ ಮೂರು ಸಂಘಗಳು ಕೂಡಿಸಿದ ಹಣ ಎಷ್ಟಂದರೆ: ಚರ್ಚ ಮಿಶ್ಯನವರು ೧೭,೫೮,೩೫೦ ರೂಪಾಯಿ; ವೆಸ್ಲಿಯನ್ ಮಿಶ್ಯನವರು ೧೭,೯೯,೪೬೦ ರೂಪಾಯಿ; ಲಂಡನ್ ಮಿಶ್ಯನವರು ೧೦,೩೫,೫೩೦ ರೂಪಾಯಿ.

ಇಂಗ್ಲಾಂಡದ ಬೈಬಲ್ ಸೊಸೈಟಿಯ (ಸಂಘದ) ವಾರ್ಷಿಕ ಕೂಟದಲ್ಲಿ ಓದೋಣಾದ ಪತ್ರದಲ್ಲಿ ಕಾಣುವದೇನಂದರೆ—ಆ ಸಂಘ ಸ್ಥಾಪಿತವಾದಂದಿನಿಂದ ೭೪,೦೦೦,೦೦೦ ಸತ್ಯವೇದದ ಪ್ರತಿಗಳು ಪ್ರಸಿದ್ಧ ಮಾಡಲಾದವು. ಈ ಸಂಘದಿಂದ ಹುಟ್ಟಿದ ಬೇರೆ ಸಂಘಗಳು ಪ್ರಕಟಿಸಿದ ಪ್ರತಿಗಳು ೫೩,೦೦೦,೦೦೦; ಹಾಗಾದರೆ ಈ ಶತಮಾನದಲ್ಲಿ ಒಟ್ಟಿಗೆ ೧೨೭,೦೦೦,೦೦೦ ಸತ್ಯವೇದದ ಪ್ರತಿಗಳನ್ನು ಲೋಕದ ನಾನಾ ಪ್ರದೇಶಗಳಲ್ಲಿ ಹಬ್ಬಿಸಲಾಯಿತು. ಈ ಸಂಘವು ಛಾಪಿಸಿದ ಪುಸ್ತಕಗಳು ಒಟ್ಟಿಗೆ ೭೩,೭೫೦,೫೩೮.

ಜಾಪಾನಿನ ಯೊಕೊಹಾಮ ಪಟ್ಟಣದಲ್ಲಿ ಬಪ್ತಿಸ್ತ ಮಿಶ್ಯನಿನ ಸುಂದರವಾದ ದೇವಾಲಯವು ಸುಟ್ಟು ಹೋಯಿತು. ಹತ್ತರವಿದ್ದ ಮಿಶ್ಯನೆರಿಯ ಮನೆಯು ಮಾತ್ರ ಉಳಿಯಿತು.

ಚೀನ ದೇಶದಲ್ಲಿ ಸುಮಾರು ೨೦೦ ಭಾಷೆಗಳು ಅಥವಾ ಭಾಷಾಭೇದಗಳು ಅವೆ. ಅವುಗಳಲ್ಲಿ ೮ ಮುಖ್ಯವೇ. ಮತ್ತು ಮಂದರಿನ್ ಎಂಬದು ಎಲ್ಲವುಗಳಲ್ಲಿ ಶ್ರೇಷ್ಠವಾದ್ದು; ಈ ಭಾಷೆಯಲ್ಲಿ ಇಡೀ ಸತ್ಯವೇದದ ಭಾಷಾಂತರವು ಈಗ ಪೂರ್ಣವಾಯಿತು.

ಕಾಶಿಯು ಮಹಾ ಪುಣ್ಯಾತೀರ್ಥಯಾತ್ರೆಯ ಸ್ಥಳವೆಂದು, ನಾನಾ ದೇಶಗಳಿಂದ ನಾನಾ ತರದ ಜನರು ಬಂದು, ದರ್ಶನ ಮಾಡಿ, ಕೆಲವರು ಅಲ್ಲೇ ಉಳಕೊಳ್ಳುವದೂ ಉಂಟು. ಇಂಥಾ ಜನರು ಪ್ರಾತಃಕಾಲದಲ್ಲಿ ಒಂದು ಹರಿವಾಣದೊಳಗೆ ಪುಷ್ಪ ಹಣ್ಣು ಕಾಯಿ ಮೊದಲಾದವುಗಳನ್ನು ತಕ್ಕೊಂಡು, ಗಂಗಾತೀರಕ್ಕೆ ಹೋಗಿ, ಅವುಗಳನ್ನು ಗಂಗಾರ್ಪಣೆ ಮಾಡುವದು ವಾಡಿಕೆಯಾಗಿರುತ್ತದೆ. ಹೀಗಿರಲಾಗಿ ಒಂದು ದಿನ ಮುಂಜಾನೆ ಜಾನಕಿಬಾಯಿ ಎಂಬ ಒಬ್ಬ ಬ್ರಾಹ್ಮಣ ವಿಧವೆಯು ಒಂದು ಹರಿವಾಣದೊಳಗೆ ಗಂಗಾರ್ಪಣೆಗೆ ಬೇಕಾದವುಗಳನ್ನು ಕೊಂಡು ಹೋಗುತ್ತಿರಲಾಗಿ ಎದುರಿನಿಂದ ಬರುವ ಒಬ್ಬನ ಮೈ ತಾಗಿ ಅವಳ ಕೈಯಲ್ಲಿದ್ದದೆಲ್ಲಾ ಕಂಡಾಬಟ್ಟೆಯಾಗಿ ಬಿದ್ದು ಹೋಯಿತು. ಅವನು ಘಾಬ್ರಿಯಿಂದ ಕೆಳಗೆ ನೋಡಲಾಗಿ, ಹಣ್ಣು ಕಾಯಿಗಳ ಕೂಡ ರಕ್ತಮಯವಾದ ಒಂದು ಹಸು ಕೂಸು ಸಹ ಬಿದ್ದಿರುವದನ್ನು ಕಂಡು ಬೊಬ್ಬೆ ಹಾಕಲಾಗಿ ಜನಸಮೂಹವೂ ಪೊಲೀಸಿನವರೂ ಕೂಡಿ ಬಂದರು. ಇದೇನೆಂದು ವಿಚಾರಿಸಲು, ಅವಳು ಈ ಕೂಸು ನನ್ನದಲ್ಲ ಬೇರೊಬ್ಬ ವಿಧವೆಯದು ಎಂದು ಹೇಳಲಾಗಿ, ಆ ಎರಡನೇ ವಿಧವೆಯನ್ನು ವಿಚಾರಿಸಲು, ಅದು ತನ್ನದು ಎಂದು ಅರಿಕೆ ಮಾಡಿದಳು. ಮತ್ತು ತಾನು ವಿಧವೆಯಾಗಿ ೩ ವರುಷಗಳಿಂದ ಈ ಕಾಶಿಯಲ್ಲೇ ಇರುತ್ತಿರಲು, ಇಲ್ಲಿಯ ಸನ್ಯಾಸಿ ಭಟ್ಟನಿಂದ ಈ ದೋಸವು ನನಗಾಯಿತು ಎಂದು ಸಹ ಹೇಳ ಬೇಕಾಯಿತು. ಮಹಾ ಪುಣ್ಯಕ್ಷೇತ್ರವಾದ ಕಾಶಿಯಲ್ಲಿ ಇಂಥಾ ಪುಣ್ಯಾತ್ಮರುಗಳು ಎಷ್ಟು ಮಂದಿಯೋ! ಮಹಾ ತೀರ್ಥವಾದ ಗಂಗೆಯ ಮತ್ಸ್ಯಗಳಿಗೆ ಇಂಥಾ ಶಿಶು ಅರ್ಪಣೆ ದಿನೇ ದಿನೇ ದೊರಕುತ್ತದೇನೋ?

ತಂತೀಟಪ್ಪಾಲ ದ್ವಾರಾ ವರ್ತಮಾನಗಳು ಇಷ್ಟು ವರೆಗೆ ಭೂಮಾರ್ಗವಾಗಿ ೧೦ ಲಕ್ಷ ಮೈಲು ದೂರದ ವರೆಗೂ, ಸಮುದ್ರಮಾರ್ಗವಾಗಿ ೫೦ ಸಾವಿರ ಮೈಲು ದೂರದ ವರೆಗೂ ನಡಿಯುತ್ತವೆ. ಒಟ್ಟಿಗೆ ೨೫ ಸಾವಿರ ತಂತೀಟಪ್ಪಾಲ ಆಫಿಸುಗಳೂ, ವರುಷ ಒಂದಕ್ಕೆ ೧೦ ಕೋಟಿವೃತ್ತಾಂತಗಳೂ, ೧೨ ಕೋಟಿ ರೂಪಾಯಿ ಖರ್ಚೂ ಉಂಟಂತೆ.

ವಿಲಾಯತಿಯಲ್ಲಿ ಈ ವರೆಗೂ ಅನುಭವವಾಗದಿದ್ದ ಮಿಡಿತೆಗಳ ಬಾಧೆ ಈ ವರುಷ ಪ್ರುಸ್ಯದಲ್ಲಿಯೂ ಇತಲ್ಯ ದೇಶದಲ್ಲಿಯೂ ಸ್ವೀಟ್ಸರ್ಲಾಂದದಲ್ಲಿಯೂ ಶುರುವಾಯಿತು. ಭೂಮಿಯ ಧನಿ ದೇವರೇ. ಮನುಷ್ಯರು ಆತನ ಒಕ್ಕಲಿಗರೇ. ಅವರು ಗೇಣಿ ಕೊಡದೆ ಹೋದರೆ, ಅದನ್ನು ತಗಾದೆ ಮಾಡಿ, ತೆಗೆದು ಕೊಳ್ಳಲಿಕ್ಕೆ ಇಂಥ ಬಾಧೆಗಳನ್ನು ತನ್ನ ಜವಾನರಾಗಿ ಕಳುಹಿಸುತ್ತಾನೆ.

ಮೈಸೂರಲ್ಲಿಯೂ ವಾಂತಿಭೇದಿ ರೋಗ ಪ್ರಬಲವಾಗಿದಂತೆ. ಸುರ್ಯ ದೇಶದಲ್ಲೂ ಇದೇ ಬಾಧೆ ಬಹಳ ಪ್ರಬಲವಾಗಿರುತ್ತದೆ.

ಮಧ್ಯ ಅಮೇರಿಕದ ಸನ್ ಸಲ್ವಾದೊರ್ ಎಂಬ ಶೀಮೆಯು ಸನ್ ಮಿಗುವೇಲ್ ಎಂಬಲ್ಲಿ ದಂಗೆ ಎದ್ದು, ಬಹಳ ಲೂಟಿಯಾಯಿತಂತೆ. (ರೋಮನ್) ಪಾದ್ರಿಗಳು ಆ ದಂಗೆಗಾರರಿಗೆ ಧೈರ್ಯ ಕೊಟ್ಟದ್ದಲ್ಲದೆ ನಾಯಕರೂ ಆದರು. ಹೋರಾಟದಲ್ಲಿ ಬಿದ್ದ ದಂಗೆಗಾರರ ಮೈಮೇಲೆ ಸನ್ ಸಲ್ವಾದೊರದ ಅಧ್ಯಕ್ಷನ ದಸ್ಕತು ಇದ್ದಂಥಾ ಚೀಟುಗಳು ಶಿಕ್ಕಿದವು. ಆ ಚೀಟುಗಳಲ್ಲಿ ಬರದಿದ್ದದ್ದೇನಂದರೆ: "ಅರ್ಚ್ಯರಾಯಪ್ಪನವರೇ! (ಅಂದರೆ ಪೇತ್ರನೇ!) ಈ ಚೀಟು ಇದ್ದವನು ಧರ್ಮಾರ್ಥವಾಗಿ ಸತ್ತವನೇ. ರಾಯಪ್ಪನವರೇ! ಸ್ವರ್ಗದ ಬಾಗಲನ್ನು ಅವನಿಗೆ ತೆರೆಯಿರಿ. ಜೋರ್ಜ್ ಸನ್ ಸಲ್ವಾದೊರ್ ಅಧ್ಯಕ್ಷರ ರುಜು."

ಮುಂಬೈಯಲ್ಲಿ ಬಿಶೋಪನಾಗಿದ್ದ ದೊಗ್ಲಾಸ್ ಧೊರೆ ಇತ್ತಲಾಗೆ ಅಸ್ವಸ್ಥವಾಗಿ ಇಂಗ್ಲಾಂದಕ್ಕೆ ಹಿಂತಿರುಗ ಬೇಕಾಯಿತು. ಅವನು ತಿರಿಗಿ ಸ್ವಸ್ಥವಾಗುವ ಆಶೆ ಹೋಯಿತಂತೆ. ಇತರ ಮಿಶ್ಯನುಗಳು ಇದ್ದಲ್ಲಿ ಪಾದ್ರಿಗಳನ್ನು ಕಳುಹಿಸಿ ಸಭೆಗಳನ್ನು ಕೂಡಿಸ ಪ್ರಯತ್ನ ಮಾಡಿದ್ದು ಅವನ ಹೆಸರಿಗೆ ವಾಸನೆ ಹತ್ತಿಸಿದ ಸಂಗತಿ.

ಪ್ರುಸ್ಯದಲ್ಲಿ ೩೨, ಬಾದೆನ್ ಎಂಬ ಶೀಮೆಯಲ್ಲಿ ೩೫ ಪೂರ್ವಿಕ ಕಥೋಲಿಕ ಸಭೆಗಳು ಸ್ಥಾಪನೆಯಾಗಿದ್ದಾವೆ. ಹೋದ ವರುಷದ ಒಂದರಲ್ಲಿ ಸದರಿ ದೇಶಗಳಲ್ಲಿ ಪೂರ್ವಿಕ ಕಥೋಲಿಕ ಸಭೆಯನ್ನು ಶೇರಿದ ಪ್ರಾಯಸ್ಥರಾದ ಪುರುಷರು ಮಾತ್ರ ಒಟ್ಟಿಗೆ ೪೧೫೧ ಮಂದಿಯೇ.

ಉತ್ತರ ಅಮೇರಿಕದ ಕ್ರೈಸ್ತ ಸಭೆಗಳವರು ತಾವೇ ಸರಕಾರದ ಸಹಾಯವಾಗಲಿ ನಿಬಂಧನೆಯಾಗಲಿ ಇಲ್ಲದೆ ತಮ್ಮ ಸಭಾಕಾರ್ಯಗಳನ್ನು ಸಾಗಿಸುವ ಬಗ್ಯೆ ಎಷ್ಟೋ ಹಣ ಕೂಡಿಸಿ ಕೊಡುತ್ತಿದ್ದಾರೆಂತ ಈ ಪುಸ್ತಕದ ೧೨ನೇ ಪಾನಿನಲ್ಲಿ ಓದಿದ್ದೀರಿ. ಅದೇ ವಿಚಾರಕ್ಕೆ ಶೇರುವ ಇತ್ತಲಾಗೆ ನಡದ ಒಂದು ಸಂಗತಿಯನ್ನು ಇಲ್ಲಿ ಸಹಾ ಪ್ರಸ್ತಾಪಿಸಲುಚಿತವಾಗಿ ತೋರುತ್ತದೆ. ಏನಂದರೆ: ನ್ಯೂಯೋರ್ಕ್ ಎಂಬ ಪಟ್ಣದಲ್ಲಿ ಪ್ರೆಸಬಿತರೆಂಬ ಹಿರಿಯರ ಸಭಾಪರಿಪಾಲನೆಯ ಒಂದು ಸಭೆಯಲ್ಲಿ ಬಹಳ ಸುಂದರವಾದ ದೇವಾಲಯ ಕಟ್ಟೋಣಾದ ಮೇಲೆ, ಕಟ್ಟಿದ ಖರ್ಚಿನ ಬಗ್ಯೆ ಆ ದೇವಾಲಯದ ಆಸನಗಳನ್ನು ಯಾಲಂ (ಲೈಲಂ) ಹಾಕಿ ಮಾರಿ ಬಿಟ್ಟರು. ಪೀಠಕ್ಕೆ ಸಮೀಪವಾದ ಆಸನ ಒಂದಕ್ಕೆ ೮,೪೦೦ ರೂಪಾಯಿಯ ಮಟ್ಟಿಗೂ ಕ್ರಯ ಕೊಟ್ಟರಂತೆ. ಹಿಂಗಡೆಯ ಆಸನ ಒಂದಕ್ಕೆ ೧೨೦ ರೂಪಾಯಿ ಮಟ್ಟಿಗೆ ಕೊಟ್ಟರು. ಈ ಪ್ರಕಾರ ಮಾಡಿ ಆ ದೇವಾಲಯದ ಮೊಕ್ತೇಸರರು ಆಸನಗಳಿಗೆಲ್ಲಾ ಒಟ್ಟಿಗೆ ೩೨೦,೦೦೦ ರೂಪಾಯಿ ಈಸಿ ಕೊಂಡರಂತೆ. ಇದಲ್ಲದೆ ಬೋಧಕರ ಸಂಬಳ ಮುಂತಾದ್ದಕ್ಕೆ ಬೀಳುವ ಖರ್ಚಿನ ಬಗ್ಯೆ ಆ ಆಸನಗಳಿಗೆ ವರುಷ ವರುಷ ಇನ್ನು ಬಾಡಿಗೆ ಸಹಾ ಕಟ್ಟಿದ್ದಾರಂತೆ, ಎಷ್ಟಂದರೆ: ಒಂದೊಂದು ಆಸನಕ್ಕೆ ಯಾಲಮಿನಲ್ಲಿ ಬಿದ್ದ ರೂಪಾಯಿ ನೂರಕ್ಕೆ ಆರಾರು ರೂಪಾಯಿಯ ಪ್ರಕಾರ. ಹಾಗಾದರೆ ೧೦೦ ರೂಪಾಯಿಯ ಆಸನವನ್ನು ತೆಗೆದು ಕೊಂಡವನು ೬ ರೂಪಾಯಿ, ೮,೪೦೦ ರೂಪಾಯಿ ಕ್ರಯದ ಆಸನ ಕೊಂಡು ಕೊಂಡವನು ೨೫೨ ರೂಪಾಯಿ ಬಾಡಿಗೆ ವರುಷ ವರುಷ ಕೊಡುತ್ತಾ ಬರ ಬೇಕು. ಈ ಪ್ರಕಾರ ವರುಷ ಒಂದಕ್ಕೆ ೧೮,೨೦೦ ರೂಪಾಯಿ ಬಾಡಿಗೆ ಸಹಾ ವಾರ್ಷಿಕ ಖರ್ಚಿನ ಬಗ್ಯೆ ಸಂದಾಯವಾಗುತ್ತಾ ಬರುತ್ತದೆ. ನಮ್ಮ ಸಭೆಯವರು ದೇವಾಲಯದ ಆಸನಕ್ಕೆ ಕ್ರಯವನ್ನೂ ಬಾಡಿಗೆಯನ್ನೂ ಅಲ್ಲಾ, ಕ್ರಯವನ್ನಾಗಲಿ ಬಾಡಿಗೆಯನ್ನಾಗಲಿ ಮಾತ್ರ ಕೊಡಬೇಕಾದರೆ, ಎಷ್ಟು ಮಂದಿ— ಹಾಗಾದರೆ ಆಸನವೂ ಪ್ರಾರ್ಥನೆಯೂ ನನಗೆ ಬೇಡವೇ ಬೇಡ! ಎಂತ ಹೇಳದೆ ಕೊಟ್ಟಾರು? ಆಸನ ಸುಮ್ಮನೆ ಶಿಕ್ಕಿರುವಾಗಲಾದರೂ ಕೆಲವರು ಪ್ರಾರ್ಥನೆಗೆ ಬಾರದೆ ಹೋಗುತ್ತಾರಲ್ಲಾ!

Printed by Stolz & Hirner, Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೮. **NOVEMBER 1875.** ಅಂಕೆ ೫.

ಅಡಕವು: ರಕ್ಷಣಾಹ್ವಾನವು — ಚಿನ್ನದ ಹರಳುಗಳು — ಯೇಸು ಪ್ರಾರ್ಥನೆ ಕೇಳಿ ರೋಗ ವಾಶಿ ಮಾಡುವಾತನು — ಮೂರು ಆಶಾರ್ಥಗಳು — ಲೇಖನ — ವಿವಿಧ ವರ್ತಮಾನಗಳು.

ರಕ್ಷಣಾಹ್ವಾನವು.

ರಾಗ: ಬಿಳಹರಿ.] [ತ್ರಿಪುಟತಾಳ.

ಪಲ್ಲವಿ:

ಯೇಸು ಕ್ರಿಸ್ತನ ಪಾದಕೆ ಶೇರ ಬನ್ನಿರಿ ಎಲ್ಲರು!
ದಾಸರಾಗಿ ಕೃಪಾವಿಶೇಷಣ ಹೊಂದಿ ಜೀವಿಸಿರೆಲ್ಲರು.

ಚರಣಗಳು:

೧. ದುರಿತನಿಕರವ ಹರಿಸಿ ಕರ್ತನು ಶಾಂತವೀವನು ಹರುಷದಿ,
ಪರಮ ಸಾಧನೆ ಕೊಡುವನಾಶ್ರಯ ವಿಮಲ ನಿತ್ಯ ಕೃಪಾಂಗದಿ. ಯೇಸು—

೨. ನಿಮಗೆ ದೊರಕದ ಮೇಲು ಕೊಡುವನು ನೀತಿಸೂರ್ಯನು, ಲೋಕದಿ
ತಿಮಿರ ಮಾನಸ ಹರಿಸಿ ಪ್ರೇಮದಿ ಪೊರೆವ ತನ್ನಯ ಪುಣ್ಯದಿ. ಯೇಸು—

೩. ಪುಣ್ಯ ಕರ್ತನ ಬಿಟ್ಟರಿಲ್ಲವು ಬೇರೆ ಮಾರ್ಗವು ಭುವಿಯೊಳು,
ಗುಣ್ಯ ಕಿಲ್ಬಿಷ ನಾಶವಾಗದು ವಿನಹ ಸತ್ಯವು ಇದರೊಳು. ಯೇಸು—

೪. ಸತ್ಯಶೀಲನ ಸ್ಮರಿಸಿ ನೋಡಿರಿ, ಹೃದಯ ಕಳವಳ ಕೆಡಿಸುವ
ನಿತ್ಯ ಶುದ್ಧಕೆ ಕೂಡಿ ಕ್ರಿಸ್ತನ ಪುಣ್ಯ ಪಿಡಿಯಿರಿ ವಿನಯದಿ! ಯೇಸು—

೫. ಹೊತ್ತು ಕಳೆಯದೆ ಬುದ್ಧಿ ನಿರ್ಮಲ ತಂದು ಕೊಳ್ಳಿರಿ ಮನುಜರೆ!
ಸತ್ತ ಮೇಲೆ ವಿನಾಶ ತಪ್ಪದು ಮುಕ್ತಿವಿರಹಿತರಾದರೆ. ಯೇಸು—

ಚಿನ್ನದ ಹರಳುಗಳು.

೧. ಲೂಕ. ೧೯, ೪೧—೪೮. ಯೆರೂಸಲೇಮಿನ ದೇವಾಲಯವೂ ಯೆರೂಸಲೇಮು ನಗರವೂ "ಪ್ರಾರ್ಥನೆ ಮನೆ" (ದೇವರ ಮಂದಿರ) ಆಗಿರ ಬೇಕಾಗಿತ್ತು; ಆದರೆ ಅದು ಮೊದಲು "ಅಂಗಡಿ" ಎಂಬ ಹಾಗೆ, ಕಡೆಗೆ "ಕಳ್ಳರ ಗವಿ" ಎಂಬ ಹಾಗೆ ಆಗಿ ಹೋದ್ದರಿಂದ, ಕಟ್ಟಕಡೆಗೆ "ಪಾಡು ಹಾಳು" ಆಗಿ ಹೋಯಿತು. ನೀನೂ (ನಮ್ಮ ಸಭೆಯೂ) ದೇವರ ಮಂದಿರವಾಗ ತಕ್ಕದ್ದು. ನೀನೂ (ಸಭೆಯೂ) ಮೊದಲು **ಅಂಗಡಿ**, ಆ ಮೇಲೆ **ಕಳ್ಳರ ಗವಿ**, ಕಡೆಗೆ **ಪಾಡು ಹಾಳು** ಆಗಿ ಹೋಗದ ಹಾಗೆ ಬಹು ಜಾಗ್ರತೆಯಾಗಿ ನೋಡಿಕೋ ಬೇಕು. ಅಂಗಡಿ ಎಂಬ ಹಾಗಾಗದ ಹಾಗೆ ವಿಶೇಷವಾಗಿ ನೋಡಿ ಕೊಳ್ಳ ಬೇಕು; ಯಾಕಂದರೆ ದೇವರ ಮಂದಿರವಾಗಿರ ತಕ್ಕಂಥಾದ್ದು ಅಂಗಡಿ ಎಂಬಂತಾಗಿ ಹೋದರೆ, ಅದು ಕಡೆಗೆ ಕಳ್ಳರ ಗವಿಯಾಗದೆ ಹೋಗಲಿಕ್ಕಿಲ್ಲಾ ಎಂಬುವ ಭಯಕ್ಕೆ ಬಹಳ ಕಾರಣವದೆ. ಮತ್ತು ಕಳ್ಳರ ಗವಿ ಎಂಬತಾದ್ದು ತಪ್ಪದೆ ನಾಶವಾಗುವದು.

೨. ಲೋಕದವರಿಗೂ ಸತ್ಕ್ರೈಸ್ತರಿಗೂ ಹೆಚ್ಚುಕಡಿಮೆ ಏನು? ಅವರಿಗೂ ಇವರಿಗೂ ಅನೇಕ ಹೆಚ್ಚುಕಡಿಮೆಗಳು. ಈ ಅನೇಕ ಹೆಚ್ಚುಕಡಿಮೆಗಳಲ್ಲಿ ಒಂದು ಏನಂದರೆ: ಲೋಕದವರಿಗೆ **ಸಂತೋಷಕ್ಕೆ** ಕಾರಣವೆಂತ ಕಾಣುವಂಥಾದ್ದು ಸತ್ಕ್ರೈಸ್ತರಿಗೆ **ದುಃಖಕ್ಕೆ** ಕಾರಣವೆಂತ ತೋರುವದು; ಲೋಕದವರಿಗೆ **ದುಃಖಕ್ಕೆ** ಕಾರಣವೆಂತ ತೋರುವಂಥಾದರಲ್ಲಿ ಸತ್ಕ್ರೈಸ್ತರು **ನಿಶ್ಚಿಂತರಾಗಿಯೂ ಸಂತುಷ್ಟರಾಗಿಯೂ** ಇರ ಬಹುದು. ಸತ್ಕ್ರೈಸ್ತರ ಈ ವಿಪರೀತ ಮರ್ಯಾದೆಯೂ ಲಕ್ಷಣವೂ ನಿನ್ನಲ್ಲಿ ಉಂಟೇನೋ?

೩. ಮತ್ತಾ. ೧೮, ೨೧ — ೩೫ರಲ್ಲಿರುವ ಸುವಾರ್ತಾವಾಕ್ಯವು "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲಾ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲಾ" ಎಂಬುವ ಎಶಾಯ. ೫೫, ೮. ೯ ರಲ್ಲಿರುವ ವಾಕ್ಯದ ಉತ್ತಮ ವ್ಯಾಖ್ಯಾನವಾಗಿದೆ; ಯಾಕಂದರೆ ಸದರಿ ಸುವಾರ್ತಾವಾಕ್ಯವು ತೋರಿಸುವದೇನಂದರೆ: ೧. ಮನುಷ್ಯರಿಗೆ ಅಗಣಿತವೆಂತಲೂ ಅಕ್ಷಮ್ಯವೆಂತಲೂ ಕಾಣುವ ಪಾಪವೆಂಬ ಸಾಲವನ್ನು ದೇವರು ಒಮ್ಮೆಗೆನೇ ಬಿಡ ಬಹುದು. ೨. ಮನುಷ್ಯರಿಗೆ ಅಷ್ಟು ವಿಶೇಷವೂ ದೊಡ್ಡದೂ ಅಲ್ಲವೇ ಅಲ್ಲ ಎಂತ ತೋರುವ ತಪ್ಪನ್ನು ದೇವರು ಅತಿ ಕಠಿಣವಾಗಿಯೂ, ಗಡುಸಾಗಿಯೂ, ಎಳ್ಳಿನಷ್ಟಾದರೂ ಬಿಡದವನಾಗಿಯೂ ವಿಚಾರಿಸಿ ದಂಡಿಸುವವನೇ.

೪. ಪಾಪ ಮಾಡಿ ತಪ್ಪುವ ಅನ್ಯನು (ಕ್ರೈಸ್ತನಲ್ಲದವನು) ಹೆಚ್ಚು ಅಪರಾಧಿಯೋ? ಅಥವಾ ಪಾಪ ಮಾಡಿ ತಪ್ಪುವ ಕ್ರೈಸ್ತನು ಹೆಚ್ಚು ಅಪರಾಧಿಯೋ? ಅಂಥಾ ಕ್ರೈಸ್ತನು ಹೆಚ್ಚು ಅಪರಾಧಿ, ಯಾಕಂದರೆ ಅನ್ಯನು ಮಾಡುವ ಪಾಪ ಕತ್ತಲೆಯ ಕ್ರಿಯೆಗಳೆಂಬದಾಗುತ್ತದೆ. ಕ್ರೈಸ್ತನ ತಪ್ಪು **ಬೆಳಕಿಗೆ ವಿರೋಧವಾದ ಪಾಪವಾಗುತ್ತದೆ.** ಒಬ್ಬ ರಾಜಕುಮಾರನ ಅಕ್ರಮವೂ ಮರ್ಯಾದೆಹೀನತೆಯೂ ತೊತ್ತು ಮಗನದಕ್ಕಿಂತ ಮಾನಗೇಡಿನ ಸಂಗತಿಯಾಗಿ ಹೇಸಿಕೆಯಲ್ಲವೋ?

ಯೇಸು ಇಂದಿಗೂ ಪ್ರಾರ್ಥನೆ ಕೇಳಿ ರೋಗ ವಾಶಿ ಮಾಡುವಾತನು.

ಕಾಶಿ ಪಟ್ಟದಲ್ಲಿ ಒಬ್ಬ ಧೊರೆಸಾನಿ ಅಸ್ವಸ್ಥವಾಗಿ, ಐದಾರು ತಿಂಗಳು ಹಾಸಿಕೆಯಿಂದೇಳಲಾರದೆ, ವಾಶಿಯಾಗುವ ಆಶೆಯೇನೂ ಇನ್ನು ಕಾಣದೆ, ಸಾವನ್ನು ಎದುರು ನೋಡ ಬೇಕಾದ ಅವಸ್ಥೆಯಲ್ಲಿ ಬಿದ್ದಿದ್ದಳು. ಆಕೆಗೆ ಎಂಟು ವರುಷದ ಹುಡುಗಿ ಇದ್ದಳು. ಆ ಹುಡುಗಿ ತಾಯಿಗೆ ಬಹಳ ಮಮತೆ

ಯಿಂದ ಹೊಂದಿಕೊಂಡಿದ್ದು, ತಾಯಿಯ ಸಂಕಟವನ್ನು ನೋಡಿ, ದುಃಖವನ್ನು ತಡೆಯಲಾರದಿದ್ದಳು. ಪ್ರಾರ್ಥಿಸುವವರಿಗೆ ಕೊಟ್ಟಿರುವ ವಾಗ್ದತ್ತಗಳೆಲ್ಲವನ್ನು ಹೊಸ ಒಡಂಬಡಿಕೆಯಲ್ಲಿ ಅವಳು ಹುಡುಕಿ, ಓದಿಕೊಂಡು, ಒಂದಾನೊಂದು ದಿನ ತಾಯಿಯ ಹತ್ತರ—"ಮುದ್ದಮ್ಮಾ! ಯೇಸು ನಿನ್ನನ್ನು ವಾಶಿ ಮಾಡಲಾರನೋ?" ಎಂತ ಕೇಳಿದಳು.

ಅದಕ್ಕೆ ತಾಯಿ—"ಓ, ಮುದ್ದು ಕಂದವ್ವಾ! ಯೇಸು ವಾಶಿ ಮಾಡ ಬಹುದು ಎಂಬುವ ವಿಷಯದಲ್ಲಿ ಸಂಶಯವಿಲ್ಲಾ; ಆದರೆ ಆತನಿಗೆ ವಾಶಿ ಮಾಡ ಮನಸ್ಸುಂಟೇನೋ? ಮನಸ್ಸಿಲ್ಲಾ ಎಂತ ನನಗೆ ತೋರುತ್ತದೆ" ಎಂದು ಹೇಳಿದ್ದಕ್ಕೆ

ಹುಡುಗಿ—"ಮನಸ್ಸಿಲ್ಲಾ ಎಂತ ಯಾಕೆ ಹೇಳುತ್ತೀರಿ? ವಾಶಿ ಮಾಡ ಬೇಕೆಂದು ನೀವು ಬೇಡಿಕೊಂಡದ್ದಕ್ಕೆ ಆತನು ಮನಸ್ಸಿಲ್ಲಾ ಎಂತ ಹೇಳಿದ್ದುಂಟೋ?" ಎಂದು ಕೇಳಲಾಗಿ, ತಾಯಿ—"ಇಲ್ಲಾ, ಹಾಗೆ ಆತನು ಹೇಳಲಿಲ್ಲಾ; ಆದರೆ"—ಅನ್ನುತ್ತಲೇ ಹುಡುಗಿ—"ಆದರೆ ನೀವು ಪ್ರಾರ್ಥಿಸುತ್ತಿದ್ದೀರಲ್ಲಾ! ನಿಮ್ಮನ್ನು ವಾಶಿ ಮಾಡ ಬೇಕೆಂತ ಇನ್ನು ಪ್ರಾರ್ಥಿಸಲಿಲ್ಲವೋ?" ಎಂದು ಕೇಳಲು, ಆ ಧೊರೆಸಾನಿ—"ಓ ಮುದ್ದು! ಹೆಚ್ಚು ಮಾತಾಡಲಿಕ್ಕೆ ನನ್ನಿಂದ ಕೂಡದು, ಸಂಕಟವಾಗುತ್ತದೆ; ನೀ ಹೋಗಿ, ಆಡು!" ಎಂಥೇಳಲಾಗಿ, ಹುಡುಗಿ ದುಃಖಿತಳಾಗಿ ತೋಟಕ್ಕೆ ಹೋಗಿ, ಒಂದು ಮರದ ಬುಡದಲ್ಲಿ ಕೂತು ಕೊಂಡು, ಚಿಂತಿಸಿ, ಮನಸ್ಸಿನಲ್ಲಿ ಪ್ರಾರ್ಥಿಸಿದಳು. ಬಳಿಕ ಫಕ್ಕನೆ ಎದ್ದು, ತಾಯಿಯ ಬಳಿಗೆ ತೀವ್ರವಾಗಿ ಓಡಿ ಬಂದು, ಮಂಚದ ಬದೀಲಿ ಮೊಣಕಾಲೂರಿಕೊಂಡು, "ಪ್ರಾರ್ಥಿಸುತ್ತೇನಮ್ಮಾ! ಯೇಸು 'ಬೇಡಿಕೊಳ್ಳಿರಿ' ಎಂಥೇಳಿದ್ದಾನೆ. ಆದ್ದರಿಂದ ನಾನೀಗ ಬೇಡಿಕೊಳ್ಳುತ್ತೇನೆ" ಎಂಥೇಳಿ, ಪ್ರಾರ್ಥಿಸಲಾರಂಭಿಸಿದಳು; ಹ್ಯಾಗಂದರೆ: "ಓ ಯೇಸು! ಅತಿ ಪ್ರಿಯ ಯೇಸು! ನನ್ನ ತಾಯಿ ಅಸ್ವಸ್ಥವಾದಂದಿನಿಂದ ನನಗೆ ಸುಖವಿಲ್ಲಾ. ಅವಳು ನನ್ನ ಸಂಗಡ ಮಾತಾಡಲಾರದಷ್ಟು ಅಸೌಖ್ಯದಲ್ಲಿದ್ದಾಳೆ. ಓ ಯೇಸು! ಅವಳಿಗೆ ಬಹಳ ಸಂಕಟವದೆ. ಓ ದೇವರೇ! ನನ್ನ ತಾಯಿಗೆ ಕ್ಷೇಮ ದಯ ಪಾಲಿಸು. ಓ ದೇವರೇ! ಇದು ನಿನ್ನ ಶಕ್ತಿಯನ್ನೂ ಚಿತ್ತವನ್ನೂ ಮೀರುವ ಸಂಗತಿಯಲ್ಲಾ. ನನ್ನ ತಾಯಿ ನಿನ್ನನ್ನು ಪ್ರೀತಿ ಮಾಡುತ್ತಿದ್ದಾಳೆ. ನಾನೂ ನಿನ್ನನ್ನು ಪ್ರೀತಿ ಮಾಡುತ್ತಿದ್ದೇನೆ" ಎಂದು ಪ್ರಾರ್ಥಿಸುತ್ತಲೇ ಕೈ ಚಪ್ಪಳ ಬಡಿದು, ಹಾರಿ ಎದ್ದು, "ವಾಶಿ ಮಾಡುತ್ತಾನೆ! ಅಮ್ಮಾ! ಯೇಸು ವಾಶಿ ಮಾಡುತ್ತಾನೆ!" ಎಂತ ಹರ್ಷಿಸಿ ಹೇಳಿದಳು.

ತತ್ಕ್ಷಣಕ್ಕೆ ಕೆಲವು ತಿಂಗಳು ಕೈ ಕಾಲು ಬಾರದೆ ಬಿದ್ದಿದ್ದ ಆ ಧೊರೆಸಾನಿಗೆ ಏಳ ಬೇಕೆಂಬ ಮನಸ್ಸೂ ಏಳುವ ತ್ರಾಣವೂ ಆಗಲು, ಆಕೆ ಎದ್ದು, ಸ್ವಸ್ಥವಾಗಿ ದೇವರನ್ನು ಕೊಂಡಾಡುವವಳಾಗಿ ಬಂಗ್ಲೆಯಲ್ಲೆಲ್ಲಾ ತಿರುಗಾಡಿ, ಮನೆತನದ ಕೆಲಸಕ್ಕೆ ತಿರಿಗಿ ಕೈ ಹಚ್ಚ ಬಹುದಾಯಿತು. ಟಪ್ಪಾಲ್ ಧೊರೆಯಾಗಿದ್ದ ಆಕೆಯ ಗಂಡನು ಟಪ್ಪಾಲುಖಾನೆಗೆ ಹೋಗಿ, ಬಂಗ್ಲೆಗೆ ತಿರಿಗಿ ಬರುವ ಹೊತ್ತಿಗೆ ಹೆಂಡತಿ ಎದ್ದು ಕ್ಷೇಮದಲ್ಲಿದ್ದದ್ದಾಗಿ ಕಂಡು ಕೊಳ್ಳಲು, ಹುಡುಗಿ ಆನಂದಮುಖಿಯಾಗಿ—"ಯೇಸು ವಾಶಿ ಮಾಡಿದ್ದಾನೆ! ಯೇಸು ವಾಶಿ ಮಾಡಿದ್ದಾನೆ!" ಎಂತ ಹರ್ಷಿಸಿ ಕೂಗಿದ್ದಕ್ಕೆ ಅವನು ಕೃತಜ್ಞತಾಭಾವೋದ್ರೇಕದಿಂದ ಮೊಣಕಾಲೂರಿಕೊಂಡು, ದೇವರನ್ನು ಮೌನಪೂರ್ವಕವಾಗಿ ಪ್ರಾರ್ಥಿಸಿ ಸ್ತುತಿಸಿದನು.

ಮೂರು ಆಶಾರ್ಥಗಳು.

ತಿಮ್ಮನೆಂಬ ಒಬ್ಬ ಪುರುಷನೂ ಅವನ ಹೆಂಡತಿಯಾದ ಕಾವೇರಿ ಎಂಬಾಕೆಯೂ ವಿಶೇಷ ಪಿತ್ರಾರ್ಜಿತಗಳಿಗೆ ಬಾಧ್ಯಸ್ಥರಾಗಿರದಿದ್ದಾಗ್ಯೂ, ಕ್ಷೇಮವುಳ್ಳವರೂ ಜೀವನ ಮಾಡಲಿಕ್ಕೆ ತಕ್ಕ ಅನುಕೂ

5*

ಲಗಳಿದ್ದವರೂ ಆಗಿದ್ದದರಿಂದ, ತಕ್ಕಷ್ಟು ಸುಖದಿಂದಿರುತ್ತಿದ್ದರು. ಆದರೆ ಆಶೆ ಎಂಬ ಮಾರಿ ಬಡಿಯದ ಜನ ಕೊಂಚವೇ ಅಲ್ಲವೋ? ಈ ದಂಪತಿಗಳಿಗೂ ಬೇರೆ ಜನರ ಸ್ಥಿತಿಗತಿ ನೋಡಿ, ತಮ್ಮದು ಸಾಲದೆಂದು ಕಂಡು, ಹೆಚ್ಚಿನದು ಆಗ ಬೇಕೆಂಬ ಆಶೆ ಹುಟ್ಟಿ ಹಿಡಿಯುವಂಥಾದ್ದಾಯಿತು.

ಒಂದಾನೊಂದು ದಿವಸ ಸಾಯಂಕಾಲಕ್ಕೆ ಭೋಜನ ತೀರಿಸಿ ಕೊಂಡು ಇಬ್ಬರು ಇಷ್ಟಾಲಾಪಿಸುತ್ತಾ ಒಲೆಯ ಹತ್ತರ ಕೂತು ಕೊಂಡು, ಅದರಲ್ಲಿ ಉಳಿದಿದ್ದ ಸ್ವಲ್ಪ ಕೆಂಡದಲ್ಲಿ ಗೇರುಬೀಜಗಳನ್ನು ಹಾಕಿ, ಹುರಿದು, ತಿನ್ನುತ್ತಿರಲಾಗಿ, ಅವರಿಗೆ ಒಬ್ಬ ಅಪ್ಸರ ಸ್ತ್ರೀಯ ದರ್ಶನವಾಯಿತು. ಈಕೆಯ ದರ್ಶನದಿಂದ ಅವರ ಬದೀಲಿಟ್ಟಿದ್ದ ದೀಪವು ಆರಿ ಹೋಯಿತು. ಆದರೆ ಅವಳ ತೇಜೋಮಯ ಮುಖದಿಂದಲೂ ವಸ್ತ್ರಾಲಂಕಾರದಿಂದಲೂ ಹೊರಟ ಪ್ರಕಾಶದಿಂದ ಅಡಿಗೇಕೋಣೆ ಕತ್ತಲೆಯಾಗದೆ ಶಾನೆ ಬೆಳಕುಳ್ಳದಾಯಿತು. ಆ ದರ್ಶನ ಕಂಡು ಅವರಿಬ್ಬರು ವಿಸ್ಮಯಾತಿಶಯದಿಂದ ಬೆಪ್ಪಾಗಿ ಹೋದರು. ಅವರ ವಿಸ್ಮಯ ಕಂಡು ಆಕೆ ಸಂತೈಸಿ, ಅತಿ ಇಂಪಾದ ಸ್ವರದಿಂದ ಅಂದದೇನಂದರೆ: "ನಿಮಗೆ ಇಷ್ಟಾರ್ಥವೆಲ್ಲಾ ಒದಗಿ, ಇಷ್ಟಾಪೂರ್ತಿಯಾಗ ಬೇಕೆಂತ ನಾನು ಮಹಾಮೇರು ಪರ್ವತದ ಕುಬೇರ ದಿಶೆಯಿಂದ ಬಂದಿದ್ದೇನೆ. ನೀವು ಮೂರು ಸರ್ತಿ ನಿಮ್ಮ ಆಶೆಯನ್ನು ಹೇಳಿಕೊಂಡು ಬೇಕಾದ್ದನ್ನೆಲ್ಲಾ ಪಡಕೊಳ್ಳ ಬಹುದು. ನೀವು ಆಶಿಸಿ ಹೇಳಿದ್ದು ನಿಮಗೆ ತಪ್ಪದೆ ಪ್ರಾಪ್ತಿಸುವದು."

ಆಕೆಯ ಮಾತನ್ನು ಕೇಳುತ್ತಲೇ ಕಾವೇರಿ ತನಗೆ ಇಂಥಿಂಥಾ ಶೀರೆ, ಶಾಲು ಇತ್ಯಾದಿ ವಸ್ತ್ರಗಳೂ, ಇಂಥಿಂಥಾ ರತ್ನ, ಮುತ್ತು ಮೊದಲಾದ ಒಡವೆಗಳೂ ಶಿಕ್ಕ ಬೇಕೆಂತ ತನ್ನ ಆಶಾರ್ಥವಾಗಿ ಹೇಳಿಕೊಳ್ಳಲಿಕ್ಕಾದಳು. ಆದರೆ ತತ್‌ಕ್ಷಣವೇ ಆ ಅಪ್ಸರೆ ತೋರುಬೆರಳು ಎತ್ತಿ—"ಅವಸರ ಬೇಡ! ನಿಧಾನ, ನಿಧಾನ! ಏಳು ದಿನದ ಸಮಯ ಕೊಡುತ್ತೇನೆ. ಈ ಸಮಯದಲ್ಲಿ ಚನ್ನಾಗಿ ವಿವೇಕ ಬುದ್ಧಿಯಿಂದ ಏನು ಹೇಳಿಕೊಳ್ಳ ಬೇಕೆಂದು ಯೋಚಿಸಿ, ಹೇಳಿರಿ" ಎಂತ ಬುದ್ಧಿ ಹೇಳಿ, ಅದೃಶ್ಯವಾದಳು. ತತ್‌ಕ್ಷಣಕ್ಕೆ ದೀಪವು ತಿರಿಗಿ ಯಥಾ ಪ್ರಕಾರ ಉರಿದು ಪ್ರಕಾಶಿಸಿತು. ಆ ದರ್ಶನ ಹೊಂದಿ ತಿಮ್ಮನಿಗೂ ಕಾವೇರಿಗೂ ಪರಮಾನಂದವೂ ಇಷ್ಟಾಪೂರ್ತಿಯೂ ಆದಂತಾಯಿತಾದಾಗ್ಯೂ, ತಾವು ಏನೇನು ಆಶಿಸಿ ಹೇಳಿಕೊಳ್ಳ ಬೇಕೆಂಬುವ ವಿಷಯದಲ್ಲಿ ಅವರ ಮನಸ್ಸಿಗೆ ಸಮಾಧಾನ ಹತ್ತಲೊಲ್ಲದೆ ಹೋದ್ದರಿಂದ, ಅಧಿಕ ಚಿಂತೆಯೂ ಕರಕರೆಯೂ ಹಿಡಿದು ಹೋಗುವಂಥಾದ್ದಾಯಿತು.

ಮರುದಿನದಲ್ಲಿ ಊಟಕ್ಕೆ ತಯಾರು ಮಾಡುವ ಯೋಚನೆ ಹಿಡಿಯ ಬೇಕಾದ ಹೊತ್ತಿನಲ್ಲಿ ಕಾವೇರಿ ಎಂದಿನಂತೆ ಒರಳಲ್ಲಿ ಅಕ್ಕಿ ಹಾಕಿ, ಒನಿಕೆ ಹಿಡಿದು ಕೊಂಡು ಕುಟ್ಟ ಬೇಕಾಯಿತು. ಅಂಗಳದಲ್ಲಿ ಹೀಗೆ ಕುಟ್ಟುತ್ತಿರಲಾಗಿ ಅವಳಿಗೆ ಹಶಿವೆಯೂ ಬಾಯಾರಿಕೆಯೂ ಆಯಿತು. ಆಗ ಅವಳು—"ನನಗೊಂದು ಚಲೋ ಸೀತಾಫಲ ತಿನ್ನಲಿಕ್ಕೆ ಶಿಕ್ಕಿದರೆ ಆಗುತ್ತಿತ್ತು" ಎಂದಂದು ಕೊಂಡಳು. ತತ್‌ಕ್ಷಣಕ್ಕೆನೇ ಒರಳಿನ ಬದೀಲಿ ಒಂದು ದಿವ್ಯ ಸೀತಾಫಲ ಬಿದ್ದು ಕೊಂಡು ಕಾಣುವಂಥಾದ್ದಾಯಿತು. ಅದನ್ನು ಕಂಡು ಅವಳು—"ಅಯ್ಯೋ! ಪಾಪ! ಈಗ ಅವಿಚಾರದ ಕೆಲಸವಾಯಿತು. ಈಗ ಇನ್ನು ಎರಡು ಸಾರಿ ಮಾತ್ರ ಆಶಾರ್ಥ ಹೇಳಿ ಕೊಂಡು ಪಡಕೊಳ್ಳಲಿಕ್ಕೆ ಅನುವು ಅದೆ. ನಾನೆಂಥಾ ಹುಚ್ಚಿ!" ಎಂತ ಬಹಳ ಪಶ್ಚಾತ್ತಾಪ ಪಟ್ಟಳು.

ಅವಳ ಗಂಡನು ಆದ ಸಂಗತಿಯನ್ನು ತಿಳಿದು, ಕನಕವೃಷ್ಟಿಯ ಕಾಲದಲ್ಲೆ ಎಮ್ಮೇ ಶಗಣಿಗೆ ಹೋದ ಹುಚ್ಚಿಯಂತಾದ ಹೆಂಡತೀ ಮೇಲೆ ಬಹಳ ಶಿಟ್ಟುಗೊಂಡು—"ನಿನ್ನ ನಾಸಾಗ್ರದಲ್ಲಿ (ಮೂಗಿನ ತುದಿಯಲ್ಲಿ) ಒಂದು ಸೀತಾಫಲ ಜೋಲ ಬಿದ್ದದ್ದಾದರೆ ಆಗುತ್ತಿತ್ತು" ಎಂತ ಬಾಯಿ ಬಿಡುತ್ತಲೇ, ಆಕೆಯ ನಾಸಾಗ್ರದಿಂದ ಒಂದು ದೊಡ್ಡ ಸೀತಾಫಲ ಹುಟ್ಟಿ, ಜೋಲ ಬೀಳುವಂಥಾದ್ದಾಯಿತು.

ಅದನ್ನು ಕಾಣುತ್ತಲೇ ಇಬ್ಬರು ಕಂಗೆಟ್ಟು ಹೋದಂತಾದರು. ಈಗ ಎರಡು ಸರ್ತಿ ಆಶಾರ್ಥ ಹೇಳಿಕೊಂಡು ಪಡಕೊಂಡ ಸಂಗತಿಯಾಯಿತು; ಆದರೆ ಪಡಕೊಂಡದ್ದೇನು? ಹೆಂಡತಿಗೊಂದು ಕೇವಲ ಅಪೂರ್ವ ಮೂಗುತಿಯಲ್ಲದೆ ಹೆಚ್ಚಿನ ಲಾಭವೇನೂ ಶಿಕ್ಕಲಿಲ್ಲಾ! ಅಯ್ಯಯ್ಯೋ! ನಮ್ಮ ಗ್ರಹಚಾರ! ಎಂಥೇಳಿ, ಮೂರನೇ ಆಶಾರ್ಥವಾಗಿ—"ಈ ಅಪೂರ್ವ ಮೂಗುತಿ ತಿರಿಗಿ ಹೋಗ ಬೇಕೆಂದು ಬೇಡಿ ಕೊಳ್ಳಲಿಕ್ಕಲ್ಲದೆ, ಹೆಚ್ಚಿನ ಬಿನ್ನಹಕ್ಕೆ ಇನ್ನು ಅನುಕೂಲವಿಲ್ಲಾ" ಎಂದಂದುಕೊಂಡು, "ಮೂಗು ತಿರಿಗಿ ಸಮವಾಗಲಿ!" ಎಂತ ಬೇಡಿಕೊಳ್ಳಲು ಆ ಅಪೂರ್ವ ಮೂಗುತಿ ತಿರಿಗಿ ಕಾಣದೆ ಹೋಯಿತು.

ಈ ಪ್ರಕಾರ ಮೂರು ಸಾರಿ ತಮ್ಮ ಆಶಾರ್ಥ ಹೇಳಿಕೊಂಡು, ಇಷ್ಟಾಪೂರ್ತಿ ಪಡಕೊಳ್ಳಲಿಕ್ಕೆ ಅನುವು ಹೊಂದಿದ್ದಾಗ್ಯೂ, ಅವಿವೇಕದಿಂದಲೂ ದುಡುಕಿನಿಂದಲೂ ಎಲ್ಲವನ್ನು ಕೆಡಿಸಿಕೊಂಡ ತಿಮ್ಮ ಕಾವೇರಿಯವರು ಒಬ್ಬರನ್ನೊಬ್ಬರು ನೋಡಿ, ತಮ್ಮ ಅಪ್ರಬುದ್ಧಿಗೂ ಆಶಾಮಾರಿತನಕ್ಕೂ ನಾಚಿಕೊಂಡು, ತಮ್ಮ ಶಿಟ್ಟನ್ನು ಬರಿದು ಬಾಯಿಯ ದವಡೇ ಮೂಲದಲ್ಲಿ ಅಣಗಿಸಿಕೊಂಡು, ತಮ್ಮ ಸ್ಥಿತಿಯಲ್ಲಿ ಸಮಾಧಾನವಾಗಿರ ಕಲಿತುಕೊಳ್ಳ ಬೇಕಾಯಿತು.

ಪಾಠಕನೇ! ಪಾಠಕಳೇ! ನಿನಗೂ ಇದ್ದದಕ್ಕಿಂತ ಹೆಚ್ಚೂ ಹೆಚ್ಚಿನದೂ ಬೇಕು ಎಂಬುವ ಆಶೆಯುಂಟೋ? ಇದ್ದರೆ, ನನ್ನ ಮಾತಿಗೆ ಲಕ್ಷ್ಯವಿಡು; ಯಾವ ಮಾತಿಗಂದರೆ: ನೀನು ಎಷ್ಟೋ ಆಶೆ ತಾಳಿದರೂ, ನಿನಗೆ ಆಶಾಪೂರ್ತಿಗೆ ಮಾರ್ಗ ಸಹಾ ಆದರೂ, ನಿನಗೆ ಬುದ್ಧಿ, ವಿವೇಕ, ಭಕ್ತಿ ಇವು ಇಲ್ಲದಿದ್ದರೆ, ಪ್ರಯೋಜನವೇನು? ಏನೂ ಪ್ರಯೋಜನವಾಗದು. ಆದ ಕಾರಣ ನೀನು ಒಂದು ಮಾಡು; ಏನಂದರೆ: ದೇವರು ನಿನಗೆ ಸಾಕೆಂಬುವ ಮನಸ್ಸನ್ನೂ, ಹೆಚ್ಚು ವಿವೇಕವನ್ನೂ, ಹೆಚ್ಚು ಭಕ್ತಿಯನ್ನೂ, ಹೆಚ್ಚು ಆಶೀರ್ವಾದವನ್ನೂ ದಯ ಪಾಲಿಸ ಬೇಕೆಂದು ಆತನನ್ನು ಬೇಡಿಕೋ!

ಲೇಖನ.

(೪೬ನೇ ಪಾನಿನಿಂದ ಮುಂದೆ.)

೨ನೇ ಪಾಲು.—ಬಳ್ಳಾರಿಯಿಂದ ಮಹಾ ಆಶ್ಚರ್ಯ ಕಾರ್ಯವಾಗಿರುವ ಉಗಿ ಭಂಡಿಯನ್ನೇರಿಕೊಂಡು, ಕೇವಲ ಘಾಳಿಯನ್ನೇ ವಾಹನ ಮಾಡಿಕೊಂಡಿದ್ದೇವೇನೋ ಎಂಬಂತಾಗಿ, ಹೆಚ್ಚು ಕಡಿಮೆ ೮೦-೯೦ ಹರದಾರಿ ದೂರದಲ್ಲಿರುವ ಕಡಪೆಯೆಂಬ ಶಹರಕ್ಕೆ ೮-೯ ತಾಸುಗಳೊಳಗೆ ಬಂದು ಮುಟ್ಟಿದೆವು. ಏನಪ್ಪ, ಇದರಲ್ಲಿ ಒಂದು ಮಾರ್ಗದ ಆಯಾಸವೇ? ಬಿಸಿಲು ಘಾಳಿ ಹಸಿವೆ ನೀರಡಿಕೆಗಳ ಉಪದ್ರವೇ? ಏನೇನೂ ಇಲ್ಲ. ಇದೊಂದು ಅಘಾಟ ಅದ್ಭುತವೇ!

ಕಡಪೆ.—ಪೂರ್ವ ಘಟ್ಟದ ಬಾಯಿಗಿರುವ ಈ ಕಡಪೆಯೆಂಬ ಶಹರದ ಭೂಮಿಯು ರಸವತ್ತಾಗಿದ್ದು, ಜಲಮಯವಾಗಿರುವ ಒಳ್ಳೆ ಬೆಳೆಯುಳ್ಳ ಸ್ಥಳವೇ. ಈ ಶಹರದಲ್ಲಿ ನಡಿಯುವ ಮುಖ್ಯವಾದ ವ್ಯಾಪಾರ ಜರತಾರಿ ಜವಳೀದು. ಇದರಲ್ಲಿ ನಿವಾಸಿಗಳು ಹೆಚ್ಚು ಕಡಿಮೆ ೩೦-೩೫ ಸಾವಿರ ಇರ ಬಹುದು. ಊರು ಗಿಡ ಗದ್ದೆಗಳಿಂದ ಬಹು ಚಂದವಾಗಿ ತೋರುತ್ತದೆ.

ಈ ಊರಲ್ಲಿಯೂ ಇದರ ಯಾವತ್ತು ಪ್ರಾಂತ್ಯಗಳಲ್ಲಿಯೂ ಸಹ ಲಂಡನ್ ಮಿಶ್ಯನೆರಿಗಳೇ ಮಿಶ್ಯನ ಕೆಲಸ ನಡಿಸುತ್ತಾರೆ; ಮತ್ತು ಅವರ ಕೆಲಸ ಬಹು ಸರಸವಾಗಿ ನಡಿಯುತ್ತದೆ. ಇವರ ಆಧೀನದಲ್ಲಿರುವ ಗ್ರಾಮಶಾಲೆ ಹಾಗು ಅನಾಥಶಾಲೆಗಳೂ, ಪ್ರಸಂಗಪ್ರಯಾಣದ ಕೆಲಸಗಳೂ ನಿತ್ಯ ಸಾಗೇ ಸಾಗುತ್ತವೆ. ಮತ್ತು ಮುಖ್ಯ ಠಾಣೆಯಾಗಿರುವ ಈ ಕಡಪೆಯಲ್ಲಿ ಸುಮಾರು ೪-೫ ನೂರು ಜನ

ಕ್ರೈಸ್ತರಿದ್ದು, ತಮ್ಮ ತಮ್ಮ ಉಧ್ಯೋಗಗಳನ್ನು ನಡಿಸಿಕೊಂಡು ಸುಖರೂಪದಲ್ಲಿರುತ್ತಾರೆ. ಇದಲ್ಲದೆ ಈ ಮುಖ್ಯ ಠಾಣೆಗೆ ಶೇರಿದ ಬೇರೆ ಅನೇಕ ಉಪಠಾಣೆಗಳಲ್ಲಿ ಹೆಚ್ಚು ಕಡಿಮೆ ೩ ಸಾವಿರ ಜನ ಕ್ರಿಸ್ತಿಯರಿದ್ಧಾರೆ. ಇಲ್ಲಿ ಕರ್ತನು ತನ್ನ ಪ್ರಜೆಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳಿಸಲಿ. ಈ ಕಡಪೆ ನಾಡಿನಲ್ಲೆಲ್ಲ ಥೇಟ ತೆಲಗು ಭಾಷೆಯೇ ನಡಿಯುವ ಕಾರಣ, ನಾವೇನು ಕೆಲಸ ನಡಿಸಲಾರದಿದ್ದೆವು. ಇಲ್ಲಿಂದ ಹೊರಟು, ತಿರಿಗಿ ಉಗಿಭಂಡಿಯ ಮೇಲೆ ಸವಾರಿ ಮಾಡಿ ಕೊಂಡು, ಇಲ್ಲಿಗೆ ೫೦-೬೦ ಹರದಾರಿ ದೂರದಲ್ಲಿರುವ ಮದ್ರಾಸವೆಂಬ ಸಂಸ್ಥಾನಪಟ್ಣಕ್ಕೆ ೫-೬ ತಾಸುಗಳೊಳಗೆ ತೊಟ್ಟಿಲದೊಳಗಿನ ಕೂಸಿನಂತೆ ಬಂದು ಮುಟ್ಟಿದೆವು.

ಮದ್ರಾಸ.—ಈ ಪಟ್ಣದಲ್ಲಿ ಹೆಚ್ಚು ಕಡಿಮೆ ೬-೭ ಲಕ್ಷ ನಿವಾಸಿಗಳು ವಾಸ ಮಾಡುತ್ತಾರೆ; ಇಲ್ಲಿ ಬಿಳಿ ಜನರ ವಸ್ತಿ ಬಹಳ. ಈ ಪಟ್ಣಕ್ಕೆ ಸಮುದ್ರ ಥಡದಲ್ಲಿ ಬಹು ಸುಂದರವಾಗಿಯೂ ಮಹಾ ಭದ್ರವಾಗಿಯೂ ಇರುವ ಒಂದು ನೆಲಕೋಟೆ ಉಂಟು. ಈ ಕೋಟೆ ಸರದಾರ ಸೋಲ್ಜರ ಜನರ ವಸ್ತಿಯಿಂದಲೂ, ಅವರ ಸುಂದರವಾದ ಮನೆಗಳಿಂದಲೂ, ಅಲ್ಲಲ್ಲಿಗಿರುವ ನೀರಿನ ಕಾರಂಜಿಗಳಿಂದಲೂ, ರಾತ್ರಿ ಚಂದ್ರನ ಮರಿಗಳಂತುರಿಯುವ ಗ್ಯಾಸೆಂಬ ದೀವಿಗೆಗಳಿಂದಲೂ ಬಹು ಶೋಭಾಯಮಾನವಾಗಿದೆ. ಹಾಗೆ ಕೋಟೆಯ ಹೊರಗಿರುವ ಪಟ್ಣವು ಸಹ ಅಲ್ಲಲ್ಲಿಗಿರುವ ಗಗನಚುಂಬಿತವಾದ ಕ್ರೈಸ್ತ ದೇವಾಲಯಗಳಿಂದಲೂ, ಸರದಾರ ಸಾವಕಾರರ ಒಳ್ಳೊಳ್ಳೆ ಮಹಲಿನ ಮನೆಗಳಿಂದಲೂ, ನೀರಿನ ಕಾರಂಜಿ ಹೌದಗಳಿಂದಲೂ, ದೊಡ್ಡ ದೊಡ್ಡ ಬೀದಿ ಸಾಲ್ಮರಗಳಿಂದಲೂ, ರಥ ಕುದುರೆಗಳ ಸಂದಣೆಯಿಂದಲೂ, ಕಣ್ಣುಗಳಿಗೆ ಬಹು ಅಲಂಕಾರವಾಗಿ ತೋರುತ್ತದೆ. ಆದಾಗ್ಯೂ ಈ ಮದ್ರಾಸ ಪಟ್ಣವೇನು ಮುಂಬಾಯಿ ಪಟ್ಣದ ಚೆಲುವಿಕೆಗೂ ಅದರ ವ್ಯಾಪಾರಕ್ಕೂ ಸಮಾನವಾದ್ದಲ್ಲ.

ಈ ಪಟ್ಣಕ್ಕೆ ಉತ್ತಮ ಭೂಮಿ ಇದ್ದು, ಜಲಭರಿತವಾಗಿದೆ. ಮತ್ತು ಇದರ ಸುತ್ತಲು ನೆಲ್ಲುಗದ್ದೆಗಳಿದ್ದು, ಮಾವು, ಹಲಸು, ತೆಂಗಿನ ವನಾಂತರಗಳಿಂದಲೂ, ಕಬ್ಬು, ಕದಳಿ, ಹೂ ತೋಟಗಳಿಂದಲೂ ಮುಚ್ಚಿಕೊಂಡು, ನೋಡುವವರಿಗೆ ಬಹು ಮನೋಹರವಾಗಿ ತೋರುತ್ತದೆ. ಸಾಹೇಬಜನರಿಗಂತು ಈ ಊರಂದರೆ ಪಂಚಪ್ರಾಣ. ಇದೊಂದೆ ಊರು ಮಾತ್ರವಲ್ಲ, ಇದರ ಪ್ರಾಂತ್ಯದಲ್ಲೆಲ್ಲಿಯೂ ನೋಡಿದತ್ತ ಕಡೆಯಲ್ಲೆಲ್ಲ ಪ್ರಯಾಣಸ್ಥರನ್ನು ಕೂಗಿ ಕರೆದು, ತಿಂದು, ಕುಡಿದು, ವಿಶ್ರಮಿಸಿ ಕೊಳ್ಳಿರೆಂತ ಹೇಳುತ್ತವೇನೋ ಎಂಬಂತೆ ಶೋಭಿಸುವ ಸರೋವರದಂತಿರುವೆ ಮಹತ್ವವಾದ ತಿಳಿನೀರಿನ ಕೆರೆ, ಕಬ್ಬಿನ ತೋಟ, ಕದಳಿ ವನಗಳಿದ್ದು, ತೆಂಗು, ಭತ್ತ ಗದ್ದೆಗಳ ಹಸರಿನಿಂದ ಹನ್ನೆರಡು ಮಾಸವು ಸುಂದರವಾಗಿ ಎಸೆಯುತ್ತದೆ. ಒಟ್ಟಿಗೆ ಬಹು ರಮಣೀಯವಾದ ರಾಜ್ಯ; ಮತ್ತು ಜೀನಸುಗಳೆಲ್ಲ ಬಹು ಅಘ್ಘ; ನಡಿಯುವ ಭಾಷೆಯೆಲ್ಲ ಶುದ್ಧ ಅರವ; ಆದಾಗ್ಯೂ ಇಂಗ್ಲಿಷ ಭಾಷೆ ತಿಳಿಯದವರು ಇದ್ಧಾರೋ ಏನೋ?

ಈ ಪಟ್ಣದಲ್ಲಿ ಕ್ರಿಸ್ತಿಯರ ವಸ್ತಿ ಬಹಳ. ಸಾಹೇಬಜನರಂತು ಸರಿ ಪಟ್ಟು ತುಂಬಿ ಕೊಂಡಿದ್ಧಾರೆ. ಈ ಪಟ್ಣದೊಳಗಿರುವ ಅನೇಕ ಕ್ರೈಸ್ತ ದೇವಾಲಯಗಳಲ್ಲಿ ಒಂದು ದೇವಾಲಯ ಬಹು ಸುಂದರವಾದ್ದು. ಅದು ಗೋಳಾಕೃತಿಯಾಗಿದ್ದು, ಅದರ ಶಿಖರಗಳು ಗಗನಕ್ಕೆ ಮುಟ್ಟಿಯವೆ—ನೋಡತಕ್ಕ ದೇವಾಲಯವೆ. ಈ ಪಟ್ಣ ಕರ್ತನ ದಿವಸದಲ್ಲಿ ಕೇವಲ ಕ್ರಿಸ್ತಿಯರ ಪಟ್ಣದಂತೆ ತೋರುತ್ತದೆ. ಈ ದಿವಸ ಅಂಗಡಿ ವ್ಯವಹಾರಗಳೆಲ್ಲ ಬಂದು ಇದ್ದು, ಅಲ್ಲಲ್ಲಿ ಪುಸ್ತಕ ಪ್ರಾರ್ಥನೆ, ಪ್ರಸಂಗ, ಪಾರಾಯಣ, ಯೌವನಸ್ಥರ ಭಕ್ತ್ಯಾಭಿವೃದ್ಧಿ ಸಂಘ, ಬಾಲಕರ ಪಾಠಗಳು ನಡದೇ ಇರುತ್ತವೆ. ಇದಲ್ಲದೆ ಬೇರೆ ಬೇರೆ ಮಿಶ್ಯನ ಶಾಲೆಗಳಲ್ಲಿ ಓದುವ ಅನ್ಯ ಜನರ ಹುಡುಗ ಹುಡುಗಿಯರು ಸಹ ಆದಿತ್ಯವಾರ ಅಲ್ಲಲ್ಲಿ ಶಾಲೆ ಮನೆಗಳಲ್ಲಾಗುವ ದೇವರ ವಾಕ್ಯದ ಪಾಠಕ್ಕೆ ಎಲ್ಲರು ಕ್ರೈಸ್ತರ ಮಕ್ಕಳಂತೆ ಬರು

ತ್ತಾರೆ. ಈ ದಿವಸ ಅವರು ಕ್ರೈಸ್ತರ ಹುಡುಗರಲ್ಲವೆಂತ ಅವರ ಗಂಧ ವಿಭೂತಿ ಜುಟ್ಟು ಜನಿವಾರಗಳಿಂದ ಗೊತ್ತಾಗ ಬೇಕೇ ಹೊರ್ತು ಬೇರೆ ರೀತಿಯಿಂದ ಗೊತ್ತಾಗುವ ಹಾಗಿಲ್ಲ. ಯಾಕಂದರೆ ಜಪಕ್ಕೆ ಸಹ ನಿಲ್ಲುತ್ತಾರೆ. ಇದೊಂದು ಬಹಳ ಬಹಳ ಚೆಲೋದು, ಯಾಕಂದರೆ ಹುಡುಗರ ಮನವೆಂಬ ಹಲಿಗೆಯು ಹೊಟ್ಟೆ ಬೆನ್ನು ಬರೆಯದ ಬರೀ ಹಲಿಗೆಯಂತಿರುತ್ತವೆ; ಅಂದ ಬಳಿಕ ಅಂಥ ಹಲಿಗೆಗಳ ಮೇಲೆ ದೇವರ ವಾಕ್ಯದ ಲೇಖನ ಬಹು ಚನ್ನಾಗಿ ಮೂಡದೆ ಇರದು, ಮತ್ತು ಫಲವಾಗದೆ ಹೋಗದು, ಮತ್ತು ಫಲವಾಗಿದೆ. ಇದರಂತೆ ಇದರ ಪ್ರಾಂತ್ಯಗಳ ಅನೇಕ ಊರುಗಳಲ್ಲಿ ನಡಿಯುತ್ತದೆ. ಈ ಪಟ್ಣದಲ್ಲಿಯೂ ಇದರ ಯಾವತ್ತು ಪ್ರಾಂತ್ಯಗಳಲ್ಲಿಯೂ ಲಂಡನ್ ಅಮೇರಿಕನ್ ಮುಂತಾದ ಬೇರೆ ಬೇರೆ ಮಿಶ್ಯನೆರಿಗಳವರ ಕೆಲಸ ಬಹು ಪಸಂದವಾಗಿ ಸಾಗುತ್ತದೆ. ಈ ಪ್ರಾಂತ್ಯಗಳಲ್ಲಿ ಅನೇಕ ನೇಟಿವ ಪಾದ್ರಿಗಳಿದ್ದು ಗುಡಿ ಬೀದಿ ಪ್ರಸಂಗ ಮುಂತಾದ್ದನ್ನು ಬಹು ಚನ್ನಾಗಿ ನಡಿಸುತ್ತಾರೆ; ಹಾಗೆ ಶೀಮೆಯಿಂದ ಬಂದ ಮಿಶ್ಯನೆರಿಗಳು ಸಹ ಕರ್ತನ ಕಾರ್ಯಕ್ಕೋಸ್ಕರ ಪುಷ್ಕಳ ಪ್ರಯಾಸ ಪಡುತ್ತಾರೆ; ಅವರ ಪ್ರಯಾಸಕ್ಕೆ ಕರ್ತನು ಫಲ ಕೊಡುವವನಾಗಲಿ. ಆದರೆ ನಾವು ಇಲ್ಲಿ ಸಹ ಭಾಷೆಯ ನಿಮತ್ತ ಏನು ಕೆಲಸ ನಡಿಸಲಾರದಿದ್ದೆವು. ಆದಾಗ್ಯು ನಾವು ಇಲ್ಲಿ ದುಬಾಷಿಯ ಸಹಾಯದಿಂದ ನೋಡಿದ ನೋಟಗಳಿಂದ ನಮ್ಮ ಆತ್ಮವೃದ್ಧಿಗೆ ಬಹು ಪ್ರಯೋಜನ ಉಂಟಾಯಿತು. ಇದಲ್ಲದೆ ಈ ಪಟ್ಣದಲ್ಲಿಯೂ, ಇದರ ಸಮುದ್ರಪ್ರಾಂತ್ಯದಲ್ಲಿಯೂ ಕರ್ಮಕಾಂಡಿಗಳಾದ ರೋಮನ್ ಕಥೋಲಿಕ ಕ್ರಿಸ್ತಿಯರು ಸಹ ಸಾವಿರ ಸಾವಿರವಾಗಿ ವಾಸ ಮಾಡುತ್ತಾರೆ; ಇವರ ಗುಡಿಗಳಿಗೆ ಸಹ ಹೋಗಿ ನೋಡಿದೆವು. ಅಕಟ! ಇವರು ಶುದ್ಧ ವಿಗ್ರಹಾರಾಧಕರೇ; ಇವರ ಗುರುಗಳು ಮಹಾ ಸ್ವಾಭಿಮಾನಿಗಳೇ. ಈ ಜನಕ್ಕೆ ಯಾವಾಗ ಬುದ್ಧಿ ಬರುತ್ತದೋ ದೇವರೇ ಬಲ್ಲ.

ಇಲ್ಲಿಂದ ಹೊರಟು, ಇಲ್ಲಿಗೆ ೭೦-೮೦ ಹರದಾರಿ ದೂರದಲ್ಲಿರುವ ಬೆಂಗಳೂರು ಎಂಬ ಶಹರಕ್ಕೆ ೭-೮ ತಾಸುಗಳೊಳಗೆ ಬಂದು ಮುಟ್ಟಿದೆವು. ಆಹಾ! ಉಗಿಭಂಡಿಯ ಅದ್ಭುತ ಏನು ಹೇಳಲಿ! ಬಲ್ಲಂಥ ಬುದ್ಧಿವಂತರು ಇದರ ವರ್ಣನೆ ಪದರೂಪವಾಗಿ ಮಾಡಿದರೆ, ಬಹು ಜನ ಓದ ತಕ್ಕ ಒಂದು ದೊಡ್ಡ ಕಾವ್ಯಪುಸ್ತಕವಾದೀತು; ಅದು ನನಗೆ ಬಾರದೆ ಇರುವ ಕಾರಣ ದುಃಖ ಪಡುತ್ತೇನೆ. ಈ ಎಂಜಿನ್‌ಗಾಡಿಯೊಂದು ಅದ್ಭುತ ಸೃಷ್ಟಿಯೇ; ಇದರ ಖರ್ಚು ಅನಿವಾರ, ಹಾಗೆ ಆದಾಯ ಸಹ ಅನಿವಾರ. ಈ ಲೋಹಮಾರ್ಗಕ್ಕಾಗಿ ಅಲ್ಲಲ್ಲಿ ಹಳ್ಳ, ಹೊಳೆ, ಹಗರಿಗಳಿಗೆ ಕಟ್ಟಿರುವ ಸಂಕಗಳೆಂಥಾವು! ಅಲ್ಲಲ್ಲಿ ಬಿದ್ದಿರುವ ಇದರ ಸಾಮಗ್ರಿಗಳೆಷ್ಟು! ಅಲ್ಲಲ್ಲಿ ಕಟ್ಟಿರುವ ಸ್ಟೇಶನ್‌ಮನೆಗಳೆಂಥಾವು! ಅವುಗಳ ಸುಂದರತ್ವವೇನು! ಹಾಗೆ ಏನೂ ಮಾತಿಲ್ಲ, ಕಣ್ಣಿಗೆ ಮೋರಾಯಿಸುತ್ತವೆ; ಅಘಾಟ ಅಘಾಟ ಮಾತು. ಇದರಂತೆ ಈ ಮಾರ್ಗದ ಎಡಬಲದಲ್ಲಿ ಅಂಚೇ ಕಾಗದವನ್ನು ಒಬ್ಬನ ಕೈಯಲ್ಲಿ ಒಬ್ಬನು ಕೊಟ್ಟು ಓಡಿಸುತ್ತಾನೇನೋ ಎಂಬಂತೆ ಶೋಭಿಸುವ ತಂತಿ ಹೊತ್ತ ಕಂಭಗಳು ಸಾಲುಗಟ್ಟಿ ನಿಂತಿರುತ್ತವೆ. ಈ ತಂತಿಟಪ್ಪಾಲಿನದಾದರೂ ಒಂದು ಆಶ್ಚರ್ಯವಾದ ಸಂಗತಿಯೇ. ಬಪ್ಪರೆ! ಇಂಗ್ರೇಜರ ಬುದ್ಧಿ ಚಮತ್ಕಾರವೆ! ಸತ್ತು ಹುಟ್ಟಲಿಕ್ಕೊಂದರಿಯರು. ವೆಚ್ಚ ಮಾಡುವದಕ್ಕೂ ಘಳಿಸುವದಕ್ಕೂ ಇವರೇ ಶೂರರು. ನಮ್ಮ ದೇಶದ ತಬ್ಬಲಿ ಮಕ್ಕಳಿಗೆ ಯಾವಾಗ ಜ್ಞಾನ ಬರುತ್ತದೋ? ಅವರು ಸತ್ಯ ತಂದೆಯಾದ ದೇವರನ್ನು ಬಿಟ್ಟು, ವಿಗ್ರಹಾರಾಧನೆ ಎಂಬ ಗಾಢಾಂಧಕಾರದಲ್ಲಿರುವ ತನಕ ಹ್ಯಾಗೆ ಬಂದೀತು? ಮತ್ತು ಜಾತಿಭೇದ ಹೋಗದ ತನಕ ಎಲ್ಲಿಂದ ಬಂದೀತು? ನೋಡಿರಿ, ಈ ನಮ್ಮ ದೇಶದ ಜನರು ನೀರಿನ ಮತ್ತು ಬೆಂಕಿಯ ಪ್ರಯೋಜನ ಬರೇ ಕುಡಿಯುವದಕ್ಕೂ, ಸುಚ್ಚುವದಕ್ಕೂ ಅದೆ ಅಂತ ತಿಳು ಕೊಂಡದ್ದೇ ಅವರಿಗೊಂದು ಹೆಚ್ಚಿನ ಮಾತಾಗಿ, ನೀರಿಗೆ ಗಂಗಾದೇವಿ ಎಂದೂ, ಬೆಂಕಿಗೆ ಅಗ್ನಿದೇವಿ ಎಂದೂ ಆರಾಧಿಸ ಹತ್ತಿದರು. ಇನ್ನೂ. ಬೆಂಕಿ ನೀರಿನ ಪ್ರಯೋಜನ ಇಂಗ್ರೇಜರಂತೆ ತಿಳು ಕೊಂಡಿ

ದ್ದರೆ, ಇನ್ನೇನು ಮಾಡುತ್ತಿದ್ದರೋ? ಹೆಚ್ಚೆಂದಿನ್ನೇನು ಮಾಡುತ್ತಿದ್ದರು? ಬಹಳವಾದರೆ, ಮರಳು ಶಂ
ಕರದೇವರ ಹಾಗೆ, ತಮ್ಮ ತಲೇ ಮೇಲೆ ಹೊತ್ತು ಕೊಂಡು ತಿರುಗುತ್ತಿದ್ದರು. ಆದರೆ ಇಂಗ್ರೇಜರಿಗೆ ಈ
ಚಮತ್ಕಾರವಾದ ಬುದ್ಧಿಯನ್ನು ಕೊಟ್ಟ ಪರಲೋಕದ ದೇವರಿಗೆ ಸ್ತೋತ್ರವಾಗಲಿ! ಯಾಕಂದರೆ ಇದ
ರಿಂದ ದೇಶಕ್ಕೆ ಬಹು ಪ್ರಯೋಜನ ಉಂಟಾಗುತ್ತದೆ. ಇಲ್ಲಿ ಇನ್ನು ಕೆಲವು ಮಾತುಗಳು ಹೇಳ ಬೇಕು.
ಏನಂದರೆ—ಮದ್ರಾಸಿನಿಂದ ಬೆಂಗಳೂರ ವರೆಗಿರುವ, ಈ ಮಾರ್ಗದಲ್ಲಿಯೂ ಕೆರೆ, ತೊರೆ, ಹಗರೆ ಅಲ್ಲಿಂ
ದಲ್ಲೆ ಮಾಗಾಣಿ ಆಗುವ ಉತ್ತಮ ಸ್ಥಳವಿದ್ದು, ನೆಲ್ಲು ಗದ್ದೆ ಗಳಿಂದಲೂ ಕಬ್ಬು ಕದಳಿಗಳ ವನಗಳಿಂದಲೂ
ಬಹು ಶೋಭಾಯಮಾನವಾಗಿದೆ. ಕಡಪೆಯಿಂದ ಮದ್ರಾಸಕ್ಕಿರುವ ಮಾರ್ಗದಲ್ಲ್ಯಾಗಲೀ, ಮದ್ರಾಸ
ದಿಂದ ಬೆಂಗಳೂರಿಗಿರುವ ಮಾರ್ಗದಲ್ಲ್ಯಾಗಲೀ ಬಹುಶಾ ಕ್ರಿಸ್ತಿಯರಿಲ್ಲದ ಗ್ರಾಮಗಳಾಗಲೀ ಸ್ಟೇಶ
ನಗಳಾಗಲೀ ಇರುವದು ವಿರಳ, ಅಥವ ಇಲ್ಲವಂತ ಹೇಳ ಬೇಕು. ಜನರು ಸಹ ಒಳ್ಳೆಯವರೇ.

ಈ ಬೆಂಗಳೂರ ಯಾವತ್ತು ಶೀಮೆ ಮೈಸೂರ ರಾಜಾಸಾಹೇಬರದು. ಈ ಶೀಮೆಯ ವ್ಯವಸ್ಥಾಪಕ
ರು ಇಂಗ್ಲಿಷರ ಕಡೆಯಿಂದ ಅಲ್ಲಿರುವ ಕಮ್ಮಿಶನರ ಧೊರೆಗಳೇ. ಈ ಊರಲ್ಲಿ ಮುಖ್ಯವಾಗಿ ನೋಡ ತಕ್ಕ
ಒಡವೆಗಳು ಎರಡು. ಅವುಗಳಲ್ಲಿ ಮೊದಲನೇದು: ಪದಾರ್ಥಸಂಗ್ರಹಾಲಯ, ಅಂದರೆ ವಿಸ್ತಾರವಾದ ಒಂ
ದು ಮನೆಯಲ್ಲಿ ಸರಕಾರದವರು, ಪೂರ್ವಕಾಲದ ನಾನಾ ತರದ ನಾಣ್ಯಲಿಪಿಗಳನ್ನೂ, ಚಮಾತ್ಕಾರವಾದ
ಶಿಲಾವಿಗ್ರಹ ತೇರುಗಳನ್ನೂ, ನಾನಾ ಕಾಮಾಟಿಕೆಗಳ ಹಳೇ ಸಾಮಾನುಗಳನ್ನೂ, ಈ ದೇಶದ ಹಳೇ
ಆಯುಧ ಕಬ್ಬಿಣ ಕವಚಗಳನ್ನೂ, ನಾನಾ ವಿಧವಾದ ಶಿಲೆ ಲೋಹ ಮರಗಳ ತುಂಡುಗಳನ್ನೂ, ಅ
ನೇಕ ವಿಧವಾದ ಧಾನ್ಯ ಮಸಾಲೆ ವಸ್ತ್ರಾದಿಗಳನ್ನೂ, ತರ ತರವಾದ ನಾರು ರೇಶ್ಮೆ ಸಣಬುಗಳನ್ನೂ,
ಒಣಗಿಸಿದ ವಿಧ ವಿಧವಾದ ಮೃಗ ಪಕ್ಷಿ ಕ್ರಿಮಿ ಜಂತುಗಳನ್ನೂ, ನಾನಾ ದೇಶದ ಮನುಷ್ಯರ ರೂಪ
ಗಳನ್ನೂ, ಆನೆಯ ಅಸ್ಥಿ ಸರ್ಪಾದಿಗಳನ್ನೂ, ಸಮುದ್ರದಲ್ಲಿ ಶಿಕ್ಕುವ ಕವಡಿ ಶಂಖ ವಿಚಿತ್ರವಾದ
ಹುಳಗಳ ಮನೆಗಳನ್ನೂ ಅಲ್ಲಲ್ಲಿ ಕ್ರಮವಾಗಿ ಮಡಿಸಿ ಇಟ್ಟಿದ್ಧಾರೆ. ಇವುಗಳನ್ನೆಲ್ಲ ಚನ್ನಾಗಿ ನೋಡಿ
ಪರೀಕ್ಷಿಸುವದಕ್ಕೆ ೧೦ ವರುಷವಾದರೂ ಸಾಲದು. ಇವುಗಳನ್ನೆಲ್ಲ ಕಣ್ಣಾರೆ ನೋಡುವಾಗ, ಸರ್ವ
ಶಕ್ತನ ಅಘಾಟ ಸೃಷ್ಟಿಯ ಮಹತ್ವ ಮನವರಿಕೆಗೆ ಬಂದು, ಹಾ ಎಂದು ದೇವರಿಗೆ ಸ್ತುತಿ ಹುಟ್ಟದೆ
ಹೋಗುವದಿಲ್ಲ.

ಎರಡನೇದು—ಸರಕಾರದವರು ಮಾಡಿಸಿರುವ ಲಾಲಬಾಗವೆಂಬ ಸುಂದರವಾದ ತೋಟ. ಈ
ತೋಟ ಸುಮಾರು ಚಚ್ಚೌಕ ೧ ಮೈಲು ಇದ್ದು, ಇದರ ಮೇಲಗಡೆ ಒಂದು ಮಹತ್ವವಾದ ಕೆರೆ ಕ
ಟ್ಟಿದ್ಧಾರೆ; ಇದರ ನೀರು ಕಾಲುವೆಗಳ ಮುಖಾಂತರ ತೋಟವನ್ನೆಲ್ಲ ಸಂಚರಿಸಿ ತೋಯಿಸುತ್ತದೆ.
ಈ ವನವು ನಾನಾ ಶೀಮೆಯ ಅಪರೂಪವಾದ ಚಂದಾ ಚಂದದ ವೃಕ್ಷ ವನಸ್ಪತಿ ಪುಷ್ಪಲತೆಗಳಿಂದ
ಲೂ, ಅಲ್ಲಲ್ಲಿ ಚಂದಕ್ಕಾಗಿ ಬೆಳಿಸಿರುವ ಮಟ್ಟಳತೆಯ ಕೋಮಲವಾದ ಹುಲ್ಲು ಹಸುರಾದ ಕರಿಕೆಯಿಂ
ದಲೂ, ಉಸಬು ಹಾಸಿಕೆಯ ಬೀದಿಗಳಿಂದಲೂ, ಸಾಲ್ಮರಗಳಿಂದಲೂ, ಕಾಯಿ ಹಣ್ಣು ಪುಷ್ಪಗಳಿಂ
ದಲೂ, ನಾನಾ ಚೆಲ್ವಿನಿಂದಲೂ, ಕಾರಂಜಿಗಚ್ಚಿನ ಹೌದಗಳಿಂದಲೂ, ಅಲ್ಲಲ್ಲಿಗೆ ಕಟ್ಟಿರುವ ಗಚ್ಚಿನ
ಕಟ್ಟೆ ಬೇಂಚು ಕುರಚಿಗಳಿಂದಲೂ, ನೋಡ ಬಂದವರ ಸಂಚಾರದಿಂದಲೂ, ಮತ್ತು ಬಹು ಚಿತ್ರ ವಿ
ಚಿತ್ರವಾದ ರೀತಿಯಿಂದ ಇಟ್ಟಿರುವ ಹೂಗಿಡಗಳ ಕೊಪ್ಪರಿಗೆ ಗಾಜಿನ ಪಾತ್ರೆಗಳಿಂದಲೂ ಕಣ್ಣು
ಳಿಗೆ ಬಹು ಇಂಪಾಗಿ ತೋರಾಯಿಸುವದು ಮಾತ್ರವಲ್ಲದೆ, ಇಲ್ಲಿ ವಿನೋದಕ್ಕಾಗಿ ಅವವುಗಳ ಸುಂ
ದರವಾದ ಮನೆಗಳಲ್ಲಿ ಹಾಕಿರುವ ನಾನಾ ದೇಶದ ಪಕ್ಷಿಗಳ ಕಿಲಿಬಿಲಿಯಿಂದಲೂ, ಕಡಿವಿ ಸಾರಂಗ
ಸಿಂಹ ಮೃಗಗಳ ಹೂಂಕಾರದಿಂದಲೂ, ಹುಲಿ ಚಿರತೆಗಳ ಗುಡಿಗಿನಿಂದಲೂ, ದೊಡ್ಡ ದಾಡಿಯುಳ್ಳ
ಸಿಂಹದ ನಾದದಿಂದಲೂ ಬಹು ಶೋಭಾಯಮಾನವಾಗಿ ತೋರುವ ಈ ತೋಟವನ್ನಾದರೂ ನೋಡಿ

ದವರು ಹಾ ಭಗವಂತನ ಸರ್ವ ಶಕ್ತಿಗಳಲ್ಲಿ ಆತನ ನಿರ್ಮಾಣ ಪರಿಪಾಲನೆಯ ಶಕ್ತಿ ಒಂದು ಅಘಾಟ ಶಕ್ತಿಯೆಂದು, ಎಂಥಾ ನಾಸ್ತಿಕನಾದರೂ ಬಾಯಿ ತೆರೆದು ಹೇಳದೆ ಇರಲಿಕ್ಕಿಲ್ಲ. ನೋಡ ತಕ್ಕ ಪದಾರ್ಥಗಳೆ ಸರಿ. ಇಲ್ಲಿ ಇದರ ಚಿತ್ರ ತೆಗೆದು ತೋರಿಸಿದರೆ ಎಷ್ಟೋ ಒಳ್ಳೇದಾಗಿತ್ತು; ಆದರೆ ಅದು ನನಗೆ ಬಾರದೆ ಇರುವದರಿಂದ ವ್ಯಸನ ಪಡುತ್ತೇನೆ.

ಇದಲ್ಲದೆ ಈ ಊರು ಸಹ ಒಳ್ಳೇ ನೆಲಕೋಟೆಯಿಂದಲೂ, ಅಲ್ಲಲ್ಲಿ ತೋರುವ ಎತ್ತರವಾದ ಕ್ರೈಸ್ತ ದೇವಾಲಯಗಳಿಂದಲೂ, ಸರದಾರರ ಸುಂದರವಾದ ಬಂಗ್ಲೆ ಒಳ್ಳೊಳ್ಳೇ ಕಚೇರಿ, ವಿದ್ಯಾರ್ಥಿಗಳ ಪಾಠಕ್ಕಾಗಿ ಇಟ್ಟಿರುವ ನಾನಾ ಯಂತ್ರ ಪುಸ್ತಕಗಳಿಂದ ತುಂಬಿರುವ ಶಾಲೆ ಮನೆಗಳಿಂದಲೂ, ದೊಡ್ಡ ದೊಡ್ಡ ಸಾಧಾರಣ ಮತ್ತು ಹುಚ್ಚರ ಆಸ್ಪತ್ರಿಗಳಿಂದಲೂ, ನಾನಾ ಉದ್ಯೋಗ ನಡಿಯುವ ದೊಡ್ಡ ತುರಂಗ, ಸವಾರರ ಕುದುರೆ ಆಲಯಗಳಿಂದಲೂ, ಸೋಲ್ಜರರ ಬಾರಕಸಗಳಿಂದಲೂ, ಊರವರ ಕಲ್ಲುಗಚ್ಚುಗಳಿಂದ ಕಟ್ಟಿದ ಒಳ್ಳೇ ಮನೆಗಳಿಂದಲೂ, ಪಗಡಿ ಬಾಜಾರ, ಒಳ್ಳೊಳ್ಳೇ ಸರಕುಗಳ ಅಂಗಡಿಗಳಿಂದಲೂ, ರಥ ಕುದುರೆಗಾಡಿ ಇಲ್ಲಿಂದ ಭರತಿಯಾಗಿ ಹೋಗುವ, ಪರಸ್ಥಳದಿಂದ ಇಲ್ಲಿಗೆ ಬರುವ ವ್ಯಾಪಾರ, ತಿರುಗಾಡುವ ಜನರ ದಾಟಿಯಿಂದಲೂ ಈ ಶಹರ ಬಹು ಅಂದವಾಗಿ ತೋರುತ್ತದೆ. ಈ ಊರಲ್ಲಿ ಹೆಚ್ಚಿನ ಇಮಾರತಿ ಅಂದರೆ ಕಮ್ಮಿಶನರ ಧೊರೆಯ ಮಹಾ ಕಚೇರಿಯೇ. ಮತ್ತು ಇದರ ಮುಂದೆ ಚಕ್ರಾಕಾರವಾದ ಒಂದು ಪೀಠದ ಮೇಲೆ, ಇಲ್ಲಿಯ ಮಾಜಿ ಕಮ್ಮಿಶನರ ಧೊರೆಗಳಾದ ಕಬ್ಬನ್ ಸಾಹೇಬರವರ ತದ್ರೂಪ ಮಾಡಿ ವಿಲಾಯತಿಯಲ್ಲಿ ಎರಕ ಹೊಯಿಸಿದ ಒಂದು ಕುದುರೇ ಮೇಲೆ ಕೂಡ್ರಿಸಿದ್ದಾರೆ. ಆಹ ವಿಲಾಯತಿಯವರ ಎರಕ ಹೊಯ್ಯುವ ಜಾಣತನ ಯೇನು ಹೇಳಲಿ! ನಮ್ಮ ದೇಶದವರಿಗೆ ಹಣೆ ಹಣೆ ಬಡಕೊಂಡರೂ ಬಾರದು. ಆ ಎರಕದ ಕುದುರೆಯೂ, ಹಾಗೂ ಆ ಧೊರೆಯ ಎರಕದ ರೂಪವೂ ಕೇವಲ ಜೀವದ್ದೇನೋ ಎಂಬಂತಿದ್ದು, ಬಹು ಯಮಕವಾಗಿ ತೋರುವದಲ್ಲದೆ, ಅವುಗಳಲ್ಲಿ ಯಾವ ನ್ಯೂನತೆಯು ಇಲ್ಲ. ಮತ್ತು ಈ ಊರಲ್ಲಿ ಸುಮಾರು ೧ ಲಕ್ಷ ನಿವಾಸಿಗಳಿದ್ದಾರೆ; ಭಾಷೆ ಶುದ್ಧ ಕನ್ನಡ. ಈ ಊರಿನ ಭೂಮಿ ಸಹ ಬಹು ಒಳ್ಳೇದಾಗಿದ್ದು, ಇಲ್ಲಿರುವ ಸಕ್ಕರಿಯಂಥ ಹಗುರಾದ ಉತ್ಕೃಷ್ಟ ಜಲದಿಂದ ಈ ದೇಶದ ಮತ್ತು ಶೀಮೆಯ ನಾನಾ ತರದ ಫಲಗಳು, ಕಾಯಿಫಲ್ಯ, ಭತ್ತ ಮುಂತಾದ್ದು ಯಥೇಷ್ಟ ಬೆಳೆಯುತ್ತದೆ. ಇಲ್ಲಿಯ ನೀರು, ಹವ ದೇಹಕ್ಕೆ ಬಹು ಯೋಗ್ಯವಾದ್ದು. ಇದಲ್ಲದೆ ಈ ಬೆಂಗಳೂರ ಶೀಮೆ ಎತ್ತರವಾದ ಶೀಮೆಯಾಗಿರುವ ಕಾರಣ, ಇಲ್ಲಿಯ ಬಿಸಿಲು ಕಾಕಾಗಿರದೆ ಘಟ್ಟದ ಕೆಳಗಿನ ಬಿಸಿಲಿಗೆ ಸಮಾನವಾಗಿದೆ. ಇತ್ತ ಕಡೆಯ ಜನರ ಮುಖ್ಯ ಆಹಾರ ಅಕ್ಕಿ ಮತ್ತು ರಾಗಿ.

ಈ ಊರಲ್ಲಿ ಲಂಡನ್ ಹಾಗೂ ವೆಸಲಿಯನ್ ಮಿಶ್ಯನೆರಿಗಳು ಕರ್ತನ ಕೆಲಸ ನಡಿಸುತ್ತಾರೆ. ಇಲ್ಲಿ ದೇಶ ಕ್ರಿಸ್ತಿಯರು ಹೆಚ್ಚು ಕಡಿಮೆ ೪-೫ನೂರು ಜನ ಇರುವರು. ಇಲ್ಲಿ ಮಿಶ್ಯನೆರಿಗಳ ಅನಾಥ ಶಾಲೆಗಳೂ, ಹಾಗು ಅನ್ಯ ಜನರ ಹುಡುಗ ಹುಡಿಗಿಯರಿಗೋಸ್ಕರವಾಗಿ ಹಾಕಿಸಿರುವ ಊರ ಶಾಲೆಗಳೂ ಬಹು ಸರಸಾಗಿ ನಡಿಯುತ್ತವೆ. ಇವುಗಳಲ್ಲಿ ದೇವರ ವಾಕ್ಯದ ಪಾಠ ಯಥೇಷ್ಟ ನಡದು ಹುಡುಗ ಹುಡಿಗಿಯರಿಗೆ ಹಿಂದು ರಾಗದ ಪ್ರಕಾರ ಕ್ರೈಸ್ತ ಪದಗಳನ್ನು ಸಹ ಕಲಿಸಿ ಕೊಡುತ್ತಾರೆ. ಹೆಚ್ಚಿಗೆ ಹೇಳುವದೇನದೆ? ಮುಖ್ಯವಾಗಿ ದೇವರ ವಾಕ್ಯದ ಪಾಠದಿಂದ ಕೇವಲ ಕ್ರೈಸ್ತ ಹುಡುಗರ ಶಾಲೆಗಳೇನೋ ಎಂಬಂತೆ ಶೋಭಿಸುತ್ತವೆ. ಯಾವ ಅಡ್ಡಿ ಇಲ್ಲದೆ, ಈ ಪ್ರಕಾರ ಶಾಲೆಗಳು ಸಾಗುವದೊಂದು ದೇವರ ಕೃಪೆಯೇ ಸರಿ. ಇದಲ್ಲದೆ ಈ ಊರಲ್ಲಿಯೂ, ಇದರ ಸುತ್ತಲಿನ ಗ್ರಾಮಗಳಲ್ಲಿಯೂ ದೇವಾರಾಧನೆ ನೇಮಕವಾದ ದಿವಸಗಳಲ್ಲ್ಯಾಗುವ ಕೂಟಗಳು, ಬೀದಿಪ್ರಸಂಗ, ಪ್ರಯಾಣಪ್ರಸಂಗಗಳು ತಪ್ಪದೆ ಬಹು ಚನ್ನಾಗಿ ನಡಿಯುತ್ತವೆ.

ಮತ್ತು ಈ ಊರಲ್ಲಿ ನಮ್ಮ ಯೌವನಸ್ಥ ಕ್ರೈಸ್ತ ಸಹೋದರ ಸಹೋದರಿಗಳ ಸಂಘಗಳುಂಟು. ಇದಕ್ಕೆ ಕೂಡಿ ಬರುವ ಯೌವನಸ್ಥರು, ಉಪಯೋಗವಾಗಿರುವ ಬೇರೆ ಬೇರೆ ಸಂಭಾಷಣೆಗಳನ್ನೂ, ದೇವರ ವಾಕ್ಯದ ಪಾರಾಯಣ ಪ್ರಾರ್ಥನೆಗಳನ್ನೂ ನಡಿಸಿ ಕೊಂಡು ಕ್ರೈಸ್ತಭಕ್ತಿಯಲ್ಲಿಯೂ ಜ್ಞಾನದಲ್ಲಿಯೂ ಬೆಳೆಯುವವರಾಗಿದ್ದಾರೆ. ಇದೊಂದು ಪರಮ ಸಂತೋಷವೇ. ಸಾರಾಂಶ ಇಲ್ಲಿ ಒಳಗೆಯೂ ಹೊರಗೆಯೂ ಕರ್ತನ ಕೆಲಸ ಬಹು ಅಂದವಾಗಿ ನಡದದೆ. ನಾವು ಸಹಾ ಇಲ್ಲಿ ಇದ್ದ ೧೦—೧೨ ದಿವಸಗಳು ಇಲ್ಲಿಯ ಜತೆ ಸಹೋದರರ ಸಂಗಡ ದೇವಾಲಯ, ಮೀಟಿಂಗ್, ಹಾಗೂ ಬೀದಿಪ್ರಸಂಗಗಳನ್ನು ನಡಿಸಿದೆವು.

(ಮುಂದೆ ಸಾಗಿಸಲ್ಪಡುವದು.)

ವಿವಿಧ ವರ್ತಮಾನಗಳು.

ಹರ್ಕಮನ್, ಮರ್ಕ್, ಹನ್‌ಹರ್ತ್, ಷೊಕ್ ಎಂಬೀ ನಾಲ್ಕು ಮಂದಿ ಧೊರೆಗಳವರೂ ಅವರ ಪತ್ನಿಗಳೂ, ೪-೫ ಜನ ಹೊಸ ಧೊರೆ ಧೊರೆಸಾನಿಗಳೂ ನಮ್ಮ ಈ ದೇಶಕ್ಕೆ ಹೊರಟು, ಮುಂಬೈಗೆ ಬಂದು ಮುಟ್ಟಿದ್ದಾರಂತೆ.

ಹೊನ್ನಾವರ ಮಿಶ್ಯನ್ ಶಾಖೆಗೆ ಶೇರಿದ ಉಪಶಾಖೆಯಾದ ಕಾರವಾರ ಸಭೆಯವರೊಬ್ಬರ ಕೈಯಿಂದ ನಮಗೆ ಕೆಲವು ಕಥಾಪ್ರಸಂಗಗಳ ಭಾಷಾಂತರವು ರವಾನೆಯಾದ್ದಲ್ಲದೆ, ಆಪತ್ತು ಬಿದ್ದವರಿಗಾಗಿ ಸಹಾಯಾರ್ಥವಾಗಿ ೩ ರೂಪಾಯಿ ಸಹಾ ಆ ಸಭೆಯವರ ಕಡೆಯಿಂದ ತಲಪಿಸೋಣಾದ ಉಪಕಾರವನ್ನು, ಕೃತಜ್ಞತಾಭಾವಪೂರ್ವಕ ಸಂತೋಷ ಪಟ್ಟು, ನೆನಸುತ್ತೇವೆ.

ಅಕ್ಟೋಬರ ೩ರಲ್ಲಿ ಮುಲ್ಕೀ ಶಾಖೆಯಲ್ಲಿ ೨೧ ಜನ ಹೊಸಬರು ಸ್ನಾನ ಹೊಂದಿ, ಕ್ರೈಸ್ತಸಭೆಯನ್ನು ಶೇರಿದರು.

ಕೊಡಗು ಶೀಮೆಯ ಕಡೇ ಅರಸನ ಕುಮಾರಿಯಾದ ಗೌರಮ್ಮನವರ ವೃತ್ತಾಂತವನ್ನು ವಿವರಿಸಿ ಕೊಡುವಂಥಾ, ಇತ್ತಲಾಗೆ ಛಾಪೆಯಾದ ಒಂದು ಚಿಕ್ಕಪುಸ್ತಕವನ್ನು ಕೊಡಗು ಶೀಮೆಯ ಕ್ರೈಸ್ತರು ತಮ್ಮ ಶೀಮೆಯವರಲ್ಲಿ ಪ್ರಸಿದ್ಧ ಮಾಡಿ, ಹಬ್ಬಿಸಲಿಕ್ಕೆ ವಿಶೇಷ ಮನಸ್ಸು ಕೊಟ್ಟು ಪ್ರಯತ್ನ ಮಾಡ್ಯಾರೆಂತ ಕೋರಿದ್ದೇವೆ.

ಅಹಮದಾಬಾದಿನಲ್ಲಿ ಪ್ರಚಂಡ ಪ್ರವಾಹ ಉಂಟಾಗಿ, ೩೮೧೫ ಮನೆಗಳು ಬಿದ್ದು ಹೋದವು. ಮತ್ತು ೧೫೦೦ ಮನೆಗಳು ಬೀಳದಿದ್ದರೂ, ನಿವಾಸಕ್ಕೆ ಆಗದವುಗಳಾಗಿ ಹೋದವು. ಅಲಹಾಬಾದಿನಲ್ಲಿಯೂ ಅತಿ ವೃಷ್ಟಿಯಾಗಿ, ಇಪ್ಪತ್ತನಾಲ್ಕು ತಾಸಿನೊಳಗೆ ಇಪ್ಪತ್ತಮೂರು ಅಂಗುಲ ಮಳೆ ಬಿತ್ತು; ಸಾವಿರಾರು ಮನೆಗಳು ಬಿದ್ದು ಹೋದವು; ನಾಲ್ವತ್ತು ಮಂದಿ ಪ್ರಾಣನಷ್ಟ ಪಟ್ಟರು. ಕೆಲವು ಕಡೆಗಳಲ್ಲಿ ಲೋಹಮಾರ್ಗವು, ಭಂಡಿಗಳು ಇನ್ನು ಹೋಗ ಕೂಡದಂತೆ, ಹಾಳಾಯಿತು.

ಮದ್ರಾಸ ಸರ್ವಶಾಲೆಯ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಈ ವರ್ಷ ೨೦೮೫ ವಿದ್ಯಾರ್ಥಿಗಳು ಹೆಸರು ಬರಸಿ ಕೊಂಡಿದ್ದಾರೆ.

ಅಕೋಲಾ ಎಂಬಲ್ಲಿ ಚರ್ಚ ಮಿಶ್ಯನ ಶಾಲೆಯಲ್ಲಿ ಉಪಾಧ್ಯಾಯನಾಗಿದ್ದ ಒಬ್ಬ ಬ್ರಾಹ್ಮಣನು ಕ್ರೈಸ್ತನಾದನು.

ಕರಾಚಿಯ ಹತ್ತರ ಒಂದು ನಾವೆ ಒಡದು ಹೋಗಿ ೭೫ ಜನರು ಸತ್ತು ಹೋದರು. ಇವರು ದಿಬ್ಬಣದವರಂತೆ. ಕಲಾಶಿಗಳು ಅಫೀಮು ತಿಂದು ಲಹರಿ ಮಾಡಿ ಕೊಂಡದ್ದರಿಂದ ಈ ಅಪಾಯ ಉಂಟಾಯಿತು.

ಈ ವರುಷದಲ್ಲಿ ಸಹಾ ಇಂಗ್ಲಿಷ ಸರಕಾರದವರು ಬಡೋದೆಯಲ್ಲಿ ಗಣಪತೀ ಉತ್ಸವ ಪೂಜೆ ಮೆರವಣಿಗೆ ಮೊದಲಾದ್ದರ ಸಂಬಂಧದಲ್ಲಿ ಕ್ರೈಸ್ತ ಹೆಸರನ್ನು ತಿರಿಗಿ ಅಪಮಾನ ಪಡಿಸಿ, ತಮ್ಮನ್ನು ಗಣಪತಿಯ ಶಿಷ್ಯಮರಿಗಳ ಮುಂದೆ ಹೀನೈಸಿ ಕೊಂಡದ್ದು ಬಹು ದುಃಖದ ಸಂಗತಿಯಾಗಿದೆ. ಇಂಗ್ಲಿಷರಿಗೆ ತಮ್ಮ ರಾಯಭಾರಿಯನ್ನು ವಿಷದಿಂದ ಕೊಲೆ ಮಾಡಿಸಲಿಕ್ಕೆ ನೋಡಿದ ಬಡೋದೆಯ ಅರಮನೆಯವರ ಉಪಕಾರ ಸಾಕಾಗಲಿಲ್ಲಾ, ಇನ್ನು ಹೆಚ್ಚಿನ ಉಪಕಾರ ಆಗ ಬೇಕೆಂತಾ ಕಾಣುತ್ತದೆ.

ಪ್ರಿನ್ಸ್ ಒಫ್ ವೇಲ್ಸ್ ಯುವರಾಜನು ಹಿಂದುಸ್ಥಾನಕ್ಕೆ ಬರುವದರಿಂದ ಅವರನ್ನು ಬಹುಮಾನ ಪಡಿಸುವದಕ್ಕೆ ದೇಶೀಯ ರಾಜರು ಮುಂತಾದವರು ಹೇರಳ ರೂಪಾಯಿ ಕೊಟ್ಟಿದ್ಧಾರೆ. ಕಾಶಿಯ ಮಹಾರಾಜನು ೨೫,೦೦೦ ರೂಪಾಯಿ, ವಿಜಯನಗರದ ಮಹಾರಾಜನು ೧೫,೦೦೦ ರೂಪಾಯಿ, ತಿನ್ನೆವೆಲ್ಲಿ ಜಿಲ್ಲೆಯ ಎತ್ತರಪುರದ ಜಮೀನುದಾರನು ೩೦,೦೦೦ ರೂಪಾಯಿ ಕೊಟ್ಟರು. ಈ ಯುವರಾಜನು ಹಿಂದುಸ್ಥಾನದಲ್ಲಿ ಸಂಚರಿಸುವಾಗ ಅವರ ಸವಾರಿ ಬಗ್ಯೆ ೮ ರಥಗಳು ಮುಂಬಾಯಿಗೆ ಬಂದು ಮುಟ್ಟಿಯವೆ.

ಜಾಪಾನಿನಲ್ಲಿ ಕೆರೊಸಿನ್ ಎಣ್ಣೆಯ ಬುಗ್ಗೆಗಳು ಶಿಕ್ಕಿದವಂತೆ.

ಹೆರ್ಜೆಗೋವಿನಾ ಎಂಬ ಜಿಲ್ಲೆಯ ನಿವಾಸಿಗಳು ತಮ್ಮನ್ನು ಆಳುವ ತುರ್ಕಿಸರಕಾರಕ್ಕೆ ವಿರೋಧವಾಗಿ ಎದ್ದು ದಂಗೆ ತೆಗದರು. ಆ ಜಿಲ್ಲೆಗೆ ಹೊಂದಿರುವ ನೆರೆಹೊರೆಯ ಜಿಲ್ಲೆಯವರೂ ದಂಗೆ ತೆಗೆದವರನ್ನು ಶೇರಿ, ಬಲ ಪಡಿಸುತ್ತಿದ್ಧಾರಂತೆ.

ಔಸ್ಟ್ರಿಯ ದೇಶದಲ್ಲಿ ಒಟ್ಟಿಗೆ ೨,೦೦೦ ಬೇರೆ ಬೇರೆ ತರದ ಗುಲಾಬಿಹೂವುಗಳು ಇರುವಂಥಾ ಎರಡು ಪುಷ್ಪವನಗಳಿದ್ಧಾವೆ.

ಔಸ್ಟ್ರಿಯದ ಮಾಜಿ ಅರಸನಾದ ಫೆರ್ಡಿನಾಂದನು ೧೦,೦೦೦,೦೦೦ ರೂಪಾಯಿಗಳನ್ನೂ ಬೇರೆ ಬೇರೆ ಆಭರಣಗಳನ್ನೂ ಅಪೂರ್ವವೂ ಅಮೂಲ್ಯವೂ ಆದ ಸಾಮಾನನ್ನೂ ಮರಣಜಾತಕದಲ್ಲಿ ಪೋಪನಿಗೆ ಬರದು ಕೊಟ್ಟನಂತೆ. ನಗದಿ ಹಣ ಪೋಪನಿಗೆ ಸಲ್ಲಿಸಲಾಯಿತು. ಪೋಪನಿಗೆ ಇಷ್ಟು ಹಣ ಶಿಕ್ಕಿದ್ದಲ್ಲದೆ ಬೇರೆ ಬೇರೆ ಕಡೆಯಿಂದ ಗುರುಸಂಭಾವನೆ ಎಂತ ಅವನ ಭಂಡಾರಕ್ಕೆ ಹಣವು ರಾಶಿರಾಶಿಯಾಗಿ ಬಂದೊದಗಿ ಕೂಡುತ್ತಿರುತ್ತದೆ. ಫ್ರೆಂಚರನ್ನು ತನ್ನ ಮುದ್ದು ಮಕ್ಕಳೂ ತನ್ನ ಅತಿಪ್ರಿಯ ಮಂದೆಯೂ ಎಂತ ಕರೆಯುತ್ತಾನೆ. ಆದರೂ ದಕ್ಷಿಣ ಫ್ರೆಂಚರು ನೀರಿನ ಪ್ರವಾಹದಿಂದ ಅತ್ಯಂತ ನಷ್ಟಕ್ಕೂ ಕಷ್ಟಕ್ಕೂ ಗುರಿಯಾದಾಗ, ತಾನು ಬಡವನೇ, ಹೆಚ್ಚು ಕೊಡಲಿಕ್ಕೆ ಕೂಡದವನೇ ಎಂತ ೮,೦೦೦ ರೂಪಾಯಿ ಮಾತ್ರ ಸಹಾಯಾರ್ಥವಾಗಿ ಕಳುಹಿಸಿ ಕೊಟ್ಟನು. "ತಕ್ಕೊಳ್ಳುವದಕ್ಕಿಂತ ಕೊಡುವದೇ ಭಾಗ್ಯ" ಎಂಬುವ ವಾಕ್ಯವನ್ನು ಅವನು ತಿದ್ದಿ, "ಕೊಡುವದಕ್ಕಿಂತ ತಕ್ಕೊಳ್ಳುವದೇ ಭಾಗ್ಯ" ಎಂಬದಾಗಿ ಮಾಡಿ ಬಿಟ್ಟಿದ್ಧಾನೆಂದು ಕಾಣುತ್ತದೆ.

ನ್ಯೂಯೊರ್ಕೆಂಬ ಪಟ್ಣದಲ್ಲಿ ಬೋಧಕನಾಗಿರುವ ಹೆನ್ರಿ ಬೇಮ್ ಎಂಬವನಿಗೆ ಜೂನ್ ೮ರಲ್ಲಿ ೧೦೦ನೇ ಜನ್ಮೋತ್ಸವವಾಯಿತು. ಈ ಉತ್ಸವದ ಸಂತೋಷಕ್ಕೆ ಅವನ ಸಭೆಯವರು ಅವನಿಗೆ ಒಂದು ಲಕ್ಷ ರೂಪಾಯಿ ಬಹುಮಾನವಾಗಿ ಕೊಟ್ಟರು. ಆ ಲಕ್ಷ ರೂಪಾಯಿಗಳನ್ನು ಅವನು ಆ ಮೇಲೆ ಸಭೆಯ ಮೇಲ್ಮೆಗೆ ಇನಾಮಾಗಿ ಕೊಟ್ಟು ಬಿಟ್ಟನಂತೆ.

ಇಂಗ್ಲಾಂಡದ ಮಹಾರಾಣಿ ಸ್ವಲ್ಪ ಕಡಿಮೆ ತುರ್ಕ್ಯ ಸುಲ್ತಾನನ ಅಧಿಕಾರದ ಕೆಳಗಿರುವ ತುರ್ಕರ ಎರಡು ಪಾಲಷ್ಟು ತುರ್ಕರ ಮೇಲೆ ಆಳುತ್ತಾಳಂತೆ. ಇಷ್ಟು ತುರ್ಕರನ್ನೂ ಕ್ರೈಸ್ತರಲ್ಲದ ಬೇರೆ ಅನೇಕ ಪ್ರಜೆಗಳನ್ನೂ ಆಳುವ ಇಂಗ್ಲಿಷ ಸರಕಾರದವರಿಗೆ ಬಹುಶಾ "ಅರಳೀ ಮರಾ ನೋಡಲೋ, ಬ್ರಹ್ಮರಾಕ್ಷಸನನ್ನ ನೋಡಲೋ?" ಎಂಬಂತಾಗುವದು ಲೌಕಿಕ ವಿಚಾರಕ್ಕೆ ವಿಪರೀತವಾದ್ದಲ್ಲ.

ಒಂದು ಕರುವಿಗೆ ೨೧,೦೦೦ ರೂಪಾಯಿ ಕ್ರಯವೆಂತ ಕೇಳಿದರೆ, ನಮ್ಮ ದೇಶದವರು ಏನು ನೆನಸುತ್ತಾರೋ? ಸದ್ಯಕ್ಕೆ ಲಂಡನಿನಲ್ಲಿ ಒಬ್ಬ ಶ್ರೀಮಂತನು ಒಂದು ಕರುವನ್ನು ಮೇಲೆ ಹೇಳಿದ ಕ್ರಯಕ್ಕೆ ಮಾರಿದನು. ಮತ್ತೊಬ್ಬ ಕುಲೀನನ ೨ ದನಗಳನ್ನು ೫೮,೭೫೦ ರೂಪಾಯಿಗೆ ವಿಕ್ರಯಿಸಿದರಂತೆ.—ನಮ್ಮ ಕನ್ನಡ ಶೀಮೆಯ ದನಕರಗಳ ಬಾಳು ಸಹಾ ಹೆಚ್ಚಿ, ಅವುಗಳ ಸ್ಥಿತಿಗತಿ ಹೆಚ್ಚು ಶುಭವೂ ಮಂಗಳತರದ್ದೂ ಆದರೆ, ದನಕರಗಳಿಗೂ ಹಿರಿ ಕಿರಿಯರಿಗೂ ಉಪಕಾರವಾದೀತು. ಆದರೆ ಜನರ ನೀತಿ ಸ್ಥಿತಿಗತಿ ವೃದ್ಧಿಯಾಗಿ ಹೆಚ್ಚು ಶುಭವೂ ಒಳ್ಳೇದೂ ಆಗದಿದ್ದರೆ, ದನಕರಗಳ ಸ್ಥಿತಿಗತಿ ಸಹಾ ಹೆಚ್ಚು ಒಳ್ಳೇದಾಗದು.

ವಿಲಾಯತಿಯ ಕೆಲವು ದೇಶಗಳಲ್ಲಿಯ ಬೋಧಕರ ಸಂಖ್ಯೆ ಎಷ್ಟೆಂದರೆ—ಇಂಗ್ಲಾಂಡಿನಲ್ಲಿಯೂ ವೇಲ್ಸಿನಲ್ಲಿಯೂ ೭೧೮ ಮಂದಿಗೆ ಒಬ್ಬ ಪಾದರಿ; ಅಮೇರಿಕದ ಸಂಯುಕ್ತ ಸಂಸ್ಥಾನದ ೮೭೬ಮಂದಿಗೊಬ್ಬ; ರುಸ್ಸಿಯದಲ್ಲಿ ೩೨೩ ಮಂದಿಗೊಬ್ಬ; ಫ್ರಾನ್ಸಿನಲ್ಲಿ ೨೩೫ ಮಂದಿಗೊಬ್ಬ; ಇತಾಲ್ಯದಲ್ಲಿ ೧೪೩ ಮಂದಿಗೊಬ್ಬ; ಸ್ಪಾನ್ಯದಲ್ಲಿ ೫೪ ಮಂದಿಗೊಬ್ಬ.

ಭೂಲೋಕದಲ್ಲೆಲ್ಲಾ ಹೆಚ್ಚು ದೊಡ್ಡ ದೇವಾಲಯಗಳೆಲ್ಲವು ರೋಮನ್ ಕಥೋಲಿಕರ ವಶದಲ್ಲಿದ್ದಾವೆ. ರೋಮ ಪಟ್ಣದಲ್ಲಿ ೫೪,೦೦೦ ಜನ ಹಿಡಿಯುವ ಸಂತ್‌ಫೇತರ್ ದೇವಾಲಯವೂ, ೨೫,೦೦೦ ಜನ ಹಿಡಿಯುವ ಸಂತ್‌ಪೌಲನ ದೇವಾಲಯವೂ ಉಂಟು. ಮೈಲಾಂದ ಪಟ್ಣದಲ್ಲಿ ೩೭,೦೦೦, ಕೊನ್‌ಸ್ಟಾಂಟಿನೊಪಲ್ ಪಟ್ಣದಲ್ಲಿ ೨೩,೦೦೦, ಪರೀಸು ಪಟ್ಣದಲ್ಲಿ ೨೧,೦೦೦, ಪೀಸ ಪಟ್ಣದಲ್ಲಿ ೧೩,೦೦೦ ಜನರಿಗೆ ಆಸನ ದೊರಕುವಷ್ಟು ದೊಡ್ಡ ದೇವಾಲಯವದೆ. ಯೇಸುವಿನ ಅಪೊಸ್ತಲರ ಕಾಲದಲ್ಲಿ ಯೇಸುವಿನ ವೈರಿಗಳಾದ ಯೆಹೂದ್ಯರಿಗೆ ಹೆರೋದ ಅರಸು ೪೨ ವರುಷವೇ ಕಟ್ಟಿಸುತ್ತಾ ಬಂದು ತೀರಿಸಿದ್ದ ದೇವಾಲಯವಿತ್ತು; ಆದರೆ ಯೇಸುವಿನ ಸಭೆಯವರು ಇಲ್ಲ್ಯಲ್ಲಿ ಮನೆಗಳಲ್ಲಿಯೂ ಗುಡುಸಲುಗಳಲ್ಲಿಯೂ ಪ್ರಾರ್ಥನೆಗೆ ಕೂಡಿ ಬರ ಬೇಕಾಯಿತು.

ಜರ್ಮನ್ ದೇಶದ ಕೋಬ್ಲೆಂಸೆಂಬ ಪಟ್ಣದ ನೆರೆಹೊರೆಯಲ್ಲಿ ೧೫ ವರುಷದ ಹುಡುಗನೊಬ್ಬನು ಮಿಂಚನ್ನು ದೃಷ್ಟಿಸುವವನಾಗಿ, ಬಹು ತೀಕ್ಷ್ಣ ಒಂದು ಮಿಂಚು ಬಳ್ಳಿಯನ್ನು ನೋಡಲು, ಕಣ್ಣು ಕಾಣದವನಾಗಿ, ಮನೆಗೆ ದಾರಿ ತಡವ್ಯಾಡಿ ಹುಡುಕಿ ಬಂದು, ದೀಪ ಹಚ್ಚಿ ಇಡ ಬೇಕೆಂದು ಹೇಳಿ ಕೊಂಡಾಗ, ಅವನು ಮಿಂಚಿನ ತೀಕ್ಷ್ಣವಾದ ಪ್ರಕಾಶದಿಂದ ಕಂಗೆಟ್ಟು ಕುರುಡನಾದನೆಂತ ಮನೆಯವರು ತಿಳುಕೊಂಡು, ಬಹಳ ದುಃಖಿತರಾದರು.—ತೀಕ್ಷ್ಣ ಬೆಳಕು ಕಣ್ಣಿಗೆ, ವಿಶೇಷವಾಗಿ ಶಿಶುಗಳ ಕಣ್ಣಿಗೆ ಒಳ್ಳೇದಲ್ಲಾ; ಆದ್ದರಿಂದ ಕಣ್ಣಿಗೆ, ಮುಖ್ಯವಾಗಿ ಶಿಶುಗಳದಕ್ಕೆ ತೀಕ್ಷ್ಣ ಆಕಸ್ಮಿಕ ಕಿರಣಗಳು ಬೀಳದ ಹಾಗೆ ಜೋಕೆ ಮಾಡ ಬೇಕು.

ಸ್ಪಾನ್ಯ ದೇಶದಲ್ಲಿ ಕರ್ಲಿಸ್ತರು (೭ನೇ ಪುಸ್ತಕದ ೧೧ ಮತ್ತು ೬೨ನೇ ಪಾನು ಸರಿ ನೋಡತಕ್ಕದ್ದು.) ತಮ್ಮ ಲೂರಿ ಎಂಬ ವೀಣೆಯ ನಾಲ್ಕು ತಂತಿಗಳಲ್ಲಿ ಮೂರು ಹರಿದು ಹೋಗಿ ಇನ್ನುಳಿದ ಒಂದನ್ನೇ ಬಾರಿಸುತ್ತಾ ಗಾಯನ ಮಾಡುತ್ತಿದ್ಧಾರೆ. ಮೊನ್ನೆ ಅವರು ಒಂದು ಕೋಟೆಯನ್ನು ಇನ್ನು ಕಾಪಾಡಲಾರದೆ, ಸರಕಾರದ ಕಡೆಯ ದಂಡಿನವರಿಗೆ ಒಪ್ಪಿಸಿ ಕೊಡ ಬೇಕಾಯಿತು. ಅದರಲ್ಲಿ ಸರಕಾರದ ಕಡೆಯವರು ಶೆರೆ ಹಿಡಿದ ಕರ್ಲಿಸ್ತರಲ್ಲಿ ಒಬ್ಬ ಅಧ್ಯಕ್ಷನೂ ಶಿಕ್ಕಿದನು. ಇವನು ತನ್ನ ಮಠದಲ್ಲಿ ಯಾರೊಬ್ಬನನ್ನು ಕೊಲ್ಲಿಸಿ, ಸರಕಾರದವರ ನ್ಯಾಯವಿಚಾರಣಾಕರ್ತೃತ್ವಕ್ಕೂ ದಂಡಕ್ಕೂ ತಪ್ಪಿಸಿ ಕೊಳ್ಳ ಬೇಕೆಂತ ಆ ಲೂರಿಗಾರರನ್ನು ಶೇರಿಕೊಂಡಿದ್ದನಂತೆ.

ಯಾರಾದರೂ ಪೋಪನ ಭೇಟಿಗೆ ಬಂದಾಗ ಪೋಪನು ತನ್ನ ಬಲಕ್ಕೈಯನ್ನು ಮುದ್ದಿಡಿಸಿ ಕೊಳ್ಳಲಿಕ್ಕೆ ಚಾಚಿ ಕೊಟ್ಟರೆ, ಬಂದ ಭಕ್ತರು ಎಷ್ಟೋ ದೊಡ್ಡವರಾದರೂ (ಬಡವರಿಗೆ ಪೋಪನ ಭೇಟಿ ಎಂದೂ ಶಿಕ್ಕದು) ನಮಸ್ಕಾರ ಮಾಡಿ ಆ ಕೈಯನ್ನು ವಿನಯಭಕ್ತಿಪೂರ್ವಕವಾಗಿ ಮುದ್ದಿಡುವದು ಮರ್ಯಾದೆಯಾಗಿದೆ. ಇತ್ತಲಾಗೆ ಅಮೇರಿಕದವನಾದ ಕಥೋಲಿಕ ಗೃಹಸ್ಥನೊಬ್ಬನು ಪೋಪನ ಭೇಟಿಗೆ ಬಂದಾಗ, ಪೋಪನು ಕೈಯನ್ನು ಮುದ್ದಿಡಿಸಿ ಕೊಳ್ಳಲಿಕ್ಕಾಗಿ ನೀಡಲು, ಆ ಗೃಹಸ್ಥನು ಅವನ ಕೈಯನ್ನು ಮುದ್ದಿಡದೆ, ಬಿಮ್ಮಗೆ ಹಿಡುಕೊಂಡು, ಜೋರಿನಿಂದ ಅಲ್ಲಾಡಿಸಿ, ಪೋಪನನ್ನು "ಹ್ಯಾಗಿದ್ಧೀರ್ಯೈಯ್ಯಾ?" ಎಂತ ಬಹಳ ಸಲಿಗೇ ಭಾವದಿಂದ ಕೇಳಿದನು. ಈ ಮರ್ಯಾದೆ ಪೋಪನಿಗೆ ತಕ್ಕ ಮಾನ ಮರ್ಯಾದೆಯಾಗಿ ಕಾಣದೆ, ಅಗದಿ ಮೆಚ್ಚದೆ ಹೋಯಿತಂತೆ. ಅದಲ್ಲದೆ ಅಂದಿನಿಂದ ಅಮೇರಿಕದವರೆಲ್ಲರ ವಿಷಯದಲ್ಲಿ ಅವರು ದಾಸಾನುದಾಸ ಎಂಬುವ ಭಯ ಭಕ್ತಿಭಾವ ಕಡಿಮೆಯಾದವರು ಎಂತ ನೆನಸಿ, ವಿಕಲ್ಪ ಹಿಡಿದು, ಅಸಂತುಷ್ಟನಾಗಿರುತ್ತಾನಂತೆ.

Printed by Stolz & Hirner, Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೮. **DECEMBER 1875.** ಅಂಕೆ ೬.

ಅಡಕವು: ಕ್ರಿಸ್ತನ ಆಗಮ ಹಬ್ಬಕ್ಕೆ— ದೇವರ ದಯವಿದ್ದರೆ, ತಾಯಿಯಿಲ್ಲದವನಿಗೆ ಕರಡಿಯಾದರೂ ತಾಯಿಯ ಹಾಗಾಗ ಬೇಕು— ಒಂದು ಸಂಭಾಷಣೆ— ಅತ್ಯಾಶೆ ವಿನಾಶಕ್ಕೆ ಕಾರಣ— ಲೇಖನಗಳು— ವಿವಿಧ ವರ್ತಮಾನಗಳು.

ಕ್ರಿಸ್ತನ ಆಗಮ ಹಬ್ಬಕ್ಕೆ.

(Tochter Zion, freue dich!)

೧. ಕೇಳೋ, ಚಿಯೋನ್! ಮೋದಿಸು!
ಹರ್ಷಿಸು ಯೆರೂಸಲೇಮ್!
ನಿನ್ನ ರಾಜನಾಗಮಾ
ನೋಡಿ, ಶಾನೆ ಹರ್ಷಿಸೋ!

೨. ಹೊಸಿಯನ್ನಾ, ರಕ್ಷಕಾ!
ಶುಭಮಸ್ತು! ಒಡೆಯಾ!
ನಿನ್ನ ರಾಜ್ಯ ಸ್ಥಾಪಿಸು,
ಶ್ರೀಮತ್ ಅಧಿಪತಿಯೇ!

೩. ಹೊಸಿಯನ್ನಾ, ಕ್ರಿಸ್ತನೇ!
ವಂದನೀಯ ಪ್ರಭುವೇ!
ಆಳು, ಬಾಳು ಸರ್ವದಾ!
ಹೊಸಿಯನ್ನಾ, ದೇವಜಾ!

ಇಗೋ ನಿನ್ನ ಅರಸನು ನಿನ್ನ ಬಳಿಗೆ ಬರುತ್ತಾನೆ. ಮತ್ತಾ. ೨೧, ೫.

ಯೇಸುಸ್ವಾಮಿ ಪಸ್ಕಹಬ್ಬದಲ್ಲಿ ಮರಣ ತಾಳಲಿಕ್ಕಾಗಿ ಯೆರೂಸಲೇಮನ್ನು ಪ್ರವೇಶ ಮಾಡಲಿಕ್ಕಿದ್ದಾಗ, ಒಂದಿಷ್ಟು ಮಹತ್ತು ಪ್ರಭಾವ ಉತ್ಸವಗಳೊಂದಿಗೆ ಬಂದು ಶೇರಿದನು. ಯೇಸು ತನ್ನ ಅವಸಾನದಲ್ಲಿ, ಅಪಮಾನದ ಮರಣದ ಎದುರಿನಲ್ಲಿಯೇ, ತಾನು ರಾಜ, ಈಶ, ನ್ಯಾಯಾದೀಶ ಎಂಬದಾಗಿ ಹೆಚ್ಚು ಮಾತಾಡುತ್ತಾ ತೋರಿಸುತ್ತಾ ಇದ್ದದ್ದು ಆಶ್ಚರ್ಯದ ಸಂಗತಿಯೇ. ಪಿಲಾತನ ಮುಂದೆ ಅತ್ಯಲ್ಪತನದಲ್ಲಿ ನಿಂತಿದ್ದಾಗಲೂ ತಾನು ರಾಜಪದವಿಗೆ ಬಾಧ್ಯಸ್ಥನೂ ರಾಜ್ಯಾಧಿಕಾರಿಯೂ ಎಂಬ ವಾಜ್ಮೂಲ ಕೊಟ್ಟನು. ಹೀಗೆ ತೀರಾ ವಿಪರೀತವೆಂತ ತೋರುವ ಆತನ ಮರ್ಜಿ ನೋಡಿ, ಆತನಲ್ಲಿ ವಿಶ್ವಾಸವಿಟ್ಟಿರುವ ಸತ್‌ಕ್ರೈಸ್ತನು ಅಪಮಾನದಲ್ಲಿ ಅಭಿಮಾನಿ, ದರಿದ್ರತನದಲ್ಲಿ ಮಹಾ

ಧನಿಕ, ಸಾವಿನಲ್ಲಿ ಸಾಯದ ಚಿರಂಜೀವಿ ಆಗಿ, ಕಾಣುವಂಥಾದ್ದನ್ನು ವಿಸರ್ಜಿಸಿ, ಕಾಣದ ಮಹಿಮಾ ಕಾರ್ಯಗಳನ್ನು ನೋಡಿ, ಭಾಗ್ಯವಂತನಾಗಿ ಬಾಳ ಬಹುದು.

ಯೇಸುವಿನ ರಾಜ್ಯವು ಮಹಿಮೆಯದೂ, ಶಾಶ್ವತವಾದದೂ ಆಗಿದೆ. ಯೇಸು ರಾಜನೆಂತ ನಾನು ನಂಬುವವನಾಗಿದ್ದರೆ, ಆತನು ಸರ್ವವನ್ನಾಳಿ, ನನ್ನನ್ನೂ ಕಾಪಾಡಿ, ರಕ್ಷಿಸಿ, ಸಲಹಿ, ತನ್ನ ದಿವ್ಯ ಭಯಹಸ್ತದಿಂದಲೂ ವರಹಸ್ತದಿಂದಲೂ ಅತಿ ಮಹತ್ತಾದ್ದನ್ನು ನಡಿಸುವವನೆಂತಲೂ ನಂಬ ಬಹುದು. ಯೇಸು ಅರಸೆಂತ ನಾನು ನಂಬಿದರೆ, ನಾನು ಆತನ ಭಕ್ತನೂ ಶರಣಾಗತನೂ ದಾಸಾನುದಾಸನೂ ಆಗಿರ ಬೇಕು. ಸರ್ವವು ವಿಶ್ವರಾಜನಾದ ಆತನಿಗೆ ವಶವಾಗಿ ಅಧೀನವಾಗ ತಕ್ಕದ್ದು. ಆತನ ರಾಜಾಜ್ಞೆಯು ಇನ್ನು ನಡೆಯದ ಕಡೆಯಲ್ಲೆಲ್ಲವೂ ಆತನು ಬಂದು, ಅದನ್ನು ನಡೆಯ ಮಾಡುವನು. ಆದ್ದರಿಂದ ನನ್ನ ಹಾಗೂ ನನ್ನವರ ಬಳಿಗೂ ಆತನು ಬಂದು, ರಕ್ಷಿಸಿ, ದೇವತಾನೀತಿಯಾದ ತನ್ನ ರಾಜ್ಯನೀತಿಯನ್ನು ಸ್ಥಾಪಿಸಲಿ! ದಿಕ್ಕಿಲ್ಲದವರಿಗೆ ಆತನು ದಿಕ್ಕು, ಗತಿಯಿಲ್ಲದವರಿಗೆ ಆತನು ಗತಿ ಆಗಿ, ದೂಷಕರನ್ನೂ ವೈರಿಗಳನ್ನೂ ಸಂಹಾರ ಮಾಡಲಿ! ಸೂರ್ಯ ಚಂದ್ರ ತಾರಾಳಿಗಳು ಇರುವ ಪರಿಯಂತರಕ್ಕೂ ಆತನು ಪೂಜ್ಯನೂ ವಂದನೀಯನೂ! ಆತನ ಆಶೀರ್ವಾದ ಆತನ ಪ್ರಜೇ ಮೇಲೆ ಸುವೃಷ್ಟಿಯಂತೆ ಬರುತ್ತಿರಲಿ! ಆತನ ಮುದ್ರೆಕೋಲಿನ ನೆರಳಿನಲ್ಲಿಯೂ, ಆತನ ಮುಖಕಾಂತಿಯ ಪ್ರಸಾದದಲ್ಲಿಯೂ ನೀತಿವಂತನು ಸುಖಾಸೀನನಾಗಿ ಬಾಳಲಿ! ಸರ್ವರೂ, ಭೂರಾಜಾದಿ ನರಶಾರ್ದೂಲರೂ, ಆತನಿಗೆ ನಮಸ್ಕಾರ ಮಾಡಿ ಸೇವಿಸಲಿ! ಹೀಗಾಗಿ ನಡೆಯುವಂತೆ ಇಂದೂ ಕಾಣದು; ಆದರೂ ಇನ್ನು ಮುಂದೆ ಹಾಗಾಗುವದು. ಆತನು ತಾನೇ ಹಾಗಾಗುವಂತೆ ನಡಿಸುವನು. ನಮಗೆ ಅಸಾಧ್ಯವೆಂತ ಕಾಣುವಂಥಾದ್ದು ಆತನ ಚಿತ್ತ, ಶಕ್ತಿ, ಪ್ರಭಾವ, ಮಹಿಮೆಯನ್ನು ಮೀರದ್ದು. ಆತನು ದಿವಕ್ಕೇರಿ, ದ್ಯುಸಿಂಹಪೀಠಾರೂಢನಾದಂದಿನಿಂದ ತನ್ನ ರಾಯಭಾರಿಗಳೇ ಎಂಬಂತಾದ ತನ್ನ ಭಕ್ತರಿಂದ ತನ್ನ ರಾಜ್ಯವನ್ನು ವಿಸ್ತರಿಸಿ ಹೆಚ್ಚಿಸುತ್ತಾ ಬಂದಿದ್ದಾನೆ. ನಾವು ಪ್ರತಿಯೊಬ್ಬನು ಈ ಸ್ವಾಮಿ ಕಾರ್ಯಕ್ಕೆ ಸಿದ್ಧರೂ ಉದ್ಯುಕ್ತರೂ ಆಗಿರೋಣ! ಆತನ ಹಾಗೂ ಆತನವರ ಒಟ್ಟು ಸಾಧನೆಯಿಂದ ಭಾವಾತೀತವಾದಷ್ಟು ಮಹತ್ತಾದ್ದು ಸಾಧ್ಯವಾಗಿ ಪೂರೈಸೋಣವಾಗುವದು. ನಮ್ಮ ಅರಸನಿಗೆ ಹೊಸಿಯನ್ನಾ! ಶುಭಮಸ್ತು ನಮ್ಮೊಡೆಯಂಗೆ! ಶುಭಮಸ್ತು!

ದೇವರ ದಯವಿದ್ದರೆ ತಾಯಿಯಿಲ್ಲದವನಿಗೆ ಕರಡಿಯಾದರೂ ತಾಯಿಯ ಹಾಗಾಗ ಬೇಕು.

೧೭೦೯ನೇ ಇಸ್ವಿಯ ಜನವರಿ ತಿಂಗಳಲ್ಲಿ ವಿಲಾಯತಿಯಲ್ಲೆಲ್ಲಾ ಕೇವಲ ಅಪೂರ್ವ ಛಳಿಯಾಯಿತು. ಅಂದಿನ ಹಿಮಕಾಲದಲ್ಲಿ ಅನೇಕಾನೇಕರು ದಾರಿಯಲ್ಲಿ ಮಾತ್ರವಲ್ಲಾ, ಮನೆಯಲ್ಲಿಯೂ ಮಂಚದಲ್ಲಿಯೂ ಛಳಿಯನ್ನು ತಡೆಯಲಾರದೆ ಸತ್ತು ಹೋದರು. ಅಗಿಷ್ಟಿಕೆಯಲ್ಲಿ ಬೆಂಕಿ ಚನ್ನಾಗಿ ಉರಿದರೂ, ಕೋಣೆ ಬೆಚ್ಚಗಾಗವಲ್ಲದು. ಬೆಂಕಿಯ ಹತ್ತರದಲ್ಲಾದ್ಯರೂ ನೀರು ಛಳಿಯಿಂದ ಗಾಜಿನಷ್ಟು ಘಟ್ಟಿಯಾಗಿ ಹೋಗುವದು. ಗುಬ್ಬಿ, ಕಾಗೆ ಇತ್ಯಾದಿ ಪಕ್ಷಿಗಳೂ, ಮೀನುಗಳೂ, ಮೊಲ ಜಿಂಕೆ ಮೊದಲಾದ ಕಾಡು ಮೃಗಗಳೂ ರಾಶಿರಾಶಿಯಾಗಿ ಸತ್ತು ಹೋದವು. ಬಾನವೃಕ್ಷ, ದೇವದಾರು ಮುಂತಾದ ದೊಡ್ಡ ದೊಡ್ಡ ಮರಗಳು ಗರ್ಜನೆಯೊಂದಿಗೆ ಬಿರಿದು, ಶೀಳಿ ಹೋದವು. ಕರಿ ಕಲ್ಲು, ಬಂಡೆ ಇತ್ಯಾದಿ ಪಾಷಾಣಗಳಾದರೂ ಛಳಿಯಿಂದ ಒಡದು ಹೋದವು.

ಆ ಕಾಲದಲ್ಲಿ ಸವೊಯಿ ಶೀಮೆಯಲ್ಲಿ ಹುಟ್ಟಿದ ಅನಾಥ ಹುಡುಗರಿಬ್ಬರು ಫ್ರೆಂಚ ದೇಶದ ಒಂದು

ಪಟ್ಣದಲ್ಲಿ ಚಿಲ್ಲರೆ ಚಾಕ್ರಿಗಳನ್ನು ಮಾಡುವವರಾಗಿಯೂ ಭಿಕ್ಷೆ ಬೇಡುವವರಾಗಿಯೂ ಬಹಳ ಕಷ್ಟದ ಕಾಲಕ್ಷೇಪ ಮಾಡುತ್ತಿದ್ದರು. ಆದರೆ ಒಂದಾನೊಂದು ದಿನ ಹಿರಿಯನು ಯಾರದೊಂದು ಕಾಗದವನ್ನು ಬೇರೊಂದೂರಿಗೆ ತಕ್ಕೊಂಡು ಹೋಗಿ ಮುಟ್ಟಿಸ ಬೇಕೆಂತ ಹೊರಟು, ದಾರಿಯಲ್ಲಿ ಛಳಿಯಿಂದಲೂ ಹಶಿವೆಯಿಂದಲೂ ದಣಿದು, ಸೋತು ಹೋಗಿ, ಪ್ರಾಣ ಕಳದನು. ಅಣ್ಣ ತಿರಿಗಿ ಬಾರದೆ ಹೋದ್ದರಿಂದ, ಕಿರಿಯನು ಒಂಟಿಗನಾಗಿ ಪರದೇಶದಲ್ಲಿ ಉಳಿದು ಮತ್ತಷ್ಟು ಕಷ್ಟಕ್ಕೆ ಗುರಿಯಾಗಿ ಹೋಗುವ ಹಾಗಾದನು. ರಾತ್ರೀ ವೇಳೆಯಲ್ಲಿ ವಿಶೇಷವಾಗಿ ಆ ಹುಡುಗನಿಗೆ ಛಳಿಯಿಂದ ತಡೆಯಲಾರದ ಬಾಧೆಯಾಯಿತು. ಮೊದಲು ಇಬ್ಬರು ಒಟ್ಟು ಕೂಡಿಕೊಂಡು ಮಲಗಿ ಕೊಳ್ಳುತ್ತಿದ್ದದರಿಂದ ಒಬ್ಬನಿಗೊಬ್ಬನು ಛಳಿಗೆ ಒಂದಿಷ್ಟು ಆಸರ ಕೊಟ್ಟಂತಾಯಿತು. ಇಬ್ಬರು ಒಬ್ಬ ಬಡಿಗೆಯವನ ಕಟ್ಟಿಗೇಗಡಂಗಿನಲ್ಲಿ ಮಲಗಿ ಕೊಂಡು ರಾತ್ರಿ ಕಳೆಯುತ್ತಿದ್ದರು. ಆದರೆ ಅಣ್ಣ ತೀರಿ ಹೋದ ಮೇಲೆ ಚಿಕ್ಕ ತಮ್ಮನೊಬ್ಬನಿಗೆ ಅಲ್ಲಿ ಛಳಿಯ ನಿಮಿತ್ತ ಇನ್ನು ಆಗದ್ದರಿಂದ, ಬೇರೊಂದು ಕಡೆಯಲ್ಲಿ ರಾತ್ರಿ ಕಳೆಯಲಿಕ್ಕೆ ಠಿಕಾಣಿ ಹುಡುಕುವದು ಅವಸರ ಬಿತ್ತು. ಹುಡುಕಿ, ಹುಡುಕಿ, ಕಡೆಗೆ ದೊಡ್ಡ ಪ್ರಭುಧೊರೆಯ ಕುದುರೇ ಚಾಕ್ರಿಯವರಲ್ಲೊಬ್ಬನ ಹೆಂಡತಿಯಲ್ಲಿ ತನ್ನ ಮೇಲೆ ಕರುಣೆ ಹುಟ್ಟಿಸಿ, ಕುದುರೆ ಲಾಯದಲ್ಲಿ ಜಾಗ ದೊರಕಿಸಿ ಕೊಂಡನು. ಮೊಬ್ಬಾಗಿ ಅಲ್ಲಿ ಶೇರಿ, ಹುಲ್ಲಿನಲ್ಲಿ ಬಿದ್ದುಕೊಂಡು ಮುದುರಿ ಕೊಂಡನು. ಆದರೆ ಛಳಿಯ ದೆಶೆಯಿಂದ ನಿದ್ರೆ ಬಾರದೆ, ಬಹಳ ಕಷ್ಟ ತಾಳಿ, ತಿರಿಗಿ ಎದ್ದು, ಕತ್ತಲೆಯಲ್ಲಿ ಲಾಯದಲ್ಲೆಲ್ಲಾ ತಡವ್ಯಾಡಿ, ಹೆಚ್ಚು ಬೆಚ್ಚಗಾದ ಸ್ಥಳವನ್ನು ಹುಡುಕಿದ ಕಡೆಗೆ ಒಂದು ಪಂಜರಕ್ಕೆ ತಡವಿ, ಅದರಲ್ಲಿ ಸ್ವಲ್ಪ ಬೆಚ್ಚಗೆಂತ ತಿಳಿದು, ಅದರಲ್ಲಿ ನುಸುಳಿ ಹೊಕ್ಕನು. ಹೊಕ್ಕ ಕೂಡಲೇ ಭಯಂಕರ ಗುರುಗುರುಕಾಯಿಸುವ ಶಬ್ದವಾಯಿತು. ಆ ಶಬ್ದವು ನಾಯಿಯದೋ? ಎಂಥಾದ್ದೋ? ಎಂದು ತಿಳಿಯದೆ ಬಹಳ ಅಂಜಿ ಕೊಂಡು, ಮುದರಿ ಕೊಂಡು, ನಡುಗಿ, ಮನಸ್ಸಿನಲ್ಲಿ ಯೇಸುವನ್ನು ಸ್ಮರಿಸಿ ಪ್ರಾರ್ಥಿಸಿದನು. ನಾಯಿಯಲ್ಲಾ, ಒಂದು ದೊಡ್ಡ ಹೆಣ್ಣು ಕರಡಿ ಆ ಪಂಜರದಲ್ಲಿ ಶೆರೆಯಾಗಿತ್ತು. ಆ ಕರಡಿ ಬಂದು, ಹುಡುಗನನ್ನು ಕಚ್ಚದೆ, ತಬ್ಬಿ ಕೊಂಡು, ಅವನ ಸಂಗಡ ಮಲಗಿ ಕೊಂಡಿತು. ಹುಡುಗನಿಗೆ ಕರಡಿಯ ಎದೆಯಲ್ಲಿ ಬೇಗನೇ ಬೆಚ್ಚಗಾಗಿ, ಅಂಜಿಕೆ ಹೋಗಿ, ನಿದ್ರೆ ಬರುವದಾಯಿತು. ಆ ರಾತ್ರಿ ಅವನಿಗೆ ಛಳಿ ಏನೂ ಆಗದೆ, ಬೆಳಿಗ್ಯೇ ವರೆಗೂ ಬಹಳ ಸೌಖ್ಯದ ನಿದ್ರೆಯಿತ್ತು. ಬೆಳಿಗ್ಯೆ ನಿದ್ರೆ ತಿಳಿದು, ಎದ್ದು, ತಾನು ಯಾರ ಸಂಗಡ ಮಲಗಿ ಕೊಂಡಿದ್ದದನ್ನು ನೋಡಿ, ಪಂಜರದಿಂದ ಜರಿದು ಹೊರಟನು. ಆದರೆ ಎದ್ದು ಹೊರಡುವಾಗ, ಕರಡಿ ಏನೂ ಹೆದರಿಸದೆ, ಗುರುಗುರುಕಾಯಿಸದೆ ಇದ್ದದರಿಂದಲೂ ಆ ರಾತ್ರಿ ಅವನಿಗೆ ಅಲ್ಲಿ ಒಳ್ಳೇ ಸೌಖ್ಯದ ನಿದ್ರೆ ಬಿದ್ದಿದದರಿಂದಲೂ, ಅವನು ಬರುವ ರಾತ್ರಿಗೆ ತಿರಿಗಿ ಬಂದು, ಪಂಜರದಲ್ಲಿ ನುಸುಳಿ, ಕರಡಿಯ ಹತ್ತರ ಮಲಗಿ ಕೊಳ್ಳಲಿಕ್ಕೆ ಧೈರ್ಯಗೊಂಡನು. ಈ ಪ್ರಕಾರವಾಗಿ ಅವನು ಯಾರಿಗೂ ತಿಳಿಯದೆ ನಾಲ್ಕೈದು ರಾತ್ರಿಗಳನ್ನು ಕರಡಿಯ ಎದೇ ಹತ್ತರ ಸೌಖ್ಯವಾಗಿ ಮಲಗಿ ಕೊಂಡು ಕಳದನು. ಆರನೇ ದಿನದ ಬೆಳಿಗ್ಯೆ ನಿದ್ರೆ ಬೇಗ ತಿಳಿದೇಳದೆ ಹೋದದರಿಂದ, ಅವನು ಇನ್ನು ಅಲ್ಲಿಯೇ ಮಲಗಿ ಕೊಂಡು ನಿದ್ರೆ ಗೈಯುವ ಹೊತ್ತಿನಲ್ಲಿ ಧೊರೆಯ ಚಾಕ್ರಿಯವರು ಕುದುರೇ ಲಾಯಕ್ಕೆ ಬಂದು, ಅವನನ್ನು ಕರಡಿಯ ಕೈಯಲ್ಲಿ, ತಾಯಿಯ ಕೈಯಲ್ಲಿ ಎಂಬ ಹಾಗೆ, ಮಲಗಿ ಕೊಂಡು ಬಹು ಸೌಖ್ಯವಾಗಿ ನಿದ್ರೆ ಗೈಯುವದನ್ನು ಕಂಡು, ವಿಸ್ಮಿತರಾಗಿ ಪಂಜರದ ಬದಿಗೆ ಬರಲು, ಕರಡಿ ಹುಡುಗನನ್ನು ಕಾಪಾಡ ಬೇಕೆಂತ ಗುರುಗುರುಕಾಯಿಸುವಂಥಾದ್ದಾಯಿತು. ಆದ್ದರಿಂದವನು ನಿದ್ರೆ ತಿಳಿದೆದ್ದು, ಹೊರಗೆ ಜರಿದು ಬಂದನು. ಈ ಅತ್ಯಂತ ಆಶ್ಚರ್ಯದ ಸಂಗತಿ ಆ ಪ್ರಭು ಧೊರೆಗೂ ಪಟ್ಣವೆಲ್ಲಕ್ಕೂ ಸುದ್ದಿಯಾಗಿ ಗೊತ್ತಾಯಿತು. ಆ ದಿನದ ಸಾಯಂಕಾಲ ಹುಡುಗನು ತಿರಿಗಿ ಬಂದು, ಪಂಜರದಲ್ಲಿ ನುಸುಳಿ, ಕರಡಿಯ ಎದೇ ಬದೀಲಿ

ಮಲಗಿ ಕೊಂಡಾಗ, ಆ ಪ್ರಭು ಧೊರೆಯೂ ಅವನ ಕುಮಾರ ಕುಮಾರ್ತೆಯರೂ, ಬೇರೆ ಅನೇಕ ಗೃಹಸ್ಥರೂ ಆ ಅಪೂರ್ವ ಸಂಗತಿಯನ್ನು ಕಣ್ಣಾರೆ ನೋಡ ಬೇಕೆಂತ ಬಂದು ನೋಡಿದರು. ಎಲ್ಲವರಿಗೆ ಮಹದಾಶ್ಚರ್ಯ ಹಿಡಿದು ಹೋಯಿತು. ಮಾರಣೆ ದಿನದ ಬೆಳಿಗ್ಯೆ ಆ ಧೊರೆ ಹುಡುಗನನ್ನು ಕರಿಸಿ, ಅವನ ಪೂರ್ವೋತ್ತರಗಳೆಲ್ಲವನ್ನು ವಿಚಾರಿಸಿ ಕೇಳಿ ಕೊಂಡನು. ಆಗ ಹುಡುಗನ ಮೇಲೆ ಕರುಣೆ ಹುಟ್ಟಿ, ಅವನನ್ನು ಶೇರಿಸಿ ಕೊಂಡು, ಸಂರಕ್ಷಿಸಿ, ವಿದ್ಯಾಭ್ಯಾಸ ಮಾಡಿಸಿ, ಬೆಳಿಸಿದನು. ಹುಡುಗನು ಚನ್ನಾಗಿ ಕಲಿತು, ಸುಶೀಲನಾಗಿ ನಡದು ಕೊಂಡು, ತನ್ನುಪಕಾರಿಗೆ ಮೆಚ್ಚಿ, ಸಂತೋಷ ಕೊಡುವವನಾದನು.—ದೇವರು ಒಲಿದರೆ, ತಾಯಿಯಿಲ್ಲದವನಿಗೆ ಕರಡಿಯನ್ನಾದರೂ ತಾಯಿ ಎಂಬ ಹಾಗಾಗಲೂ, ಸಿಂಹಗಳ ಗವಿಯಲ್ಲಿ ಬಿದ್ದವನಿಗೆ ಹಶಿದ ಸಿಂಹಗಳು ಆಟಗಾರರೂ ಗೆಳೆಯರೂ ಎಂಬ ಹಾಗಾಗಲೂ ಮಾಡ ಬಹುದು. ಆದ್ದರಿಂದ ದೇವರು ಸರ್ವದಾ ಭಯಕ್ಕೂ ಭರವಸಕ್ಕೂ ಪ್ರೀತಿಗೂ ಸ್ತೋತ್ರಕ್ಕೂ ಅತಿ ಯೋಗ್ಯನೇ.

ಒಂದು ಸಂಭಾಷಣೆ.

ಸತ್ಯಮಿತ್ರನೆಂಬವನು ತನ್ನ ನೆರೆಹೊರೆಯವನಾದ ಜುವಾನ್ ಎಂಬವನ ಹತ್ತರ ಪ್ರಶ್ನೆ ಹಾಕಿ ಕೇಳಿದ್ದು, ಏನಂದರೆ: "ಈ ಹೊತ್ತು ನಿಮ್ಮ ಇಗರ್ಜಿಗಳಲ್ಲಿ (ಗುಡಿಗಳಲ್ಲಿ) ಬಹಳವಾಗಿ ಘಂಟೆ ಬಾರಿಸುತ್ತಿದ್ದಾರೆ. ಇದಕ್ಕೆ ಕಾರಣವೇನು?"

ಜುವಾನ್: "ನಮ್ಮಲ್ಲಿ ಬಹಳ ದೊಡ್ಡವರಾಗಿದ್ದವರೊಬ್ಬರು ಈ ಹೊತ್ತು ತೀರಿ ಹೋದರು; ಅದಕ್ಕೆ."

ಸತ್ಯಮಿ: "ಇಷ್ಟು ಬಹಳ ಘಂಟೆ ಹೊಡೆಯುವದು ಅವರು ತೀರಿ ಹೋದ ಸಂತೋಷಕ್ಕೋ? ದುಃಖಕ್ಕೋ?"

ಜು: "ದುಃಖಕ್ಕೂ ಅಲ್ಲಾ, ಸಂತೋಷಕ್ಕೂ ಅಲ್ಲಾ: ಹೀಗೆ ಘಂಟೆ ಹೊಡೆಯುವದು ನಮ್ಮಲ್ಲಿ ಪದ್ಧತಿ."

ಸತ್ಯಮಿ: "ಯಾರಾದರೂ ಬಡವರು ತೀರಿ ಕೊಂಡಾಗಲೂ ಇಷ್ಟು ಘಂಟೆ ಹೊಡಿಯುವದುಂಟೋ?"

ಜು: "ಇಲ್ಲಾ; ಹ್ಯಾಗಾದೀತು? ಪೆಟ್ಟಿಗೆ ಮಾಡಿಸಲಿಕ್ಕೂ ಇತ್ಯಾದಿ ಖರ್ಚಿಗೂ ನಿರ್ವಾಹವಿಲ್ಲದ ಬಡವರು ಹ್ಯಾಗೆ ಮಾಡಿ ಇಷ್ಟು ಹಣ ಕೊಟ್ಟು, ಘಂಟೆ ಹೊಡಿಸ ಬಹುದು?"

ಸತ್ಯಮಿ: "ಏನು ಹೇಳುತ್ತೀ: ಘಂಟೆ ಹಣ ಕೊಟ್ಟು ಹೊಡಿಸ ಬೇಕೋ?"

ಜು: "ಹೊಡೆಯದೆ ಘಂಟೆ ಬಾರಿಸಿ ಆಡುವದುಂಟೋ? ಘಂಟೆ ಹೊಡಿಸ ಬೇಕಾದರೆ, ಹಣ ಕೊಡ ಬೇಕು. ದೊಡ್ಡವರು ಬಹಳ ಹಣ ಕೊಟ್ಟು, ಘಂಟೆ ಶಾನೆ ಹೊಡಿಸ ಬಹುದು. ಇದಕ್ಕೆ ಮಾತ್ರವಲ್ಲಾ, ಬತ್ತಿ, ಮಿಸಯಾಗ ಮುಂತಾದ್ದಕ್ಕೂ ದೊಡ್ಡವರು ಬಹಳ ಹಣ ಕೊಟ್ಟು, ತಮಗೆ ಬೇಗ ಒಳ್ಳೇ ಪುಣ್ಯೋದಯವಾಗುವಂತೆ ಮಾಡಿಸಿ ಕೊಳ್ಳ ಬಹುದು. ಬಡವರಿಗೆ ಈ ಲೋಕದಲ್ಲಿ ಹೆಚ್ಚಿನ ಕಷ್ಟ, ಮರಣಾಂತರದಲ್ಲೂ ಹೆಚ್ಚಿನ ಕಷ್ಟ."

ಅವರಿಬ್ಬರೊಳಗೆ ನಡೆದ ಇಷ್ಟು ಸಂಭಾಷಣೆ ಕ್ರಿಸ್ತದಾಸ ಎಂಬವನು ಕೇಳಿ, ಸತ್ಯಮಿತ್ರನಿಗೆ ಹೇಳುತ್ತಾನೆ, ಏನಂದರೆ: "ನಮ್ಮ ಸಭೆಯಲ್ಲಿ ಉತ್ತರಕ್ರಿಯೆಗಳಲ್ಲಿ ಆಗಲಿ, ಸ್ನಾನ, ರಾತ್ರಿಭೋಜನ ಮೊದಲಾದ್ದರಲ್ಲ್ಯಾಗಲಿ, ಬೇರೆ ಯಾವ ಆತ್ಮಿಕ ಕಾರ್ಯಗಳಲ್ಲ್ಯಾಗಲಿ ದೊಡ್ಡವರಿಗೂ ಬಡವರಿಗೂ

ತಾರತಮ್ಯವೇನೂ ಇಲ್ಲಾ. ದೇವರು ಇವನು ದೊಡ್ಡವನೋ ಬಡವನೋ? ಎಂತ ತಾರತಮ್ಯ ನೋಡುವವನಾದರೆ, ನಮ್ಮ ಸಭೆಯಲ್ಲಿ ದೊಡ್ಡವರಿಗೆ ತಕ್ಕ ಮಾನ ಮರ್ಯಾದೆ ಶಿಕ್ಕದು ಎಂತ ದೂರಲಿಕ್ಕೆ ನ್ಯಾಯವಿರುತ್ತಿತ್ತು; ಆದರೆ ದೇವರು ಯಾರ ಮುಖದಾಕ್ಷಿಣ್ಯಾ ನೋಡದೆ ನ್ಯಾಯತೀರಿಸುವವನೂ ನಡಿಸುವವನೂ ಆಗಿರಲಾಗಿ, ನಮ್ಮ ಸಭೆಯಲ್ಲಿ ಸಹಾ ಮುಖದಾಕ್ಷಿಣ್ಯಾವೂ ತಾರತಮ್ಯವೂ ಇಲ್ಲದಿರುವದು ನ್ಯಾಯವೂ ದೊಡ್ಡವರಿಗೂ ಬಡವರಿಗೂ ಹಿತವೂ ಆಗಿದೆ."

ಸತ್ಯವಿ: "ಹೌದು, ಕ್ರಿಸ್ತದಾಸಪ್ಪಾ! ನನಗೂ ಇದೇ ಸಂಗತಿ ಬಹುಶಾ ಸಂತೋಷವಾಯಿತು. ನಮ್ಮ ಪ್ರೊಟೆಸ್ಟಾಂಟ ಮತವು ಸತ್ಯವೇ ಎಂಬದಕ್ಕೆ ನನಗೆ ಇದರಲ್ಲಿ ವಿಶೇಷ ಆಧಾರ ಕಾಣುತ್ತದೆ. ಇವರ ಸಭೆಯಲ್ಲಿ ಬಡವರಿಗೂ ದೊಡ್ಡವರಿಗೂ ಎಲ್ಲಾದರಲ್ಲಿ ಇಷ್ಟು ಹೆಚ್ಚು ಕಡಿಮೆ ಇರುವದರಿಂದ, ಅದು ಸತ್ಯವಾದ್ದಾಗಿರದು ಎಂದು ನನಗೆ ತೋರುತ್ತದೆ. ದೇವರು ಎಲ್ಲವರಿಗೂ ಸಮ; ಎಲ್ಲವರು ದೇವರಿಗೆ ಸಮ. ಹಾಗು ದೇವರು ಕ್ರಿಸ್ತನಲ್ಲಿ ಮಾಡಿ ಕೊಟ್ಟ ರಕ್ಷಣೆಯ ಮಾರ್ಗವೂ ಎಲ್ಲವರಿಗೆ ತಯಾರಾಗಿದೆ. ಅದು ದೊಡ್ಡವರಿಗೆ ಮಾತ್ರ ತಯಾರಾಗಿದ್ದರೆ, ಬಡವರ ಗತಿ ಏನಾಗುತ್ತಿತ್ತು! ಹೆಚ್ಚಾದವರು ಬಡವರೇ. ಬಡವರಿಗೆ ದೇವರ ದಯವು ದೊರಕದೆ ಕ್ರಿಸ್ತನಲ್ಲಿರುವ ರಕ್ಷಣೆಗೆ ಮಾರ್ಗವಿಲ್ಲದಿದ್ದರೆ, ಹೆಚ್ಚಾದವರಿಗೆ ಸದ್ಗತಿಗೆ ಪರಿಹರಿಸಲಾರದ ವಿಘ್ನಗಳು ಇರುತ್ತಿದ್ದವು. ನಮ್ಮ ಸಭೆಯಲ್ಲಿ ಎಲ್ಲರು, ಆದರೆ ಬಡವರು ವಿಶೇಷವಾಗಿ, ದೇವರ ಕರುಣಾತಿಶಯವನ್ನು ನೆನಸಿ, ಆತನು ಮಾಡಿ ಕೊಟ್ಟ ರಕ್ಷಣ್ಯಾದ ಮಾರ್ಗ ಶೇರಿ, ಸಂತೋಷ ಪಟ್ಟು ಇರಲಿಕ್ಕೆ ಎಷ್ಟೋ ಕಾರಣವದೆ!"

ಕ್ರಿಸ್ತದಾ: "ನಿಮ್ಮ ಮಾತು ನನಗೆ ಬಹಳ ಒಪ್ಪಾಗಿ ತೋಚುತ್ತದೆ. ನಮ್ಮ ಸಭೆಯಲ್ಲಿ ರೋಮನ್ ಸಭೆಯಲ್ಲಿಯೂ ಬ್ರಾಹ್ಮಣರಲ್ಲಿಯೂ ತೋರುವ ಆಟ್ಟಹಾಸ, ಡಂಭ ಮುಂತಾದ ಸತ್ಯವಿಚಾರವಿಲ್ಲದವರ ಕಣ್ಣಿಗೆ ದೊಡ್ಡದಾಗಿ ಕಾಣುವ ಆಚಾರಗಳು ಇಲ್ಲದಿದ್ದರೂ, ಸತ್ಯವೂ ದೇವರ ವ್ಯಾಪ್ತಿಯೂ ಅದರಲ್ಲಿ ಕಾಣುವಂಥಾದ್ದಾದ್ದರಿಂದ ಅದು ನನಗೆ ಬಹಳ ಪ್ರಿಯವಾಗಿದೆ. ಆದರೆ ಕೆಲವರಲ್ಲಿ ತಮ್ಮನ್ನು ಹೆಚ್ಚಿಸಿ ಕೊಳ್ಳುವ ಭಾವವು ಹ್ಯಾಗೋ, ಹಾಗೆ ಮತ್ತೊಬ್ಬರಲ್ಲಿ ದಾಕ್ಷಿಣ್ಯಾವೂ ಮರ್ಯಾದೆಯೂ ಇಲ್ಲದ ಕಾಡು ಭಾವವೂ ಉಪಕಾರಗಳನ್ನು ನೆನಸದ ಕೃತಘ್ನತಾಭಾವವೂ ತೋರುತ್ತದೆ. ಇದು ದೃಷ್ಟಿಗಾಗಲಿ ಅನುಭವಕ್ಕಾಗಲಿ ಬಿದ್ದಷ್ಟು ಸರ್ತಿ ನನಗೆ ಬಹಳ ದುಃಖ ಹಿಡಿದು ಹೋಗುವಂಥಾದ್ದಾಯಿತು."

ಅತ್ಯಾಶೆ ವಿನಾಶಕ್ಕೆ ಕಾರಣ.

ಪೋಲಂದ ದೇಶವನ್ನಾಳಿದ ಎರಡನೇ ಬೊಲೆಸ್ಲಾವೆಂಬ ಅರಸು ಒಂದಾನೊಂದು ದಿವಸ ಕ್ರಕೊವಾ (ಕ್ರಕೌ) ಎಂಬ ಪಟ್ಟದಲ್ಲಿದ್ದ ತನ್ನ ಅರಮನೆಯ ಒಡ್ಡೋಲಗದಲ್ಲಿ ಸಿಂಹಾಸನಾರೂಢನಾಗಿ, ಅವನು ಜಯಿಸಿ ಅಧೀನ ಮಾಡಿ ಕೊಂಡಿದ್ದ ಬೇರೆ ಬೇರೆ ಶೀಮೆಗಳವರ ಕೈಯಿಂದ ಕಪ್ಪದ ಹಣಗಳನ್ನು ಈಸಿ ಕೊಳ್ಳುವಾಗ, ಅವನ ಪ್ರಧಾನರೂ ಶ್ರೀಮಂತರೂ ಅವನ ಇತರ ಪರಿಚರದವರೂ ಸುತ್ತಮುತ್ತಲು ನಿಂತು ಕೊಂಡು, ಹಾಸಿದ್ದ ರತ್ನಕಂಬಳಿಗಳ ಮೇಲೆ ಹಾಕಿಸೋಣಾದ ಕಪ್ಪದ ಹಣಗಳ ರಾಶಿಯನ್ನು ಆಶ್ಚರ್ಯಪೂರ್ವಕವಾಗಿ ದೃಷ್ಟಿಸಿ, ಬಹಳ ಬಹಳ ಅಟ್ಟಹಾಸದಿಂದ ದರಬಾರು ನಡೆಯುವ ಹೊತ್ತಿನಲ್ಲಿ ಸನ್ಯಾಸವ್ರತಾ ಮಾಡಿ ಕೊಂಡಿದ್ದ ಒಬ್ಬ (ರೋಮನ್) ಪಾದ್ರಿ ಸಹಾ ಹೋಗುತ್ತಾ ಬರುತ್ತಾ ಇದ್ದ ಜನರ ಗುಂಪನ್ನು ಶೇರಿ, ಒಡ್ಡೋಲಗಕ್ಕೆ ಬಂದು, ಅಲ್ಲಿ ಬಿದ್ದಿದ್ದ ದ್ರವ್ಯಗಳನ್ನು ಕಂಡು, ನಿಟ್ಟುಸುರು ಬಿಟ್ಟನು. ಆ ನಿಟ್ಟುಸುರನ್ನು ಕೇಳಿ, ಅರಸು ನನ್ನ ಪರಿವಾರದವರು ಯಾರಿಗಾದರೂ ದುಃಖ ಕೊಟ್ಟರೇನೋ? ಎಂದು ನೆನಸಿ, ಕೋಪ ತಾಳಿ, ನನ್ನ ಸನ್ನಿಧಿಯಲ್ಲಿ ನಿಟ್ಟುಸುರು ಬಿಡಲಿಕ್ಕೆ

ಧೈರ್ಯಗೊಂಡವನ್ಯಾರು? ಅಥವಾ ನನ್ನ ಸನ್ನಿಧಿಯಲ್ಲಿ ನನ್ನ ಪ್ರಜೆಗಳಲ್ಲೊಬ್ಬನಿಗೆ ದುಃಖ ಕೊಟ್ಟು, ನಿಟ್ಟುಸುರು ಬಿಡಿಸಲಿಕ್ಕೆ ಎದೆಗೊಂಡವನ್ಯಾರು? ಎಂತ ಕೇಳಿದನು. ಎಲ್ಲರು ಬೆರಗಾಗಿ ಸುಮ್ಮನೆ ಇದ್ದರು. ನಿಟ್ಟುಸುರು ಬಿಟ್ಟ ಸನ್ಯಾಸಿ ಮುಂದೆ ಬಂದು, ಅರಿಕೆ ಮಾಡಲಿಕ್ಕೆ ಧೈರ್ಯ ಸಾಲದೆ, ಕಂಗೆಟ್ಟು ಭಯಭ್ರಾಂತನಾಗಿ, ಜನರ ಮಧ್ಯದಲ್ಲಿ ಅಣಗಿ ಕೊಂಡು ನಡುಗುತ್ತಿದ್ದದರಿಂದ, ಅರಸನ ಜವಾನರು ನಿಟ್ಟುಸುರು, ಬಿಟ್ಟವನ್ಯಾರು? ಯಾರು? ಎಂತ ಕೇಳಿ, ಗುಂಪಿನಲ್ಲಿ ತಲಾಷಿ ಮಾಡುವಾಗ, ಈ ಸನ್ಯಾಸಿ ಸೈ ಎಂದು ತಿಳಿದು, ಅವನನ್ನು ಹಿಡಿದು, ಅರಸನ ಮುಂದೆ ತಂದು ನಿಂತ್ರಿಸಿದರು.

ಆ ಸನ್ಯಾಸಿಯನ್ನು ನೋಡಿ ಅರಸು—ನೀನು ನಿಟ್ಟುಸುರು ಬಿಟ್ಟ ಕಾರಣವೇನು? ಎಂತ ಕೇಳಿದ್ದಕ್ಕೆ, ಆ ಸನ್ಯಾಸಿ ಗಡಗಡನೆ ನಡುಗಿ, ನಾನು ಮಹಾರಾಜರ ಐಶ್ವರ್ಯವನ್ನೂ ಮಹತ್ತನ್ನೂ ನೋಡಿ, ನನ್ನ ಬಡತನವನ್ನು ನೆನಸಿ, ಎದೆಗೆ ಬಾಣದಂತೆ ತಾಗಿ, ಮನೋವ್ಯಥೆಯಿಂದ ನಿಟ್ಟುಸುರನ್ನು ಬಿಟ್ಟದನ್ನು ಮಹಾರಾಜಶ್ರೀರಾಜರು ಕ್ಷಮಿಸ ಬೇಕೆಂದು ವಿನಯಪೂರ್ವಕವಾಗಿ ಬೇಡಿ ಕೊಂಡನು. ಅದಕ್ಕೆ ಅರಸು—ಬಡತನವನ್ನು ನೆನಸಿ, ದುಃಖ ಪಟ್ಟ ನಿನಗೆ ನಾನು ದಯಾಳು. ನೀನು ಕಂಡು, ಆಶ್ಚರ್ಯಗೊಂಡ ಈ ಹಣದಿಂದ ಯಥೇಷ್ಟ ತೆಗೆದು ಕೊಂಡು ಹೋಗ ಬಹುದು ಎಂತ ಅನುಗ್ರಹಪೂರ್ವಕವಾಗಿ ಹೇಳಿದನು.

ಆ ಮಾತನ್ನು ಕೇಳಿ ಸನ್ಯಾಸಿ ನಿಜವೋ ಸ್ವಪ್ನವೋ? ಎಂಬ ಸಂಶಯಭಾವದಿಂದ ಅರಸನನ್ನೂ ಅತ್ಯಾಶೆಯಿಂದ ಆ ಹಣದ ರಾಶಿಯನ್ನೂ ದೃಷ್ಟಿಸಿ ದೃಷ್ಟಿಸಲು, ಅರಸು—ತಡೆಯದೆ, ಶಂಕೆ ಪಡದೆ, ತೆಗೆದುಕೋ! ಯಥೇಷ್ಟ ತೆಗೆದುಕೋ! ಎಂತ ದಯಾಭಾವಪೂರ್ವಕದಿಂದ ಹೇಳಿ, ಧೈರ್ಯ ಪಡಿಸಿದ್ದಕ್ಕೆ ಆ ಸನ್ಯಾಸಿ ಎದೆಗೊಂಡು, ಎರಡೇ ಕೈಗಳಿಂದ ತೆಗೆದು, ತೆಗೆದು, ತನ್ನ ಅಂಗಿಯ ಕಿಶೆಗಳಲ್ಲಿಯೂ ಶರಗಿನಲ್ಲಿಯೂ ಅಂಗಿ ಹರಿದು ಹೋಗುವಷ್ಟು ಹಾಕಿಟ್ಟು ಕೊಂಡನು. ಆ ಹಳೇ ಅಂಗಿ ಇಷ್ಟು ಭಾರವನ್ನು ತಡೆಯಲಾರದೆ, ಹರಿದು ಹೋದ್ದನ್ನು ಅರಸು ನೋಡಿ, ತನ್ನ ನಿಲುವಂಗಿಯನ್ನು ತೆಗೆದು, ಸನ್ಯಾಸಿಗೆ ಕೊಟ್ಟು, ಇದನ್ನು ತುಂಬಿಸಿ, ಗಂಟು ಕಟ್ಟಿ, ಹೊತ್ತುಕೊಂಡು ಹೋಗು ಎಂತ ಅಪ್ಪಣೆ ಕೊಡಲು, ಸನ್ಯಾಸಿ ಕೈ ಮುಗಿದು, ಆ ನಿಲುವಂಗಿಯನ್ನು ತೆಗೆದು ಕೊಂಡು, ರೂಪಾಯಿ ಅದರಲ್ಲಿ ಹಾಕಿ, ಗಂಟು ಕಟ್ಟಿ ಹೊತ್ತುಕೊಂಡು ಹೋಗುವವನಾದನು. ಆದರೆ ಅವನು ಬಹಳ ದೊಡ್ಡ ವಜ್ಜೆಯಷ್ಟು ಕಟ್ಟಿ ಕೊಂಡದರಿಂದ ಬೆನ್ನು ಬಗ್ಗಿ ಹೋಗಿ, ಉಬ್ಬಸವಾಗಿ ಮೆಲ್ಲ ಮೆಲ್ಲಗೆ ಮಾತ್ರ ನಡೆದು ಹೋಗಲಿಕ್ಕಾಯಿತು. ಅರಸು ಎಳೇ ನಗೇ ಮೋರೆ, ಉಳಿದ ಜನರು ಹೊಟ್ಟೆಕಿಚ್ಚಿನಿಂದ ಗಂಟುಮೋರೆ ಮಾಡಿ ಕೊಂಡು, ಹೋಗುವವನ ಬೆನ್ನು ನೋಡಿದರು.

ಆ ಸನ್ಯಾಸಿ ಒಡ್ಡೋಲಗದಿಂದ ಹೊರಟ ಸ್ವಲ್ಪ ಹೊತ್ತಿನ ಮೇಲೆ ದ್ವಾರಪಾಲಕನು ಬಂದು, ಸನ್ಯಾಸಿ ಅರಮನೆಯ ಪಾವಟಿಗೆಯಿಂದ ಜಾರಿ, ತಲೆ ಕೆಳಗಾಗಿ ಬಿದ್ದು, ಕುತ್ತಿಗೆ ಮುರಿದು, ವೈಕುಂಠಕ್ಕೆ ಹೋದ ಎಂತ ತಿಳಿಸಿದನು.

ಇದನ್ನು ಕೇಳಿ ಅರಸು ಮಾತಾಡದೆ, ಸನ್ಯಾಸಿಗೆ ಹೊಟ್ಟೆಕಿಚ್ಚು ಪಟ್ಟ ಸುತ್ತಮುತ್ತಲಿನ ಜನರನ್ನು ಕಣ್ಣೂರಿ ನೋಡುವವನಾದ್ದರಿಂದ ಎಲ್ಲರಿಗೆ ದಿಗಿಲು ಹಿಡಿದು ಹೋಯಿತು. ಕಡೆಗೆ ಜವಾನರು—ಆ ಹಣವನ್ನು ತಿರಿಗಿ ಇಲ್ಲಿ ತಂಧಾಕಿ, ಸನ್ಯಾಸಿಯ ಹೆಣವನ್ನು ಹುಗಿದಿಟ್ಟು ಬಿಡಲೋ? ಎಂದು ಅಪ್ಪಣೆ ಕೇಳಿ ಕೊಂಡಾಗ, ಅರಸು—ಬೇಡಾ, ಆ ಹಣವನ್ನೂ ಹೆಣವನ್ನೂ ಒಟ್ಟಿಗೆ ವೈಕ್ಸಲ (ವಿಸ್ತುಲ) ನದಿಯಲ್ಲಿ ಹಾಕಿ ಮುಣಿಗಿಸಿ ಬಿಡಿ! ಸನ್ಯಾಸಿಯನ್ನು ಕೊಂದ ಹಣ ಯಾರ ಕೈಗೆ ತಿರಿಗಿ ಶಿಕ್ಕ ಬಾರದು. ದ್ರವ್ಯಾಶೆಯಿಂದ ತನ್ನನ್ನು ತಾನೇ ಕೊಂದ ಸನ್ಯಾಸಿ ಪಿತೃವನಕ್ಕೆ ಪಾತ್ರನಲ್ಲಾ: ಅವನನ್ನು ಮೀನು ತಿಂದು ಬಿಡಲಿ! ಎಂದು ಅಪ್ಪಣೆ ಕೊಟ್ಟನು.

ಲೇಖನಗಳು.

ಪ್ರಿಯ ಸಭಾಪತ್ರಕರ್ತರೇ!

ಸಭಾಕ್ರಮಗಳಿಗೆ ಸಂಬಂಧಿಸಿರುವ ಅನುಮಾನಕರವಾದ ಕೆಲವು ಸಂಗತಿಗಳನ್ನು ಕುರಿತು ನಾನು ಮಾಡುವ ಪ್ರಶ್ನೆಗಳಿಗೆ, ಅವು ಯುಕ್ತವಾಗಿ ತೋಚಿದ ಪಕ್ಷಕ್ಕೆ, ನಿಮ್ಮ ಪತ್ರದ ಒತ್ತಟ್ಟಿನಲ್ಲಿ ಸ್ಥಳ ಕೊಟ್ಟು, ಉತ್ತರ ದೊರಕಿಸಿ ಕೊಡ ಬೇಕೆಂದು ಬೇಡಿ ಕೊಳ್ಳುತ್ತೇನೆ.

1. ಸೂರ್ಯಾಸ್ತಮಾನದನಂತರ ಕ್ರೈಸ್ತರು ಶವಗಳನ್ನು ಗೋರಿಯಲ್ಲಿ ಹೂಣಿಡ ಬಹುದೋ?

2. ಕ್ರೈಸ್ತರು ತಮ್ಮ ವ್ಯಾಜ್ಯಗಳ ಸತ್ಯಾರ್ಥವನ್ನು ದೃಢ ಪಡಿಸುವದಕ್ಕಾಗಿ ತಮ್ಮ ಪ್ರಾರ್ಥನಾಲಯಗಳಲ್ಲಿ ಪ್ರಮಾಣ ಮಾಡ ಬಹುದೋ?

a. ಯಾವ್ಯಾವ ಪಕ್ಷಗಳಲ್ಲಿ ಆಗ ಬಹುದು?

b. ಯಾವ್ಯಾವ ಪಕ್ಷಗಳಲ್ಲಿ ಆಗ ಬಾರದು?

ಈ ಪತ್ರದ ಪಾಠಕರು ಸೇರಿರುವ ಯಾವ ಸಭೆಗಳಲ್ಲಾದರೂ ಕ್ರೈಸ್ತರು ಹೆಣಗಳನ್ನು ರಾತ್ರೀ ವೇಳೆಯಲ್ಲಿ ಹೂಣಿಟ್ಟದ್ದೂ, ಪ್ರಾರ್ಥನಾಲಯಗಳಲ್ಲಿ ಪ್ರಮಾಣ ಮಾಡಿಸಿದ್ದೂ ಉಂಟೋ? ಎಂಬದನ್ನು ತೋರಿಸಿ, ಈ ವಿಷಯದಲ್ಲಿ ಯಾರಾದರೂ ಉತ್ತರ ಕೊಡುವರೆಂತ ನಿರೀಕ್ಷಿಸುತ್ತೇನೆ.

ಇತ್ತಲಾಗಿ ಛಾಪೆಯಾದ ಸಭಾಪತ್ರದ ಕೆಲವು ಅಂಕೆಗಳಲ್ಲಿ ರಾಗ ತಾಳ ಮಾತ್ರ ನಮೂದಿಸಿ ಸಂಗೀತಗಳನ್ನು ಪ್ರಕಟಿಸುವದರ ತಾತ್ಪರ್ಯವೇನು? ಎಂಬದಕ್ಕೆ ಘನವುಳ್ಳ ಸಭಾಪತ್ರಕರ್ತರಾಗಲಿ, ಆ ಪದಗಳ ಕರ್ತರಾಗಲಿ ದಯ ಮಾಡಿ ತಿಳಿಸುವಂತೆ ಬೇಡಿ ಕೊಳ್ಳುವ

ಸಂಗೀತಪ್ರಿಯನೂ ಹಿತವಾದಿಯೂ.

(೫೮ನೇ ಪಾನಿನಿಂದ ಮುಂದೆ.)

೩ನೇ ಪಾಲು.—ಬೆಂಗಳೂರ ಸಹೋದರರ ಸಂಗಡ ಕಡೇ ಪ್ರಾರ್ಥನೆ ಮಾಡಿ, ಅನ್ಯೋನ್ಯಕ್ಕೆಂದು ಬಲಗೈ ಕೊಟ್ಟು, ಅವರಿಂದ ನಿರೋಪ ಹೊಂದಿ, ಸಾಗ ಕಳುಹಿಸಲ್ಪಟ್ಟು, ಮುಂದೆ ಚಿತ್ರಗಲ್ಲದುರ್ಗದ ಮಾರ್ಗವಾಗಿ ಹುಬ್ಬಳ್ಳಿಗೆ ಬಂದು ಸೇರಿದೆವು. ಆದರೆ ಬೆಂಗಳೂರಿನಿಂದ ಹುಬ್ಬಳ್ಳೀ ತನಕ ನಾವು ಮಾರ್ಗದಲ್ಲಿ ನಡಿಸಿದ ಕೆಲಸದ ವಿಷಯದಲ್ಲಿ ಇಲ್ಲಿ ಕೊಂಚವಾದರೂ ಹೇಳುವದು ಸಹಾ ಅವಶ್ಯವೇ. ಬೆಂಗಳೂರು ಬಿಟ್ಟು ದಾಬಸಪೇಟೆಯಲ್ಲಿ ವಸ್ತಿ ಮಾಡಿ, ಅಲ್ಲಿಯೂ ಸುವಾರ್ತೆ ಸಾರಿ, ಮಾರಣೆ ವಸ್ತಿ ಶನಿವಾರ ಬೆಳಿಗ್ಯೆ ಟುಮಕೂರಿಗೆ ಬಂದು ಮುಟ್ಟಿದೆವು.

ಟುಮಕೂರು.—ಇದೊಂದು ಮೈಸೂರ ಇಲಾಖೆಗೆ ಸೇರಿದ ಜಿಲ್ಲಾ ಸ್ಥಳವೇ. ಈ ಊರು ಸಹ ತಕ್ಕಷ್ಟು ದೊಡ್ಡದಾಗಿದ್ದು, ಕೆರೆ ಗದ್ದೆ ಕಚೇರಿ ಕಟ್ಟಿಗಳಿಂದ ಕಿರಿದಿನಲ್ಲಿ ಶೋಭಾಯಮಾನವಾಗಿದೆ. ಊರಲ್ಲಿ ಕರ್ತನ ಕೆಲಸ ನಡಿಸುವವರು ವೆಸಲಿಯನ್ ಮಿಶ್ಯನೆರಿಗಳು. ಇವರು ಅನಾಥ ಹಾಗೂ ಅನ್ಯ ಜನರಿಗಾಗಿ ಹಾಕಿರುವ ಊರ ಕನ್ನಡ ಶಾಲೆಗಳು ಚನ್ನಾಗಿ ಸಾಗಿ, ಇವರ ಸೇವೆಯಿಂದ ಈ ಊರಲ್ಲಿ ನೂರಾರು ಜನ ಕ್ರೈಸ್ತರಾಗಿದ್ಧಾರೆ. ಪ್ರಸಂಗ ಮುಂತಾದ್ದು ಚೆಲೋ ನಡದದೆ. ಇದಲ್ಲದೆ ನಾವು ಇಲ್ಲಿ ನೋಡಿದ, ಹೇಳ ತಕ್ಕ ಇನ್ನೊಂದು ವಿಶೇಷ ಸಂಗತಿ ಏನಂದರೆ—ನಾವು ಈ ಊರಲ್ಲಿ ಇಳಿದ ಕೂಡಲೆ, ಮುಖಮಜ್ಜನ ಮುಂತಾದ್ದು ತೀರಿಸಿ ಕೊಳ್ಳುವಷ್ಟರಲ್ಲಿ ರವಿವಾರದ ಪುಸ್ತಕಪ್ರಾರ್ಥನೆಗೋಸ್ಕರವಾಗುವ ಘಂಟಾನಾದವನ್ನು ಕೇಳಿ, ಪ್ರಾರ್ಥನೆ ಪ್ರಸಂಗಕ್ಕೋಸ್ಕರ ದೇವಾಲಯಕ್ಕೆ ಹೋದೆವು. ಅಗೋ ಅಲ್ಲಿ ಗಾಯನ ಮುಂತಾದ್ದು ತೀರಿ ಆಗಲೆ "ಯೆರಿಕೋವಿನ ಗೋಡೆ ಕೂಳು ಬಿತ್ತು" ಅಂತ ಘಟ್ಟಿ ಸ್ವರದಿಂದ ಓದಿ, ಮುಂದೆ ಈ ವಾಕ್ಯದ ಮೇಲಿಂದ ನಡಿಸಿದ ಪ್ರಸಂಗವನ್ನು

ಶುದ್ಧ ಕನ್ನಡ ಭಾಷೆಯಲ್ಲಿ ಕೇಳುವಾಗ, ನಮಗೆ ಬಹು ಆಹ್ಲಾದವಾಯಿತು; ಮತ್ತು ಆ ಪ್ರಸಂಗ ನಾನಾ ಅರ್ಥಗಳಿಂದ ಸಂಗ್ರಹಿಸಲ್ಪಟ್ಟದ್ದಾಗಿ ಬಹು ಬಲವುಳ್ಳದ್ದಾಗಿತ್ತು. ಪ್ರಾರ್ಥನೆ ಮುಗಿದ ತರುವಾಯ ನಾವು ಹೊರಗೆ ಬಂದ ಬಳಿಕ ಪ್ರಸಂಗ ಮಾಡಿದ ಇವರ್‍ಯಾರಂತ ವಿಚಾರಿಸಿದ್ದಲ್ಲಿ, ಅವರು ಈ ಊರ ಜೈಲ ದರೋಗರು, ಮತ್ತು ಇವರು ಸರ್ತಿ ಪ್ರಕಾರ ಯಾವಾಗಲು ಪ್ರಸಂಗ ಮಾಡುತ್ತಾರೆಂದು ಹೇಳಿದರು. ಆಗ್ಯೆ ನಮಗೆ ಸಾನಂದಾಶ್ಚರ್ಯವಾಯಿತು. ಇದೇ ಪ್ರಕಾರ ಪ್ರಸಂಗ ಮಾಡ ಶಕ್ತಿಯುಳ್ಳ, ಮಿಶ್ಯನ ಕೆಲಸವಲ್ಲದೆ ಬೇರೆ ಬೇರೆ ಉದ್ಯೋಗ ನಡಿಸುವಂಥ ಸಭೆಯೊಳಗಿನ ಗೃಹಸ್ಥರು ಆಗಿಂದಾಗ್ಯೆ ಸಭೆಯಲ್ಲಿ ದೇವಾರಾಧನೆ ನಡಿಸಿದರೆ, ಎಷ್ಟೋ ಒಳ್ಳೇದಾಗಿರುವದು. ಯಾಕಂದರೆ ಬೇರೆ ಕೆಲಸ ಮಾಡಿಕೊಂಡಿರುವ ಇಂಥವರ ಪ್ರಸಂಗದಿಂದ ಸಭೆಯವರಿಗೆ ಹೆಚ್ಚು ಎಚ್ಚರಿಕೆ ಬುದ್ಧಿ ಬರುವದು. ಮತ್ತು ಅನೇಕರಲ್ಲಿ ತಾವು ಸಹಾ ಹೀಗೆ ಸಭೆಯಲ್ಲಿಯೂ ಹೊರಗೆಯೂ ಕೆಲಸ ನಡಿಸ ಬೇಕೆಂಬ ಆಸಕ್ತಿ ಹುಟ್ಟುವದು.

ಇಲ್ಲಿಂದ ಹೊರಟು ಶೀಬೆ ಮುಂತಾದ ಹತ್ತು ಹನ್ನೆರಡು ಊರುಗಳಲ್ಲಿ ಪ್ರಸಂಗ ಮಾಡುತ್ತ, ಪುಸ್ತಕ ಮಾರುತ್ತ ಬಂದೆವು. ಇವುಗಳಲ್ಲಿ ಯಾವ ಊರಿನವರಾದರೂ ಅಷ್ಟು ವಿರೋಧಿಸದೆ, ಪುಸ್ತಕ ಕೊಂಡು ಕೊಳ್ಳುತ್ತ ಪ್ರಸಂಗ ಕೇಳುತ್ತ ಇದ್ದರು. ಆದರೆ ಶೀರ್‍ಯೆಯೆಂಬ ಊರಲ್ಲಿ ಮಾತ್ರ ಮುಸಲಮಾನರು ಕ್ರಿಸ್ತನು ಬರೇ ಪ್ರವಾದಿಯೆಂಬುದಾಗಿ ಬಹು ತರ್ಕ ಮಾಡಿದರು. ಅದಕ್ಕೆ ಆತನು ಬರೇ ಪ್ರವಾದಿ ಮಾತ್ರವಲ್ಲ, ಲೋಕರಕ್ಷಕನೂ ಅನಾದಿ ದೇವರೂ ಎಂದು ಹೇಳಿ, ದೇವರ ವಾಕ್ಯದಿಂದ ಹಿಂದುಸ್ಥಾನಿ ಭಾಷೆಯಲ್ಲಿ ಸಿದ್ಧ ಮಾಡಿ ಕೊಟ್ಟ ಮೇಲೆ, ಅವರು ಅಷ್ಟು ಇಷ್ಟು ತಂಟೆ ಹಾಸ್ಯ ಮಾಡಿದರು. ಆದರೆ ಇದೇನು ಅಪರೂಪವಾದ್ದಲ್ಲ, ಯಾಕಂದರೆ ಅವರ ಮೂಲ ಗುಣವೇ ಇದು. "ನಾಯಿಯಂತೆ ಬಾಲ, ತಂದೆಯಂತೆ ಮಗ."

ಒಟ್ಟಿಗೆ ಈ ಮದ್ರಾಸ ಇಲಾಖೆಯು ಚತುರ್ದಿಗಳಿಗೆ ಕ್ರೈಸ್ತ ಧರ್ಮವು ಹಬ್ಬಿ ಬಹು ಚನ್ನಾಗಿ ಬೆಳೆದದೆ. ಇದರ ದಕ್ಷಿಣ ಭಾಗದಲ್ಲಿ ತಂಜಾವೂರು, ತಿರುಚಿನಾಪಳ್ಳಿ, ತ್ರಾವಣಕೂರು ಮುಂತಾದ ಪ್ರಾಂತ್ಯಗಳಲ್ಲಂತು ಅನೇಕಾನೇಕ ಗ್ರಾಮಗಳಲ್ಲಿ ಅನ್ಯ ಜನರ ಮತ್ತು ಮುಸಲಮಾನರ ಮನೆಗಳು ಔಷಧಕ್ಕೂ ಶಿಕ್ಕುವದಿಲ್ಲವೆಂತ ಅತ್ತ ಕಡೆ ಸಂಚಾರ ಮಾಡಿದ ಒಬ್ಬ ಏತದ್ದೇಶಿ ಬೋಧಕರು ನಮಗೆ ಹೇಳಿದರು. ಕರ್ಮಕಾಂಡಿಗಳಾದ ರೋಮಾಯರಂತು ಈ ಶೀಮೆಯಲ್ಲಿ ತನ್ಮಯ. ಹೆಚ್ಚಿಗೆ ಹೇಳುವದಿನ್ನೇನದೆ, ಈ ಮದ್ರಾಸ ಇಲಾಖೆಯು ಕೇವಲ ಕ್ರೈಸ್ತರ ದೇಶವೇನೋ ಎಂಬಂತೆ ಶೋಭಿಸುತ್ತದೆ. ಇದೇ ಪ್ರಕಾರ ನಮ್ಮ ಮುಂಬಾಯಿ ಇಲಾಖೆಯಲ್ಲಿ ಎಂದು ಆಗುತ್ತದೋ ಎಂದು ನೋಡಿ, ಕಣ್ಣು ಅಕ್ಕರತೆ ಕಳೆ ಕೊಂಡೇವೋ? ಸರಿ; ಅತ್ತ ಕಡೆ ತನ್ನ ರಾಜ್ಯ ಪ್ರಬಲಿಸಿದ ಒಡೆಯನು ಇತ್ತ ಕಡೆಗೂ ಬೇಗ ಪ್ರಬಲಿಸುವನೆಂದು ನಂಬುತ್ತೇನೆ.

ಈ ಶೀಮೆಯಲ್ಲಿ ಇದೊಂದು ಅಪರೂಪವಾದ ಸಂಗತಿ, ಏನಂದರೆ: ಅನ್ಯ ಜನರಲ್ಲಿ ಒಬ್ಬನ್ನ ತಿಳಿಯದೆ, ನೀವು ಕ್ರಿಸ್ತಿಯರೋ? ಅಂತ ಕೇಳಿದರೆ, ಅವರು ಅಲ್ಲ, ನಾವು ಅಜ್ಞಾನಿಗಳೆಂತ ಉತ್ತರ ಕೊಡುವರು; ಅಂದರೆ ಕ್ರಿಸ್ತಿಯರು ಸ್ನಾನ ಹೊಂದಿ ಸತ್ಯವೇದಕ್ಕೆ ಶೇರಿದ ಜ್ಞಾನಿಗಳು; ಆದರೆ ತಾವು ಅದಕ್ಕೆ ಶೇರದೆ ಇರುವದರಿಂದ ಅಜ್ಞಾನಿಗಳೆಂಬ ಅರ್ಥ. ಇದೊಂದು ಕ್ರಿಸ್ತನಾಥನ ಸಭೆಗೆ ಬಂದ ಅಧಿಕಾರಲಕ್ಷಣವೇ ಸರಿ; ಸಂತೋಷ.

ಇನ್ನೊಂದು ಅತ್ತ ಕಡೆ ಅಂದರೆ ಈ ಮದ್ರಾಸ ಇಲಾಖೆಯಲ್ಲಿ ಮಿಶ್ಯನರಿಗಳು ಇಂಗ್ಲಿಷ ಹಾಗೂ ದೇಶಭಾಷೆಯ ಶಾಲೆಗಳನ್ನಿಟ್ಟು, ಮನಸ್ವಿ ಕಟಪಿಟಿ ಮಾಡುವದು ಲಾಭವೇ ಸರಿ. ಯಾಕಂದರೆ ಅತ್ತ ಕಡೆಯ ಮಿಶ್ಯನ ಶಾಲೆಗಳು ಯಾವ ಆತಂಕವಿಲ್ಲದೆ ಸುರಳಿತ ನಡೆದು ಹುಡುಗರು ಸಹ ಪುಷ್ಕಳ

ಬರುತ್ತಾರೆ. ಮತ್ತು ಅವರು ಮಿಶ್ಯನ ಉಪಕಾರ ನೆನಸುವದಕ್ಕೂ, ತಾವು ಕಲಿತ ಕ್ರೈಸ್ತ ಧರ್ಮವನ್ನು ಅಂಗೀಕರಿಸುವದಕ್ಕೂ ಕಾರಣವದೆ. ಯಾಕಂದರೆ ಸರಕಾರದವರು ಸಹ ಮಿಶ್ಯನ ಶಾಲೆಗಳಿದ್ದಲ್ಲಿ ತಮ್ಮ ಶಾಲೆಗಳನ್ನು ಸ್ಥಾಪಿಸುವದಿಲ್ಲ. ಅಂದ ಬಳಿಕ ಮಿಶ್ಯನೆರಿಗಳು ಶಾಲೆಗಳನ್ನಿಟ್ಟು, ಅವುಗಳಲ್ಲಿ ಪ್ರಯಾಸ ಪಡುವದು ಸಾರ್ಥಕವೇ ಸರಿ. ಪರಂತು ನಮ್ಮಿತ್ತ ಕಡೆಯಲ್ಲಿ, ಅಂದರೆ ಮುಂಬಾಯಿ ಇಲಾಖೆಯಲ್ಲಿ ಹಾಗಲ್ಲ. ಸರಕಾರದವರು ದೊಡ್ಡ ದೊಡ್ಡ ಊರುಗಳಲ್ಲಿ ಹುಡುಗ ಹುಡಿಗಿಯರಿಗೋಸ್ಕರವಾಗಿ ೪-೫ ಇಂಗ್ಲಿಷ ದೇಶಭಾಷೆಗಳ ಶಾಲೆಗಳನ್ನು ಇಡುವದಲ್ಲದೆ, ಯಾವತ್ತು ಸಣ್ಣ ಸಣ್ಣ ಹಳ್ಳಿಗಳಲ್ಲಿ ಸಹ ಶಾಲೆಗಳನ್ನು ಸ್ಥಾಪಿಸಿ, ವಿದ್ಯಾದಾನ ಮಾಡುತ್ತಲಿದ್ದಾರೆ. ಹಾಗು ಮಿಶ್ಯನ ಶಾಲೆಗಳಿದ್ದಲ್ಲಿ ಸಹ ಏನೇನೂ ಗುಮಾನ ಮಾಡದೆ, ತಮ್ಮ ಶಾಲೆಗಳನ್ನಿಡುತ್ತಾರೆ. ಅಂದ ಬಳಿಕ ಇತ್ತ ಕಡೆಯು ನಮ್ಮ ಮಿಶ್ಯನೆರಿಗಳು ತಮ್ಮ ಶಾಲೆಗಳನ್ನು ಬಂಧ ಮಾಡಿ ಬಿಟ್ಟರೆ, ನನಗೆ ಚೆಲೋದು ಕಾಣುತ್ತದೆ; ಇಲ್ಲವಾಯಿತೆ ಹಣ ವ್ಯರ್ಥ ಖರ್ಚು. ಯಾಕಂದರೆ ಸರಕಾರ ಈ ಪ್ರಕಾರ ಶಾಲೆಗಳನ್ನಿಟ್ಟು ವಿದ್ಯ ಕಲಿಸುವ ಕಾರಣ, ಜನರು ತಮಗೆ ಮಿಶ್ಯನ ಉಪಕಾರ ಮಾಡುತ್ತದಂತ ತಿಳಕೊಳ್ಳುವದಿಲ್ಲ, ಇದೊಂದು. ಎರಡನೇದು, ನಮ್ಮ ಮಿಶ್ಯನ ಶಾಲೆಗಳಲ್ಲಿ ಅವಶ್ಯವಾಗಿ ನಡಿಯಬೇಕಾಗಿರುವ ದೇವರ ವಾಕ್ಯದ ಪಾಠವನ್ನು ಅಲಕ್ಷ್ಯ ಮಾಡುತ್ತಾರೆ; ಮತ್ತು ಹುಡುಗರು ಸಹ ಬಹಳ ಬರುವದಿಲ್ಲ. ಹೀಗಾಗುವದಕ್ಕೆ ಕಾರಣವೇನು? ಸರಕಾರದವರು ತಮ್ಮ ಶಾಲೆಗಳಲ್ಲಿ ಬರೇ ಉಪ್ಪಿಲ್ಲದ ಅನ್ನಕ್ಕೆ ಸಮಾನವಾದ ಲೌಕೀಕ ವಿದ್ಯಗಳನ್ನು ಕಲಿಸುವದೆ. ಹೀಗಿರುವದರಿಂದ ಮಿಶ್ಯನೆರಿಗಳು ವಿದ್ಯಾದಾನ ಮಾಡುವ ಹಂಗಿಗೆ ಹೊರಗಾಧಾಗಾಯಿತು. ಈ ವರೆಗೆ ಅವರು ವಿದ್ಯಾಸಮ್ಮಂಧ ಕಟಪಿಟಿ ಮಾಡಿ, ವಿದ್ಯಾಸಮ್ಮಂಧವಾದ ನಾನಾ ಪುಸ್ತಕಗಳನ್ನು ಪ್ರಕಟಿಸಿ, ಭಾಷೆ ಮುಂತಾದ್ದನ್ನು ತಿದ್ದಿ, ಸರಕಾರಕ್ಕೆ ಮಾದರಿ ತೋರಿಸಿ, ಉಪಕಾರ ಮಾಡಿದಂತಾಯಿತು. ಈಗ ಸರಕಾರವು ಈ ಕೆಲಸ ನೋಡಿ ಕೊಳ್ಳಲಿ; ಯಾಕಂದರೆ ಅವರಿಗೂ ಹಂಗುಂಟು. ಆದರೆ ಈಗ ಮಿಶ್ಯನೆರಿಗಳು ದೇವವಾಕ್ಯದ ಪ್ರಸಂಗಕ್ಕೆ ಬಲವಾಗಿ ಕೈ ಹಚ್ಚ ತಕ್ಕದ್ದು. ಮತ್ತು ಅದೇ ಕರ್ತನ ಅಪ್ಪಣೆ.

ಮತ್ತೊಂದು, ಅತ್ತ ಕಡಿಯು ಕ್ರಿಸ್ತಿಯರೂ ಹಾಗು ಉಪದೇಶಿ ಮುಂತಾದವರೂ ಊರಲ್ಲಿ ವಸ್ತಿ ಮಾಡುವದರಿಂದ, ಇವರ ಸಂಗಡ ಊರವರ ಬಳಿಕೆ ಬಹಳ. ಮತ್ತು ಅತ್ತ ಕಡಿಯ ಮಿಶ್ಯನೆರಿಗಳು ಅಷ್ಟ ಇಷ್ಟು ಕೆಲಸ ಉಪದೇಶಿಗಳ ಸ್ವತಂತ್ರದಲ್ಲಿ ಕೊಟ್ಟಿರುವದರಿಂದ, ಇವರ ಮನೆಗಳಿಗೆ ಪಂತೋಜಿಗಳೂ, ಹಾಗು ವಿದ್ಯಾರ್ಥಿಗಳೂ ಬರ ಹೋಗುವ ವಹಿವಾಟಿನಿಂದ ಆಗಿಂದಾಗ್ಯೆ ಅಂಥವರಲ್ಲಿ ಅನೇಕರು ಕ್ರಿಸ್ತಿಯರಾಗುತ್ತಾರೆ; ಇದೊಂದು ಚೆಲೋದೇ ಸರಿ.

ಇವುಗಳಲ್ಲದೆ ಇನ್ನೊಂದು ನಾವೆಲ್ಲರು ಅನುಸರಿಸ ತಕ್ಕ ರೀತಿ ಬೆಂಗಳೂರತ್ತ ಕಡೆಯಲ್ಲಿ ನಡಿಯುತ್ತದೆ. ಅದೇನಂದರೆ—ಅತ್ತ ಕಡೆಯ ಪ್ರಸಂಗಿಗಳು ಊರ ಬೀದಿಗಳಲ್ಲಿಯೂ ಗ್ರಾಮಗಳಲ್ಲಿಯೂ ಜ್ಞಾನಕೀರ್ತನೆ ಎಂಬ ದೇಶರಾಗಕ್ಕೆ ಅನುಸರಿಸ ಮಾಡಿದ ಪುಸ್ತಕದೊಳಗಿನ ಪದಗಳನ್ನು ಹಾಡಿ, ಜನರನ್ನು ಕೂಡಿಸಿ, ತರುವಾಯ ತಮ್ಮ ಪ್ರಸಂಗಕ್ಕೆ ಆರಂಭ ಮಾಡುತ್ತಾರೆ. ಯಾಕಂದರೆ ಗಾಯನವಂದರೆ ಜನಕ್ಕೆ ರಂಜನೆಯಾಗಿ, ಅವರ ಕಿವಿಗಳು ನಿಗರಿ ನೆಟ್ಟಗಾಗುತ್ತವೆ; ಇದೊಂದು ಚೆಲೋ ಉಪಾಯವೇ ಸರಿ. ಮತ್ತು ಈಗಿನ ಸಮಯಕ್ಕೆ ಈ ರೀತಿ ಅತ್ಯವಶ್ಯವಾಗಿದೆ, ಕಾರಣವೇನಂದರೆ: ಹೊಸತಾಗಿ ಜನ ಪ್ರಸಂಗಕ್ಕೆ ಕೂಡಿ ಬರುತ್ತಿದ್ದಂತೆ ಈವಾಗ ಜನ ಅಷ್ಟು ಕೂಡಿ ಬರುವದಿಲ್ಲ. ಆದ್ದರಿಂದ ಕೆಲವರು ಕೂಡಿ ಹಾಡಿ, ಏನಾದರೂ ಬಾರಿಸಿ ಜನರನ್ನು ಕೂಡಿಸಿ, ಬೀದಿಗಳಲ್ಲ್ಯಾಗಲೀ, ಇಳಿದಲ್ಲಿ ಠಿಕಾಣಿಯಲ್ಲ್ಯಾಗಲೀ ಪ್ರಸಂಗಿಸಿ ಬೋಧಿಸುವದು ಬಹು ಚೆಲೋ ಉಪಾಯವೆಂದು ಅನುಭವದಿಂದ ತಿಳುಕೊಂಡಿದ್ದೇನೆ. ಮತ್ತು ಮಿಶ್ಯನ ಖಾತೆಗಳು ಸರಕಾರ ಖಾತೆಯಪ್ಪಂದೆ (?) ಲಕ್ಷ ಲಕ್ಷ ಗಟ್ಲೆ ರೂಪಾಯಿಗಳು ಖರ್ಚಾಗಿ ನಡಿಯುವಾಗ (?) ಪ್ರಸಂಗಪ್ರಯಾಣ ಪ್ರಸಂಗ ಕೆಲಸಗಳ್ಯಾಕೆ ದರಿದ್ರ

ರೀತಿಯಾಗಿ ನಡಿಯು ಬೇಕು? ಇಲ್ಲದ ಬಡತನ ಇದೇ ಕೆಲಸಕ್ಕೆ ಬಂದದೆ ಏನೋ? ನನಗೆ ತಿಳಿಯುವಲ್ಲದು. ಒಬ್ಬ ಅಥವ ಇಬ್ಬರು ಹೋಗಿ ಎತ್ತೋ ಒಂದು ಮೂಲೆಯಲ್ಲಿ ಹೇಳಿ ಬಂದಂತೆ ಮಾಡುವದ್ಯಾಕೆ? ಮತ್ತು ಉಪಯೋಗವೇನು? ಕೆಲವರು ಕೂಡಿ, ಮೇಳ ಮೇಳವಾಗಿ ಎದ್ದು, ಎಲ್ಲೆಲ್ಲಿಯು ತಮ್ಮ ಪ್ರಸಂಗನಾದ ತುಂಬಿಸಿದರೆ, ಎಷ್ಟೋ ಉಪಯೋಗ, ಮತ್ತು ಹಾಡಿ ಬಾರಿಸಿ ಮಾಡುವ ಪ್ರಸಂಗನಾದದ ಇಂಪಿಗೆ ಮುದುಕರೂ ಯೌವನಸ್ಥರೂ ಹುಡುಗರೂ ಹುಪ್ಪಡೀ ಹೆಣ್ಣೂ ಗಂಡೂ ವಿದ್ವಾನರೂ ಅವಿದ್ವಾನರೂ, ಐಶ್ವರ್ಯವಂತರೂ ಬಡವರೂ ಕೂಡಿ ಬರುವರು. ಆಗ್ಯೆ ಮಾಡಿದ ಪ್ರಸಂಗವು ಮರಿಯದೆ ಎಲ್ಲರ ಮನಸ್ಸಿನಲ್ಲಿ ಬಹು ಕಾಲ ಎರಕ ಹೊಯಿದಂತೆ ನಿಲ್ಲುವದು ಮಾತ್ರವಲ್ಲದೆ ಇದರ ಸುದ್ದಿ ತಲತಲಾಂತರಕ್ಕೂ ಇರುವದೆಂತ ಸಹ ಹೇಳಲಿಕ್ಕೂ ಆದೀತು; ಹ್ಯಾಗೂ ಬೇಗ ಮರಿಯಲಿಕ್ಕಿಲ್ಲ. ಆದರೆ ಹೀಗೆ ಆಗುವ ಬೋಳ ಪ್ರಸಂಗಕ್ಕೆ ಎಂದಿಗೂ ಅಷ್ಟು ಜನ ಕೂಡಿ ಬರುವದಿಲ್ಲ; ಮತ್ತು ಅದರ ನೆನಪು ಸಹ ಅವರ ಮನಸ್ಸಿನಲ್ಲಿ ಅಷ್ಟು ದಿವಸ ನಿಲ್ಲುವದಿಲ್ಲ. ಇದಲ್ಲದೆ ಬೋಳ ಪ್ರಸಂಗ, ಕೂಡಿ ಬಂದ ಕೆಲವರಿಗೆ ಹೊರ್ತು, ಅನೇಕರಿಗೆ ಪ್ರಸಂಗಿಗಳು ಬಂದದ್ದು ಸಹ ಗೊತ್ತಾಗುವದಿಲ್ಲ; ಅಂದ ಬಳಿಕ ಅಷ್ಟು ಉಪಯೋಗವೆಂತ ಹೇಳಲಿಕ್ಕೆ ಬರುವದಿಲ್ಲ.* ಕಾರಣ ಎಲ್ಲಾ ಕಡೆಯಲ್ಲಿಯೂ ನಮ್ಮ ಪ್ರಸಂಗ ಕೀಸರಿಡುವ ಹಾಗೆ ಹಾಡಿ ಬಾರಿಸುವದನ್ನು ಬಿಡದೆ ಅನುಸರಿಸ ಬೇಕು; ಮತ್ತು ಮರಿಯದೆ ಪ್ರಯತ್ನಿಸ ಬೇಕೆಂಬದಾಗಿ ಸಕಲ ಪ್ರಸಂಗಿಗಳ ಕಡೆಗೆ ನನ್ನ ವಿಜ್ಞಾಪನೆ ಅದೆ.

ಮತ್ತೊಂದು—ಈಗಿನ ಸಮಯದಲ್ಲಿ ನೋಡಿದತ್ತ ಕಡೆಯಲ್ಲಿ ಅನ್ಯ ಜನಸ್ಥಿತಿ ಮುಂಚೆಗಿಂತ ಬೇರೆಯಾಗಿ, ಅವರೊಳಗೆ ಆಗುವ ಕ್ರೈಸ್ತಧರ್ಮ ಪ್ರಸಂಗನಾದದಿಂದ ಎಚ್ಚರಿಕೆ ಹುಟ್ಟಿ, ಅನೇಕರು ವಿಗ್ರಹಾರಾಧನೆಗೆ ನಾಚಿಕೆ ಪಡುವವರೂ, ತಮ್ಮ ಅನೇಕ ದುರ್ನಡತೆಗಳನ್ನು ಬಿಟ್ಟವರೂ, ಮತ್ತು ಎರಡನೆಯವರು ಅದನ್ನು ಬಿಡುವಂತೆ ಪ್ರಯತ್ನ ಮಾಡುವವರೂ ಆಗಿರುತ್ತಾರೆ. ನಮ್ಮ ಕ್ರಿಸ್ತನಾಥನ ವದಂತಿ ಈ ನಮ್ಮ ದೇಶವನ್ನೆಲ್ಲ ವ್ಯಾಪಿಸಿ ಕೊಂಡದೆ ಅಂತ ಸಂತೋಷದಿಂದ ಹೇಳ ಬೇಕು. ಆದ್ದರಿಂದ ಸಹೋದರರೇ, ಪಿಶಾಚನು ಅನ್ಯ ಜನರ ಸುತ್ತಲು ಕಟ್ಟಿರುವ ಅಧರ್ಮವೆಂಬ ಕೋಟೆಯ ಗೋಡೆಯು, ಸುವಾರ್ತೆಯ ಗುಂಡುಗಳು ತಾಕಿ, ಸುತ್ತಲು ಬೋಕು ಬಿದ್ದು ಅದ್ರುವಾಗಿದೆ. ಕಾರಣ ಸುವಾರ್ತೆ ಸಾರುವ ಶೂರರೇ, ಧೈರ್ಯ ತಂದು ಕೊಂಡು ನಿಮ್ಮ ತುತೂರಿಗಳನ್ನು ಬಿಡದೆ, ಹುಲಿವರಿದು ಊದಿರಿ, ಅಂದರೆ ಅದು ಯೆರಿಕೋವಿನ ಗೋಡೆಗಳಂತೆ ಅಡ್ಡಿ ಇಲ್ಲದೆ ಬೇಗ ಕೂಲು ಬೀಳುವದು. ಯಾಕಂದರೆ ಈ ನೂರಾರು ವರುಷಗಳಲ್ಲಿ ಈ ದೇಶದೊಳಗೆ ಒಟ್ಟು ಸುಮಾರು ೭ ಲಕ್ಷ ಕ್ರಿಸ್ತಿಯರು ಇದ್ದ ಬಳಿಕ, ಮುಂದೆ ಬೇಗ ಮುದ್ದೆಯಲ್ಲಿ ಹುಳಿಯಾಗುವದೆಂಬದಕ್ಕೆ ಏನೂ ಸಂಶಯವಿಲ್ಲ. ಮಾತ್ರ ಎಲ್ಲಾ ಕಡೆಯಲ್ಲಿರುವ ಸುವಾರ್ತೆ ಸಾರುವ ಶೂರರೆ, ಈ ಕೆಲಸಕ್ಕೆ ಕೈ ತೊಳ ಕೊಂಡು ಹೊಗಬೀಳಿರಿ! ಜಯವು ನಿಮ್ಮದಾಗುವದು.

ಕಡೆಯಲ್ಲಿ ನಮ್ಮನ್ನು ಯಾವತ್ತು ಕೇಡುಗಳಿಂದ ಕಾಪಾಡಿ, ನಮ್ಮ ಕೆಲಸಗಳನ್ನೆಲ್ಲ ಸುರಳಿತವಾಗಿ ನಡಿಯಗೊಟ್ಟು, ನಮ್ಮನ್ನು ನಾವಿಲ್ಲಿ ಅಗಲಿ ಹೋದ ಪ್ರಿಯ ಕುಟುಂಬದವರನ್ನೂ ಮಿಕ್ಕ ಸಹೋದರರನ್ನೂ ಸುಖರೂಪವಾಗಿ ನೋಡ ಮಾಡಿ, ಅವರ ಆತ್ಮವೃದ್ಧಿಗಾಗಿ ಇವುಗಳನ್ನೆಲ್ಲ ಮಿಶ್ಯನ ಪ್ರಾರ್ಥನೆಯಲ್ಲಿ ಹೇಳ ಅನುಕೂಲಿಸಿದ ನಮ್ಮೊಡೆಯನಿಗೆ ಸದಾ ಸ್ತೋತ್ರವೂ ಘನವೂ ಉಂಟಾಗಲಿ. ಆಮೆನ್.

ಹೀಗೆ ತಮ್ಮ ಪತ್ರಿಕೆ

ಹುಬ್ಬಳ್ಳಿಯಿಂದ. ಓದುವವನೊಬ್ಬನು.

---

* ಲೂಕ. ೧೦, ೧; ಮತ್ತಾ. ೧೦, ೮. ೧೦ರಲ್ಲಿರುವ ಮಾತನ್ನು ಮೇಲಿನ ಅಭಿಪ್ರಾಯಕ್ಕೆ ಸರಿಯಾಗುವಂತೆ ತಿದ್ದ ತಕ್ಕದ್ದೇನೋ? ಕ್ರೈ. ಸ. ಕ.

ವಿವಿಧ ವರ್ತಮಾನಗಳು.

ಕಳೆದ ವರುಷದಲ್ಲಿ ನಮ್ಮ ಮಂಗಳೂರ ಮಿಶ್ಯನ್ ಪುಸ್ತಕಖಾನೆಯಿಂದ ಮಾರಾಟವಾಗಿ ದೇಶದಲ್ಲಿ ಹಬ್ಬಿಸೋಣಾದ ವಹಿಪುಸ್ತಕಾದಿಗಳು ಎಷ್ಟಂದರೆ:

	೧೮೭೪-೭೫	೧೮೭೩-೭೪
ದೇವವಾಕ್ಯದ ಹಳೇ ಹೊಸ ಒಡಂಬಡಿಕೆಗಳ ಪ್ರತಿಗಳು:	೩೮೫	೪೫೪
ದೇವವಾಕ್ಯದ ಬೇರೆ ಬೇರೆ ಭಾಗಗಳ ,,	೬,೫೯೫	೧೦,೬೫೩
ಧರ್ಮಸಂಬಂಧವಾದ ವಹಿಪುಸ್ತಕಾದಿಗಳ ,,	೩೮,೪೭೭	೩೩,೦೫೪
ಶಾಲಾಪುಸ್ತಕಗಳ ಪ್ರತಿಗಳು	೨೨,೮೦೭	೨೨,೦೬೪
ಚಿತ್ರಪುಸ್ತಕಾದಿಗಳು	೯೭೭	೫೩೮
ನಕ್ಷೆ ಮುಂತಾದ್ದು	೩೯೮	೧,೦೦೦
ಒಟ್ಟು:	೬೯,೬೩೯	೬೭,೭೬೩

ಉಡ್ಪಿ ಮಿಶ್ಯನ್ ಠಾಣೆಗೆ ಉಪಠಾಣೆಗಳಾಗಿ ಸೇರಿದ ಸ್ಥಳಗಳಲ್ಲಿ ಕುರ್ಕಾಳೆಂಬದೊಂದು ಉಂಟು. ಈ ಸ್ಥಳದಲ್ಲಿ ಸುಮಾರು ಒಂದುವರೆ ವರುಷದ ಹಿಂದೆ ಒಂದು ಚಿಕ್ಕ ಪ್ರಾರ್ಥನೇ ಮನೆ ಕಟ್ಟಿಸೋಣಾಯಿತು. ಅದು ಸಾಲದ್ದರಿಂದ ಹೆಚ್ಚು ದೊಡ್ಡದೊಂದು ಕಟ್ಟಿಸಬೇಕೆಂಬ ಆಲೋಚನೆಯಾದಾಗಲೇ ಅದು ದುಷ್ಕಾನರಿಂದಲೋ? ಹ್ಯಾಗೋ? ಬೆಂಕಿ ಹತ್ತಿ ಸುಟ್ಟು ಹೋಯಿತು. ಅದು ಕಟ್ಟಿದ್ದ ಜಾಗವು ಉಡ್ಪೀ ಅಷ್ಟಮಠಗಳಲ್ಲೊಂದಾದ ಕಾಣೂರು ಮಠಕ್ಕೆ ಸೇರಿದ್ದಾಗಿದೆ. ಅದೇ ಠಾವಿನಲ್ಲಿ ಈ ಹೊಸ ಪ್ರಾರ್ಥನೇ ಮನೆಯನ್ನು ಕಟ್ಟಿಸಲಿಕ್ಕಾಗಿ ಆ ಮಠದವರು ಅರ್ಧ ಮುಡಿ ಬೀಜವರಿ ಹೋಗುವಷ್ಟು ಜಾಗ ಮಿಶ್ಯನಿಗೆ ಮೂಲಗೇಣಿಗೆ ಕೊಡಲಿಕ್ಕೆ ಸ್ನೇಹಭಾವವಾಗಿ ಒಡಂಬಟ್ಟಿದ್ದಾರೆ.

ಹಿಂದುಸ್ಥಾನದಲ್ಲಿ ಈಗಲಿರುವ ಮೂವರು ಪ್ರೊಟೆಸ್ಟಂಟ ಬಿಶೊಪರಲ್ಲದೆ ಇನ್ನಿಬ್ಬರು ನೇಮಕವಾಗಿದ್ದಾರೆ. ಡಕ್ತರ್ ಕಾಲ್ಡ್‌ವೆಲ್ ಮತ್ತು ಡಕ್ತರ್ ಸಾರ್ಜೆಂಟ್ ಎಂಬ ಇವರಿಬ್ಬರು. ಅವರ ಸಂಬಳವು ಸರ್ಕಾರದಿಂದಲ್ಲ, ಜನರ ವಂತಿಗೆಯಿಂದ ಸಲ್ಲುವದಂತೆ.

ಡ್ಯೂಕ್ ಒಫ್ ಬಕ್ಕಿಂಗ್ ಹಾಮ್ ಪ್ರಭು ಮದ್ರಾಸಿಗೆ ಬರುವದಕ್ಕೆ ಹೊರಟಿದ್ದಾರೆ.

ಬಡೋದೆಯಲ್ಲಿ ಮರಹಮ್ಮತ ಇಲಾಖೆಯ ಮುಖ್ಯಸ್ಥನು ಲೆಖ್ಖದಲ್ಲಿ ಹೆಚ್ಚು ಕಡಿಮೆ ಮಾಡಿ, ಹೇರಳ ಹಣ ಕಾಣದೆ ಹೋದ್ದರಿಂದ, ಅವನಿಗೆ ಲಕ್ಷ ರೂಪಾಯಿ ಜುಲುಮಾನೆ ಮಾಡಿದರು.

ರಾಜಪುತ್ರಸ್ಥಾನದ ಒಂದು ಜಿಲ್ಲೆಯಲ್ಲಿ ಕುಷ್ಠರೋಗಿಗಳನ್ನು ಜೀವಂತರಾಗಿಯೇ ಹೂಣಿಡುವದು ಈಗಲೂ ನಡಿಯುತ್ತದಂತೆ; ಒಂದೆರಡು ತಿಂಗಳ ಹಿಂದೆ ಬಗ್ಗಾ ಎಂಬವನೊಬ್ಬನು ಕುಷ್ಠರೋಗಿಯಾಗಿ ಜೀವವೆಂಬದು ಭಾರವಾದ್ದರಿಂದ, ಮಗನ ಹತ್ತರ—ಸತ್ತನಂತರ ತನ್ನನ್ನು ಯಾರೂ ಮುಟ್ಟಲೂ ಬಾರದು, ಸುಡಲೂ ಬಾರದು, ಆದ್ದರಿಂದ ಈಗಲೇ ಕಾಡಿನಲ್ಲಿ ತನಗೊಂದು ಸಮಾಧಿಯು ಆಗಿಯ ಬೇಕು, ಅಗಿಯದಿದ್ದರೆ ಊರ ಮದಗದಲ್ಲಿ ಬಿದ್ದು ಸತ್ತೇನೆಂತ ಹೇಳಿ ಹೆದರಿಸಿದ್ದಲ್ಲಿ, ಮಗನು ತಂದೆ ಹೇಳಿದಂತೆ ಕುಣಿಯಗಿದನು. ತಂದೆಯು ಅಲ್ಲಿಗೆ ಹೋಗಿ ಕುಣಿಯಲ್ಲಿ ಮಲಗಲಾಗಿ ಮಕ್ಕಳು ಮಣ್ಣು ಹಾಕಿ ಮುಚ್ಚಿದರು. ಬಗ್ಗನು ತಾನು ಹೀಗೆ ಹೀಗೆ ಮಾಡುತ್ತೇನೆಂತ ದಾರಿಯಲ್ಲಿ ಹೇಳುತ್ತಾ ಬಂದರೂ, ಬೇಡವೆಂತ ಅಡ್ಡಿ ಮಾಡಿದವರ‍್ಯಾರೂ ಇಲ್ಲಾ.

ಹನ್ನೆರಡು ಹದಿಮೂರು ವರ್ಷಗಳ ಹಿಂದೆ ಪಂಜಾಬ ದೇಶದ ಒಬ್ಬ ಉಪದೇಶಿಯು ತನ್ನ ಮಗನನ್ನು ಗೊರ್ಡೊನ್ ಎಂಬ ಬೋಧಕನ ಸಂಗಡ ವಿದ್ಯಾಭ್ಯಾಸಕ್ಕಾಗಿ ಅಮೇರಿಕಕ್ಕೆ ಕಳುಹಿಸಿದನು. ಆ ಹುಡುಗನು ಅಲ್ಲಿ ಬೆಳೆದು ಯೌವನಸ್ಥನಾಗಿ, ಆ ದೇಶದ ನಗರವಾಸವನ್ನು ಪಡದು, ಹೆಸರುವಾಶಿಗೆ ಬರುವವನಾದನು. ಹಿಂದು ಜನರು ಅಮೇರಿಕದ ಸಂಯುಕ್ತ ಸಂಸ್ಥಾನದ ಪಟ್ಟಣಿಗರಾದವರು ಈ ವರೆಗೆ ಯಾರೂ ಇಲ್ಲ; ಇವನೇ ಮೊದಲನೆಯವನು; ಇವನು ಬರುವ ವರ್ಷ ಹಿಂದುಸ್ಥಾನಕ್ಕೆ ತಿರಿಗಿ ಬರುವದಕ್ಕೆ ಮನಸ್ಸು ಮಾಡಿದ್ದಾನಂತೆ.

ಕಳೆದ ವರುಷದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲಿ ಚರ್ಚ ಮಿಶ್ಯನಿಗೆ ಸೇರಿದ ಕ್ರೈಸ್ತರು ಮಿಶ್ಯನ ಕೆಲಸಕ್ಕೆ ೨೭,೧೬೫ರೂ. ೮ ಆಣೆ ೯ ಪೈ ಕೊಟ್ಟರು.

ವಿಲ್ಲಿಯಮ್ಸ್ ಎಂಬ ಪಂಡಿತರು ಚೀನ ಭಾಷೆಯ ನಿಘಂಟು ರಚಿಸಿದ್ಧಾರೆ. ಆ ಗ್ರಂಥದಲ್ಲಿ ೧೦,೦೯೪ ಮುಖ್ಯ ಶಬ್ದಗಳಲ್ಲಿ ೫೩,೦೦೦ ಉದಾಹರಣೆಗಳೂ ಸಣ್ಣ ವಾಕ್ಯಗಳೂ ಅಲ್ಲದೆ ಹನ್ನೆರಡುಸಾವಿರದ ಐನೂರ ಎಪ್ಪತ್ತೇಳು ಪ್ರತ್ಯೇಕ ಚಿತ್ರರೂಪದ ಅಕ್ಷರಗಳೇ ಅವೆಯಂತೆ!

ಸಿಂಗಪೂರಿನಲ್ಲಿ ಕೀಸ್‌ಬೆರಿ ಎಂಬ ಬೋಧಕನು ಮಿಶ್ಯನ ದೇವಾಲಯದಲ್ಲಿ ಪ್ರಸಂಗ ಮಾಡುತ್ತಿರುವಾಗಲೇ ಬಿದ್ದು ಮೃತ ಪಟ್ಟನು.

ಮೊಜಾಂಬೀಕಿಗೂ ಮದಗಸ್ಕರಿಗೂ ಮಧ್ಯೆ ಇಂಗ್ಲಿಷರ ಯುದ್ಧನಾವೆಯು ಹಿಡಿದ ಬಗಲೆಯಲ್ಲಿ ಮಾರುವದಕ್ಕೆ ನೈಯಲ್ಪಟ್ಟ ೨೪೧ ಗುಲಾಮರಿದ್ದರು. ಇವರನ್ನೆಲ್ಲಾ ಬಿಡಿಸಿ, ಮೊಂಬಾಸಾ ಎಂಬಲ್ಲಿ ಚರ್ಚ ಮಿಶ್ಯನಿನವರು ಸ್ಥಾಪಿಸಿದ ನವೀನ ಸ್ಥಳಕ್ಕೆ ಕಳುಹಿಸಲಾಯಿತು.

ಐಗುಪ್ತ ದೇಶದ ಖೇದಿಫೆಂಬ ಅರಸು ತನ್ನ ದೇಶದ ಕೃಷಿಕರನ್ನೂ ಹಳ್ಳಿಯವರನ್ನೂ ಕಠಿಣ ಬಿಟ್ಟೀ ಕೆಲಸಗಳಿಂದ ಬಹಳ ತಿಪ್ಪುಲು ಪಡಿಸುತ್ತಿದ್ಧಾನಂತೆ. ಆ ಬಿಟ್ಟೀ ಕೆಲಸದ ತರವು ಹ್ಯಾಗಂದರೆ: ಜನರು ಇದ್ದ ಊರು ನಾಡುಗಳಲ್ಲಿ ಮಾತ್ರವಲ್ಲಾ, ನೂರು, ಇನ್ನೂರು, ಮುನ್ನೂರು ಮೈಲು ದೂರ ಹೋಗಿ, ನಾಲ್ಕೈದು ದಿನವಲ್ಲಾ ತಿಂಗಳು ಕೂಲಿಯಾಗಲಿ ಕೂಳಾದರೂ ಆಗಲಿ ಹೊಂದದೆ ಗೇಯುತ್ತಾ, ಅರಸನ ಹತ್ತೀತೋಟಗಳಲ್ಲಿಯೂ ಹೊಲಗಳಲ್ಲಿಯೂ ಹೂಡಲೂ, ತೋಡಲೂ, ಮಣ್ಣು ಅಗಿಯಲೂ, ಹೊರಲೂ, ಕುಟ್ಟಲೂ, ನೀರು ಸೇದಲೂ, ರಸ್ತೆಗಳನ್ನು ಕಟ್ಟಲೂ, ಕರಿಕಲ್ಲು ಒಡೆಯಲೂ ಬೇಕು. ಈ ಬಿಟ್ಟೀ ಕೆಲಸಕ್ಕೆ ಹೊರಟ ಮೂರು ಜನರಲ್ಲಿ ಇಬ್ಬರು ಕಷ್ಟ ತಡದು ತಿರಿಗಿ ಮನೆಗೆ ಬರುವ ಮಾತು ದುರ್ಲಭವೇ. ಆ ಖೇದಿಫ್ ತುರ್ಕರವನೇ.

ಅಮೇರಿಕದ ತೆಕ್ಸಸ್ ಜಿಲ್ಲೆಯಲ್ಲಿ ಇಂದಿಯಾನೋಲಾ, ಸಾಬೈನ, ಮತಗೊರ್ದ ಮತ್ತು ಕೆಲವು ಊರುಗಳು, ಪ್ರಚಂಡ ಬಿರುಘಾಳಿ ಬೀಸಿ, ಸಮುದ್ರವು ಒಳಗಡೆ ಬಂದದರಿಂದ, ಪೂರ್ಣವಾಗಿ ಹಾಳಾಗಿ ಹೋದವು.

ರುಸ್ಯ ದೇಶದ ಹಲವು ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಂಕಿಯುಂಟಾಗಿ, ಹೇರಳ ಮನೆಗಿನೆ ಆಸ್ತಿಪಾಸ್ತಿಗಳನ್ನು ತಿಂದು ಬಿಡುವಂಥಾದ್ದಾಯಿತಂತೆ.

ಬೆಲ್ಗ್ಯವೆಂಬ ದೇಶವು ಸದ್ಯಕ್ಕೆ ಯೇಸುವಿತರ ರಾಷ್ಟ್ರವೆಂತ ಹೇಳ ಬಹುದು. ಅವರ ಕಾರಭಾರವನ್ನು ಇನ್ನು ತಡೆಯಲೊಲ್ಲದೆ ಹೆನ್ನೆಗಾವೆಂಬಲ್ಲಿ ನೂರಾರು ಜನ ಕಥೋಲಿಕರೂ, ಲುತ್ತಿಖೆಂಬ ಪಟ್ಣದಲ್ಲಿ ಕೆಲವು ದೊಡ್ಡವರ ಕುಟುಂಬಗಳೂ ಸುವಾರ್ತಾವಾಕ್ಯಕ್ಕೆ ಇಂಬು ಕೊಟ್ಟು, ಪ್ರೊಟೆಸ್ಟಾಂಟ ಸಭೆಯನ್ನು ಸೇರಿದರು.

ರೋಮಪಟ್ಣದಲ್ಲಿ ತಿರಿಗಿ ಒಂದು ಹೊಸ ಪ್ರೊಟೆಸ್ಟಾಂಟ ದೇವಾಲಯವು ಕಟ್ಟಿಸಲ್ಪಟ್ಟು ಪ್ರತಿಷ್ಠೆಯಾಯಿತು.

೧೮೭೦ನೇ ಇಸವಿಯಲ್ಲಿ ರೋಮಪಟ್ಣದಲ್ಲಿ ನೆರೆದಿದ್ದು, ಜರ್ಮನರಿಗೂ ಫ್ರೆಂಚರಿಗೂ ಉಂಟಾದ ಯುದ್ಧದ ನಿಮಿತ್ತವಾಗಿ ಮೊಖೂಪಾದ ಕಥೋಲಿಕ ಸಭಾಸಂಘವು ಬರುವ ವರುಷದಲ್ಲಿ ತಿರಿಗಿ ನೆರೆಯ ಬೇಕಂತೆ. ಈ ಸಭಾಸಂಘದಿಂದ ಪೋಪನು ಆಗ ಬೇಕೆಂತ ಕೋರುವ ಪ್ರಯೋಜನವೆಂಥಾದ್ದೆಂದು ಅವನು ಇತ್ತಲಾಗಿ ಮಾಡಿದ ಪ್ರಸಂಗದ ಒಂದು ಮಾತಿನಿಂದ ತಿಳಿದು ಬರುತ್ತದೆ. ಆ ಮಾತೇನಂದರೆ: “ಪ್ರಧಾನಾಧ್ಯಕ್ಷನ (ಪೋಪನ) ಮುಂತಾದ ಸಭಾಧಿಪತಿಗಳ ಸ್ಥೈರ್ಯ, ಸಹನ, ಸಾಹಸ, ಪ್ರಾರ್ಥನೆಗಳನ್ನೂ, ಮುಖ್ಯವಾಗಿ ಅಚ್ಯ್ರಶಿಷ್ಟರ ಹಾಗೂ ಇವರ ಶಿಖಾಮಣಿಯಾದ ಕನ್ಯಾರತ್ನ ಮರೀಯಳೆಂಬ ದೇವಮ್ಮನವರ ವಿಜ್ಞಾಪನೆಗಳನ್ನೂ ದೇವರು ಹ್ಯಾಗೂ ಲಕ್ಷ್ಯವಿಡದೆ ಹೋಗಲಾರದೆ, ತನ್ನ ತೂಕಡಿಕೆಯನ್ನೂ ನಿದ್ದೆಯನ್ನೂ ತಿಳಿದು, ಸಹಾಯ ಮಾಡಲಿಕ್ಕೆ ಏಳುವನು.”—“ಇಸ್ರಾಯೇಲನ್ನು ಕಾಪಾಡುವವನು (ಯೆಹೋವನು) ತೂಕಡಿಸುವದಿಲ್ಲಾ, ನಿದ್ದೆ ಮಾಡುವದಿಲ್ಲಾ” ಎಂಬ ವಾಕ್ಯವು (ಕೀರ್ತ. ೧೨೧, ೪.) ಪೋಪನಿಗೆ ಗೊತ್ತಿಲ್ಲವೆಂದು ತೋರುತ್ತದೆ.

Printed by Stolz & Hirner, Basel Mission Press, Mangalore.

3.

…ಕಾ ಪ ತ್ರ ವು.

…ಪ್ರಕಟವಾಗುವಂಥಾದ್ದು.)

Jahrgang

…ಪುಸ್ತಕ.

…NGALORE
…OOK & TRACT DEPOSITORY
1876